ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 2
ಸಂಚಿಕೆ 4
ಅಕ್ಟೋಬರ್ - ಡಿಸೆಂಬರ್ 1973

ಸಾಧನೆ

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE: Kannada Quarterly of the Bangalore University, Bangalore.
Vol. 2. No. 4, October-December 1973. pp. 220+iv.

Chief Editor: Dr. G. S. Sivarudrappa

ವಾರ್ಷಿಕ ಚಂದಾ : ರೂ. 6-00
ರೂ. 4-00 [ವಿದ್ಯಾರ್ಥಿಗಳಿಗೆ]

ಪ್ರಕಾಶಕರು : ಕೆ. ಸಿ. ಶಿವಪ್ಪ
ಕೋ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನ ಭಾರತಿ, ಬೆಂಗಳೂರು-560039

ಮುದ್ರಕರು : ಎಂ. ಎಸ್. ಚಿಂತಾಮಣಿ, ಈಸ್ಟರ್ನ್ ಪ್ರೆಸ್, ಬೆಂಗಳೂರು-560029

ಪರಿವಿಡಿ

ಇಪ್ಪತ್ತೈದು ವರ್ಷಗಳೆ ನಿನಗೀಗ ಮಗು ?

ಜಿ. ಎಸ್. ಸಿದ್ದಲಿಂಗಯ್ಯ

೧

ಹಾರುತಿದೆಯಲ್ಲ ಈಗ ತ್ರಿವರ್ಣ ಧ್ವಜ !
ನಿಜ ಮಗೂ, ಅದೊಂದು ದೊಡ್ಡದೆ ಕನಸು.
ಮಾಂಗಲ್ಯವನ್ನು ಮಕ್ಕಳು ಮರಿಗಳನ್ನು ಬಲಿಗೊಟ್ಟು
ಕೊನೆಗೆ ಶೀಲವನ್ನೂ ಬಿಡಬೇಕಾಗಿ ಬಂದಾಗ
ತುಟಿ ಬಿಗಿಹಿಡಿದು ಕುಳಿತರು
ಬಿಡುಗಡೆಯ ಬಾಗಿಲಲಿ ಲಾಠಿಗುಂಡುಗಳೆದುರು
ಧೈರ್ಯ ಶಿಖರಗಳಾಗಿ ನಿಂತರು
ಮನೆಮಠಬಿಟ್ಟು ತಾಯ್ನಾಡಿನಲ್ಲೆ ತಲೆಮರೆಸಿಕೊಂಡು
ಎದೆಯೆದೆಗೆ ಬಿತ್ತಿ ಭರವಸೆ ಕ್ರಾಂತಿದ್ವೀಪಗಳಾದರು
ಬಂತು ಸ್ವಾತಂತ್ರ್ಯ.
ದೇಶವೊಡೆಯಿತು; ರಾಷ್ಟ್ರಪಿತ ಕೊಲೆಯಾದ
ಬಂತು ಸ್ವಾತಂತ್ರ್ಯ: ಎಲ್ಲಕ್ಕೂ ಸ್ವಾತಂತ್ರ್ಯ
ಬಂಗಾರದ ತೆರೆಯು ಭೇದಿಸಲಾಗದೆಯೆ ಕಣ್ಣು ಮಂಜಾಗುತ್ತಿವೆ.
ಕಣ್ಣು ಹೊಸಕಿ ನೋಡಿದರಿದೇನು ಕಾಣುವುದು ?
ಒಮ್ಮೊಮ್ಮೆ ಎಚ್ಚರ...ಬಹುಪಾಲುನಿದ್ದೆ

೨

ಇಪ್ಪತ್ತೈದು ವರ್ಷಗಳೆ ನಿನಗೀಗ ಮಗು?
ಬೆಳ್ಳಿ ಹಬ್ಬಕ್ಕೇನು ಈ ಎಲ್ಲ ಸಂಭ್ರಮ ಹಬ್ಬ!
ಕಾಣಿಸುತ್ತಿವೆಯೆ ಬೆಳಗಿನಲ್ಲೇ ನೆರಳು ಚಾಚಿರುವ ಹದ್ದುಡೇಗೆಗಳು!
ವಿಷಗಾಳಿಯಲ್ಲಿ ಸಿಕ್ಕಿ ಅತ್ತಲಿಂದಿತ್ತ
ಇತ್ತಲಿಂದತ್ತ ಪರದಾಡಿ ಕಂಗಾಲಾದ ಜನ
ಇದ್ದಕ್ಕಿದ್ದಂತೆ ಭಗ್ಗನುರಿದು ಬೀಳುವ ಕುಟೀರಗಳು
ಫಳ್ ಫಳ್ ಎಂದು ಒಡೆದು ಬೀಳುವ ದಾರಿದೀಪಗಳು

ಉಪ್ಪರಿಗೆ ಮೇಲೆ ಕೂತು ಸೀಟಿ ಹೊಡೆಯುತ್ತ ಚಪ್ಪಾಳೆ ಕುಟ್ಟಿ
ಕಣಿಯುವ ಕಾಮನ ಮಕ್ಕಳು.
ಗೊತ್ತಿಲ್ಲದ ಮಕ್ಕಳು ಗುರಿಯಿಲ್ಲದ ಮಕ್ಕಳು
ಬೀದಿಗಳ ತುಂಬ ಅಕ್ಕಕ್ಕೆ ಪಕ್ಕಕ್ಕೆ ಹಿಂದಕ್ಕೆ ಮುಂದಕ್ಕೆ ಸುಳಿದು
ಅದೃಷ್ಟ ಹುಡುಕುತ ಬೆದರಿ ಕಿರಿಚುವಾಕಾರಗಳು
ನಿಂತಿರುವ ನೆಲಕುಸಿದು ಶಕುನಿಗಳೆ ನೆರೆದಂತಾಗಿ
ದಿಗಿಲಾಗುವುದು, ಮಗು, ದಿಗಿಲಾಗುವುದು.
ಬಾಲ ಮುದುರಿರುವ ನಾಯಿ,
ಬೆದರಿದ ಬೆಕ್ಕು ಗಿಣಿಮರಿಗಳು
ಗಾಜಿನ ಕೊಳಗಳಲ್ಲಲ್ಲೆ ನಿಂತು ಹೆಣವಾದ ಮೀನುಗಳು
ಮುಚ್ಚಿದ ಕಾರಖಾನೆಗಳು; ಜೇಡ ಬಲೆ–ಕಟ್ಟಿರುವ ಯಂತ್ರಗಳು
ಉರಿಯುತ್ತಿರುವ ವಿದ್ಯಾಲಯಗಳು.
ಜನಗಣಮನ ಅಧಿನಾಯಕ ಐದುವರ್ಷಕ್ಕೊಮ್ಮೊಮ್ಮೆ ಎದ್ದು
ಮಲಗುವುದನ್ನು ಕಂಡೂ ಕಂಡೂ
ರಾಜಘಾಟಿನ ಸಮಾಧಿಯೊಳಗಿಂದ
ಯಾತನೆಯ ನಿಟ್ಟುಸಿರು ಏಳುತಿದೆ.
ಕೇಳಿಸುತ್ತಿದೆಯೇ, ನಿನಗೆ ಮಗು?
ಬುಸುಗುಟ್ಟುತ್ತಿರುವೆ, ರೇಗುತಿಹೆಯೇನು
ಕೊಂಡವಾಗಿವೆ ಕಣ್ಣು.
ನಿಜ ಮಗೂ. ನಿಜ
ರಕ್ತ ಕುದಿಯುತ್ತದೆ.

ಎ. ಐ. ಆರ್. ಕೃಪೆಯಿಂದ

ಬಸವಣ್ಣನವರ ವಚನಗಳಲ್ಲಿ ಕಾವ್ಯಸೌಂದರ್ಯ

ಜಿ. ಎಸ್. ಶಿವರುದ್ರಪ್ಪ

ವಚನಗಳು ಕಾವ್ಯವೇ ಶಾಸ್ತ್ರವೇ ಎಂಬ ಪ್ರಶ್ನೆಗೆ ಅವುಗಳನ್ನು ಈ ಎರಡರಲ್ಲೊಂದು ವಿಭಾಗಕ್ಕೆ ಸೇರಿಸುವಂತೆ ಖಚಿತವಾಗಿ ಉತ್ತರ ಹೇಳುವುದು ಸಾಧ್ಯವಿಲ್ಲ. ಕೆಲವರು ಅವುಗಳನ್ನು 'ಶಾಸ್ತ್ರ' ಎಂದರೆ, ಕೆಲವರು ಅವು 'ಕಾವ್ಯ' ಎನ್ನುತ್ತಾರೆ. ಕೆಲವರು ಈ ವಚನಗಳನ್ನು ಒಟ್ಟಾಗಿ ನೋಡಿದರೆ ಇದೊಂದು ಶಾಸ್ತ್ರ ಸಾಹಿತ್ಯವೇ, ಬಿಡಿ ಬಿಡಿಯಾಗಿ ನೋಡಿದಲ್ಲಿ ಇದರಲ್ಲಿ ಕಾವ್ಯಾಂಶಗಳಿವೆ ಎನ್ನುತ್ತಾರೆ. ವಚನಗಳ ರೂಪಾಂಶವನ್ನು ಗಮನಿಸಿದರೆ ಇದು ಗದ್ಯವೆ ಅಥವಾ ಪದ್ಯವೆ ಎಂದು ತಟಕ್ಕನೆ ಸಂಶಯ ಬರುವಹಾಗೆ ಒಳಗಿನ ತಿರುಳನ್ನು ನೋಡಿದಾಗಲೂ, ಇದು ಶಾಸ್ತ್ರವೇ ಕಾವ್ಯವೇ ಎಂಬ ಸಂಶಯ ಬರುವುದು ಸಹಜ. ಮತ ಧರ್ಮದ ದೃಷ್ಟಿಯಿಂದ ನೋಡುವವರಿಗೆ, ಸಿದ್ಧಾಂತವೊಂದನ್ನು ವ್ಯಾಖ್ಯಾನಿಸತಕ್ಕವರಿಗೆ ಇವು ಶಾಸ್ತ್ರದ ಹಾಗೆ ತೋರಿದರೆ, ಸಾಹಿತ್ಯ ಕಾವ್ಯಮೀಮಾಂಸೆಯ ದೃಷ್ಟಿಯಿಂದ ನೋಡತಕ್ಕವರಿಗೆ ಕಾವ್ಯದ ಹಾಗೆ ತೋರುತ್ತವೆ. ಆದರೆ ಈ ವಚನ ವಾಙ್ಮಯವನ್ನೆಲ್ಲ ಸಮಗ್ರವಾಗಿ ಇರಿಸಿಕೊಂಡು ನೋಡಿದಾಗ ಇದರಲ್ಲಿ ಶಾಸ್ತ್ರವೇ ಹೆಚ್ಚಾಗಿರುವಂತೆ ಕಂಡು ಬಂದರೂ, ಬಸವಣ್ಣನವರ ವಚನಗಳನ್ನೇ ಪ್ರತ್ಯೇಕವಾಗಿ ನೋಡಿದರೆ, ಅವುಗಳಲ್ಲಿ ಕಾವ್ಯ ಸೌಂದರ್ಯವೆ ಮಿಗಿಲಾಗಿರುವುದು ಕಂಡುಬರುತ್ತದೆ.

ಈ ವಚನಸಾಹಿತ್ಯ ಎನ್ನುವುದು ಕನ್ನಡ ಕಾವ್ಯ ಪರಂಪರೆಯಲ್ಲಿ ಮಧ್ಯಂತರದಲ್ಲಿ ಮೂಡಿದ ಒಂದು ಅಪರೂಪದ ಅಭಿವ್ಯಕ್ತಿ ಪ್ರಕಾರ ಎನ್ನುವುದು ಸ್ಪಷ್ಟವಾಗಿದೆ. ವಚನ ಸಾಹಿತ್ಯವನ್ನೆ ಕೇಂದ್ರವಾಗಿರಿಸಿಕೊಂಡು ನೋಡಿದರೆ, ಅವುಗಳಿಗಿಂತ ಹಿಂದೆ ಇರುವುದು ಒಂದು ಚಂಪೂ ಪರಂಪರೆ; ಅವುಗಳ ಮುಂದೆ ಇರುವುದು ರಗಳೆ – ಷಟ್ಪದಿ– ಸಾಂಗತ್ಯಗಳ ಪರಂಪರೆ. ಆ ಕಡೆ ಮಾರ್ಗ, ಈ ಕಡೆ ದೇಸಿ. ಈ ಎರಡರ ನಡುವೆ ನಿಂತಿದೆ, ಈ ಎರಡೂ ಕಾವ್ಯ ಪ್ರಕಾರಗಳಿಂದ ಭಿನ್ನವಾದ, ತನಗೆ ತಾನೇ ಸ್ವತಂತ್ರವಾದ ಈ ಒಂದು ಅಭಿವ್ಯಕ್ತಿ ಪ್ರಕಾರ. ವಸ್ತು – ರೀತಿ – ದೃಷ್ಟಿ ಯಾವುದರಲ್ಲಿಯೂ ತನಗಿಂತ ಹಿಂದಿನ ಹಾಗೂ ಮುಂದಿನ ಕಾವ್ಯ ಪ್ರಕಾರಗಳನ್ನು ಹೋಲದೆ, ಕೆಲವಂಶಗಳಲ್ಲಿ ಮುಂದಿನ ಮಾರ್ಗದ ಮೇಲೆ ತನ್ನ ಪ್ರಭಾವವನ್ನು ಬೀರುತ್ತಾ* ತಾನೇ ತಾನಾಗಿ ಒಂದು ಅಪರಿಚಿತ

* ಮುಂದಿನ ವೀರಶೈವ ಕವಿಗಳ ಭಾಷೆಯ ಮೇಲೆ, ಮತ್ತು ದಾಸ ಸಾಹಿತ್ಯದ ಮೇಲೆ ಈ ವಚನ ಸಾಹಿತ್ಯದ ಪ್ರಭಾವವನ್ನು ಸ್ಪಷ್ಟವಾಗಿ ಗುರುತಿಸಬಹುದು.

ವಿನೂತನ ಸಾಹಿತ್ಯ ಪ್ರಕಾರವಾಗಿ ನಿಂತಿರುವುದು ಸ್ವಾರಸ್ಯವಾಗಿದೆ. ಕಾವ್ಯ ಎಂದರೆ ಹೇಗಿರಬೇಕು, ಹೇಗಿರುತ್ತದೆ ಎಂದು ನಾವು ತಿಳಿದಿದ್ದೇವೆಯೋ ಆ ಸಾಮಾನ್ಯವಾದ ತಿಳುವಳಿಕೆಯನ್ನು ತಲೆಕೆಳಗು ಮಾಡುವಂತಿದೆ ಈ ವಚನ ಪ್ರಕಾರ: ಮೊದಲನೆಯದಾಗಿ ನಮಗೆ ಪರಿಚಿತವಾಗಿರುವ ಹಾಗೆ ಕಾವ್ಯ ಎಂದರೆ ಪದ್ಯರೂಪವಾದದ್ದು – ಅಲ್ಲಲ್ಲಿ ಗದ್ಯರೂಪದ ವಡ್ಡಾರಾಧನೆಯಂಥದು, ಅಥವಾ ನಡುನಡುವೆ ಗದ್ಯಭಾಗಗಳನ್ನುಳ್ಳ ಚಂಪೂರೂಪವಾದದ್ದು ಇದ್ದರೂ – ಎಂದು ತಿಳುವಳಿಕೆ. ಆದರೆ ವಚನ ಪದ್ಯರೂಪ ವಾಗಿಲ್ಲ. ಗದ್ಯರೂಪದಲ್ಲಿದ್ದರೂ ಹಿಂದಿನ ಗದ್ಯರೂಪವನ್ನು ಉದ್ದೇಶ ಹಾಗೂ ವಿಸ್ತಾರ ಗಳಲ್ಲಿ ಹೋಲುವುದಿಲ್ಲ; ಅಲ್ಲದೆ ಇದನ್ನು ಕೇವಲ ಗದ್ಯ ಎನ್ನಲೂ ಬರುವಂತಿಲ್ಲ. ವಸ್ತುವಿನ ದೃಷ್ಟಿಯಿಂದ ನೋಡಿದರೆ ಇದರದ್ದು ಪುರಾಣೇತಿಹಾಸಗಳಿಂದ ಎತ್ತಿಕೊಂಡ ಸಿದ್ಧ – ಪ್ರಸಿದ್ಧವಾದದ್ದೋ, ಇಲ್ಲವೆ ಕವಿಕಲ್ಪಿತವಾದ ಕಥೆಯನ್ನುಳ್ಳದ್ದೋ ಅಲ್ಲ. ಕತೆಯಲ್ಲಿ ಬರುವಂತೆ ಘಟನೆಗಳಿಲ್ಲ; ಪಾತ್ರಗಳಿಲ್ಲ; ನಗರವರ್ಣನೆ, ಋತುವರ್ಣನೆ, ಸ್ತ್ರೀ ವರ್ಣನೆ ಇತ್ಯಾದಿಯಾದ ಯಾವ ವರ್ಣನೆಗಳೂ ಇಲ್ಲ. ಶೃಂಗಾರ ವೀರಾದಿರಸಗಳ ಪೋಷಣೆ ಇಲ್ಲ. ಹೀಗಾಗಿ ತನ್ನ ಹಿಂದಿನ ಮತ್ತು ತನ್ನ ಮುಂದಿನ ಸಾಹಿತ್ಯ ಪರಂಪರೆ ಯಲ್ಲಿ ಕಂಡುಬರುವಂಥ ಯಾವ ಕಾವ್ಯಲಕ್ಷಣಗಳ ದೃಷ್ಟಿಯಿಂದ ನೋಡಿದರೂ ಇದನ್ನು ಕಾವ್ಯ ಎನ್ನಲು ಬರುವಂತಿಲ್ಲವಲ್ಲ !

ಹೋಗಲಿ; ಇವುಗಳನ್ನು ಬರೆದವರಾದರೂ ತಾವು ಹಿಂದಿನ ಕವಿಗಳ ಹಾಗೆ ಕಾವ್ಯ ವನ್ನೋ, ಸಾಹಿತ್ಯವನ್ನೋ ನಿರ್ಮಿಸುತ್ತಿದ್ದೇವೆ ಎಂದು ಹೇಳಿಕೊಂಡಿದ್ದಾರೆಯೆ? ಅಥವಾ ತಮ್ಮನ್ನು ಕವಿ ಎಂದು ಕರೆದುಕೊಂಡಿದ್ದಾರೆಯೆ? ಕಾವ್ಯದ ಉದ್ದೇಶ, ಸ್ವರೂಪ, ಪ್ರಯೋಜನ, ಪೂರ್ವಕವಿ ಸ್ತುತಿ, ಸ್ವಕಾವ್ಯ ಪ್ರಶಂಸೆ ಇತ್ಯಾದಿಗಳೇನಾದರೂ ಇಲ್ಲಿ ಉಂಟೆ? ಅದರ ಮಾತೇ ಇಲ್ಲ. ಬರೆದವರೇ ಇದು ಕಾವ್ಯ ಎಂದು ಹೇಳಿಕೊಳ್ಳದೆ ಹೋದ ಮೇಲೆ ಇದನ್ನು ಕಾವ್ಯ ಎಂದು ನಾವಾದರೂ ಹೇಳಬಹುದೆ?

ಇನ್ನು ಸೌಂದರ್ಯದ ಮಾತೆಲ್ಲಿ ಬಂತು? ಯಾವುದರ ಸೌಂದರ್ಯ ಪ್ರಜ್ಞೆ ಇಲ್ಲಿದೆ? ಕವಿಗಿರಬೇಕಾದ ಸೌಂದರ್ಯ ಪ್ರಜ್ಞೆಯ ಯಾವ ಅಂಶಗಳಿವೆ ಇದರಲ್ಲಿ? ಇಂದ್ರಿಯ ಗ್ರಾಹ್ಯವಾದ ರೂಪಲೋಕದ ಯಾವ ಚೆಲುವನ್ನಾದರೂ ಈ ವಚನಗಳಲ್ಲಿ ಕಾಣಬಹುದೆ? ಹೀಗಾಗಿ ಇದು ಕಾವ್ಯವೂ ಅಲ್ಲ; ಇದರಲ್ಲಿ ಸೌಂದರ್ಯವೂ ಇಲ್ಲ ಇನ್ನು ವಚನಗಳಲ್ಲಿ ಕಾವ್ಯಸೌಂದರ್ಯ ಎಂಬ ಮಾತಿಗೆ ಅರ್ಥವೇನು?

ಹಾಗಾದರೆ ಇದು ಶಾಸ್ತ್ರವೇ? ಶಾಸ್ತ್ರದಲ್ಲಿ ಯಾವುದೋ ಒಂದು ಮತ – ಧರ್ಮ ಸಂಬಂಧಿಯಾದ, ಅಥವಾ ವಸ್ತು ನಿಷ್ಠವಾದ ಒಂದು ವಿಷಯದ ಶಾಸ್ತ್ರೀಯವಾದ ನಿರೂಪಣೆ ಇರಬೇಕು. ಶೈಲಿಯಲ್ಲಿ ಖಚಿತತೆ, ಪಾರಿಭಾಷಿಕತೆ, ನಿರಲಂಕಾರತೆ, ಇರಬೇಕು. ಶುದ್ಧ ಶಾಸ್ತ್ರಕ್ಕೆ ಅಗತ್ಯವಾದ ಈ ಲಕ್ಷಣಗಳಾದರೂ ಸಾರ್ವತ್ರಿಕವಾಗಿ ಈ ವಚನಗಳಲ್ಲಿ

ಹೇಗೇ ಎಂದರೆ, ಈ ವಚನಗಳು – ಅದರಲ್ಲಿಯೂ ಬಸವಣ್ಣನವರ ವಚನಗಳು – ಶಾಸ್ತ್ರ ಲಕ್ಷಣಗಳಿಗೂ ಹೊರತಾಗಿವೆ. ಹಾಗಾದರೆ ಇವು ಶಾಸ್ತ್ರವೂ ಅಲ್ಲ. ಕಾವ್ಯವೂ ಅಲ್ಲ! ಇನ್ನೇನು?

ಇಷ್ಟು ಸುಲಭವಾಗಿ ಇವುಗಳನ್ನು ನಿರಾಕರಿಸುವಂತಿಲ್ಲ; ಏಕೆಂದರೆ ಇವು ಕಾವ್ಯವಲ್ಲದಿದ್ದರೆ ಇನ್ನೇನು ತಾನೇ ಕಾವ್ಯವಾದೀತು ಎಂಬಷ್ಟರಮಟ್ಟಿಗೆ ಹೃದಯ ಸಂವಾದವನ್ನು ಪಡೆಯುವ ಸರಳತೆ. ಸಂಕ್ಷಿಪ್ತತೆ. ಸಚಿತ್ರತೆ. ಧ್ವನಿಪ್ರಚುರತೆ ತುಂಬಿ ತುಳುಕುತ್ತಿದೆ. ರೀತಿಯಲ್ಲಿ ಹೊಸತನವಿದೆ. ಮಾತು ಆಡಿದಹಾಗಿದೆ: ಆದರೆ ಆಡುಮಾತಿನ ಸಾಮಾನ್ಯತೆಗೆ ಮೀರಿದ ಅಸಾಧಾರಣತೆ ಇದೆ. ಕಾವ್ಯದ ಯಾವ ಸಾಂಪ್ರದಾಯಿಕ ಲಕ್ಷಣಗಳಿಗೂ ಸಿಗದ ಇವರಲ್ಲಿ ಕಾವ್ಯದ ಅಂತರಂಗ ಲಕ್ಷಣಗಳು ತಾನೇ ತಾನಾಗಿವೆ.

ಹಿಂದೆ ಹೇಳಿದ ಒಂದೊಂದೇ ಅಂಶಗಳನ್ನು ಪರಿಶೀಲಿಸಿ ನೋಡೋಣ: ನಮಗೆ ಪರಿಚಿತವಾದ ಕಾವ್ಯದ ವಸ್ತು – ರೀತಿ – ದೃಷ್ಟಿಗಳನ್ನು ಇವು ಹೋಲುವುದಿಲ್ಲ ಎಂಬುದೇನೋ ನಿಜ. ಆದರೆ ಇವುಗಳಲ್ಲಿನ ವಸ್ತು – ರೀತಿ – ದೃಷ್ಟಿ ಇವುಗಳು ಇವಕ್ಕೆ ಹಿಂದಿನ ಅಥವಾ ಮುಂದಿನ ಕಾವ್ಯದ ವಸ್ತು–ರೀತಿ–ದೃಷ್ಟಿಗಳಿಗೆ ವಿರುದ್ಧವಾಗೇನೂ ಇಲ್ಲ. ಕೊಂಚ ವಿಭಿನ್ನವಾಗಿವೆ ಅಷ್ಟೆ. ಇವುಗಳಲ್ಲಿನ ವಸ್ತು ಬಹಿರಂಗದ್ದಲ್ಲ: ಅಂತರಂಗದ್ದು. ವಸ್ತುನಿಷ್ಠವಾದದ್ದಲ್ಲ. ವ್ಯಕ್ತಿನಿಷ್ಠವಾದದ್ದು. ಸಿದ್ಧ – ಪ್ರಸಿದ್ಧ ಅಥವಾ ಕಲ್ಪಿತವಾದದ್ದಲ್ಲ; ಲೋಕಕ್ಕೂ ವಚನಕಾರನಾಗಿರುವ ಕೇಂದ್ರ ವ್ಯಕ್ತಿಗೂ ಉಂಟಾದ ಆಕರ್ಷಣೆ. ವಿಕರ್ಷಣೆಗಳ ಪರಿಣಾಮದಿಂದ ನಿಷ್ಪನ್ನವಾದದ್ದು. ಬಸವಣ್ಣನವರ ಯಾವ ಒಂದು ವಚನವನ್ನು ತೆಗೆದುಕೊಂಡರೂ. ಬಸವಣ್ಣನವರು ತಮಗೂ ಕೂಡಲಸಂಗಮನಿಗೂ ನಡುವೆ ಹೆಣೆಯುತ್ತಿ ಹರಡಿಕೊಂಡ 'ನಾನಾ ವರ್ಣದ ಸಂಸಾರ'ದ ಬಹುಬಗೆಯ ಅನುಭವಗಳನ್ನು, 'ಉರದುದ್ದ ಶಿರದುದ್ದ'ವಾದ ಸಂಸಾರಸಾಗರದ ತರಂಗತಾಡನದ ತೆರೆಯೊತ್ತಿನ ಗುರುತುಗಳನ್ನು. ವಿಷಯ ವೃಕ್ಷದ ಕೊಂಬೆಯಿಂದ ಕೊಂಬೆಗೆ ನೆಗೆದು ಹಾರುತ್ತಾ ಒಂದೆಡೆ ನಿಲ್ಲಲಾರದ 'ಮನದ ಮರ್ಕಟ'ದ ಚಾಂಚಲ್ಯದ ವೇದನೆಗಳನ್ನು. ಬದುಕಿನ ಭೋಗೋಪಭೋಗಗಳ ಎಂಜಲಿನ ಕಡೆಗೆ ಹಾರಿ ಓಡುವ 'ನಾಯಿತನ'ದ ವ್ಯಥೆಗಳನ್ನು. ಅಧಿಕಾರ – ಐಶ್ವರ್ಯ – ಸಂಸಾರ ಈ ಮೂರರ ಬಲೆಯಲ್ಲಿ ಸಿಲುಕಿ ಪಟ್ಟಪಾಡುಗಳನ್ನು ತಮ್ಮ 'ವಚನಗಳ ವಸ್ತು'ವನ್ನಾಗಿ ಮಾಡಿಕೊಂಡಿದ್ದಾರೆ. ತನ್ನದಲ್ಲದ ಅಥವಾ ಯಾರೋ ಮಾಡಿರಿಸಿದ. ಅಥವಾ ತಾವೇ ಕಲ್ಪಿಸಿಕೊಂಡ ವಸ್ತುಮಾಧ್ಯಮದ ಕೃತಕತೆಯನ್ನು ಅವರು ಅವಲಂಬಿಸದೆ. ತಮ್ಮ ವೈಯಕ್ತಿಕವಾದ. ಪ್ರಾಮಾಣಿಕವಾದ ಅನುಭವಗಳನ್ನು ಇಷ್ಟು ನೇರವಾಗಿ ತೋಡಿಕೊಂಡದ್ದೇ ಅವರ ವಚನಗಳ ವಸ್ತು ಸೌಂದರ್ಯದ ವಿಶಿಷ್ಟತೆಗೆ ಕಾರಣವಾಗಿದೆ. ತಮ್ಮ ಅಂತರಂಗದ ವ್ಯಥೆಯ ಕಥೆಯೇ ವಚನಗಳ ವಸ್ತು. ಇವುಗಳಲ್ಲಿ ಏಕಸೂತ್ರತೆ ಇದ್ದರೆ ಅದು ಇವುಗಳ ತುಂಬ ಅಭಿವ್ಯಕ್ತವಾಗಿರುವ ವ್ಯಕ್ತಿತ್ವದ್ದೆ ಹೊರತು ವಿಷಯದ್ದಲ್ಲ. ಒಂದೇ ವ್ಯಕ್ತಿತ್ವ,

ಅನೇಕ ಸಂದರ್ಭಗಳಲ್ಲಿ ಬದುಕನ್ನು ತೀವ್ರವಾಗಿ ಅನುಭವಿಸಿದ್ದರ ವರ್ಣನೆ ಇವುಗಳ ತುಂಬ ಹರಡಿಕೊಂಡಿದೆ. ಹೀಗಾಗಿ ಉಳಿದ ಕಾವ್ಯಗಳಲ್ಲಿಯಂತೆ ಅನೇಕ ಪಾತ್ರಗಳ ಕಥೆಯಲ್ಲ ಇದು; ಒಂದೇ ಪಾತ್ರದ ಅನೇಕ ಮುಖದ ಅಭಿವ್ಯಕ್ತಿ. ಒಂದೆಡೆ ಬಸವಣ್ಣನವರ ಅಂತರಂಗ ಕೂಡಲಸಂಗನೆಂಬ ಪತಿಗಾಗಿ ಕಾಯುವ ಹೆಣ್ಣಾಗಿ ತನ್ನ ಪಾಡನ್ನು ಹೀಗೆ ತೋಡಿಕೊಂಡಿದೆ.

ಅರಿಸಿನವನೆ ಮಿಂದು, ಹೊಂದೊಡಿಗೆಯನೆ ತೊಟ್ಟು
ಪುರುಷನ ಒಲವಿಲ್ಲದ ಲಲನೆಯಂತಾಗಿರ್ದೆ ನಯ್ಯಾ (269)

ಗಿಳಿಯ ಹಂಜರವಿಕ್ಕಿ, ಸೊಡರಿಗೆಣ್ಣೆಯನೆಱೆದು ಬತ್ತಿಯನಿಕ್ಕಿ
ಬರವ ಹಾರುತ್ತಿದ್ದೆ ನೆಲ ಗವ್ವಾ
ತಱಗೆಲೆ ಗಿಱುಕೆಂದೊಡೆ ಹೊಱಗ ನಾನಾಲಿಸುವೆ
ಅಗಲಿದ ನೆಂದೆನ್ನ ಮನ ಧಿಗಿಲೆಂದಿತ್ತೆಲಗವ್ವಾ (374)*

ಈ ಎರಡು ವಚನ ಭಾಗಗಳಲ್ಲಿ ಕಂಡುಬರುವ ವ್ಯಥೆ ಮತ್ತು ಉತ್ಕಟವಾದ ಹಾರೈಕೆಯಲ್ಲಿ ಎಂತಹ ಶೃಂಗಾರರಸದ ಅಭಿವ್ಯಕ್ತಿಯಿದೆ! ಸಿಂಗರಿಸಿಕೊಂಡು. ಶಯ್ಯಾ ಗೃಹದಲ್ಲಿ ನಲ್ಲನ ಬರವನ್ನು ಹಾರೈಸುತ್ತಾ "ತಱಗೆಲೆ ಗಿಱುಕೆಂದೊಡೆ ಹೊಱಗ"ನ್ನಾಲಿಸುತ್ತಾ ಕುಳಿತ ಈ ಜೀವಸತಿಯ ಕಾತರದ ವಿಭಾವದಲ್ಲಿ ಬಸವಣ್ಣನವರು ತಮ್ಮನ್ನು ತಾವು ಇರಿಸಿಕೊಂಡು ಚಿತ್ರಿಸಿರುವ ಈ ಭಗವದ್ ರತಿಭಾವದ ಪ್ರತಿಮೆ ಅತ್ಯಂತ ಸೊಗಸಾಗಿದೆ. ಇಲ್ಲಿಯೂ ಕಾವ್ಯಗಳಲ್ಲಿಯಂತೆ ಶೃಂಗಾರವಿದೆ; ಆದರೆ ಇವರ ನಿಲುವೇ ಬೇರೆ. ಇನ್ನೊಂದೆಡೆ 'ವೀರಭಾವ'ದ ಅಭಿವ್ಯಕ್ತಿ ಇದೆ. ಭಗವಂತನಿಗಾಗಿ ಸನ್ನದ್ಧವಾದ ಭಕ್ತ ಚೇತನ ಈ ಲೋಕದ ಕಷ್ಟಕಾರ್ಪಣ್ಯಗಳ, ಲೋಭಮೋಹಗಳ ವಿರುದ್ಧವಾಗಿ ಪ್ರತಿಭಟಿಸಿನಿಂತ ಛಲದಲ್ಲಿ ವೀರವಿದೆ.

ಅಂಜಿದರಾಗದು ಅಳುಕಿದರಾಗದು
ವಜ್ರಪಂಜರ ದೊಳಗಿದ್ದರಾಗದು
ತಪ್ಪದು ಶ್ರೀ ಲಲಾಟ ಲಿಖಿತ (682)
....

ನಾಳೆ ಬಪ್ಪುದು ನಮಗಿಂದೆ ಬರಲಿ
ಇಂದು ಬಪ್ಪುದು ನಮಗೀಗಲೆ ಬರಲಿ
ಇದಕಾರಂಜುವರು ಇದಕಾರಳುಕುವರು? (696)
....

* ಈ ಲೇಖನದಲ್ಲಿ ಬಳಸಿಕೊಂಡಿರುವ ವಚನಗಳೆಲ್ಲಾ ಪ್ರೊ॥ ಶಿ. ಶಿ. ಬಸವನಾಳರ "ಬಸವಣ್ಣನವರ ಷಟ್‌ಸ್ಥಲದ ವಚನಗಳು" ಎಂಬುದರಿಂದ.

ಜೋಳವಾಳಿಯನಲ್ಲ, ವೇಳೆವಾಳಿಯವ ನಾನಯ್ಯಾ;
ಹಾಳುಗೆಟ್ಟೋಡುವ ಆಳು ನಾನಲ್ಲಯ್ಯಾ;
ಕೇಳು ಕೂಡಲ ಸಂಗಮ ದೇವಾ
ಮರಣವೆ ಮಹಾನವಮಿ (698).

ಇದು ಇಲ್ಲಿನ ವ್ಯಕ್ತಿತ್ವದ ವೀರಭಾವ: ಇದು ಮೃತ್ಯುಂಜಯ ಮನೋಧರ್ಮ, ಬೇರೆ ಕಾವ್ಯಗಳಲ್ಲಿನ ಕಥಾನಾಯಕ ರಣವೀರ; ಅವನು ಹೋರಾಡುವುದು ಬಹಿರಂಗದ ಹಗೆಗಳ ಮೇಲೆ, ಚತುರಂಗಬಲ ಸಮೇತ. ಅದು 'ವಿಜಯೋದ್ಯೋಗ ವರ್ಣನಂ' ಎಂದು ಚಿತ್ರಿತವಾಗಿದೆ. ಆದರೆ ಬಸವಣ್ಣನವರ ವ್ಯಕ್ತಿತ್ವ ಹೋರಾಡುವುದು ಛಲದ ಆಯುಧ ಹಿಡಿದು. ತನ್ನ ಅಂತರಂಗದ ಶತ್ರುಗಳಮೇಲೆ; ಬಹಿರಂಗ ಸಮಾಜದ ದೌಷ್ಟ್ಯ ದಂಭಾಚಾರಗಳೊಡನೆ, ಈ ನಿರಸ್ತ್ರವೀರತೆ ಅಪೂರ್ವವಾಗಿದೆ. ಇನ್ನು ಹಾಸ್ಯರಸ ವ್ಯಕ್ತವಾಗಿರುವುದು ಬಸವಣ್ಣನವರು ತಮ್ಮ ಅಂತರಂಗ – ಬಹಿರಂಗದ ದೋಷಗಳನ್ನು ತಾವೇ ನೋಡಿಕೊಂಡು ನಕ್ಕಾಗ; ತಮ್ಮನ್ನು ತಾವೇ ವಿಶ್ಲೇಷಣೆ ಮಾಡಿಕೊಂಡು ಟೀಕಿಸಿಕೊಂಡಾಗ. ತಮ್ಮ ಭಕ್ತಿಯ ಸತ್ವದ ಬಗ್ಗೆ ಬಂದ ಸಂದೇಹವನ್ನು ಕುರಿತು—

ಮೊಱಸಿಕೊಂಡು ಹೋದ ನಾಯಿ; ಮೊಲನೇನ ಹಿಡಿಯುವುದಯ್ಯಾ?
ಇಱಿಯದ ವೀರ; ಇಲ್ಲದ ಸೊಬಗ ಹೇಳುವುದೇ ನಾಚಿಕೆ!
ಅನುಭಕ್ತನೆಂತಪ್ಪೆ ನಯ್ಯಾ ಕೂಡಲ ಸಂಗಮ ದೇವಾ? (304)

ಹೇಡಿ ಬಿರುದ ಕಟ್ಟಿದಂತಾಯಿತೆನ್ನ ವೇಷ
ಕಾದಬೇಕು, ಕಾದುವರೆ ಮನವಿಲ್ಲ—
ಆಗಳೆ ಹೋಯಿತ್ತು ಬಿರುದು:
ಹಗರಣ ನಗೆಗೆಡೆ ಯಾಯಿತ್ತು (300)

ಹೀಗೆ ತಮ್ಮನ್ನು ತಾವು ಹಳಿದುಕೊಂಡಾಗ ಒಂದು ರೀತಿಯ ನಗುಬರುತ್ತದೆ. ಸಮಾಜದ, ವ್ಯಕ್ತಿಗಳ ಅಂಕು – ಡೊಂಕುಗಳನ್ನು ಕುರಿತು ವಿಡಂಬಿಸುವಾಗ ಚಿಮ್ಮುವ ಹಾಸ್ಯ ತಾನೇತಾನಾಗಿದೆ. ಭಕ್ತರ ನಡವಳಿಕೆಯನ್ನು ಕುರಿತು:—

ಭರ ಬರ ಭಕ್ತಿಯರೆಯಾಯಿತ್ತು, ಕಾಣಿರಣ್ಣಾ;
ಮೊದಲ ದಿನ ಹಣೆ ಮುಟ್ಟಿ, ಮಱುದಿನ ಕೈಯ ಮುಟ್ಟಿ
ಮೂಱಿಂಬದಿನಕ್ಕೆ ತೂಕಡಿಕೆ ಕಾಣಿರಣ್ಣಾ! (220)

ಎಂದು ಭಕ್ತಿಯ ಆರಂಭ ಶೂರತ್ವದ ದುರ್ದೆಸೆಯನ್ನು ಹೇಳುವಲ್ಲಿ; ದೇವಸ್ಥಾನಕ್ಕೆ ಹೋದವರನ್ನು ಕುರಿತು:—

ಹಾಗದ ಕೆರಹ ಹೊಱಗೆ ಕಳೆದು
ದೇಗುಲಕ್ಕೆ ಹೋಗಿ ದೇವರಿಗೆ ನಮಸ್ಕಾರವ ಮಾಡುವನಂತೆ—
ತನ್ನ ಕೆಱಹಿನ ಧ್ಯಾನವಲ್ಲದೆ ದೇವರ ಧ್ಯಾನ ವಿಲ್ಲಾ! (199)

ಎಂದು ಚಪ್ಪಲೀಚಿತ್ರರಾದ ಭಕ್ತರ ಯಥಾಸ್ಥಿತಿಯನ್ನು ಹೇಳುವಲ್ಲಿ

ಸಗಣಿಯ ಜೆನಕಂಗೆ ಸಂಪಗೆಯರಳಲ್ಲಿ ಪೂಜಿಸಿದರೆ
ರಂಜನೆಯಲ್ಲದೆ ಅದರ ಗಂಜಳ ಬಿಡದಣ್ಣಾ (93)

ಎಂದು ಅಳಿಮನದವರನ್ನು ವರ್ಣಿಸುವಲ್ಲಿ ಬಸವಣ್ಣನವರ ಹಾಸ್ಯ ಮನೋಧರ್ಮ ಅನೇಕ ಸ್ತರಗಳಲ್ಲಿ ಮಿನುಗುತ್ತದೆ. ಹೀಗೆ ಶೃಂಗಾರ. ವೀರ. ಹಾಸ್ಯ ಇವುಗಳನ್ನು ಬಿಟ್ಟರೆ ವಿಶೇಷವಾಗಿ ಕಾಣಿಸುವುದು 'ಕರುಣ'. ಬಸವಣ್ಣನವರ ವಚನಗಳ ಸ್ಥಾಯಿಯೆ ಕರುಣ – 'ಕರುಣ ಏವ ಏಕೋ ರಸಃ' ಎಂಬಂತೆ ವ್ಯಾಪಕವಾಗಿದೆ. ಕೂಡಲಸಂಗಮ ನಿಗಾಗಿ ಅವರು ತಮ್ಮ ಅಂತರಂಗದ ಪದರ ಪದರಗಳನ್ನೂ ತೆರೆದು ಪರಿಪರಿಯಾಗಿ ಮೊರೆಯಿಡುವ ನಿಟ್ಟುಸಿರು. ಕಂಬನಿ. ಆರ್ತಸ್ವರಗಳ ಒಂದು ಕರುಣವಾದ್ಯಸ್ವರ ಮೇಳದಂತಿದೆ ಅವರ ವಚನಗಳ ಒಟ್ಟುಧ್ವನಿ. ಬಸವಣ್ಣನವರು ಏನನ್ನೂ ಮರೆಮಾಡಿದ ವರಲ್ಲ; ಏಕೆಂದರೆ ಅವರದು ಮುಚ್ಚಿಟ್ಟ ಬದುಕಲ್ಲ: ಬಿಚ್ಚಿಟ್ಟ ಬದುಕು. ಸ್ವಾತ್ಮ ಸಂಸ್ಕಾರಶ್ರದ್ಧೆಯಿಂದ ಪ್ರಚೋದಿತವಾದ ಈ ಒಂದು ಪ್ರಾಮಾಣಿಕತೆಯೆ ಅವರ ಅಭಿವ್ಯಕ್ತಿ ಯಲ್ಲಿನ ಕಾವ್ಯಸೌಂದರ್ಯದ ತೇಜಸ್ಸಾಗಿದೆ. ಹೀಗಾಗಿ ಅನೇಕ ನಿಲುವುಗಳಲ್ಲಿ ತಮ್ಮನ್ನು ತಾವು ಇರಿಸಿಕೊಂಡು, ತಮ್ಮನ್ನು ತಾವು ಅಭಿವ್ಯಕ್ತಪಡಿಸಿಕೊಂಡಿರುವ ಈ ಏಕ ಪಾತ್ರಾಭಿನಯ ರೂಪವಾದ ಕರುಣ ಕಥೆ ಅತ್ಯಂತ ಹೃದಯ ಸ್ಪರ್ಶಿಯಾಗಿದೆ.

ಇಂದ್ರಿಯ ಗ್ರಾಹ್ಯವಾದ ರೂಪಲೋಕದ ಸೌಂದರ್ಯ ಸುತ್ತಣ ನಿಸರ್ಗ ವೈಭವ ದಲ್ಲಿ. ಮತ್ತು ಮಾನವ ರೂಪದಲ್ಲಿ ವ್ಯಕ್ತವಾಗಿದೆ. ಈ ಎರಡನ್ನೂ ಬಿಟ್ಟು ಸೌಂದರ್ಯ ವನ್ನು ಕಾಣಿಸಲು ಸಾಧ್ಯ ಎಂಬುದನ್ನು ಬಸವಣ್ಣನವರ ವಚನಗಳು ತೋರಿಸಿರುವ ರೀತಿ ಅಪೂರ್ವವಾಗಿದೆ. ಅವರ ವಚನಗಳಲ್ಲಿ ನಿಸರ್ಗ ವರ್ಣನೆ ಇಲ್ಲವೇ ಇಲ್ಲ. ಇರುವುದೇ ನಿದ್ದರೂ ಅಂತರಂಗ ನಿಸರ್ಗದ ವರ್ಣನೆ. ಮನುಷ್ಯ ಪ್ರಕೃತಿಯ ಚಿತ್ರಣ. ಅವರಲ್ಲಿ ಬಹಿರಂಗ ನಿಸರ್ಗದ ಸೌಂದರ್ಯಪ್ರಿಯತೆಯ ಸಂಕೇತಗಳು ವಿಶೇಷವಾಗಿಲ್ಲದಿರುವುದು ಉಳಿದ ಕವಿಗಳ ಸೌಂದರ್ಯ ಪ್ರಜ್ಞೆಯಿಂದ ಇವರ ಅಭಿವ್ಯಕ್ತಿಯನ್ನು ಬೇರ್ಪಡಿಸುತ್ತದೆ. ಕ್ವಚಿತ್ತಾಗಿ ನಿಸರ್ಗದಿಂದ ಸಂಕೇತಗಳನ್ನು. ಚಿತ್ರಗಳನ್ನು ಇವರು ಬಳಸಿಕೊಂಡರೂ ಅವೂ ಸೌಂದರ್ಯ ದೃಷ್ಟಿಯಿಂದ ಹೊರತಾಗಿವೆ. 'ಉದಯ' 'ಅಸ್ತಮಾನ'ಗಳ ಹೆಸರು ಬರುತ್ತದೆ ಅಷ್ಟೆ: ಅದರೆ ಕೇವಲ ಕಾಲಸೂಚಕವಾಗಿಮಾತ್ರ:—

ಹೊತ್ತಾರೆ ಎದ್ದು ಅಗ್ಘವಣಿ ಪತ್ರೆಯ ತಂದು
ಹೊತ್ತು ಹೋಗದ ಮುನ್ನ ಪೂಜಿಸುಲಿಂಗವ (123))

ಸುಪ್ರಭಾತ ಸಮಯದಲ್ಲಿ ಅರ್ತಿಯಲ್ಲಿ ಲಿಂಗವ ನೆನೆದರೆ
ತಪ್ಪುವವು ಅಪಮೃತ್ಯು ಕಾಲಕರ್ಮಂಗಳಯ್ಯಾ (177).

ಹೀಗೆನ್ನುವಲ್ಲಿ 'ಹೊತ್ತಾರೆ' 'ಸುಪ್ರಭಾತ' ಗಳು. ಅಸ್ತಮಾನಗಳು ಬರುವುದು ಪೂಜಾ

ಮುಹೂರ್ತಗಳ ನಿರ್ದೇಶನಕ್ಕೆ. ಬೆಳಗು – ಸಂಜೆಯ ನಡುವೆ ವ್ಯರ್ಥವಾಗಿ ಬದುಕು ಹೊರಳಿ ಹೋಗುತ್ತಿದೆ ಎನ್ನುವುದಕ್ಕೆ ಸಂಕೇತಗಳಷ್ಟೆ. ಇನ್ನು ಕೆಲವೆಡೆ:—

ಸೂರ್ಯನುದಯ ತಾವರೆಗೆ ಜೀವಾಳ
ಚಂದ್ರಮನುದಯ ನೆಯ್ದಿಲೆಗೆ ಜೀವಾಳ (366)

ಚಕೋರಂಗೆ ಚಂದ್ರಮನ ಬೆಳಕಿನ ಚಿಂತೆ
ಅಂಬುಜಕೆ ಭಾನುವಿನ ಉದಯದ ಚಿಂತೆ
ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ (368)

ಎನ್ನುವಲ್ಲಿ ಈ ನಿಸರ್ಗದ ವ್ಯಾಪಾರಗಳ ರಮ್ಯತೆಯ ಕಡೆಗೆ ಅವರಿಗೆ ಕಣ್ಣಿಲ್ಲ. ಅದರ ಬದಲು ಅವು ತಮ್ಮ ಮನಃಸ್ಥಿತಿಯನ್ನು ಸೂಚಿಸುವ. ದೇವರ ವಿಚಾರದಲ್ಲಿರುವ ತಮ್ಮ ಸಂಬಂಧದ ಕಾತರತೆಯನ್ನು ಸ್ಫುಟಗೊಳಿಸುವ ಸಾಂಪ್ರದಾಯಿಕ ದೃಷ್ಟಾಂತ ವಿಧಾನವನ್ನು ಮಾತ್ರ ವ್ಯಕ್ತಗೊಳಿಸಲು ನಿಯುಕ್ತವಾಗಿವೆ. ಬಸವಣ್ಣನವರ ವಚನಗಳಲ್ಲಿ ಕಂಡು ಬರುವ ನಿಸರ್ಗ ಸೌಂದರ್ಯದ ಬಗೆಗಿರುವ ಈ ನಿರ್ಲಕ್ಷ್ಯ ಗಮನಿಸತಕ್ಕದ್ದಾಗಿದೆ. ಭಕ್ತರಾದ ಬಸವಣ್ಣನವರಿಗೆ ಸುತ್ತಣ ಪ್ರಕೃತಿಯ ಬಗೆಗೆ ಭಗವಂತನ ಸೌಂದರ್ಯಾಭಿವ್ಯಕ್ತಿಯಾದ ನಿಸರ್ಗ ರಮಣೀಯತೆಯ ಕಡೆಗೆ ಕಣ್ಣು ಹೊರಳದೆ, ಕೇವಲ ಪೂಜಾ ಸೌಂದರ್ಯದ ಕಡೆಗೆ ಮಾತ್ರ ಕಣ್ಣು ಹೊರಳಿದ್ದು ವಿಚಿತ್ರವಾಗಿದೆ. ಆದರೆ ಹರಿಹರನಂಥ ಭಕ್ತ ಕವಿ ತಾನು ಅಪ್ಪಟ ಭಕ್ತನಾಗಿದ್ದೂ. ನಿಸರ್ಗದ ಪ್ರೀತಿಯನ್ನು ಶ್ರೀಮಂತವಾಗಿ ವ್ಯಕ್ತಪಡಿಸಿದ್ದಾನೆ. ಬಸವಣ್ಣನವರು ಭಕ್ತರಾಗಿದ್ದೂ ಅದೇಕೋ ಪ್ರಕೃತಿಯ ಚೆಲುವಿನಕಡೆ ಗಮನ ಕೊಡಲಾರದೆ ಹೋದರು. ದೇವರದಾಸಿಮಯ್ಯ ಅಕ್ಕಮಹಾದೇವಿ ಇಂಥವರ ವಚನಗಳಲ್ಲಿ ಕಂಡುಬರುವ ವಿಸ್ಮಯ ಮೂಲವಾದ ನಿಸರ್ಗ ಪ್ರಿಯತೆ ಬಸವಣ್ಣನವರಲ್ಲಿ ಕಾಣದಾಗಿದೆ. ಅದರ ಬದಲು ಬೇರೆಯಾರಲ್ಲೂ ಈ ಒಂದು ಮಟ್ಟದಲ್ಲಿ ಕಾಣದ ಸಾಮಾಜಿಕ ಪ್ರಜ್ಞೆ. ಮತ್ತು ಪ್ರಾಣಿ ಪ್ರಪಂಚಾನುಭವ ಬಸವಣ್ಣನವರ ವಚನಗಳಲ್ಲಿ ಆಶ್ಚರ್ಯಕರವಾಗಿ ವ್ಯಕ್ತವಾಗಿದೆ. ಸಮಾಜದ ಬಹುಮುಖ ಜೀವನದ ಪ್ರಜ್ಞೆ ಅವರಿಗಿರಲು ಕಾರಣ. ಅವರು ತಾವು ಪ್ರವರ್ತನಗೊಳಿಸಿದ ಹೊಸ ಧರ್ಮವನ್ನು ನೆಲೆಗೊಳಿಸಬೇಕಾದರೆ ಮೊದಲು ತಮ್ಮ ಸಮಕಾಲೀನ ಸಮಾಜದ ಅಂತರಂಗ – ಬಹಿರಂಗಗಳನ್ನು ಕೂಲಂಕಷವಾಗಿ ಪರಿಶೀಲಿಸುವ ಅಗತ್ಯವಿದ್ದುದೇ ಆಗಿದೆ. ಹೀಗಾಗಿ ಅಂದಿನ ಸಮಾಜದ ಸಹಜವಾದ ಚಿತ್ರಣ ಅವರ ವಚನಗಳಲ್ಲಿ ಬಿಂಬಿತವಾಗುತ್ತಾ. ಸಾಮಾಜಿಕ ಅಧ್ಯಯನ ನಡೆಸತಕ್ಕವರಿಗೆ ಘನವಾದ ಆಕರವಾಗಿವೆ; ಅಲ್ಲದೆ ಅವರ ಸಾಮಾಜಿಕ ಪ್ರಜ್ಞೆಗೆ ಅವರ ವಚನಗಳು ಕಲಾತ್ಮಕವಾದ ಸಂಕೇತಗಳಾಗಿವೆ. ಮತ್ತೊಂದು ವಿಶೇಷವೆಂದರೆ ಅವರು ಬಳಸುವ ಪ್ರಾಣಿರೂಪಕಗಳು*.

* ಸುಜನಾ ಅವರ 'ಹೃದಯಸಂವಾದ'ದಲ್ಲಿ 'ಬಸವಣ್ಣನವರ ವಚನಗಳಲ್ಲಿ ಪ್ರಾಣಿರೂಪಕಗಳು'— ನೋಡಿ

ಅವರು ತಮ್ಮ ಅಂತರಂಗದ ಅನೇಕ ಪ್ರವೃತ್ತಿಗಳನ್ನು ಎಷ್ಟೊಂದು ಪ್ರಾಣಿರೂಪಕಗಳಲ್ಲಿ ಹೇಳಿಕೊಂಡಿದ್ದಾರೆಂಬುದನ್ನು ನೋಡಿದರೆ 'ನಿಸರ್ಗ'ದ ಒಂದು ಭಾಗವಾದ ಪ್ರಾಣಿಪ್ರಪಂಚದ ವ್ಯಾಪಾರಗಳು ಅವರ ಪ್ರತಿಮಾ ನಿರ್ಮಿತಿಯಲ್ಲಿ ಒದಗಿಬಂದಹಾಗೆ. ನಿಸರ್ಗದ ಇನ್ನುಳಿದ ಅಂಶಗಳು ಒದಗಿದ್ದು ತೀರ ವಿರಳವೆಂದೇ ಹೇಳಬೇಕು.

ಯಾವ ಸಾಹಿತ್ಯ ನಿರ್ಮಿತಿ ತಾನು ಎಷ್ಟೇ ಸ್ವತಂತ್ರವೆಂಬಂತೆ ತೋರಿದರೂ ಪರಂಪರೆಯ ಕೆಲವು ಅಂಶಗಳನ್ನು ತನ್ನಲ್ಲಿ ಅಂತರ್ಗತ ಮಾಡಿಕೊಂಡಿರುತ್ತದೆ. ಬಸವಣ್ಣನವರ ವಚನಗಳೂ ಅಂತಹ ಕೆಲವು ಅಂಶಗಳನ್ನು ಒಳಗೊಂಡಿವೆ. ಉಳಿದ ಕವಿಗಳಲ್ಲಿ ಕಂಡುಬರುವ ಅಷ್ಟಾದಶ ವರ್ಣನೆಯ ಅಂಶಗಳನ್ನು ಇವರು ಅಂಥವಸ್ತುಗಳನ್ನೆ ಕೈಬಿಟ್ಟದ್ದರಿಂದ ಕೊಡವಿಕೊಂಡು ನಿಂತರು ಆದರೆ ಕವಿಸಮಯ, ಪುರಾಣ ಪ್ರಜ್ಞೆ ಇವುಗಳನ್ನು ಉಳಿಸಿಕೊಂಡರು. 'ಚಕೋರ – ಚಂದ್ರ' 'ಸೂರ್ಯ – ತಾವರೆ' 'ಅಂಬುಧಿ – ಚಂದ್ರೋದಯ' 'ಚಂದ್ರ – ರಾಹು' ಇತ್ಯಾದಿ ಕವಿಸಮಯ ಸಿದ್ಧವಾದ ಸಂಗತಿಗಳು ತಮ್ಮ ಅಂದಂದಿನ ಮನಃಸ್ಥಿತಿಯ ಪ್ರತಿಮಾ ನಿರ್ಮಿತಿಯಲ್ಲಿ ಒದಗಿಬಂದಿವೆ. ಇದರ ಜೊತೆಗೆ ವೈದಿಕ ಪುರಾಣಕಥೆಗಳಾದ ರಾಮಾಯಣ – ಮಹಾಭಾರತಗಳನ್ನು ಕುರಿತ ವಿಲಕ್ಷಣ ವ್ಯಾಖ್ಯಾನಗಳು. ಇವರಿಗಿಂತ ಹಿಂದಿನ ಜೈನ ಕವಿಗಳು ವೈದಿಕ ಪುರಾಣ ಕಥಾನಕಗಳ ಬಗೆಗೆ ತೋರಿದ ಪ್ರತಿಕ್ರಿಯೆಯನ್ನು ಹೋಲುತ್ತವೆ† ಎರಡನೆಯದಾಗಿ ತಮಗಿಂತ ಹಿಂದಿನ ಶಿವಪುರಾಣದ ಪರಿಚಯವೂ ಅವರಿಗೆ ತಕ್ಕಮಟ್ಟಿಗೆ ಇದ್ದಂತೆ ತೋರುತ್ತದೆ. "ಸಿರಿಯಾಳ" 'ಚಂಗಳೆ' 'ಸಿಂಧುಬಲ್ಲಾಳ' 'ಚೇಲಾಳ'. 'ನಂಬಿಯಣ್ಣ'— ಇತ್ಯಾದಿ ವ್ಯಕ್ತಿಗಳ ಉಲ್ಲೇಖವೂ. ಆಯಾ ಶಿವಶರಣರ ಬದುಕಿನ ಸಂದರ್ಭದ ನೆನಕೆಯೂ ಇದಕ್ಕೆ ಸಾಕ್ಷಿಯಾಗಿದೆ. ಇದೆಲ್ಲಕ್ಕಿಂತ ಮಿಗಿಲಾಗಿ ಬಸವಣ್ಣನವರಿಗೆ ವೇದೋಪನಿಷತ್ತುಗಳ. ಆಗಮ ಪುರಾಣಗಳ ಪರಿಚಯವೂ ಸಾಕಷ್ಟಿದ್ದಂತೆ ತೋರುತ್ತದೆ. ಅಲ್ಲಲ್ಲಿ ವೇದ ಪುರಾಣಾಗಮಗಳನ್ನು ಉದ್ಧರಿಸುವ ವಾಕ್ಯವೇಷ್ಟನಗಳು ಅವರಿಗಿದ್ದ ಈ ಸಂಸ್ಕೃತ ಸಾಹಿತ್ಯ ಪರಿಚಯಕ್ಕೆ ಸಾಕ್ಷಿಯಾಗಿವೆ. ಅಲ್ಲಲ್ಲಿ ವೇದೋಪನಿಷತ್ತುಗಳಲ್ಲಿನ ಮಾತುಗಳನ್ನು ತಮ್ಮದೇ ಆದ ತಿಳಿಗನ್ನಡದಲ್ಲಿ ಅನುವಾದಿಸಿದಂತೆ ಹೇಳಿರುವ "ದೇವನೊಬ್ಬ ನಾಮ ಹಲವು" ಎಂಬುದು. "ಏಕಂಸತ್ ವಿಪ್ರಾ ಬಹುಧಾ ವದಂತಿ" ಎಂಬುದನ್ನೂ. 'ಹಿರಿದಕ್ಕೆ ಹಿರಿದು ಕಿರಿದಕ್ಕೆ ಕಿರಿದು ಎಂಬುದು". "ಅಣೋರಣೀಯಾನ್ ಮಹತೋಮಹೀಯಾನ್" ಎಂಬುದನ್ನೂ

---

† ನೋಡಿ; ವಚನ 224, 588; 621; 622, ಇತ್ಯಾದಿ.

ಎತ್ತೆತ್ತ ನೋಡಿದತ್ತತ್ತ ನೀ ನೇ ದೇವಾ;
ಸಕಲ ವಿಸ್ತಾರದ ರೂಹು ನೀನೇ ದೇವಾ;
ವಿಶ್ವತಶ್ ಚಕ್ಷು ನೀನೇ, ದೇವಾ: ವಿಶ್ವತೋ ಮುಖ ನೀನೇ ದೇವಾ;
ವಿಶ್ವತೋ ಬಾಹು ನೀನೇ ದೇವಾ
ವಿಶ್ವತಃ ಪಾದ ನೀನೇ. ದೇವಾ: ಕೂಡಲಸಂಗಮದೇವಾ (532)

ಎನ್ನುವ ವಚನವು ಪುರುಷಸೂಕ್ತದ ಯಥಾವತ್ತಾದ ವರ್ಣನೆಯೇ ಆಗಿರುವುದನ್ನೂ ನೋಡಿದರೆ ಬಸವಣ್ಣನವರ ವಚನ ನಿರ್ಮಿತಿಗೆ ಎಂಥ ಪರಂಪರೆಯು ಓಸ್ನೆಲೆಯಿದೆ ಎಂಬುದು ತಿಳಿಯುತ್ತದೆ. ಬಸವಣ್ಣನವರಿಗೆ ವೇದೋಪನಿಷತ್ತುಗಳ ಬಗ್ಗೆ ಗೌರವ ವಿದ್ದು, ಇಂಥ ಸಂಸ್ಕೃತದ ಪಾಂಡಿತ್ಯವಿದ್ದೂ. ಅದನ್ನು ತನ್ನ ಸುತ್ತಣ ಜನಕ್ಕೆ ತಿಳಿಯಾದ ಕನ್ನಡದಲ್ಲಿ ಮೂಲಾರ್ಥಕ್ಕೆ ಬಾಧೆಬಾರದವಾಗೆ ಸಮರ್ಪಕವಾಗಿ ಅಭಿವ್ಯಕ್ತ ಪಡಿಸುವ ಸಾಮರ್ಥ್ಯವಿರುವುದು ವಿಶೇಷದ ಸಂಗತಿಯಾಗಿದೆ.

ಬಸವಣ್ಣನವರ ವಚನಗಳಿಗೆ ಇಂಥ ಶಾಸ್ತ್ರ – ಪುರಾಣ – ಆಗಮ ಪರಂಪರೆಯ ಓಸ್ನೆಲೆಯಿದ್ದರೂ, ಅವರು ತಮಗಿಂತ ಹಿಂದೆ ಹರಹಿರುವ ಕನ್ನಡ ಕಾವ್ಯ ಪರಂಪರೆಯ ಅರಿವೇ ಇಲ್ಲವೆಂಬಂತೆ ವರ್ತಿಸಿರುವುದು ಆಶ್ಚರ್ಯದ ವಿಚಾರವಾಗಿದೆ. ಏಕೆಂದರೆ ಸಾಹಿತ್ಯ ನಿರ್ಮಿತಿಯಲ್ಲಿ ತೊಡಗುವ ಕವಿಗಳೆಲ್ಲರೂ, ತಮ್ಮ ಪ್ರಸ್ತಾವನೆಯಲ್ಲಿ ಪೂರ್ವ ಕವಿಗಳ ಸ್ತುತಿ ಮತ್ತು ಕೃತಿ ಪ್ರಶಂಸೆಯನ್ನೋ, ಸ್ವಕಾವ್ಯದ ಅಗ್ಗಳಿಕೆಯನ್ನೋ ಹೇಳಿ ಕೊಳ್ಳುವ ಪದ್ಧತಿಯಿಂದ ತಮಗಿಂತ ಹಿಂದಿರುವ ಕಾವ್ಯ ಪರಂಪರೆಗೆ ತಾವು ಋಣಿಯಾಗಿರುವ ಮತ್ತು ತಮ್ಮ ಕೃತಿ ರಚನೆಯಿಂದ ಅದನ್ನು ಮುಂದುವರೆಸುತ್ತಿರುವ ಸಂಗತಿಯನ್ನು ಸೂಚಿಸಿದ್ದಾರೆ. ಆದರೆ ಬಸವಣ್ಣನವರು ಹೀಗೆ ಪೂರ್ವಕವಿ ಪರಂಪರೆಯೊಂದಿಗೆ ಯಾವ ಸಂಬಂಧವನ್ನೂ ಹೇಳಿಕೊಳ್ಳದೆ. ಯಾವ ಪ್ರತಿಕ್ರಿಯೆಯನ್ನೂ ಸೂಚಿಸದೆ ಇರುವುದನ್ನು ನೋಡಿದರೆ. ಅವರಿಗೆ ತಾವು ವಚನ ರಚನೆಯನ್ನು ಕೈಗೊಳ್ಳುವುದರ ಮೂಲಕ, ಯಾವುದೋ ಒಂದು ಕಾವ್ಯ ಪರಂಪರೆಯನ್ನು ಮುಂದುವರೆಸುತ್ತಿದ್ದೇವೆ ಎಂದಾಗಲೀ ಅಥವಾ ಹಿಂದಿನ ಪರಂಪರೆಗೆ ಪ್ರತಿಕ್ರಿಯಾರೂಪವಾದ ಬೇರೊಂದು ಕಾವ್ಯಪ್ರಕಾರವನ್ನು ನಿರ್ಮಿಸುತ್ತಿದ್ದೇವೆ ಎಂದಾಗಲೀ ಭಾವಿಸಿಯೇ ಇರಲಿಲ್ಲವೆಂಬುದು ಸ್ಪಷ್ಟವಾಗಿದೆ. ಈ ದೃಷ್ಟಿಯಿಂದ ವಚನ ನಿರ್ಮಿತಿ ಕೇವಲ ಕಾವ್ಯೇತರ ಮನೋಧರ್ಮದಿಂದ ಮಾತ್ರ ರಚಿತವಾದಂತೆ ತೋರುವುದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಹೊಸ ಸಂಗತಿಯಾಗಿದೆ. ಈ ಕಾವ್ಯೇತರ ಮನೋಧರ್ಮವನ್ನು ಧರ್ಮಶ್ರದ್ಧೆ ಎಂಬ ಹೆಸರಿನಿಂದ ಕರೆಯಬಹುದು. ಹಾಗೆ ನೋಡಿದರೆ ಬಸವಣ್ಣನವರಿಗಿಂತ ಹಿಂದಿನ ಹಾಗೂ ಮುಂದಿನ ಕವಿಗಳೂ ಧರ್ಮಶ್ರದ್ಧೆಯಿಂದಲೇ ಕಾವ್ಯವನ್ನು ರಚಿಸಲಿಲ್ಲವೇ ಎನ್ನಬಹುದು. ಆದರೆ ಅವರಿಗೆ ತಾವು ಪ್ರಧಾನತಹ ಕವಿಗಳೆಂಬ ಅರಿವಿದ್ದು, ಅವರ ಸಾಹಿತ್ಯ ನಿರ್ಮಿತಿ ಕಾವ್ಯ ಪರಂಪರೆಯೊಂದನ್ನು ಮುಂದುವರೆಸುವ ಉದ್ದೇಶದ್ದಾಗಿತ್ತೇ ಹೊರತು ವಚನಕಾರರ ಹಾಗೆ ಕಾವ್ಯೇತರ

ಧಾರ್ಮಿಕ ಶ್ರದ್ಧೆ ಮಾತ್ರವಾಗಿರಲಿಲ್ಲ. ಆದುದರಿಂದಲೇ ಈ ವಚನ ಪ್ರಕಾರ ಹಿಂದಿನಿಂದ ಕಾವ್ಯವೆಂದು ಒಪ್ಪಿಕೊಂಡು ಬಂದ ಲಕ್ಷಣಗಳ ಕಡೆಗೂ ಗಮನಕೊಡದೆ ತನಗೆ ತೋರಿದಂತೆ ತನ್ನ ಅಭಿವ್ಯಕ್ತಿಯನ್ನು ರೂಪಿಸಿಕೊಂಡಿತು. ಬಸವಣ್ಣನವರು ತಮಗರಿವಿಲ್ಲದೆಯೇ ಮಾಡಿಕೊಂಡು ಅಭಿವ್ಯಕ್ತಿಯನ್ನು ಕುರಿತು. ಅದನ್ನು ಸಮರ್ಥಿಸಿಕೊಳ್ಳುವ, ತನಗೆ ತಾನೆ ಅರ್ಥಮಾಡಿಕೊಳ್ಳುವ ಅಥವಾ ಮಾಡಿಕೊಡುವ ಪ್ರಯತ್ನದಲ್ಲಿ.

ತಾಳ ಮಾನ ಸರಿಸವನರಿಯೆ, ಓಜೆಬಜಾವಣೆಯ ಲೆಕ್ಕವನರಿಯೆ,
ಅಮೃತಗಣ ದೇವಗಣವನರಿಯೆ!
ಕೂಡಲ ಸಂಗಮದೇವಾ, ನಿನಗೆ ಕೇಡಿಲ್ಲವಾಗಿ
ಆನುಒಲಿದಂತೆ ಹಾಡುವೆ (493)

ಎಂದು ವಿವರಿಸಿದ್ದಾರೆ. ತಮ್ಮ ಅಭಿವ್ಯಕ್ತಿಯನ್ನು ಕಂಡು ತಮಗೆ ಅನ್ನಿಸಿದ ಅಥವಾ ಯಾರೋ ಕೇಳಿದ ಪ್ರಶ್ನೆಗೆ ಉತ್ತರಕೊಡುವ ಧಾಟಿಯಲ್ಲಿ ಮಾಡಿಕೊಂಡ 'ಕಾವ್ಯಸಮರ್ಥನೆ' ಯಂತಿದೆ ಮೇಲಿನ ವಚನ. ಈ ವಚನ ರಚನೆ ಎನ್ನುವುದು ವಿದ್ವತ್ತಿನ. ಸತತಾಭ್ಯಾಸ ಪ್ರಯತ್ನದ. ಕಾವ್ಯ ಪರಂಪರೆಯ ಪ್ರಜ್ಞೆಯನ್ನುಳ್ಳ ಮನಸ್ಸಿನಿಂದ ಬಂದುದಲ್ಲ: ಯಾವ ಪೂರ್ವಸಿದ್ಧತೆಯೂ ಇಲ್ಲದೆ. ಬಸವಣ್ಣನವರ ವ್ಯಕ್ತಿತ್ವ ನಾನು ಒಲಿದಂತೆ ಹಾಡುವೆ ಎಂಬ ವ್ಯಕ್ತಿನಿಷ್ಠವಾದ ಪ್ರಥಮ ಘೋಷಣೆಯೊಂದಿಗೆ ಬಂದ ಈ ಸಾಹಿತ್ಯ ಪ್ರಕಾರ ಮುಂದೆ ಬಂದ ಸ್ವತಂತ್ರಯುಗವೊಂದರ ತುತ್ತೂರಿಯಂತೆ ಹೊಮ್ಮಿದ್ದು ಹರ್ಷದಾಯಕವಾಗಿದೆ*

ಹೀಗಾಗಿ ವಚನಗಳು ಧರ್ಮ ಶ್ರದ್ಧೆಯಲ್ಲಿ ಬೇರೂರಿದ ವ್ಯಕ್ತಿಯೊಬ್ಬನ ಸ್ವಾತ್ಮನಿಷ್ಠಾನುಭವದ ಅಭಿವ್ಯಕ್ತಿಯಾಗಿ ಯಾವಾಗ ಹೊಮ್ಮಿತೋ. ತನ್ನನ್ನು ಮತ್ತು ತನ್ನ ಸುತ್ತಣ ಸಮಾಜವನ್ನು ಸುಧಾರಿಸುವ ಉದ್ದೇಶವುಳ್ಳದ್ದಾಯಿತೋ. ಆಗ ರಚನೆಯಲ್ಲಿ ವ್ಯಕ್ತಿ – ಸಮಾಜ – ಧರ್ಮ ಈ ಮೂರು ಅಂಶಗಳನ್ನು ಅದು ಅನಿವಾರ್ಯವಾಗಿ ಒಳಗೊಳ್ಳುವಂತಾಯಿತು. ಒಂದೊಂದು ವಚನಗಳಲ್ಲಿಯೂ. ಒಂದು ಅಥವಾ ಎರಡು ಅಥವಾ ಮೂರು ಸ್ತರಗಳನ್ನು ಗುರುತಿಸಬಹುದು. ಕೆಲವು ವಚನಗಳಲ್ಲಿ ಬಸವಣ್ಣನವರು ತಮ್ಮ ವ್ಯಕ್ತಿತ್ವದ ಒಳತೋಟಿಯನ್ನಷ್ಟೆ ಹೇಳಿಕೊಂಡಿದ್ದರೆ. ಇನ್ನು ಕೆಲವು ವಚನಗಳಲ್ಲಿ ತಮ್ಮ ಸುತ್ತಣ ಸಮಾಜದ ಅಂಕು – ಡೊಂಕುಗಳನ್ನೇ ವಿಡಂಬಿಸಿದ್ದಾರೆ. ಇನ್ನು ಕೆಲವದರಲ್ಲಿ ಧರ್ಮದ. ಅಥವಾ ತಾವು ಸಭದ್ರವಾಗಿ ನೆಲೆಗೊಳಿಸಬೇಕಾಗಿರುವ ಮತಧರ್ಮದ ಮುಖ್ಯಲಕ್ಷಣಗಳನ್ನು ನಿರ್ದೇಶಿಸುತ್ತಾರೆ. ಇನ್ನು ಕೆಲವದರಲ್ಲಿ ಸಾರ್ವತ್ರಿಕ

---

* ಪ್ರತಿಯೊಂದು ವಚನಗಳ ತುದಿಗೆ ತಮ್ಮ ಇಷ್ಟದೈವದ ಅಂಕಿತವನ್ನಿಡುವ ವಚನಕಾರರ ಈ ಸಂಪ್ರದಾಯ ಭಾರತೀಯ ಸಂತ ಸಾಹಿತ್ಯ ಪರಂಪರೆಯಲ್ಲಿ ಇದೇ ಮೊದಲೊ ಹೇಗೆ ವಿಚಾರ ಮಾಡಬೇಕಾಗಿದೆ.

ವಾದ ಸತ್ಯಾನುಭವವೊಂದು ಸೊಗಸಾದ ಪ್ರತಿಮಾ ರೂಪವನ್ನು ತಾಳುತ್ತದೆ. ನಿದರ್ಶನಕ್ಕೆ ಈ ವಚನವನ್ನು ನೋಡಬಹುದು.

ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ?
ಹೊಸ್ತಿಲಲ್ಲಿ ಹುಲ್ಲುಹುಟ್ಟಿ, ಮನೆಯೊಳಗೆ ರಜತುಂಬಿ
ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೋ?
ತನುವಿನೊಳಗೆ ಹುಸಿತುಂಬಿ, ಮನದೊಳಗೆ ವಿಷಯತುಂಬಿ.
ಮನೆಯೊಳಗೆ ಮನೆಯೊಡೆಯ ನಿಲ್ಲಾ—
ಕೂಡಲಸಂಗಮದೇವಾ! (97).

ಈ ವಚನದಲ್ಲಿ ನಾಲ್ಕನೆಯ ಸಾಲು ಇಲ್ಲದಿದ್ದಲ್ಲಿ ಇದು ಇನ್ನೂ ಧ್ವನಿಪೂರ್ಣ ಪ್ರತಿಮೆಯಾಗುತ್ತಿತ್ತು. 'ಮನೆಯೊಳಗೆ ಮನೆಯೊಡೆಯನಿಲ್ಲ'ದ ಮನೆಯ ಚಿತ್ರ ಬದುಕಿನ ರಿಕ್ತಾವಸ್ಥೆಯ ಒಂದು ಪ್ರತಿಮೆಯಾಗಿದೆ. ಮೂರನೆಯ ಪಂಕ್ತಿಯ ತನಕ ಬಂದು ನಿಲ್ಲುವ ಪ್ರಶ್ನಾರ್ಥಕ ಶೈಲಿಯ ಸಂಶಯ ಭಾವ. 'ಮನೆಯೊಳಗೆ ಮನೆಯೊಡೆಯ ನಿಲ್ಲ' ಎಂಬ ಇತ್ಯರ್ಥಕ ತೀರ್ಮಾನಕ್ಕೆ ಬರುವ ವೇಳೆಗೆ. 'ತನುವಿನೊಳಗೆ ಹುಸಿತುಂಬಿ ಮನದೊಳಗೆ ವಿಷಯ ತುಂಬಿ' ಎನ್ನುವ ವಾಚ್ಯ ವಿವರಣೆಗೆ ಬಂದದ್ದು ತಟಕ್ಕನೆ ಸಾಮಾಜಿಕ ನೈತಿಕ ಪ್ರಜ್ಞೆಯಿಂದ ಪ್ರೇರಿತವಾದುದೆನ್ನುವುದು ಸ್ಪಷ್ಟವಾಗಿದೆ. ಏಕೆಂದರೆ ಕೇವಲ 'ಮನೆ'ಯ ಪ್ರತಿಮೆಯಷ್ಟನ್ನೇ ಇರಿಸಿಕೊಂಡು 'ಹೊಸ್ತಿಲಲ್ಲಿ ಹುಲ್ಲು ಹುಟ್ಟಿ. ಮನೆಯೊಳಗೆ ರಜತುಂಬಿ' ಎಂಬ ವರ್ಣನೆಯಿಂದಲೇ ವ್ಯಂಜಕವಾಗಬಹುದಾಗಿದ್ದ ಭಾವ, ತಟಕ್ಕನೆ 'ಹೊಸ್ತಿಲಲ್ಲಿ ಹುಲ್ಲು ಹುಟ್ಟಿ. ಮನೆಯೊಳಗೆ ರಜ ತುಂಬಿ' ಎಂಬ ಪ್ರತಿಮೆಯ ಭಾವವನ್ನು 'ತನುವಿನೊಳಗೆ ಹುಸಿತುಂಬಿ, ಮನದೊಳಗೆ ವಿಷಯತುಂಬಿ. ಎನ್ನುವ ವಿವರಣೆಯಲ್ಲಿ ಇಳಿಸಿ. ಅನಂತರ 'ಮನೆಯೊಳಗೆ ಮನೆಯೊಡೆಯನಿಲ್ಲ' ಎಂಬ ಮುಖ್ಯ ಭಾವಕ್ಕೆ ಒಯ್ದು ಮುಟ್ಟಿಸಿದ ಈ ಪ್ರತಿಮಾಶಿಲ್ಪ ಕವಿ–ಧಾರ್ಮಿಕ ಸುಧಾರಕ ಇವರಿಬ್ಬರ ದ್ವಂದ್ವವನ್ನು ಪ್ರತಿನಿಧಿಸುತ್ತದೆ. ಇಂಥದೇ ಇನ್ನೊಂದು ವಚನ:—

ಆನೆಯನೇಱಿಕೊಂಡು ಹೋದಿರೆ ನೀವು
ಕುದುರೆಯ ನೇರಿಕೊಂಡು ಹೋದಿರೆ ನೀವು
ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೆ ಅಣ್ಣಾ !
ಸತ್ಯದನಿಲುವ ನಱಿಯದೆ ಹೋದಿರಲ್ಲಾ !
ಸದ್ಗುಣ ವೆಂಬ ಫಲವ ಬಿತ್ತಿ ಬೆಳೆಯದೆ ಹೋದಿರಲ್ಲಾ !
ಅಹಂಕಾರ ವೆಂಬ ಮದ ಮದಗಜವೇರಿ
ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ !
ನಮ್ಮ ಕೂಡಲ ಸಂಗಮದೇವರನಱಿಯದೆ
ನರಕಕ್ಕೆ ಭಾಜನವಾದಿರಲ್ಲಾ (673)

ಇದು ಲೋಕದ ವ್ಯರ್ಥಜೀವನದ ಕಡೆಗೆ ಸಿದ್ಧನಾದವನು ಕನಿಕರದಿಂದ ಮರುಗುವ

ರೀತಿಯನ್ನು ಚಿತ್ರಿಸುತ್ತದೆ. ಅಹಂಕಾರಮೂಲವಾದ ಲೋಕವ್ಯಾಪಾರ. ಅದರಿಂದ ಉಂಟಾದ ವ್ಯರ್ಥಜೀವನದ ವಿಷಯ ಇದರ ವಸ್ತು. 'ಆನೆ' 'ಕುದುರೆ' 'ಕುಂಕುಮ ಕಸ್ತೂರಿ' ಇವು ಅಹಂಕಾರ. ಅಧಿಕಾರ. ಭೋಗ ವಿಲಾಸ – ಇವುಗಳಿಗೆ ಸಂಕೇತವಾಗಿವೆ. ಆದರೆ ಮುಂದಿನ ಆರನೆಯ ಸಾಲಿನಲ್ಲಿ 'ಆನೆ' ಎಂದರೇನು ಎಂಬ ವಿವರಣೆ ಬಂದಿದೆ. ಇದರಿಂದ ಈ ವಚನದ ಕಾವ್ಯಗುಣ ತಟಕ್ಕನೆ ನಿಂತು. ನೀತಿ – ಧರ್ಮದ ಮಾತು ಮುಂದಾಗುತ್ತದೆ. ಆದರೆ ಇದರಿಂದ ಹಾಗಾಯಿತು ಹೀಗಾಯಿತು ಎಂದು ಅಂದು ಕೊಳ್ಳುವವರು ವಿಮರ್ಶಕರಷ್ಟೆ: ಆದರೆ ಬಸವಣ್ಣನವರಿಗೆ ಇದು ಕಾವ್ಯವಾಗಬೇಕು. ಇಂಥಕಡೆ ಧ್ವನಿಯಿದ್ದದ್ದು ಇಂಥಲ್ಲಿ ವಾಚ್ಯವಾಯಿತು. ಆದಕಾರಣ ಹೀಗೆ ಬರೆದು ಇದನ್ನು ಕಾವ್ಯವನ್ನಾಗಿಸಬೇಕು ಎಂಬ ಕಾವ್ಯ ಮೀಮಾಂಸೆಯ ಪರವಾದ ಯಾವಚಿಂತೆಯೂ ಅವರಿಗಿರಲಿಲ್ಲ. ಅವರಿಗಿದ್ದದ್ದು ಜೀವನ ಮೀಮಾಂಸೆ; ತಮ್ಮ ಅಂತರಂಗದ ಅನುಭವ ಮೀಮಾಂಸೆ. ಅವರಿಗಿದ್ದುದು ತಮ್ಮ ಅನುಭವಕ್ಕೆ ಪ್ರಾಮಾಣಿಕವಾದ ಅಭಿವ್ಯಕ್ತಿಯನ್ನು ಕೊಡಬೇಕೆಂಬ ತುಡಿತ; ಹಾಗೆ ಕೊಟ್ಟದ್ದು ಅದನ್ನು ಕೇಳಿದವನಿಗೆ ಅರ್ಥವಾಗಬೇಕೆಂಬ ಅನುಕಂಪ; ಅನಂತರ ಅದರಿಂದ ಸಮಾಜದ ವ್ಯಕ್ತಿಯ ಶ್ರೇಯಸ್ಸು ಸಾಧಿತವಾಗಬೇಕೆಂಬ ಉದ್ದೇಶ. ಇದೇ ಅವರ ವಚನಗಳ ಮೂಲಸಾಮಗ್ರಿ. ಹೀಗಾಗಿ ಅವರ ವಚನಗಳಲ್ಲಿ ಮೂರು ಸ್ತರಗಳನ್ನು ನಾವು ಗುರುತಿಸಬಹುದು. ಒಂದು. ಬಸವಣ್ಣನವರಿಗೆ ಆದಂಥ ಅನುಭವ. ಅದು ಅವರ ವ್ಯಕ್ತಿತ್ವದ ರಸಮಯತೆಯಿಂದ ಒಂದು ಮಟ್ಟದಲ್ಲಿ ಕಾವ್ಯವಾಗುತ್ತದೆ. ಅನಂತರ ಅದರಲ್ಲಿ ಬರುವ ವಿವರಣಾತ್ಮಕವಾದ ವಾಕ್ಯ. ತಮಗೆ ಏನು ಅನ್ನಿಸಿತೋ ಅದು ಉಳಿದ ಸಾಮಾನ್ಯರಿಗೂ ಅರ್ಥವಾಗಬೇಕು ಎನ್ನುವ ಅನುಕಂಪದಿಂದ ಮೂಡಿದ್ದು; ಮೂರನೆಯದು, ಈ ಒಂದು ತತ್ತ್ವವೋ, ನೀತಿಯೋ ಈ ಸಮಾಜ ಸುಧಾರಣೆಗೆ ಉಪಯೋಗವಾಗಬೇಕು ಎನ್ನುವುದು. ಹಾಗಾಗಬೇಕಾದರೆ ಈ ಅನುಭವವನ್ನು ಅಭಿವ್ಯಕ್ತಗೊಳಿಸುವ ಭಾಷಾಮಾಧ್ಯಮ ಹೇಗಿರಬೇಕು ಎಂಬ ವಿಚಾರದಲ್ಲಿ ಅವರು ತಾಳಿದ ವಿಶೇಷ ರೀತಿಯ ಎಚ್ಚರ ಇವು ಬಸವಣ್ಣನವರ ವಚನಗಳ ಕಾವ್ಯ ಸೌಂದರ್ಯದ ಮುಖ್ಯ ಲಕ್ಷಣಗಳಾಗಿವೆ.

ತನ್ನ ಸುತ್ತಣ ಜನಭಾಷೆಯ ಬಗ್ಗೆ ಬಸವಣ್ಣನವರಿಗಿರುವ ಎಚ್ಚರ. ಉಳಿದ ಎಷ್ಟೋ ಕವಿಗಳಿಗಿಲ್ಲದ ಈ ಒಂದು ಗುಣದಿಂದ ಇವರನ್ನು ಬೇರ್ಪಡಿಸಿ. ಸಹಜ ಕವಿಗಿರಬೇಕಾದ ಲಕ್ಷಣ ಇವರಲ್ಲಿದೆ ಎಂಬುದನ್ನು ಸಮರ್ಥಿಸುತ್ತದೆ. ಯಾವ ಸಾಹಿತ್ಯ ಚಳುವಳಿಯನ್ನೆ ನಾವು ನೋಡಿದರೂ. ಆ ಚಳುವಳಿಯ ಕೇಂದ್ರವ್ಯಕ್ತಿಗಳ ಹಂಬಲ. ಕಾವ್ಯದ ಭಾಷೆಯನ್ನು ಆಡು ಮಾತಿನ ಸಮೀಪಕ್ಕೆ ತರಬೇಕೆಂಬ. ಕಾವ್ಯವನ್ನು ಬದುಕಿಗೆ ಹತ್ತಿರವನ್ನಾಗಿಸಬೇಕೆಂಬ ಪ್ರಯತ್ನದಲ್ಲಿ ವ್ಯಕ್ತವಾಗಿರುತ್ತದೆ. ಬಸವಣ್ಣನವರು ಹಿಂದಿನ ಕಾವ್ಯ ಪರಂಪರೆಯೊಂದಿಗೆ ತಮ್ಮ ಸಂಬಂಧವನ್ನು ಕಳಚಿಕೊಂಡಿದ್ದರಿಂದ. ಅವರ ಸ್ವತಂತ್ರ ವ್ಯಕ್ತಿತ್ವ ತನಗೆ ತೋರಿದಹಾಗೆ ವಿಪುಲ ಪ್ರತಿಮಾ ನಿರ್ಮಾಣವನ್ನು ವಚನಗಳಲ್ಲಿ

ಮಾಡಿತೋರಿಸಿದ್ದು, ಅನನ್ಯ ರೀತಿಯದಾಗಿರುವಂತೆ; ಅದೇ ಮನೋಧರ್ಮದಿಂದ ಅಭಿವ್ಯಕ್ತಿಯ ರೀತಿಯಲ್ಲಿ ತನ್ನ ಸುತ್ತಣ ಭಾಷೆಯ ಬಗ್ಗೆ ಪ್ರಕಟಿಸಿರುವ ತೀವ್ರ ಸಂವೇದನೆಯೂ ಅನನ್ಯ ರೀತಿಯದಾಗಿದೆ. ಬಹುಶಃ ಬುದ್ಧನ ಅನಂತರ, ಇಂಥ ಸಂತಸಾಹಿತ್ಯ, ಸ್ವಭಾಷಾ ಮಾಧ್ಯಮದಲ್ಲಿ ಅಭಿವ್ಯಕ್ತವಾದದ್ದು ಇಲ್ಲಿಯೆ. ಕನ್ನಡ ಸಾಹಿತ್ಯದಲ್ಲಿ, ಕನ್ನಡ ಮಾಧ್ಯಮ—ಸಂಸ್ಕೃತದ ಹಂಗನ್ನು ಹರಿದುಕೊಂಡು – ಮೊಟ್ಟಮೊದಲು ಜಾರಿಗೆ ಬಂದಿದ್ದರೆ ಅದು ಬಸವಣ್ಣನವರ ಕಾಲದಲ್ಲಿಯೇ. ಕಾವ್ಯಾಭಿವ್ಯಕ್ತಿಗೆ ಹೀಗೆ ಗದ್ಯದ ಸತ್ವವನ್ನು ಕೂಡಿಸಿಕೊಂಡು, ಆಡುಮಾತನ್ನು ಆಡುಮಾತನ್ನಾಗಿಯೆ ಉಳಿಸಿಕೊಂಡು, ಪದ್ಯದ ಸೊಗಸನ್ನು ತರಬೇಕಾದರೆ ಅವರಿಗೆ ಜನಭಾಷೆಯ ಬಗ್ಗೆ ಇದ್ದ ಎಚ್ಚರ ಎಷ್ಟರ ಮಟ್ಟಿನದೆಂಬುದು ತಿಳಿಯುತ್ತದೆ. ಅಂದು ಜನಜೀವನದಲ್ಲಿ ಪ್ರಚುರವಾಗಿದ್ದ ಗಾದೆ ಮಾತುಗಳನ್ನು ನಾಣ್ಣುಡಿ – ಜಾಣ್ಣುಡಿಗಳನ್ನೂ, ಪಳಿತಗಳನ್ನೂ ಎಷ್ಟೊಂದು ಸತ್ವಯುತವಾಗಿ ಬಳಸಿದ್ದಾರೆಂಬುದು ಇನ್ನೂ ವಿಸ್ತಾರವಾದ ಅಧ್ಯಯನದ ವಸ್ತುವಾಗಿದೆ

"ಅಧರಕ್ಕೆ ಕಹಿ ಉದರಕ್ಕೆ ಸಿಹಿ" "ಬಳ್ಳಿಗೆ ಕಾಯಿ ದಿಮ್ಮಿತ್ತೆ" "ದಯವಿಲ್ಲದ ಧರ್ಮವಾವುದಯ್ಯಾ' 'ಆನೆಯ ಮೇಲೆ ಹೋಹನ ಶ್ವಾನಕಚ್ಚಬಲ್ಲುದೆ'. "ನುಡಿದರೆ ಮುತ್ತಿನ ಹಾರದಂತಿರಬೇಕು' 'ಅರಿತರೆ ಶರಣ ಮರೆತರೆ ಮಾನವ' – ಎಂಬಂಥ ಸೂಕ್ತಿಸದೃಶವಾದ ಮಾತುಗಳು, ಉಪಮಾರೂಪಕಗಳು, ಮಾಲೋಪಮೆಗಳು, ಪ್ರತಿಮಾ ಪರಂಪರೆಗಳು, ಮಾತಿನ ಹೊಂದಾಣಿಕೆಯಲ್ಲಿ ಕಂಡುಬರುವ ಒಳಪ್ರಾಸ—ಹೊರಪ್ರಾಸಗಳ ರಮ್ಯತೆ, ಇವುಗಳಲ್ಲಿ ಅಂತರ್ಗತವಾಗಿರುವ ಅನೇಕ ಛಂದೋವೈವಿಧ್ಯಗಳು ಬದುಕಿನ ಅನೇಕ ಮುಖಗಳಿಂದ ಚಿತ್ರಗಳನ್ನೆತ್ತಿಕೊಂಡು ತಮ್ಮ ಅಂತರಂಗದ ಬದುಕನ್ನು ವ್ಯಂಜಿಸುವ ವಿಸ್ಮಯ, ಈ ಎಲ್ಲ ಲಕ್ಷಣಗಳಿಂದ ಬಸವಣ್ಣನವರ ವಚನಗಳು ಸೊಗಸಾದ ಕಾವ್ಯವಾಗಿವೆ. ಈ ಭಾಷಾ ಸಾಮರ್ಥ್ಯದಿಂದ, ಈ ಛಂದೋವೈವಿಧ್ಯಗಳಿಂದ, ಸಮಕಾಲೀನ ಸಾಮಾಜಿಕ ಪ್ರಜ್ಞೆಯಿಂದ, ಧರ್ಮಶ್ರದ್ಧೆಯ ಅರಿವಿನಿಂದ, ಆತ್ಮ ವಿಮರ್ಶೆಯ ಪ್ರಾಮಾಣಿಕತೆಯಿಂದ ಬಸವಣ್ಣನವರ ಅಪೂರ್ವ ವ್ಯಕ್ತಿತ್ವದ ಅಭಿವ್ಯಕ್ತಿಯಾಗಿರುವ ಈ ವಚನಗಳ ಕಾವ್ಯಸೌಂದರ್ಯ, ಪರಂಪರಾಗತವಾದ ಕಾವ್ಯಸೌಂದರ್ಯದಿಂದ ಬೇರೆಯಾಗಿ, ಜೀವನವೇ ಕಾವ್ಯವಾದಾಗ ಸಂಭವಿಸುವ ಸೌಂದರ್ಯದಿಂದ ಉಜ್ವಲವಾಗಿದೆ.*

---

* 1968ರ ಇಸವಿಯಲ್ಲಿ ಮೈಸೂರು ವಿಶ್ವವಿದ್ಯಾಲಯವು ಏರ್ಪಡಿಸಿದ ವಿಚಾರ ಸಂಕಿರಣದಲ್ಲಿ ಓದಿದ ಪ್ರಬಂಧ.

ಸಂಪರ್ಕ ಉಪಗ್ರಹಗಳು

ಪಾ. ಸಂ. ವೆಂಕಟಸ್ವಾಮಿ ಶೆಟ್ಟಿ

ಮಾನವನ ಕುತೂಹಲ ಅವ್ಯಕ್ತ ವಿಷಯಗಳನ್ನು ಕಂಡುಹಿಡಿಯುವುದರಲ್ಲಿ ಅವನನ್ನು ಮುನ್ನುಗ್ಗಿಸುತ್ತಿದೆ. ಅವುಗಳನ್ನು ಪರಿಶೋಧಿಸಲು ಬೇಕಾದ ಸಾಧನೆಗಳನ್ನು ನಿರ್ಮಿಸಲು ಪ್ರೇರಣೆ ನೀಡಿದೆ. ನೆಲ. ನೀರು. ಗಾಳಿಗಳನ್ನು ಗೆದ್ದ ಮಾನವ ಈಗ ಆಕಾಶಕ್ಕೆ ಏರಬಲ್ಲ ತಾಂತ್ರಿಕ ಪ್ರಗತಿಯನ್ನು ಸಾಧಿಸಿದ್ದಾನೆ. ಆಗಲೇ ಚಂದ್ರಲೋಕವನ್ನು ಮುಟ್ಟಿ ಬಂದಿದ್ದಾನೆ. ಆಕಾಶದಲ್ಲಿ ಮಾನವನ ಚಟುವಟಿಕೆಗಳು ನಮ್ಮ ಪ್ರತಿದಿನದ ಜೀವನದ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿವೆ. ಆಕಾಶ ಸಂಶೋಧನೆಯು ಈಗ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ರಾಜಕೀಯದ ಪ್ರಮುಖ ವಿಷಯವಾಗಿದೆ. ಇದು ವಿಜ್ಞಾನದ ದಿಕ್ಕನ್ನೇ ಬದಲಾಯಿಸಿದೆ. ಇವೆಲ್ಲವನ್ನು ನೋಡಿದರೆ ಆಕಾಶ ವಿಜ್ಞಾನವು ಮಾನವನಿಗೆ ಹೊಸ ಪ್ರಯೋಜನಗಳ ಹೊಳೆಯನ್ನೇ ಹರಿಸುವ ಭರವಸೆಯನ್ನು ಕೊಡುತ್ತಿದೆ.

ಎರಡನೇ ಪ್ರಪಂಚದ ಯುದ್ಧ ಮುಗಿದ ಮೇಲೆ ಸಂಪರ್ಕಸೇವೆಗಳ ಮೇಲೆ ಹೆಚ್ಚಿನ ಒತ್ತಡ ಬಿತ್ತು. ಸಾಗರೋತ್ತರ ಸಂಪರ್ಕದ ಪ್ರಮಾಣ ವಿಪರೀತವಾಗಿ ಹೆಚ್ಚಿತು. ಇದನ್ನು ರೇಡಿಯೋ ಮೂಲಕ ಸಾಧಿಸುವುದಕ್ಕೆ ಅನೇಕ ತೊಂದರೆಗಳಿತ್ತು. ರೇಡಿಯೋಗೆ ಮೀಸಲಾಗಿದ್ದ ಕಂಪನಾಂತರವು ಆಗಲೇ ತುಂಬಿ. ಹೆಚ್ಚಿನ ಸಂಪರ್ಕಕ್ಕೆ ಅವಕಾಶವೇ ಇಲ್ಲವಾಗಿತ್ತು. ಅಲ್ಲದೆ ರೇಡಿಯೋಗೆ ಉಪಯೋಗಿಸುವ ಅತಿ ಹೆಚ್ಚಿನ ಕಂಪನ ಸಂಖ್ಯೆಗಳಲ್ಲಿ ಬೇಡವಾದ ಇತರ ಶಬ್ದಗಳು ಅಡ್ಡಿಮಾಡುತ್ತಿದ್ದುವು. ಮೈಕ್ರೋವೇವ್‌ಗಳನ್ನು ರೇಡಿಯೋ ಮುಖಾಂತರ ಉಪಯೋಗಿಸಲು ಸಾಧ್ಯವಾಗಲಿಲ್ಲ. ಏಕೆಂದರೆ ಅವು ಭೂಮಿಯ ಸುತ್ತ ಇರುವ ಅಯೋಣುಪದರವನ್ನು ತೂರಿ ಹೋಗುತ್ತಿದ್ದುವು. ಆದುದರಿಂದ ಇತರ ದೇಶಗಳನ್ನು ಮುಟ್ಟಲು ಸಾಧ್ಯವಿರಲಿಲ್ಲ. ಈ ತೊಂದರೆಗಳನ್ನು ನಿವಾರಿಸಿ ಸಂಪರ್ಕಸೇವೆಗಳ ಒತ್ತಡವನ್ನು ಎದುರಿಸಲು ಎರಡು ಮಾರ್ಗಗಳಿದ್ದುವು. ಮೊದಲನೆಯದು ಸಮುದ್ರತಳದಿಂದ ಹಾದುಹೋಗುವ ದಪ್ಪನಾದ ಕೇಬಲ್‌ಗಳ ಮುಖಾಂತರ. ಎರಡನೆಯದು ಮೈಕ್ರೋವೇವ್ ರೇಡಿಯೋ ಉಪಗ್ರಹಗಳ ಜಾಲಗಳಿಂದ.

ಆಕಾಶಯಾನದಲ್ಲಿ ಮೊದಲ ಹೆಜ್ಜೆಯಾಗಿ ಕ್ಷಿಪಣಿಗಳನ್ನು ಹಾರಿಸಿದರು. ಈ ಕ್ಷಿಪಣಿಗಳು ನೂರಾರು ಮೈಲಿಗಳ ಎತ್ತರಕ್ಕೆ ಹೋಗಿ ಅಲ್ಲಿಯ ವಾತಾವರಣದ

ವಿಶೇಷತೆಗಳನ್ನು ತಿಳಿಸಿತು. ಇಂತಹ ಜ್ಞಾನದಿಂದ ಪ್ರೇರಿತನಾದ ವಿಜ್ಞಾನಿ ಕೃತಕ ಉಪಗ್ರಹಗಳನ್ನು ಸೃಷ್ಟಿಸಿ ಭೂಮಿಯ ಸುತ್ತಲೂ ಸುತ್ತುವಂತೆ ಮಾಡಿದನು. ಕೃತಕ ಉಪಗ್ರಹಗಳಲ್ಲಿ ಎರಡು ವಿಧಗಳನ್ನು ಗುರುತಿಸಬಹುದು. ಮೊದಲನೆಯದು: ಅದು ಹಾರಾಡುವ ಎತ್ತರದ ಸ್ಥಿತಿಗತಿಗಳನ್ನು ಅಭ್ಯಾಸಮಾಡಲು ಉಪಯೋಗಿಸುವ ಕೃತಕ ಉಪಗ್ರಹ. ಇಂತಹ ಉಪಗ್ರಹಗಳಿಂದ ಮನುಷ್ಯ ಇದುವರೆವಿಗೂ ನೋಡಲು ಸಾಧ್ಯವಾಗದಿದ್ದ ಭೂಮಿಯ ಭಾಗಗಳನ್ನು ನೋಡುವಂತಾಯಿತು. ಇದರಿಂದ ಪವನ ಶಾಸ್ತ್ರದ ಅಧ್ಯಯನ ಸುಲಭವಾಯಿತು. ಮಳೆ, ಗಾಳಿ, ಪ್ರವಾಹಗಳು, ಚಂಡಮಾರುತ, ಹವಾಮಾನ ಮುಂತಾದುವನ್ನು ಅವುಗಳು ಸಂಭವಿಸುವುದಕ್ಕೆ ಸಾಕಷ್ಟು ಮೊದಲೇ ಅರಿತು. ಅವುಗಳನ್ನು ಎದುರಿಸಲು ಬೇಕಾದ ತಯಾರಿಯನ್ನು ಮಾಡುವುದು ಸಾಧ್ಯವಾಯಿತು. ಹಾಗೆಯೇ ವಾಯುಯಾನ, ಸಮುದ್ರಯಾನ ಮತ್ತು ವ್ಯವಸಾಯ ಇವುಗಳಿಗೆ ಬೇಕಾದ ಸುದ್ದಿಗಳನ್ನೂ ಪಡೆಯುವಂತಾಯಿತು. ಎರಡನೇ ವಿಧವಾದ ಕೃತಕ ಉಪಗ್ರಹಗಳಿಂದ ಪ್ರಪಂಚದ ಒಂದು ಸ್ಥಾನದಿಂದ ಇತರ ಯಾವುದೇ ಸ್ಥಾನದೊಂದಿಗೆ ಸಂಪರ್ಕ ಸಾಧಿಸುವುದೇ ಆಗಿತ್ತು. ಇವುಗಳನ್ನು ಸಂಪರ್ಕ ಉಪಗ್ರಹಗಳೆಂದು ಕರೆಯುತ್ತಾರೆ.

ಇಂದು ನಾವು ಪ್ರಪಂಚದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಸಂಪರ್ಕ ಹೊಂದಿರುವುದು ರೇಡಿಯೋ ಮುಖಾಂತರ. ರೇಡಿಯೋ ತರಂಗಗಳು ಬೆಳಕಿನ ತರಂಗಗಳಂತೆ ನೇರವಾಗಿ ಪ್ರಯಾಣ ಮಾಡುತ್ತವೆ. ಆದುದರಿಂದ ಅಮೆರಿಕದಿಂದ ಹೊರಟ ರೇಡಿಯೋ ತರಂಗಗಳು, ಭೂಮಿ ಗೋಳಾಕಾರವಾಗಿರುವುದರಿಂದ, ಭಾರತವನ್ನು ಮುಟ್ಟಲು ಸಾಧ್ಯವೇ ಇಲ್ಲ. ಆದರೆ ಭೂಮಿಯ ಸುತ್ತಲೂ ಹಲವು ಮೈಲಿಗಳ ಎತ್ತರದಲ್ಲಿ ಒಂದು ಅಯೋಣು ಪದರವಿದೆ. ಈ ಅಯೋಣು ಪದರವು ರೇಡಿಯೋ ತರಂಗಗಳನ್ನು ಬಗ್ಗಿಸಿ ಪುನಹ ಭೂಮಿಯಕಡೆಗೆ ತಿರುಗುವಂತೆ ಮಾಡುತ್ತವೆ. ಆದುದರಿಂದಲೇ ನಾವು ಭೂಮಿಯ ಯಾವುದೇ ಭಾಗದಿಂದ ಹೊರಟ ರೇಡಿಯೋ ತರಂಗಗಳಾದರೂ ಅವುಗಳನ್ನು ಗ್ರಹಿಸಿ ಆ ಭಾಗದೊಂದಿಗೆ ಸಂಪರ್ಕವಿಟ್ಟುಕೊಳ್ಳಬಹುದು. ಈ ಅವಕಾಶ ಎಲ್ಲ ರೇಡಿಯೋ ತರಂಗಗಳಿಗೂ ಇರುವುದಿಲ್ಲ. ರೇಡಿಯೋ ತರಂಗಗಳಲ್ಲಿ ತರಂಗ ದೂರ ಬಹಳ ಕಡಿಮೆಯಾದರೆ ಅವುಗಳನ್ನು ಮೈಕ್ರೋವೇವ್ ಎಂದು ಕರೆಯುತ್ತಾರೆ. ಅಯೋಣು ಪದರವು ಮೈಕ್ರೋವೇವ್‌ಗಳನ್ನು ಬಗ್ಗಿಸುವುದರಲ್ಲಿ ವಿಫಲವಾಗುತ್ತದೆ. ಅವು ಅಯೋಣು ಪದರವನ್ನು ತೂರಿಕೊಂಡು ಆಕಾಶಕ್ಕೆ ಹೋಗಿಬಿಡುತ್ತದೆ. ರೇಡಿಯೊ ಸಂಪರ್ಕಕ್ಕೆ ಅನೇಕ ಸಲ ಮೈಕ್ರೊವೇವ್‌ಗಳನ್ನು ಉಪಯೋಗಿಸುತ್ತಾರೆ. ಟೆಲಿವಿಷನ್ ಅಥವಾ ದೂರದೃಷ್ಟಿಗಂತೂ ಈ ಮೈಕ್ರೊವೇವ್‌ಗಳನ್ನು ಮಾತ್ರ ಉಪಯೋಗಿಸಬೇಕು. ಆದುದರಿಂದಲೇ ಟೆಲಿವಿಷನ್ ಹತ್ತಾರು ಮೈಲಿಗಳಿಗಿಂತ ಹೆಚ್ಚುದೂರ ಪ್ರಸಾರಮಾಡಲಾಗುವುದಿಲ್ಲ. ಕೃತಕ ಉಪಗ್ರಹದ

ಸಹಾಯದಿಂದ ಮೈಕ್ರೋವೇವ್‌ಗಳನ್ನು ಪ್ರಪಂಚದ ಯಾವುದೇ ಭಾಗಕ್ಕೆ ಬೇಕಾ
ತಲುಪುವಂತೆ ಮಾಡಬಹುದು. ಅಂದರೆ ಟೆಲಿಫೋನ್, ಟೆಲಿಗ್ರಾಫ್, ರೇಡಿ
ಮತ್ತು ಟೆಲಿವಿಷನ್‌ಗಳನ್ನು ಒಂದು ಬಿಂದುವಿಂದ ಇನ್ನೊಂದು ಬಿಂದುಕ್ಕೆ ಸು
ಮೈಲಿಗಳ ದೂರ ಸುಲಭವಾಗಿ ಹರಡಬಹುದು. ಹೀಗೆ ಪ್ರಪಂಚದ ಸ
ಸಾಧನೆಯಲ್ಲಿ ಕೃತಕ ಉಪಗ್ರಹಗಳು ಮಹತ್ತ್ವವನ್ನು ಪಡೆಯಲು ಸಾಧ್ಯವಿದೆ

ಈಗಿರುವ ಪದ್ಧತಿಯ ಪ್ರಕಾರ ಯೂರೋಪಿನಿಂದ ಅಮೆರಿಕಕ್ಕೆ ಮಾತ
ಬೇಕಾದರೆ ಸಾಗರದ ತಳದಲ್ಲಿ ದಪ್ಪನಾದ ಕೇಬಲ್‌ಗಳನ್ನು ಹಾಯಿಸಿ ಅದರ ಒ
ಇರುವ ತಂತಿಗಳ ಮೂಲಕ ಸಂಪರ್ಕವನ್ನು ಸಾಧಿಸುತ್ತಾರೆ. ಧ್ವನಿ ಅಲೆಗ
ಬಹುದೂರ ಹೋಗುವಾಗ ಅದರ ತೀವ್ರತೆಯನ್ನು ಕಳೆದುಕೊಳ್ಳುತ್ತದೆ. ಮೊ
ತೀವ್ರತೆಗೆ ತರಬೇಕಾದರೆ ಮಾರ್ಗಮಧ್ಯದಲ್ಲಿ ನಾಲ್ಕಾರು ಕಡೆ ಅದನ್ನು ವೃದ್ಧಿಸಬೇ
ತ್ತದೆ. ಇಷ್ಟಾದರೂ ಈ ಪದ್ಧತಿಯಿಂದ ಟೆಲಿವಿಷನ್ ಪ್ರಸಾರಮಾಡಲಾಗುವುದಿಲ್ಲ.
ಸಂಪರ್ಕವನ್ನು ಕೃತಕ ಉಪಗ್ರಹಗಳಿಂದ ಸಾಧಿಸಬಹುದು. ಸಾಗರದ ಮ
ಸಾಧಿಸಬಹುದಾದ ಸಂಪರ್ಕಕ್ಕೆ ತಗಲುವ ವೆಚ್ಚಕ್ಕಿಂತ ಕೃತಕ ಉಪಗ್ರಹಗಳಿಂದ ಸ
ಬಹುದಾದ ಸಂಪರ್ಕದ ವೆಚ್ಚವು ಬಹಳ ಕಮ್ಮಿಯಿರುತ್ತದೆ. ಸಂಪರ್ಕವೂ ದೋ
ರಹಿತವಾಗಿರುತ್ತದೆ. ಕೃತಕ ಉಪಗ್ರಹಗಳಿಂದ ಸಂಪರ್ಕವನ್ನು ಸಾಧಿಸುವ ವಿ
ಬಹಳ ಸ್ವಾರಸ್ಯವಾಗಿದೆ.

ಮೊತ್ತಮೊದಲಿಗೆ 1946 ರಲ್ಲಿ ಚಂದ್ರನಿಂದ ಪ್ರತಿಫಲಿಸಿ ರಾಡಾರ್ ಸಂಜ್ಞೆಗ
ಜಯಪ್ರದವಾಗಿ ಪತ್ತೆ ಹಚ್ಚಿದರು. 1958 ರಲ್ಲಿ ಭೂಮಿಯ ಮೇಲೆ ಅತಿ ದೂ
ರುವ ಎರಡು ಬಿಂದುಗಳ ಮಧ್ಯೆ ಸಂಪರ್ಕವನ್ನು ಚಂದ್ರನ ಸಹಾಯದಿಂದ ರೇಡಿ
ತರಂಗಗಳ ಮೂಲಕ ಸಾಧಿಸಿದರು. ಆದರೆ ಇದು ಪರಿಪೂರ್ಣವಾಗಿರಲಿಲ್ಲ. ಏ
ಚಂದ್ರ ಉತ್ತಮ ಪ್ರತಿಫಲಕನಲ್ಲ. ಎರಡನೆಯದಾಗಿ ಚಂದ್ರನು ಭೂಮಿಯ ಸು
ಸುತ್ತುವುದಕ್ಕೆ ಒಂದು ತಿಂಗಳು ಬೇಕಾಗುವುದರಿಂದ ಭೂಮಿಯ ಎರಡು ಬಿಂದು
ಒಂದೇ ಸಲ ಕಾಣಿಸುವಂತೆ ಇರಬೇಕಾದ ಸಂದರ್ಭಕ್ಕೆ ಅನೇಕ ದಿನಗಳು ಕಾಯಬೇ
ವುದು.

1960 ನೇ ಆಗಸ್ಟ್ 12 ರಂದು ಅಮೆರಿಕದಿಂದ ಎಕೊ 1 ಎನ್ನುವ
ಉಪಗ್ರಹವನ್ನು ಹಾರಿಸಿದರು. ಇಂಗ್ಲಿಷಿನಲ್ಲಿ ಎಕೊ ಅಂದರೆ ಪ್ರತಿಧ್ವನಿ ಎಂ
ಇದು 100 ಅಡಿ ವ್ಯಾಸದ 132 ಪೌಂಡು ತೂಕದ ಪ್ಲ್ಯಾಸ್ಟಿಕ್‌ನಿಂದ ಮಾಡ
ಗೋಳ. ಈ ಗೋಳದ ಹೊರಮೈ ಮೇಲೆ ಅಲ್ಯುಮಿನಿಯಂ ಅಣುವಿನಿಂದ ಬಹಳ ತೆ
ಒಂದು ಪದರವನ್ನು ಹೊದಿಸಿದ್ದರು. ಇದರ ಮೇಲೆ ರೇಡಿಯೋ ತರಂಗ
ಪರಿಪೂರ್ಣವಾಗಿ ಪ್ರತಿಫಲಿಸುವ ಶಕ್ತಿಯಿತ್ತು. ಟೆಲಿಫೋನ್ ಟೆಲಿಗ್ರಾಫ್ ಸಂಜ್ಞೆ

ರೇಡಿಯೋ ತರಂಗಗಳ ರೂಪದಲ್ಲಿ ಇದರ ಮೇಲೆ ಬಿದ್ದಾಗ ಅವು, ಕನ್ನಡಿಯಲ್ಲಿ ಬೆಳಕಿನ ಕಿರಣಗಳು ಪ್ರತಿಫಲನಗೊಳ್ಳುವಂತೆ, ಪ್ರತಿಫಲನಗೊಂಡು ಭೂಮಿಯ ಇನ್ನೊಂದು ಭಾಗಕ್ಕೆ ಮುಟ್ಟುತ್ತವೆ. ಎಕೊ ಉಪಗ್ರಹವು ಇಂತಹ ಸಂಪರ್ಕವು ಸಾಧ್ಯವೆಂದು ತೋರಿಸಿ ಕೊಟ್ಟಿತು. ಇಂತಹ ಉಪಗ್ರಹಗಳು ತಮ್ಮದೇ ಆದ ಕಾರ್ಯವನ್ನು ಏನೂ ಮಾಡದೇ ಇರುವುದರಿಂದ ಇವುಗಳನ್ನು ತಟಸ್ಥ ಉಪಗ್ರಹಗಳೆಂದು ಕರೆಯುತ್ತಾರೆ. 1964 ರಲ್ಲಿ ಜನವರಿ 25 ರಂದು ರಷ್ಯದ ಸಹಕಾರದಿಂದ ಅಮೆರಿಕವು ಇಂತಹುದೇ ಇನ್ನೊಂದು ಉಪಗ್ರಹವನ್ನು ಹಾರಿಸಿತು. ಎಕೊ ಮೂಲಕ ಸಂಪರ್ಕ ಸಾಧಿಸಲು ಪ್ರಬಲವಾದ ಪ್ರೇಷಕಗಳನ್ನು ಉಪಯೋಗಿಸಲಾಯಿತು. ಬಹಳ ದೊಡ್ಡ ಅಳತೆಯ ಯಾವ ದಿಕ್ಕಿಗೆ ಬೇಕಾದರೂ ಸುಲಭವಾಗಿ ತಿರುಗಿಸಬಲ್ಲಂಥ ಆಂಟೆನ್ನಗಳನ್ನು ಬಳಸಿ ಕೃತಕ ಉಪಗ್ರಹದ ದಿಕ್ಕಿಗೆ ನಿಲ್ಲಿಸುವಂತೆ ಏರ್ಪಡಿಸಲಾಗಿತ್ತು.

1958 ರಲ್ಲಿ "ಸ್ಕೋರ್" ಎಂಬ ಉಪಗ್ರಹವು ತಾನು ಪ್ರೇಷಕ ಕೇಂದ್ರಕ್ಕೆ ನೇರವಾಗಿದ್ದಾಗ ಗ್ರಹಿಸಿದ ಸಂದೇಶಗಳನ್ನು ಒಂದು ಟೇಪ್ ರೆಕಾರ್ಡರ್‌ನಲ್ಲಿ ಮುದ್ರಿಸಿ ಕೊಂಡಿತು. ಮತ್ತೆ ಯಾವ ದೇಶಕ್ಕೆ ಈ ಸಂದೇಶಗಳನ್ನು ತಲುಪಿಸಬೇಕಾಗಿತ್ತೋ ಆ ದೇಶಕ್ಕೆ ನೇರವಾಗಿ ಬಂದಾಗ ಟೇಪ್ ರೆಕಾರ್ಡರ್‌ಅನ್ನು ನುಡಿಸಿ ಆ ದೇಶದ ಗ್ರಾಹಕ ಕೇಂದ್ರಕ್ಕೆ ತಲುಪಿಸಿತು. ಇಂತಹ ಸೌಲಭ್ಯವನ್ನು "ಡಿಲೇಡ್ ರಿಲೇ" ಎಂದು ಕರೆಯುತ್ತಾರೆ.

1962 ನೇ ಡಿಸೆಂಬರ್ 13 ರಂದು ಅಮೆರಿಕ ರಿಲೇ 1 ಎಂಬ ಹೆಸರಿನ ಉಪಗ್ರಹವನ್ನು ಹಾರಿಸಿತು. ಇದು 33 ಅಂಗುಲ ಉದ್ದ, 29 ಅಂಗುಲ ಅಗಲವಿರುವ 172 ಪೌಂಡುತೂಕದ ಸಕ್ರಿಯ ಕೃತಕ ಉಪಗ್ರಹ. ಇದರ ಒಳಗಡೆಯಲ್ಲಿ ಅನೇಕ ವೈಜ್ಞಾನಿಕ ಸಲಕರಣೆಗಳನ್ನು ಜೋಡಿಸಿದ್ದರು. ಈ ಸಲಕರಣೆಗಳು ರೇಡಿಯೋ ತರಂಗಗಳನ್ನು ಸ್ವೀಕರಿಸಿ, ವೃದ್ಧಿಸಿ ಮರು ಪ್ರಸಾರ ಮಾಡುವ ಶಕ್ತಿ ಪಡೆದಿದ್ದವು. ಈ ಸಲಕರಣೆಗಳ ಕೆಲಸದ ಸಮರ್ಪಕತೆಯನ್ನು ವರದಿಮಾಡುವ ವ್ಯವಸ್ಥೆಯನ್ನೂ ಏರ್ಪಡಿಸಲಾಗಿತ್ತು. ಒಂದು ಖಂಡದಿಂದ ಇನ್ನೊಂದು ಖಂಡಕ್ಕೆ ಟೆಲಿಫೋನ್, ಟೆಲಿವಿಷನ್, ಟೆಲಿಪ್ರಿಂಟ್ ಮತ್ತು ಚಿತ್ರ ಪ್ರಸಾರ ಮಾಡುವುದನ್ನು ಪರೀಕ್ಷಿಸಲು ಇದನ್ನು ನಿಯೋಜಿಸಲಾಗಿತ್ತು. ಅಂತರ ಖಂಡ ಮತ್ತು ಸಾಗರೋತ್ತರ ಸಂಪರ್ಕವು ಉಪಗ್ರಹದ ಮೂಲಕ ಸಾಧ್ಯವೆಂಬುದನ್ನು ಇದು ನೂರಾರು ನಿದರ್ಶನಗಳಿಂದ ತೋರಿಸಿಕೊಟ್ಟಿತು.

ಅನೇಕ ಬಣ್ಣದ ಚಿತ್ರಗಳನ್ನು ಪ್ರಸಾರಮಾಡಿದುದೇ ಅಲ್ಲದೆ, ಅಧ್ಯಕ್ಷ ಕೆನಡಿ ಇಂಗ್ಲೆಂಡಿನ ಚರ್ಚಿಲ್‌ರಿಗೆ ಅಮೆರಿಕದ ಪೌರತ್ವವನ್ನು ಕೊಡುವ ಮಸೂದೆಗೆ ಸಹಿ ಹಾಕುತ್ತಿರುವಾಗಲೇ ಅದರ ಚಿತ್ರವನ್ನು ಪ್ರಸಾರಮಾಡಿ ಚರಿತ್ರಾರ್ಹವಾದ ದಾಖಲೆಯನ್ನು ಸ್ಥಾಪಿಸಿತು. ಈ ಸಂಪರ್ಕ ಉಪಗ್ರಹದ ಮೂಲಕ ಅಮೆರಿಕ ಸಂಯುಕ್ತ ಸಂಸ್ಥಾನಗಳಿಂದ ಜಪಾನಿಗೂ ಪ್ರಸಾರ ಮಾಡಿ ಸಂಪರ್ಕ ಸಾಧಿಸಲಾಯಿತು.

1963 ನೇ ಫೆಬ್ರವರಿ 14 ರಂದು ಅಮೆರಿಕ ಇನ್ನೊಂದು ವಿಶೇಷವಾದ ಉಪಗ್ರಹವನ್ನು ಹಾರಿಸಿತು. ಅದರ ಹೆಸರು ಸಿಂಕಾಮ್ 1. ಇದು 25 ಅಂಗುಲ ಎತ್ತರ 28 ಅಂಗುಲ ವ್ಯಾಸವಿರುವ 150 ಪೌಂಡು ತೂಕದ ಕೊಳವೆಯಾಕಾರದ ಉಪಗ್ರಹ. ಇದರೊಂದಿಗೆ 70 ಪೌಂಡು ತೂಕದ ಒಂದು ರಾಕೆಟ್ ಮೋಟಾರ್ ಸಹ ಇತ್ತು. ಇದು ಭೂಮಿಯಿಂದ 22.300 ಮೈಲಿ ಎತ್ತರದಲ್ಲಿ ಸಮ ಭಾಜಕ ವೃತ್ತದ ಮೇಲೆ ಹಾರಾಡುವಂತೆ ಏರ್ಪಡಿಸಲಾಗಿತ್ತು. ಭೂಮಿಯು ತನ್ನ ಅಕ್ಷದ ಮೇಲೆ ಒಂದು ಸಲ ಪೂರ್ತಿ ಸುತ್ತಲು 24 ಘಂಟೆ ಬೇಕಾಗುತ್ತದೆ. "ಸಿಂಕಾಮ್" ಉಪಗ್ರಹವೂ ಸಹ ಭೂಮಿಯ ಸುತ್ತಲೂ ಒಂದು ಸಾರಿ ಸುತ್ತಬೇಕಾದರೆ ಅಷ್ಟೇ ಸಮಯ ಬೇಕಾಗುತ್ತದೆ. ಅಂದರೆ ಈ ಉಪಗ್ರಹವು ಭೂಮಿಯಿಂದ ನೋಡಿದಾಗ ಯಾವಾಗಲೂ ಒಂದೇ ಬಿಂದುವಿನಲ್ಲಿ ಕಾಣಿಸುತ್ತ ಇರುತ್ತದೆ. ಇಂತಹ ಉಪಗ್ರಹಗಳ ಭಾವಿ ಪ್ರಯೋಜನವೆಂದರೆ. ಮೂರೇ ಮೂರು ಉಪಗ್ರಹಗಳನ್ನು ಹಾರಿಸಿ ಪ್ರಪಂಚದ ಯಾವುದೇ ಭಾಗದೊಂದಿಗೆ ಬೇಕಾದರೂ ಸಂಪರ್ಕ ಸಾಧಿಸಬಹುದು. ಇತರ ಉಪಗ್ರಹಗಳಾದರೆ ಇಂತಹ ಸಂಪರ್ಕಕ್ಕೆ ಹೆಚ್ಚಿನ ಸಂಖ್ಯೆ ಬೇಕಾಗುವುದು. 'ಸಿಂಕಾಮ್ 1' ಹೆಚ್ಚು ದಿನ ಕೆಲಸ ಮಾಡಲಿಲ್ಲ. ಮತ್ತೆ 1963 ನೇ ಜುಲೈ 26 ರಂದು 'ಸಿಂಕಾಮ್ 2' ನ್ನು ಹಾರಿಸಲಾಯಿತು. ಇದು ಬ್ರೆಜಿಲ್ ದೇಶದ ಮೇಲೆ ಹಾರಾಡುವಂತೆ ಮಾಡಲಾಯಿತು. ಇದರ ಮುಖಾಂತರ ಅನೇಕ ವಾರ್ತೆಗಳು ಪರಸ್ಪರ ವಿನಿಮಯವಾಯಿತು. ಇದರ ವಿಶೇಷ ಸಾಧನೆಯೆಂದರೆ ಅಮೆರಿಕದ ಅಧ್ಯಕ್ಷ ನೈಜೀರಿಯ ದೇಶದ ಪ್ರಧಾನ ಮಂತ್ರಿಯೊಡನೆ ಒಂದು ಟೆಲಿಫೋನ್ ಸಂಭಾಷಣೆ ನಡೆಸಿದುದು. ಇಷ್ಟೇ ಅಲ್ಲದೆ ಪ್ರಪಂಚದ ಮೊತ್ತಮೊದಲಿನ ಉತ್ತರಾರ್ಧ. ದಕ್ಷಿಣಾರ್ಧ ಗೋಳಗಳ ಪತ್ರಿಕಾಗೋಷ್ಠಿಯನ್ನೂ ಸಹ ಇದರ ಮೂಲಕ ನಡೆಸಿದರು.

1962 ಜುಲೈ 10 ರಂದು ಉತ್ತರ ಅಮೆರಿಕವನ್ನು ಯೂರೋಪಿನ ಟೆಲಿವಿಷನ್ ಜಾಲದೊಂದಿಗೆ ಕೂಡಿಸುವ ಪ್ರಥಮ ಪ್ರಯತ್ನ ನಡೆಯಿತು. ಅಮೆರಿಕನ್ ಟೆಲಿಫೋನ್ ಮತ್ತು ಟೆಲಿಗ್ರಾಫ್ ಕಂಪೆನಿಯು ತನ್ನ "ಟೆಲ್‌ಸ್ಟಾರ್" ಹೆಸರಿನ ಕೃತಕ ಉಪಗ್ರಹವನ್ನು ಟೆಲಿವಿಷನ್ ಸಂಜ್ಞೆಗಳನ್ನು ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳಿಗೆ ತಲುಪಿಸಲು ಉಪಯೋಗಿಸಿತು. ಇದು $34\frac{1}{2}$ ಅಂಗುಲ ವ್ಯಾಸದ 170 ಪೌಂಡು ತೂಕದ ಗೋಳವಾಗಿತ್ತು. ಇದು ಮೈಕ್ರೋವೇವ್ ಸಲಕರಣೆಯನ್ನು ಹೊಂದಿತ್ತು. 6000 ಮೆಗ ಸೈಕಲ್ಸ್ ತರಂಗವನ್ನು ತನ್ನ ಗ್ರಾಹಕದಿಂದ ಸ್ವೀಕರಿಸಿ ಅದನ್ನು 4000 ಮೆಗ ಸೈಕಲ್ಸ್ ತರಂಗವನ್ನಾಗಿ ಮಾರ್ಪಡಿಸಿ. ತನ್ನ ಪ್ರೇಷಕದ ಮೂಲಕ ಪ್ರಸಾರಮಾಡಲು ಏರ್ಪಾಡಾಗಿತ್ತು. ಇದರ ಪ್ರೇಷಕ ಶಕ್ತಿ 2.25 ವಾಟ್‌ಗಳು. ಈ ಸಲಕರಣೆಗಳೆಲ್ಲವನ್ನು ನಡೆಸಲು ಬೇಕಾದ ವಿದ್ಯುಚ್ಛಕ್ತಿಯನ್ನು 3600 ಸೌರ ಸೆಲ್ಲುಗಳಿಂದ ಬಿಸಿಲಿನ ಸಹಾಯ ಪಡೆದು ಉತ್ಪತ್ತಿ ಮಾಡಲಾಗುತ್ತಿತ್ತು. ಫ್ರಾನ್ಸ್. ಇಂಗ್ಲೆಂಡ್ ಮತ್ತು ಇಟಲಿಗಳಲ್ಲಿ ವಿಶೇಷವಾಗಿ ವ್ಯವಸ್ಥೆ

ಮಾಡಲ್ಪಟ್ಟ ಭೂಮಿ ಕೇಂದ್ರಗಳನ್ನು ನಿರ್ಮಿಸಿದ್ದರು. ಹಾರಿಸಿದ ದಿನವೇ ಅಮೆರಿಕದಿಂದ ಇಂಗ್ಲೆಂಡಿಗೆ ಚಿತ್ರಪ್ರಸಾರಮಾಡಿತು. ಮಾರನೇ ದಿನವೇ ಜೀವಂತ ದೃಶ್ಯಗಳನ್ನು ಇಂಗ್ಲೆಂಡ್. ಫ್ರಾನ್ಸ್ ಗಳಿಂದ ಅಮೆರಿಕ ಸಂಯುಕ್ತ ಸಂಸ್ಥಾನಗಳಿಗೆ ಪ್ರಸಾರ ಮಾಡಿತು. ಮೊತ್ತಮೊದಲಿನ ಬಣ್ಣದ ಟೆಲಿವಿಷನ್ ಪ್ರಸಾರವು ಜುಲೈ 16 ರಂದು ಸಂಭವಿಸಿತು. ಈ ಕಾರ್ಯಕ್ರಮವು 15 ನಿಮಿಷಗಳು ಮಾತ್ರ ಸಾಧ್ಯವಾಯಿತು. ಏಕೆಂದರೆ ಉಪಗ್ರಹವು ಪ್ರೇಷಕ ಮತ್ತು ಗ್ರಾಹಕ ಕೇಂದ್ರಗಳಿಗೆ ಏಕಕಾಲದಲ್ಲಿ ಕಾಣುತ್ತಿದ್ದುದು 15 ನಿಮಿಷ ಮಾತ್ರ. ಸದಾಕಾಲವೂ ಪ್ರಸಾರವನ್ನು ಸಾಧ್ಯಗೊಳಿಸಬೇಕಾದರೆ ಉಪಗ್ರಹಗಳ ಜಾಲವನ್ನೇ ಸೃಷ್ಟಿಸಬೇಕಾಗುತ್ತದೆ. ಒಂದಲ್ಲ ಒಂದು ಉಪಗ್ರಹವು ಯಾವಾಗಲೂ ಪ್ರೇಷಕ ಗ್ರಾಹಕ ಕೇಂದ್ರಗಳಿಗೆ ಒಟ್ಟಿಗೆ ಕಾಣುತ್ತಿರುವಂತೆ ಏರ್ಪಡಿಸಬೇಕಾಗುವುದು. ಉಪಗ್ರಹಗಳ ಮೂಲಕ ದೃಶ್ಯಗಳ ಅದಲು ಬದಲಾದದ್ದು ಇದೇ ಪ್ರಥಮ.

ಏಳು ತಿಂಗಳ ಅಂತರದಲ್ಲಿ ಟೆಲ್‌ಸ್ಟಾರ್ ಸಹಾಯದಿಂದ 300 ತಾಂತ್ರಿಕ ಪರೀಕ್ಷೆಗಳನ್ನೂ, 400 ಪ್ರದರ್ಶನಗಳನ್ನೂ ನಡೆಸಲಾಯಿತು.

1965 ರ ಏಪ್ರಿಲ್‌ನಲ್ಲಿ ರಷ್ಯವು ತನ್ನ ಮೊದಲನೆ ಸಂಪರ್ಕ ಉಪಗ್ರಹ "ಮೋಲ್ನಿಯ" ವನ್ನು ಹಾರಿಸಿತು. ಮಾಸ್ಕೋ. ವ್ಲಾಡಿವೋಸ್ಟಾಕ್ ಮತ್ತು ಪ್ಯಾರಿಸ್‌ಗಳ ನಡುವೆ ಅನೇಕ ಟೆಲಿವಿಷನ್‌ಗಳ ಪ್ರಸಾರಗಳನ್ನು ಮಾಡಿತು. ರಷ್ಯದ ನಾನಾ ಕಡೆಗಳಲ್ಲಿ ಟೆಲಿವಿಷನ್ ಗ್ರಾಹಕ ಕೇಂದ್ರಗಳನ್ನು ಸ್ಥಾಪಿಸಿ "ಮೋಲ್ನಿಯ" ದಿಂದ ಪ್ರಸಾರವಾದ ದೃಶ್ಯಗಳನ್ನು ನೋಡಿ ಆನಂದಿಸುವ ಸೌಲಭ್ಯಗಳನ್ನು ಕಲ್ಪಿಸಿದ್ದಾರೆ.

1971–72ರಲ್ಲಿ "ಇಂಟೆಲ್‌ಸಾಟ್" ನಾಮಧೇಯದ ಸಂಪರ್ಕ ಉಪಗ್ರಹಗಳು ಉಡಾಯಿಸಲ್ಪಟ್ಟವು. ಇವುಗಳು 6000 ಟೆಲಿಫೋನ್ ಮತ್ತು 12 ಟೆಲಿವಿಷನ್ ದಾರಿಗಳಿಗೆ ಎಡೆ ಮಾಡುವ ಸಾಮರ್ಥ್ಯ ಇವುಗಳಿಗಿವೆ.

ಇದೇ ರೀತಿ ಇನ್ನೂ ಅನೇಕ ವಿಧವಾದ ಕೃತಕ ಉಪಗ್ರಹಗಳನ್ನು ಹಾರಿಸಿ ಅಂತರರಾಷ್ಟ್ರೀಯ ಸಂಪರ್ಕಸಾಧನೆಯಲ್ಲಿರುವ ಅನೇಕ ಸಮಸ್ಯೆಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಇವೆಲ್ಲವುಗಳ ಪ್ರಯೋಗಗಳಿಂದ ಈಗ ತಿಳಿದು ಬಂದಿರುವುದು ಒಂದೇ ವಿಷಯ. ಅದೆಂದರೆ ಮಾನವ ಕೃತಕ ಉಪಗ್ರಹಗಳನ್ನು ನಿರ್ಮಿಸಿ ಪ್ರಪಂಚದ ಒಂದು ಭಾಗದಿಂದ ಇತರ ಯಾವುದೇ ಭಾಗಕ್ಕಾಗಲಿ ಶಬ್ದ ಸಂಪರ್ಕ ಹೊಂದುವುದೇ ಅಲ್ಲದೆ ದೃಷ್ಟಿ ಸಂಪರ್ಕವನ್ನೂ ಹೊಂದಬಹುದು. ಎರಡು ದೇಶಗಳ ಮಧ್ಯೆ ಪರಸ್ಪರ ಸಂಪರ್ಕವನ್ನೂ ಹೊಂದಬಹುದು. ಅಂದರೆ ಈಗ ನಾವು ಒಂದು ಊರಿನಲ್ಲಿ ಟೆಲಿಫೋನಿನ ಮೂಲಕ ಸಂಭಾಷಣೆ ನಡೆಸುವಂತೆ ಮುಂದೆ ಪ್ರಪಂಚದ ಯಾವುದೇ ಊರಿನೊಂದಿಗೆ ಸಂಪರ್ಕಹೊಂದಿ ಸಂಭಾಷಣೆ ನಡೆಸಬಹುದು. ಇಂದು ನಾವು

ಒಂದು ನಗರದ ಟೆಲಿವಿಷನ್ ಕಾರ್ಯಕ್ರಮವನ್ನು ವಿಸ್ತರಿಸಲಾಗಿದೆ. ಮುಂ
ಪ್ರಸಾರ ಮಾಡುವುದೇ ನಗರದ ಟೆಲಿವಿಷನ್ ಕಾರ್ಯಕ್ರಮವನ್ನು ವಿಸ್ತರಿ
ಸಾಧ್ಯವಾಗುತ್ತದೆ. ಇದರಿಂದ ವಿಜ್ಞಾನದ ಗತಿಯನ್ನು ಬದಲಾಯಿಸಿದ ತಕ್ಕ
ಅಪಾರ ಸಂಶೋಧನೆಯಿಂದ ಇನ್ನೇನು ಅದ್ಭುತಗಳು ದೊರೆಯಲಿರುವುದೋ ಕಾ
ನೋಡೋಣ.

ಸೂರ್ಯ

ಎಸ್. ಎಚ್. ನಾಗರಾಜ್

ಸೌರವ್ಯೂಹದ ಕೇಂದ್ರ ಸೂರ್ಯ. ಇದರ ಸುತ್ತ ಗ್ರಹಗಳು ಉಪಗ್ರಹಗಳು ಧೂಮಕೇತುಗಳಿವೆ. ಇಲ್ಲಿ ಸೂರ್ಯನಿಗೆ ಪ್ರಥಮ ಸ್ಥಾನ. ಉಪಗ್ರಹಗಳು ಗ್ರಹಗಳನ್ನೂ ಗ್ರಹಗಳು ಸೂರ್ಯನನ್ನೂ ಗೊತ್ತಾದ ಕಕ್ಷೆಗಳಲ್ಲಿ ಸುತ್ತುತ್ತಿವೆ.

ಸೌರಮಂಡಲದ ಉಗಮ

ಸೌರಮಂಡಲದ ಹುಟ್ಟು ಹೇಗೆ ಎಂದು ಹಲವಾರು ಮಂದಿ ಖಗೋಳ ವಿಜ್ಞಾನಿಗಳು ತಮ್ಮ ಸಿದ್ಧಾಂತಗಳನ್ನು ಮಂಡಿಸುತ್ತಲೇ ಇದ್ದಾರೆ. ಯಾವುದೂ ಇಲ್ಲಿಯವರೆಗೆ ಸಮರ್ಪಕವಾಗಿ ಕಂಡುಬಂದಿಲ್ಲ. ಈ ಸಿದ್ಧಾಂತಗಳಲ್ಲಿ ಮೊದಲನೆಯದು 1755ರಲ್ಲಿದ್ದ ಕಾಂಟ್‌ನದು. ಈತನ ಪ್ರಕಾರ ಈಗ ಸೌರಮಂಡಲ ಆಕ್ರಮಿಸಿಕೊಂಡಿರುವ ವಿಸ್ತಾರವಾದ ಪ್ರದೇಶವೆಲ್ಲವೂ (ಅಂದರೆ ಶೂನ್ಯಪ್ರದೇಶದಲ್ಲಿ) ಮೊದಲಿಗೆ ಬೃಹದಾಕಾರದ ನೆಬ್ಯೂಲ (ಬೃಹನ್ಮೇಘ) ಇತ್ತು. ಅನಂತರ ಇದರ ಕೇಂದ್ರದಲ್ಲಿ ತುಂಡುತುಂಡಾಯಿತು. ಆಗ ಪಾರ್ಶ್ವ ಚಲನೆ ಉಂಟಾದುದರ ಪರಿಣಾಮವಾಗಿ ನೆಬ್ಯೂಲವು ಸುತ್ತಲು ಪ್ರಾರಂಭಿಸಿತು. ತನ್ನ ಅಕ್ಷದ ಮೇಲೆ ಸುತ್ತುವ ವೇಗವು ಜಾಸ್ತಿಯಾದಂತೆಲ್ಲಾ ಉಂಗುರಾಕೃತಿಯನ್ನು ತಾಳಿದ ನೆಬ್ಯೂಲಾ ಭಾಗವು ಕಳಚಿಕೊಳ್ಳುತ್ತಾ ಬಂದಿತು. ಮುಂದೆ ಕಾಲ ಸರಿದಂತೆ ಈ ಉಂಗುರಾಕೃತಿಗಳು ಒಟ್ಟುಗೂಡಿ ಕ್ರಮೇಣ ಒಂಭತ್ತು ಗ್ರಹಗಳ ಹುಟ್ಟಿಗೆ ಕಾರಣವಾಯಿತು. ಮುಂದೆ ಈ ಗ್ರಹಗಳು ತಮ್ಮ ಅಕ್ಷದ ಮೇಲೆ ಸುತ್ತುತ್ತಾ ಉಪಗ್ರಹಗಳ ಉಗಮಕ್ಕೆ ಕಾರಣವಾದುವು.

ಕಾಂಟ್‌ನ ಸಿದ್ಧಾಂತವು 1796 ರಲ್ಲಿ ಲಾಪ್ಲೇಸನಿಂದ ಮುಂದುವರಿಯಿತು. ಲಾಪ್ಲೇಸನ ಸಿದ್ಧಾಂತವು ಕಾಂಟ್‌ನ ಸಿದ್ಧಾಂತದ ಅಲ್ಪಸ್ವಲ್ಪ ಬದಲಾವಣೆ ಅಷ್ಟೆ. ಈತ ನೆಬ್ಯೂಲವು ವೇಗ ಸುತ್ತಲು ಪ್ರಾರಂಭಿಸಿತು ಎಂಬ ಸಂಗತಿಯನ್ನು ವಿವರಿಸುವುದು ಬಿಟ್ಟು ಸುತ್ತುತ್ತಿರುವ ನೆಬ್ಯೂಲ ಎಂದೇ ಪ್ರಾರಂಭಿಸುತ್ತಾನೆ. ಸಿದ್ಧಾಂತ ಉಳಿದಂಶಗಳಲ್ಲಿ ಕಾಂಟ್‌ನ ಸಿದ್ಧಾಂತವನ್ನು ಹೋಲುತ್ತದೆ.

ಈ ಎರಡು ಸಿದ್ಧಾಂತಗಳನ್ನು ಚೆನ್ನಾಗಿ ವಿವರಿಸುವುದರಿಂದ ಸೌರಮಂಡಲದ ಹಲವಾರು ಅಂಶಗಳು ಬೆಳಕಿಗೆ ಬಂದವು. ಗ್ರಹಗಳೆಲ್ಲವೂ ಸೂರ್ಯನನ್ನು ಸುತ್ತುತ್ತಿವೆ.

ಅವುಗಳನ್ನು ಉಪಗ್ರಹಗಳು ಸುತ್ತುತ್ತಿವೆ ಎಂಬ ವಿಚಾರ ಗಮನಾರ್ಹವಾದವು. ಆದರೆ ಇನ್ನೂ ಕೆಲವು ಅಂಶಗಳನ್ನು ವಿವರಿಸಲು ಈ ಸಿದ್ಧಾಂತಗಳಿಗೆ ಸಾಧ್ಯವಾಗಲಿಲ್ಲ; ಕಿರಿಯಗ್ರಹಗಳ[1] ಪಥವು ಎಕ್‌ಲಿಪ್‌ಟಿಕ್‌ನೊಂದಿಗೆ ಉಂಟುಮಾಡುವ ದೀರ್ಘಕೋಣ ಗಳು. ಉಪಗ್ರಹಗಳಲ್ಲಿ ಕೆಲವುದರ ಚಲನೆಯು ಅಸ್ವಾಭಾವಿಕವಾಗಿದೆಯೇಕೆ—ಇತ್ಯಾದಿಗಳು ಈ ಎಲ್ಲ ಸಮಸ್ಯೆಗಳಿಗಿಂತಲೂ ಮಿಗಿಲಾಗಿ ಗಣಿತಶಾಸ್ತ್ರ ನಿಯಮದ ಪ್ರಕಾರ ಕನ್‌ಸರ್ ವೇಶನ್ ಆಫ್ ಅಂಗ್ಯುಲರ್ ಮೊಮೆಂಟಮ್‌ನ ವಿರುದ್ಧವಾಗಿ ನೆಬ್ಯುಲರ್ ಸಿದ್ಧಾಂತವು ಸಾಗುತ್ತದೆ.

ಕ್ರಿ. ಶ. 1900 ರಲ್ಲಿ ಚೇಂಬರ್ಲಿನ್ ಮತ್ತು ಮೌಲ್ಟನ್ ಎಂಬ ವಿಜ್ಞಾನಿಗಳು ಪ್ಲಾನಿಟೆಸಿಮಲ್ ಸಿದ್ಧಾಂತವನ್ನು ಮಂಡಿಸಿದರು. ಇದರ ಪ್ರಕಾರವಾಗಿ ಚಲಿಸುತ್ತಿದ್ದ ನಕ್ಷತ್ರವೊಂದು ಸೂರ್ಯನ ಸಮೀಪಕ್ಕೆ ಬಂದು ಸೂರ್ಯನ ದೊಡ್ಡ ಭಾಗವೊಂದನ್ನು ಚೂರುಮಾಡಿತು. ನಂತರ ಈ ಚೂರುಗಳೇ ಗ್ರಹಗಳು ಮತ್ತು ಉಪಗ್ರಹಗಳಾದುವು. ಇದೇ ಸಿದ್ಧಾಂತವನ್ನು ಹೆಚ್ಚು ಕಡಿಮೆ ಹೋಲುವ ಮತ್ತೊಂದು ಸಿದ್ಧಾಂತವನ್ನು ಸರ್ ಜೇಮ್ಸ್‌ಜೀನ್ಸ್ ಎಂಬ ವಿಜ್ಞಾನಿ ಕ್ರಿ. ಶ. 1916 ರಲ್ಲಿ ಮಂಡಿಸಿದ. ಈ ಎರಡು ಸಿದ್ಧಾಂತಗಳೂ ಸಹ ದೂರದಗ್ರಹಗಳ ಅಂಗ್ಯುಲರ್‌ಮೊಮೆಂಟಮ್ ಅನ್ನು ವಿವರಿಸಲು ವಿಫಲವಾಗಿದೆ.

ಅಂಗ್ಯುಲರ್‌ಮೊಮೆಂಟಮ್ ಅನ್ನು ವಿವರಿಸುವ ಸಿದ್ಧಾಂತವೊಂದು ಹೊರಬಂತು ಅದನ್ನು ಡಬ್ಬಲ್‌ಸ್ಟಾರ್ ಥಿಯರಿ[2] ಎಂದು ಕರೆದಿದ್ದಾರೆ. ಇದರ ಪ್ರಕಾರ ನಮ್ಮ ಸೂರ್ಯನಿಗೆ ನಕ್ಷತ್ರವೊಂದು ಗೆಳೆಯನಂತಿತ್ತು. ಇದಕ್ಕೆ ಮೂರನೆಯ ಚಲಿಸುವ ನಕ್ಷತ್ರವೊಂದು ಬಡಿದಾಗ ತುಂಡುತುಂಡಾಯಿತು. ಈ ತುಂಡುಗಳೇ ಮುಂದೆ ಗ್ರಹಗಳಾಗಿ ರೂಪುಗೊಂಡವು. ಫ್ರೆಡ್‌ಹೊಯ್ಲ್‌ನ ಸಿದ್ಧಾಂತದ ಪ್ರಕಾರ (ಕಂಪಾನಿ ಯನ್) ಮಿತ್ರನಕ್ಷತ್ರವು ಸೂಪರ್‌ನೋವಾವಾಗಿ ರೂಪುಗೊಂಡು ನಂತರ ಆಸ್ಫೋಟನೆ ಯಾಗಿ ಗ್ರಹಗಳಾದುವು.

ಮೇಲಿನ ಎಲ್ಲ ಸಿದ್ಧಾಂತಗಳೂ ಮತ್ತು ಅವುಗಳ ಬದಲಾವಣೆಗಳೂ ಆಧುನಿಕ ಖಗೋಲ ವಿಜ್ಞಾನಿಗಳ ಸಮಸ್ಯೆಗಳಿಗೆ ಉತ್ತರಕೊಡುವುದಿಲ್ಲ. ಹೀಗಾಗಿ ಸೌರಮಂಡಲದ ಉಗಮವು ಇದುವರೆವಿಗೂ ಸಮರ್ಪಕವಾಗಿ ಬಗೆಹರಿಸಲಾರದ ಸಮಸ್ಯೆಯಾಗಿಯೇ ಉಳಿದಿದೆ.

---

1 ಆಸ್ಟಿರಾಯಿಡ್ಸ್

2 Double-Star-Theory

ಸೂರ್ಯ

ಸೂರ್ಯ ಬೃಹತ್ ಗಾತ್ರದ ಉರಿಯುತ್ತಿರುವ ಗೋಲ. ಭೂಮಿಯ ತೂಕಕ್ಕಿಂತಲೂ 334.000 ಬಾರಿ ಹೆಚ್ಚು. ಸೌರಮಂಡಲದ ಕೇಂದ್ರ ಶಕ್ತಿ. ಸೃಷ್ಟಿಯಲ್ಲಿನ ಚರಾಚರ ಜೀವರಾಶಿಗಳೆಲ್ಲಾ ಆಧಾರವಾಗಿರುವ ಬೆಳಕು ಬರುವುದು ಈ ಸೂರ್ಯನಿಂದಲೇ! ಸೂರ್ಯನಿಲ್ಲದೆ ಜೀವಿಗಳ ಉಗಮ ಅಸ್ತಿತ್ವಗಳಾಗುವುದಿಲ್ಲ. ನಮ್ಮ ಪ್ರಾಚೀನರು ಸೂರ್ಯನನ್ನು ದೈವತ್ವಕ್ಕೇರಿಸಿ ಪುರಾಣಕತೆಗಳನ್ನು ರಚಿಸಿ ಆರಾಧನೆ ಮಾಡಿದ್ದರಲ್ಲಿ ಅತಿಶಯವೇನಿಲ್ಲ.

ಸೂರ್ಯನನ್ನು ಕುರಿತು[1] ಕೆಲವು ಅಂಕಿ ಅಂಶಗಳು ಹೀಗಿವೆ:

ಸುತ್ತಳತೆ	—	6.960×10^{10} *cm* $= 4.325 \times 10^{5}$ ಮೈಲಿಗಳು.
ಮೇಲ್ಮೈ ವಿಸ್ತೀರ್ಣ		6.087×10^{22} cm^2
ಗಾತ್ರ	—	1.412×10^{33} cm^3
ತೂಕ	—	$1.911 \times 10^{33} g = 1.960 \times 10^{27}$ ಟನ್ನುಗಳು
ಸಾಂದ್ರತೆ	—	$1.410 g/cm^3$
ಶಕ್ತಿ	—	3.86×10^{33} *erg/sec*
ರೊಟೇಶನ್	—	25.38 ದಿನಗಳು / 27.28 ದಿನಗಳು] 16°
ಅಗಲ	—	864000 ಮೈಲಿಗಳು.

ಭೂಮಿಗೂ ಸೂರ್ಯನಿಗೂ ಇರುವ ದೂರ:

93005000 ಮೈಲಿಗಳು [1.497×10^{13} *cm* $= 9\,300 \times 10^{7}$ ಮೈಲಿಗಳು]

ಗುರುತ್ವಾಕರ್ಷಣ ಶಕ್ತಿ ಭೂಮಿಯ ಗುರುತ್ವಾಕರ್ಷಣಾ ಶಕ್ತಿಯ 28 ರಷ್ಟು ಹೆಚ್ಚು. ಹೊಳೆಯುತ್ತಿರುವ ಸೂರ್ಯನ ಹೊರ ಅಂಚನ್ನು ಫೋಟೋಸ್ಫಿಯರ್ ಎನ್ನುತ್ತಾರೆ. ಬರಿಗಣ್ಣಿಗೆ ಜಾಜ್ವಲ್ಯಮಾನವಾಗಿ ಬೆಳಕಿನ ತಟ್ಟೆಯಂತೆ ಹೊಳೆಯುವ ಸೂರ್ಯ ದೂರದರ್ಶಕಗಳಿಂದ ನೋಡಿದಾಗ ಹಲವು ತೆರನಾಗಿ ಗೋಚರಿಸುವುದು. ಮುಖ್ಯಭಾಗ ಗೋಲಾಕಾರ. ಕೇಂದ್ರಕ್ಕಿಂತ ಅಂಚು ದಟ್ಟವಾಗಿ ಕಪ್ಪಾಗಿದೆ. ಈ ಕಪ್ಪು ಅಂಚಿಗೆ 'ಲಿಂಬ್' ಎಂದು ಹೆಸರು. ಪೂರ್ಣಸೂರ್ಯ ಗ್ರಹಣದ ಕಾಲದಲ್ಲಿ ಪ್ರಖರವಾಗಿ ಹೊಳೆಯುವ ಮುಖ್ಯಭಾಗವು ತಾತ್ಕಾಲಿಕವಾಗಿ ಮರೆಯಾಗುವುದರಿಂದ ಸೂರ್ಯನ ಹೊರವಲಯವು ತೀಕ್ಷ್ಣವಾಗಿ ಬೆಳಗುತ್ತಾ ಗ್ರಹಣವನ್ನು ಮೋಹಕವನ್ನಾಗಿಸುವುದು. 8000 ಮೈಲಿಗಳಿಗೂ ಮಿಕ್ಕಿ ವಿಸ್ತಾರವಿರುವ ಸೂರ್ಯನ ಮೈಲ್ಮೈ ಕೆಂಪುಬಣ್ಣದ

1. ನೋಡಿ Physical and Mathematical Tables—CLARK, Page 68—THE SUN.

ಅನಿಲಗಳಿಂದ ಕೂಡಿ ಉಂಗುರಾಕಾರ ಹೊಂದಿದೆ. ಈ ದೃಶ್ಯವನ್ನು ನೋಡಬಹುದು. ಈ ಕೆಂಪುಬಣ್ಣದ ಪ್ರಖರತೆಯಿಂದಾಗಿ ಸೂರ್ಯನ ಮೈಲ್ಮೈ ಹೊಳೆಯುತ್ತಿರುವಂತೆ ಕಾಣಿಸುವುದು. ಈ ಭಾಗವೇ ಕ್ರೊಮೋಸ್ಫಿಯರ್ ಅಥವಾ ಬಣ್ಣಗೋಲ. ಕ್ರೋಮೋಸ್ಫಿಯರ್ ಕೆಳಗೆ 100 ಮೈಲಿ ವಿಸ್ತಾರವಿರುವ ಭಾಗ ತೀಕ್ಷ್ಣವಾಗಿ ಹೊಳೆಯುವ ಅನಿಲದಿಂದ ತುಂಬಿದೆ. ಸೂರ್ಯನಲ್ಲಿ ಕಾಣಬರುವ ಬೆಳಕಿಗೆ ಈ ಭಾಗವೇ ಕಾರಣ. ಆದ್ದರಿಂದ ಇದಕ್ಕೆ ಫೋಟೋಸ್ಫಿಯರ್ – ಕಾಂತಿಗೋಲ ಎಂದು ಹೆಸರು. ಇದಾದ ಮೇಲಿರುವುದು ಸೂರ್ಯನ ಕೇಂದ್ರಭಾಗ; ನಿಬಿಡವಾದ ಅನಿಲಗಳು ಮತ್ತು ತೀವ್ರವಾದ ಶಾಖದಿಂದ ಈ ಭಾಗ ಕೂಡಿದೆ. ಫೋಟೋಸ್ಫಿಯರ್‌ನ ಉಷ್ಣಾಂಶ 6000°C. ಸೂರ್ಯನ ಕೇಂದ್ರ ಭಾಗದಲ್ಲಿನ ಉಷ್ಣಾಂಶ ಸುಮಾರು 20 ಲಕ್ಷ°C. ತನ್ನ ಅಕ್ಷದ ಮೇಲೆ ಸುತ್ತುವ ಸೂರ್ಯ ಒಂದು ಸುತ್ತುಬರಲು ತೆಗೆದುಕೊಳ್ಳುವ ಕಾಲ 25 ದಿನಗಳು.

ಸಾಧಾರಣ ದೂರದರ್ಶಕ ಯಂತ್ರದ ಮುಖಾಂತರ ಸೂರ್ಯನನ್ನು ನೋಡಿದಾಗ ಅಲ್ಲಲ್ಲಿ ಕುಣಿ ಅಥವಾ ಗುಂಡಿಗಳು ಕಾಣಿಸಿಗುವುದು. ಇವು ಸೂರ್ಯನ ಮಧ್ಯಭಾಗ —ಈಕ್ವೆಡಾರ್‌ನಿಂದ ಹೆಚ್ಚು ದೂರದಲ್ಲಿಲ್ಲ. ಸನ್‌ಸ್ಪಾಟ್ಸ್ – ಸೂರ್ಯನ ಕಲೆಗಳು ಎಂದು ಇವುಗಳಿಗೆ ಹೆಸರು. ಈ ಕಲೆಗಳಿಗಿರುವ ಭಾಗವು ಪ್ರಶಾಂತವಾಗಿರದೆ ಅಶಾಂತಿ ಗೊಂದಲಗಳ ಪ್ರದೇಶವಾಗಿರಬಹುದೆಂದು ನಂಬಲಾಗಿದೆ. ಇವು ನಿರಂತರವಾಗಿ ತನ್ನ ಸ್ವರೂಪ ಮತ್ತು ಗಾತ್ರವನ್ನು ಬದಲಾಯಿಸುತ್ತಲೇ ಇರುತ್ತವೆ. ಕೆಲವುಬಾರಿ ಕಾಣಿಸಿಕೊಂಡರೆ ಮತ್ತೊಮ್ಮೆ ಮರೆಯಾಗುತ್ತವೆ. ಕೆಲವಂತೂ ಒಮ್ಮೆ ಕಾಣಿಸಿ ಮರೆಯಾಗಿ ಪುನಃ ಗೋಚರಿಸಬೇಕಾದರೆ ಹಲವು ವಾರಗಳಾಗಬಹುದು. ಗಾತ್ರ ಮತ್ತು ವಿಸ್ತಾರದಲ್ಲಿ ಕೆಲವು ಕುಣಿಗಳು ಚಿಕ್ಕವು ಕೆಲವು ದೊಡ್ಡವು. ಒಂದು ದೊಡ್ಡ ಸೂರ್ಯ ಕಲೆಯ ಕುಣಿಯಲ್ಲಿ ಇಪ್ಪತ್ತು ಭೂಮಿಗಳನ್ನು ಒಂದರ ಪಕ್ಕದಲ್ಲಿ ಮತ್ತೊಂದನ್ನು ಜೋಡಿಸಬಹುದು. ಸೂರ್ಯಕಲೆಗಳು ಕಾಣಿಸುವುದು ಮರೆಯಾಗುವುದರ ಆಧಾರದಿಂದ ಖಗೋಲವಿಜ್ಞಾನಿಗಳು ಸೂರ್ಯ ತನ್ನ ಅಕ್ಷದ ಮೇಲೆ ಒಂದು ಸುತ್ತು ಬರಲು ತೆಗೆದುಕೊಳ್ಳುವ ಕಾಲ 25 ದಿನಗಳೆಂದು ಗುರುತಿಸಿದ್ದಾರೆ.

ಈ ಸೂರ್ಯನ ಕಲೆಗಳು ನಮಗೆ ಕಪ್ಪಾಗಿ ಕಾಣಿಸುವುದು. ಅದಕ್ಕೆ ಕಾರಣವಿಷ್ಟೇ. ಸುತ್ತಮುತ್ತಲ ಭಾಗಕ್ಕೆ ಹೋಲಿಸಿದಾಗ ಈ ಕುಣಿಗಳು ಕಡಿಮೆ ಉಷ್ಣಾಂಶದಿಂದಿವೆ. ಅಂದರೆ ಸುತ್ತುವರಿದಿರುವ ಫೋಟೋಸ್ಫಿಯರ್‌ಗಿಂತ ಕುಣಿಗಳು ಕಡಿಮೆ ಕಾಂತಿಯಿಂದಿವೆ. ಅದಕ್ಕೆ ಈ ಭಾಗ ಕಪ್ಪಾಗಿ ಕಾಣಿಸುವುದು. ಈ ಕಪ್ಪುಕಲೆಗಳು ಮ್ಯಾಗ್ನೆಟಿಕ್ ಅಲೆಗಳನ್ನು ಭೂಮಿಯ ಮೇಲೆ ಉತ್ಪತ್ತಿಮಾಡುವುದರಿಂದಲೇ ರೇಡಿಯೋ ಮತ್ತು ವಿದ್ಯುತ್ ಉಪಕರಣಗಳಲ್ಲಿ ಅಸ್ತವ್ಯಸ್ತತೆಯಾಗುವುದು. ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ ಸೂರ್ಯ ಕಲೆಗಳಲ್ಲಿ ಬಹು ದೊಡ್ಡ ಭಗ್ನಗಳಾಗುತ್ತವೆ ಎಂದು ನಂಬಲಾಗಿದೆ.

ಸೂರ್ಯಗ್ರಹಣವು ಸೂರ್ಯನ ದೃಶ್ಯಗಳಲ್ಲಿ ಅತಿರಮ್ಯವಾದುದು. ಇದನ್ನು ಎಲ್ಲರೂ ವೀಕ್ಷಿಸಬಹುದು. ಸೂರ್ಯ ಮತ್ತು ಭೂಮಿಯ ನಡುವೆ ಚಂದ್ರ ಬಂದು ಸೂರ್ಯನನ್ನು ಮುಚ್ಚಿಕೊಂಡಾಗ ಸೂರ್ಯಗ್ರಹಣವಾಗುವುದು. ಈ ಸಂದರ್ಭದಲ್ಲಿ ಸೂರ್ಯನಿಂದ ಎಸೆಯುವ ಬೃಹದಾಕಾರದ ಹೊಳೆಯುವ ಅನಿಲಗಳ ನಾಲಿಗೆಗಳು ತೀವ್ರಗತಿಯಲ್ಲಿರುವುದು. ಇವುಗಳಿಗೆ ಪ್ರೊಮಿನೆನ್ಸಸ್ ಎಂದು ಹೆಸರು. ಬಿಳಿಯ ಮುತ್ತಿನ ಬಣ್ಣದ ಬೆಳಕೊಂದು ಸೂರ್ಯನ ಸುತ್ತಲೂ ಹ್ಯಾಲೋ ಆಕಾರದಲ್ಲಿರುವುದನ್ನು ಕಾಣಬಹುದು. ಇದನ್ನು ಕರೋನಾ ಎನ್ನುವರು.

ಸೂರ್ಯಗ್ರಹಣವು ಕೆಲವೇ ಕ್ಷಣಗಳಲ್ಲಿ ಆಗಿಹೋಗುವುದರಿಂದ ಅಲ್ಲದೆ ಭೂಭಾಗದ ಕೆಲವು ಪ್ರದೇಶಗಳಿಗೆ ಮಾತ್ರ ಕಾಣಿಸುವುದರಿಂದ ಖಗೋಲ ವಿಜ್ಞಾನಿಗಳು ಈ ಒಂದು ಸಂದರ್ಭಕ್ಕೆ ಕಾತರರಾಗಿ ಕಾದಿದ್ದು ಅದಕ್ಕೆ ಸೂಕ್ತವಾದ ಸಿದ್ಧತೆಗಳನ್ನು ಮಾಡಿಕೊಂಡು ಸೂರ್ಯನ ಚಿತ್ರಗಳನ್ನು ತೆಗೆಯುತ್ತಾರೆ.

ಕೆಲವು ಸಂದರ್ಭಗಳಲ್ಲಿ ಚಂದ್ರ ಸೂರ್ಯನನ್ನು ಪರಿಪೂರ್ಣವಾಗಿ ಮುಚ್ಚದೆ ಕೆಲಭಾಗವನ್ನು ಮಾತ್ರ ಮುಚ್ಚಿರುವುದು. ಆಗ ನಡೆಯುವ ಗ್ರಹಣವೇ ಪಾರ್ಶ್ವ ಗ್ರಹಣ. ಇನ್ನೂ ಕೆಲವು ವೇಳೆ ಭೂಮಿಗೆ ಸಮೀಪದಲ್ಲಿರುವ ಚಂದ್ರ ಸೂರ್ಯನ ನಡುವೆಯಿದ್ದಾಗ ಅಂಚಿನಲ್ಲಿರುವ ಸೂರ್ಯ ಉಂಗುರದ ಹಾಗೆ ಕಾಣುವುದು. ಇಂತಹ ಗ್ರಹಣಗಳಿಗೆ ಆನ್ಯೂಲರ್ ಎಕ್ಲಿಪ್ಸ್ ಅಥವಾ ಪೂರ್ಣಗ್ರಹಣವೆನ್ನುವರು.

ಸೂರ್ಯನ ಶಕ್ತಿ

ಬ್ರಹ್ಮಾಂಡದಲ್ಲಿರುವ ಬಿಲಿಯನ್‌ಗಟ್ಟಲೆ ನಕ್ಷತ್ರಗಳು ಶಕ್ತಿಯ ಉತ್ಪಾದನೆಯನ್ನು ಬಹುದೊಡ್ಡ ಪ್ರಮಾಣದಲ್ಲಿ ಮಾಡುತ್ತಿವೆ. ಸೂರ್ಯನಲ್ಲಿ ಸುಮಾರು 500 ಸೆಕ್ಸಿಲಿಯನ್ ಅಶ್ವಶಕ್ತಿಗಳಷ್ಟು ಶಕ್ತಿ ಉತ್ಪಾದನೆಯಾಗುತ್ತಿದೆ. ಈ ಒಟ್ಟು ಶಕ್ತಿಯಲ್ಲಿ ತೀರಾ ಕನಿಷ್ಠ ಪ್ರಮಾಣದಲ್ಲಿ ಭೂಮಿ ಶಕ್ತಿಯನ್ನು ಬಳಸಿಕೊಳ್ಳುವುದು. ಭೂಮಿಯ ಮೇಲ್ಮೈನ ಪ್ರತೀ ಚದರಡಿಯು ಸೂರ್ಯ ಶಕ್ತಿಯ ಒಟ್ಟು ಅಂಶದ 1/6 ಅಶ್ವಶಕ್ತಿಯಷ್ಟು ಮಾತ್ರ ಬಳಸುವುದು. ಈ ಶಕ್ತಿಯ ವಿನಹ ಭೂಮಿಯ ಮೇಲೆ ಬಾಳ್ವೆಯಿಲ್ಲ! ಇಷ್ಟೊಂದು ಅಗಾಧ ಪ್ರಮಾಣದ ಶಕ್ತಿಯ ಉತ್ಪಾದನೆಯಾದರೂ ಹೇಗಾಗುವುದು ಎಂಬುದು ಪ್ರಾಚೀನಕಾಲದಿಂದಲೂ ಉದ್ಭವಿಸಿರುವ ಸಮಸ್ಯೆ. ಭೂಮಿಯಮೇಲೆ ಮಾನವ ನಿರ್ಮಿಸಿಕೊಳ್ಳುವ ಬೆಂಕಿ ಶಕ್ತಿಯು ಎಷ್ಟೋ ಪ್ರಖರವಾಗಿ ಬೆಳಗಿದರೂ ಶಾಶ್ವತವಲ್ಲ. ಅಂತಹುದರಲ್ಲಿ ನಿರಂತರವಾಗಿ ಬೆಳಗುತ್ತಾ ಶಕ್ತಿಯನ್ನು ಉತ್ಪಾದಿಸುತ್ತಲೇ ಇರುವ ಸೂರ್ಯನ ರಹಸ್ಯವೇನು? ವಿಜ್ಞಾನಿಗಳಿಗೆ ಇದೊಂದು ಸವಾಲೇ ಆಯಿತು.

ಸುಮಾರು ನೂರು ವರ್ಷಗಳ ಕೆಳಗೆ ವಿಜ್ಞಾನಿಗಳು ಈ ರಹಸ್ಯವನ್ನು ವಿವರಿಸಲು ಪ್ರಯತ್ನಿಸಿದರು. ಸೂರ್ಯ ಮತ್ತು ಸೂರ್ಯನಂತಿರುವ ಕೆಲವು ನಕ್ಷತ್ರಗಳು ಸಂಕೋಚನ

ಗೊಳ್ಳುತ್ತಿದೆ. ಹೀಗೆ ನಿಧಾನವಾಗಿ ಸಂಕೋಚನಗೊಳ್ಳುವುದರ ಪರಿಣಾಮವಾಗಿ ಗುರುತ್ವಾಕರ್ಷಣಾಶಕ್ತಿಯು ಒಟ್ಟು ಅಂಶ[1] ಕಡಿಮೆಯಾಗಿ. ಹೆಚ್ಚಾದ ಭಾಗವು ಶಾಖವನ್ನು ಉತ್ಪತ್ತಿಮಾಡಿತು. ಲೆಕ್ಕಾಚಾರಮಾಡಿದಾಗ ಶಾಖ ಉತ್ಪತ್ತಿಯಾದುದು ಸಮಂಜಸವಾಗಿ ತೋರಿತು. ಆದರೆ ಇದರ ಪ್ರಕಾರ ಸೂರ್ಯನ ಆಯುಸ್ಸಿನ ವಿಚಾರವಾಗಿ ಸಂದೇಹಗಳು ಮೂಡಿದುವು. ಆದ್ದರಿಂದ ಈ ಸೂರ್ಯ ಸಂಕೋಚನವಾದವು[2] ಅಸಮರ್ಪಕವೂ ಅತೃಪ್ತಿಕರವೂ ಆಯಿತು. ಬೇರೆ ಬೇರೆ ಆಧಾರಗಳು. ಕಡೆಯಪಕ್ಷ ಸೂರ್ಯ 4 ಬಿಲಿಯನ್ ವರ್ಷಗಳಿಂದಲೂ ಶಕ್ತಿಯ ಉತ್ಪಾದನೆ ಮಾಡುತ್ತಲೇ ಬಂದಿದೆ ಎಂಬ ಅಂಶವನ್ನು ಹೇಳುವುದರಿಂದ ವಿಜ್ಞಾನಿಗಳು ನಿರ್ವಾಹವಿಲ್ಲದೆ ಈ ಸಮಸ್ಯೆಯನ್ನು ಪರಿಹರಿಸಲು ಹೊಸದೊಂದು ಮಾರ್ಗವನ್ನು ಕಂಡುಕೊಂಡರು.

1925 ರಲ್ಲಿ ಸೂರ್ಯ ಮತ್ತು ನಕ್ಷತ್ರಗಳ ಮೂಲಶಕ್ತಿಯನ್ನು ಕುರಿತು ವಿನೂತನ ವಾದ ಸಲಹೆಗಳು ಮೂಡಿಬಂದವು. ಈ ಸಿದ್ಧಾಂತವನ್ನು ಪ್ರತಿಪಾದಿಸಿದ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್. ವಸ್ತುವನ್ನು ಶಕ್ತಿಯಾಗಿ ಪರಿವರ್ತಿಸಬಹುದು ಎಂಬುದನ್ನು $E=mc^2$ ಎಂಬ ಪ್ರಸಿದ್ಧ ಸೂತ್ರದಿಂದ ವಿವರಿಸಿದರು. $E=$ ಎನರ್ಜಿ (ಶಕ್ತಿ) $m=$ ಪರಿವರ್ತನೆಗೊಂಡ ವಸ್ತುವಿನ ತೂಕ. $c=$ ಬೆಳಕಿನ ಗತಿ (ವೆಲಾಸಿಟಿ).

ಮತ್ತೊಂದು ಸಮರ್ಪಕವೆನಿಸಬಹುದಾದ ಸಿದ್ಧಾಂತ ರೂಪುಗೊಳ್ಳಬೇಕಾದರೆ ಇಪ್ಪತ್ತು ವರ್ಷಗಳೇ ಬೇಕಾಯಿತು. ಹೊಸ ಸಿದ್ಧಾಂತದ ಮುಖ್ಯಾಂಶವೆಂದರೆ ಸೂರ್ಯ ಕೇಂದ್ರದ ಉಷ್ಣಾಂಶವು 18 ರಿಂದ 36 ಮಿಲಿಯನ್ ಡಿಗ್ರಿ ಫಾರೆನ್ ಹೀಟ್ (F) ಇರಬಹುದು. ಸಿದ್ಧಾಂತಗಳ ಅಭ್ಯಾಸದ ಪ್ರಕಾರ ಅಣುಗಳ ರಚನೆಯು ಸೂರ್ಯನಲ್ಲಿರುವ ತೀವ್ರ ಉಷ್ಣಾಂಶದ ಪರಿಣಾಮವಾಗಿ ಲಘುಅಣುಗಳು[3] ಪರಸ್ಪರ ಸೇರಿಕೊಂಡು ಭಾರವಾದ ಅಣುಗಳಾಗುತ್ತವೆ[4]. ಈ ವಿಧಾನದಲ್ಲಿ ಅಣುಗಳಲ್ಲಿರುವ ಕನಿಷ್ಠ ಪ್ರಮಾಣದ ವಸ್ತು ಸದಾ ಶಕ್ತಿಯಾಗಿ ಪರಿವರ್ತಿಸಬಹುದು. ಆದರೆ ಸತತವಾಗಿ ನಡೆಸಿದ ಸಂಶೋಧನೆಯ ನಂತರ ಇಂತಹ ಅಣುಪರಿವರ್ತನ ಕ್ರಿಯೆಯು ಸೂರ್ಯನಲ್ಲಿ ನಡೆಯುತ್ತಿದೆಯೇ ಎಂಬ ಸಂದೇಹವನ್ನು ಮೂಡಿಸಿದೆ.

ನೂಕ್ಲಿಯರ್ ಕ್ರಿಯೆಗಳು—ಸೂರ್ಯ ಶಕ್ತಿಯ ನಿಗೂಢ

ಸೂರ್ಯನ ಆಳದಲ್ಲಿ ವಸ್ತು ಪರಸ್ಪರ ಒತ್ತಡದ ಕ್ರಿಯೆಗೆ ಒಳಗಾಗುವುದು. ಭೂಮಿಯ ಮೇಲಿರುವ ಗಾಳಿಯ ಒತ್ತಡದ ಒಂದು ಬಿಲಿಯನ್‌ಗಿಂತಲೂ ಹೆಚ್ಚಾಗಿ

---

1 Total Gravitational Energy
2 Contraction Theory of Sun
3 Lighter atoms
4 Heavy atoms

ಸೂರ್ಯನಲ್ಲಿ ಈ ಕ್ರಿಯೆಗೆ ಒತ್ತಡವುಂಟಾಗಿರುವುದು. ಅಣುಗಳಂತೂ ಅತಿಸಾಂದ್ರತೆಯಿಂದ ನಿಬಿಡವಾಗಿರುತ್ತವೆ. ಹೀಗೆ ಸೂರ್ಯನ ಕೇಂದ್ರವು ಎಷ್ಟು ದಟ್ಟವಾಗಿರುತ್ತದೆಯೆಂದರೆ ನೀರಿನ ಸಾಂದ್ರತೆಗಿಂತಲೂ ನೂರುಪಾಲು ಮಿಗಿಲು.

ಇಷ್ಟಾದರೂ ಈ ಅಣುವಿನಲ್ಲಿರುವ ನ್ಯೂಕ್ಲಿಯೈ ತೀವ್ರ ಉಷ್ಣಾಂಶದಿಂದಾಗಿ ಚಲಿಸುತ್ತಿರುತ್ತವೆ. ಆಗಾಗ ಹೀಗೆ ಚಲಿಸುತ್ತಿರುವ ನ್ಯೂಕ್ಲಿಯೈಗಳು ಎರಡೆರಡಾಗಿ ಪರಸ್ಪರ ಒಂದುಗೂಡುವುವು. ಈ ಒಂದುಗೂಡುವಿಕೆಯನ್ನು ನ್ಯೂಕ್ಲಿಯರ್ ಸೇರ್ಪಡೆ[1] ಅಥವ ಬೆಸೆಯುವಿಕೆ ಎಂದು ವಿವರಿಸುತ್ತಾರೆ. ಎರಡು ನ್ಯೂಕ್ಲಿಯೈಗಳು ಒಂದಾಗಿ ಸೇರಿ ಭಾರವಾದ ನ್ಯೂಕ್ಲಿಯಸ್[2] ಆಗುವುದು. ಭಾರವಾದ ನ್ಯೂಕ್ಲಿಯಸ್ ಅದರ ಪೂರ್ವ ಸ್ವರೂಪದ ಎರಡು ಬಿಡಿ ನ್ಯೂಕ್ಲಿಯೈಗಳೆರಡರ ಒಟ್ಟು ತೂಕಕ್ಕಿಂತಲೂ ಕಡಿಮೆಯದ್ದು ಹಗುರಾಗಿರುವುದು. $E=mc^2$ ಸೂತ್ರದ ಪ್ರಕಾರ ಮಾಸ್‌ನಲ್ಲಿರುವ ಬದಲಾವಣೆಯು ಎನರ್ಜಿಯ ರೂಪದಲ್ಲಿ ಪರಿವರ್ತನೆಗೊಳ್ಳುವುದು. ಈ ವಿಧಾನಕ್ಕೆ ಥರ್ಮೋ ನ್ಯೂಕ್ಲಿಯರ್ ಕ್ರಿಯೆ[3] ಎನ್ನುತ್ತಾರೆ. ಅತ್ಯಂತ ಹೆಚ್ಚಿನ ಉಷ್ಣಾಂಶದಲ್ಲಿ ಅಣು ನ್ಯೂಕ್ಲಿಯೈಗಳ ಸೇರ್ಪಡೆಯಾಗುವುದರಿಂದ ಈ ಹೆಸರು ಬಂದಿದೆ. ಹೈಡ್ರೋಜನ್ ಬಾಂಬ್‌ನಲ್ಲಿಯೂ ಇದೇ ರೀತಿಯ ಕ್ರಿಯೆ ನಡೆದು ಆಸ್ಫೋಟನೆಯಲ್ಲಿ ಪರ್ಯಾವಸಾನಗೊಳ್ಳುವುದು. ಒಟ್ಟಿನಲ್ಲಿ ಸೂರ್ಯನ ಒಳಭಾಗದಲ್ಲಿಯೇ ಈ ಕ್ರಿಯೆಯು ನಿರಂತರವಾಗಿ ನಡೆದು ಬರುತ್ತಿದೆ.

ಇದರಿಂದ ಒಂದು ಅಂಶ ಸ್ಪಷ್ಟವಾಗುವುದು. ಹಗುರಾದ ಅಣುನ್ಯೂಕ್ಲಿಯೈಗಳು ಮಾತ್ರ ಹೆಚ್ಚಿನ ಉಷ್ಣಾಂಶದಲ್ಲಿ ಸೇರ್ಪಡೆಗೊಳ್ಳುತ್ತವೆ ಮತ್ತು ಸೇರ್ಪಡೆಗೊಳ್ಳುವ ಅರ್ಹತೆ ಹೊಂದಿವೆ. ಅಣುಗಳಲ್ಲೆಲ್ಲಾ ಅತ್ಯಂತ ಹಗುರವಾದದ್ದು ಹೈಡ್ರೋಜನ್. ಇದು ಸೂರ್ಯನಲ್ಲಿ ವಿಪುಲವಾಗಿದೆ. ಥರ್ಮೋ ನ್ಯೂಕ್ಲಿಯರ್ ಕ್ರಿಯೆಗೆ ಇದು ಇಂಧನವೇ ಎಂಬ ಸಂದೇಹ ಮೂಡುತ್ತದೆ. ಸಂಶೋಧನೆ ಮಾಡಿದ ಫಲವಾಗಿ ಹೈಡ್ರೋಜನ್ ಸೇರ್ಪಡೆಯಾಗಲು ಎರಡು ವಿಧಾನದಿಂದ ಸಾಧ್ಯ ಎಂದು ತಿಳಿದುಬಂತು. ಮೊದಲನೆಯದು ಹೈಡ್ರೋಜನ್‌ನ್ಯೂಕ್ಲಿಯಸ್ ಮತ್ತು ಕಾರ್ಬನ್‌ನ್ಯೂಕ್ಲಿಯಸ್ ಸೇರಿಕೊಂಡು ನೈಟ್ರೋಜನ್‌ನ್ಯೂಕ್ಲಿಯಸ್ ಆಗುವುದು.

ಹೈಡ್ರೋಜನ್ ನ್ಯೂಕ್ಲಿಯಸ್ + ಕಾರ್ಬನ್ ನ್ಯೂಕ್ಲಿಯಸ್ $\rightarrow$ ನೈಟ್ರೋಜನ್ ನ್ಯೂಕ್ಲಿಯಸ್

---

1 Nuclear Fusion
2 Heavy Nucleus
3 Thermo–nuclear action

ಮುಂದೆ ಹಲವು ಬದಲಾವಣೆಗಳಾಗಿ ಈ ನ್ಯೂಕ್ಲಿಯಸ್ ಇನ್ನೂ ಮೂರು ಹೈಡ್ರೋಜನ್ ನ್ಯೂಕ್ಲಿಯಸ್‌ಗಳೊಂದಿಗೆ ಪ್ರತಿಕ್ರಿಯೆಗೊಳಗಾಗಿ ಅಂತ್ಯದಲ್ಲಿ ಇಂಗಾಲ ವಾಗಿ ನಂತರ ಹೀಲಿಯಂ ಉಪವಸ್ತುವಾಗಿ ಹೊರಬರುವುದು.

ನೈಟ್ರೋಜನ್ ನ್ಯೂಕ್ಲಿಯಸ್ + 3 ಹೈಡ್ರೋಜನ್ ನ್ಯೂಕ್ಲಿಯಸ್ → ಕಾರ್ಬನ್ + ಹೀಲಿಯಂ

ಎರಡನೆಯದು —ಒಂದು ಹೈಡ್ರೋಜನ್ ನ್ಯೂಕ್ಲಿಯಸ್ಸು ಮತ್ತೊಂದು ಹೈಡ್ರೋಜನ್ ನ್ಯೂಕ್ಲಿಯಸ್ಸು ಒಂದಿಗೆ ಸೇರಿಕೊಂಡು ಹಲವಾರು ಬದಲಾವಣೆಗಳನ್ನು ಹೊಂದಿ ಅಂತ್ಯದಲ್ಲಿ ಹೀಲಿಯಂ ಮತ್ತು ಮಿಕ್ಕುಳಿ ಪ್ರಮಾಣದಲ್ಲಿ ಹೈಡ್ರೋಜನ್ ಉತ್ಪಾದಿಸುವುದು.

ಹೈಡ್ರೋಜನ್ ನ್ಯೂಕ್ಲಿಯಸ್ಸು + ಹೈಡ್ರೋಜನ್ ನ್ಯೂಕ್ಲಿಯಸ್ಸು → ಹೈಡ್ರೋಜನ್ + ಹೀಲಿಯಂ. ಈ ಕ್ರಿಯೆಗಳ ವಿವರಗಳನ್ನು ಸಂಕೇತದಲ್ಲಿ ವಿವರಿಸಲಾಗಿದೆ.

ಈ ಎರಡು ಕ್ರಿಯೆಗಳಲ್ಲಿಯೂ ಸಹ ಹೈಡ್ರೋಜನ್ ಅನ್ನು ಬಳಸಿಕೊಂಡು ಅಂತ್ಯದಲ್ಲಿ ಹೀಲಿಯಂ ಅನ್ನು ರೂಪಿಸುವುದರ ಜೊತೆಯಲ್ಲಿಯೇ ಅಪಾರವಾದ ಶಕ್ತಿಯೂ ಸಹ ಬಿಡುಗಡೆಯಾಗುವುದು. ಪ್ರತಿ ಒಂದು ಸೆಕೆಂಡಿಗೆ ಸೂರ್ಯ 564 ಮಿಲಿಯನ್ ಟನ್ನುಗಳಷ್ಟು ಹೀಲಿಯಂ ಅನ್ನು ಉತ್ಪಾದಿಸುತ್ತದೆ. ಉಳಿದ 4 ಮಿಲಿಯನ್ ಹೈಡ್ರೋಜನ್ ಮ್ಯಾಟರ್ ಎನರ್ಜಿಯಾಗಿ ಪರಿವರ್ತನೆಯಾಗುವ ಹಾಗೂ ಸೂರ್ಯನ ನಿರಂತರ ಶಕ್ತಿಯ ಮೂಲವನ್ನು ವಿವರಿಸುವುದು.

ಸೂರ್ಯನ ಅಂತ್ಯ

ಸೂರ್ಯಶಕ್ತಿಯು ಹೇಗೆ ಉಗಮಿಸುವುದು ಎಂದು ತಿಳಿದ ವಿಜ್ಞಾನಿಗಳು ಈ ಶಕ್ತಿಯು ಎಷ್ಟು ಕಾಲದವರೆಗೂ ಇರುವುದು ಎಂಬುದನ್ನು ಅಂದಾಜಿಸಿದ್ದಾರೆ. ಎಲ್ಲ ಆಧಾರ ಅಂಕಿಅಂಶಗಳು ಇವತ್ತಿನ ಸ್ಥಿತಿಯಲ್ಲೇ ನಡೆದುಹೋದರೆ ಇನ್ನು 5ರಿಂದ 10 ಬಿಲಿಯನ್ ವರ್ಷಗಳವರೆಗೆ ಮಾತ್ರ ಶಕ್ತಿಯನ್ನು ಉತ್ಪಾದಿಸಲು ಸೂರ್ಯನಲ್ಲಿರುವ ಹೈಡ್ರೋಜನ್‌ಗೆ ಸಾಧ್ಯ. ನಂತರ ಸೂರ್ಯನ ಕೇಂದ್ರದಲ್ಲಿ ನಡೆಯುವ ಥರ್ಮೋ ನ್ಯೂಕ್ಲಿಯರ್ ಕ್ರಿಯೆಗೆ ಉಳಿಯುವುದು ಹೀಲಿಯಂ ಮಾತ್ರ. ಅಪಾರ ಉಷ್ಣದಲ್ಲಿ ಮಾತ್ರ ಹೀಲಿಯಂ ಸೇರುವ ಕ್ರಿಯೆಗೆ ಒಳಗಾಗುವುದು. ಹೀಗಾಗಿ ಸೂರ್ಯ ಅತಿಯಾದ ಉಷ್ಣದಿಂದ ಬೆಳೆಯುತ್ತಾನೆ. ಈಗಿರುವ ಗಾತ್ರದಕ್ಕಿಂತಲೂ ಹಲವು ಪಟ್ಟು ಹಿಗ್ಗುತ್ತಾನೆ. ಅಷ್ಟರಮಟ್ಟಿಗೆಂದರೆ ಸೂರ್ಯನ ಹೊ... ಅದು ಪ್ರಸ್ತುತ ಸ್ಥಾನದಲ್ಲಿರುವ ಭೂಮಿಯನ್ನೇ ನುಂಗಬಹುದು. ಹೀಗೆ ಅ... ಗ್ರಹ ಉಪಗ್ರಹಗಳೂ ಸಹ ಸೂರ್ಯನಿಗೆ ತುತ್ತಾಗುತ್ತವೆ. ಅಂತಿಮವಾಗಿ ಅಸ್ತ್ಯ...

ಮಾನದಂಡದ ಸೂರ್ಯ ಅಳತೆಯ ಗುರುತ್ವಾಕರ್ಷಣೆಯ ಸಾಂದ್ರತೆಯು—1/20 ಇಷ್ಟಾಗುತ್ತದೆ. ದುರ್ಬಲವಾದ ಬೆಳಕನ್ನು ಬೀರುವ ನಕ್ಷತ್ರವನ್ನು ನೋಡಬಹುದು. ಇನ್ನೊಂದು ಅಳತೆಯ ಭೂಮಿಯೇನಾದರೂ ಇದ್ದರೆ ಅದು ಕತ್ತಲಲ್ಲಿ ಸದಾ ಗಡ್ಡೆ ಕಟ್ಟಿರುತ್ತದೆ.

ಸೂರ್ಯನ ಅಪಾಯವು ಮತ್ತೊಂದು ರೀತಿಯಲ್ಲಿಯೂ ಸಾಧ್ಯ. ಸೂರ್ಯ ಇದ್ದಕ್ಕಿದ್ದಂತೆ ನೋವಾ ಆಗುವುದು ಅಥವಾ ಆಸ್ಫೋಟನ ನಕ್ಷತ್ರವಾಗುವುದು. ಖಗೋಳಜ್ಞರು ಸೂರ್ಯನಿಗಿಂತ ನಕ್ಷತ್ರಗಳು ಸಾವಿರಪಟ್ಟು ಬೆಳಗಾಗಿ ಕಾಂತಿಯುತ ಬೆಳಗುವುದನ್ನು ಕಾಣುವರು. ಅಂತಹ ಸ್ವಭಾವದ ನಕ್ಷತ್ರಗಳನ್ನು ನೋವಾ (ನೂತನ ತಾರೆ) ಗಳೆನ್ನುವರು.

ಇದ್ದಕ್ಕಿದ್ದಂತೆಯೇ ಸ್ಫೋಟವಾಗಲು ಕಾರಣವೇನು ಎನ್ನುವುದು ಯಾರಿಗೂ ಸ್ಪಷ್ಟವಾಗಿಲ್ಲ. ಒಂದುವೇಳೆ ಸೂರ್ಯನೇನಾದರೂ ನೋವಾ ಆದಲ್ಲಿ ಭೂಮಿಯು ನಿರ್ನಾಮ ಆಗುತ್ತದೆ. ನಮ್ಮ ಗ್ಯಾಲಕ್ಸಿಯಲ್ಲಿರುವ ಹಲವು ಬಿಲಿಯನ್ ನಕ್ಷತ್ರಗಳಲ್ಲಿ ಕೆಲವು ನೋವಾಗಳನ್ನು ಪತ್ತೆಹಚ್ಚಿದ್ದಾರೆ. ಆದರೆ ಸೂರ್ಯನಂತಿರುವ ಅವು ಆಸ್ಫೋಟಗೊಳ್ಳುವ ಸಂಭವ ತೀರಾ ಕಡಿಮೆ.

ಬೆಡಗಿನ ವಚನ

ಎಚ್. ವಿ. ವೀರಭದ್ರಯ್ಯ

ವಚನಸಾಹಿತ್ಯ ಕನ್ನಡ ಭಾಷೆಯ ಕಸುವನ್ನು ಮೈಗೂಡಿಸಿಕೊಂಡು ಸಶಕ್ತವಾಗಿ ಅಭಿವ್ಯಕ್ತಗೊಂಡ ಕನ್ನಡ ಸಾಹಿತ್ಯದ ಒಂದು ಪ್ರಮುಖ ರೂಪ. ಸರಳ ಜೀವನ. ಉನ್ನತ ಚಿಂತನ ವಚನಗಳಲ್ಲಿ ವ್ಯಕ್ತವಾಗಿದೆ. ವಚನಗಳಲ್ಲಿ ಸರಳ ವಚನಗಳು. ಬೆಡಗಿನ ವಚನಗಳು ಎಂಬ ಎರಡು ರೂಪಗಳನ್ನು ಕಾಣುತ್ತೇವೆ. 'ಬೆಡಗು' ಎಂಬ ಮಾತಿಗೆ ಕಿಟ್ಟೆಲ್ ಶಬ್ದಕೋಶದಲ್ಲಿ Novelty, Beauty, Grace, Wonder, Fineness ಎಂಬುದಾಗಿ ಅರ್ಥವನ್ನು ಕೊಟ್ಟಿದೆಯಲ್ಲದೆ 'ಒನ್ದು ಶಬ್ದಕ್ಕೆ ಪಲವರ್ಥಮಂ ಪಲವರ್ಥಕೊನ್ದು ಶಬ್ದವ ನುಡಿವ ಬೆಡಗುಮಂ ನಾನಾರ್ಥಮೆನ್ದು ಪೇೞ್ವಂ' ಎಂಬ ಮಂಗರಾಜನ ಶಬ್ದಕೋಶದ ವಿವರಣೆಯನ್ನು ನೀಡಿ, "ಬಾಚಿಗೆ ಕಡಗು. ಸೂಳೆಗೆ ಬೆಡಗು". "ಬೆಡಗು ಮಾಡುವಾಕೆ ಮಡಗಿ ಬೀಡದೆ ಇರಳು" ಎಂಬ ಗಾದೆಗಳನ್ನು ಉದಾಹರಿಸಿದೆ. ಇತ್ತೀಚಿನ ಶಬ್ದಕೋಶವಾದ ಡಾ॥ ಶಿವರಾಮ ಕಾರಂತರ "ಸಿರಿಗನ್ನಡ ಅರ್ಥ ಕೋಶ" ದಲ್ಲಿ 'ಬೆಡಗು' ಎನ್ನುವುದಕ್ಕೆ ಸೌಂದರ್ಯ. ವಿಲಾಸ. ಒಯ್ಯಾರ. ಸೊಬಗು. ತೋರಿಕೆ. ಜಂಬ ಎನ್ನುವ ಅರ್ಥಗಳನ್ನು ಕೊಟ್ಟಿದೆ. ಬೆಡಗು ಎನ್ನುವ ಮಾತು ಜಾತಿಸೂಚಕವಾಗಿಯೂ ವ್ಯವಹಾರದಲ್ಲಿರುವುದನ್ನು ಕಾಣಬಹುದು. ಕುರುಬಜಾತಿಯಲ್ಲಿ 'ಅರಿಣೆ ಬೆಡಗು' 'ಬಾಸಿಂಗದ ಬೆಡಗು' ಎಂಬ ಉಪಜಾತಿಗಳನ್ನು (sub-sects) ಮಾಡಿಕೊಂಡಿರುವುದನ್ನು ಇಲ್ಲಿ ಗಮನಿಸಬಹುದು.

'ಬೆಡಂಗು' ಎನ್ನುವ ಶಬ್ದವನ್ನು 9 ನೆಯ ಶತಮಾನದ ಕನ್ನಡದ ಮೊಟ್ಟಮೊದಲ ಉಪಲಬ್ಧ ಗ್ರಂಥವಾದ "ಕವಿರಾಜಮಾರ್ಗ"ದಲ್ಲಿ ಉಲ್ಲೇಖಿಸಲಾಗಿದೆ. ಕನ್ನಡದ ಕಾವ್ಯ ಜಾತಿಗಳಾದ ಚತ್ತಾಣ ಬೆದಂಡೆಗಳನ್ನು ವಿವರಿಸುವಾಗ:

ಕಂದಮುಮಮಳಿನ ವೃತ್ತಮು
ಮೊಂದೊಂದೆಡೆಗೊಂ(ಡು) ಜಾತಿ ಜಾಣಸೆಯ ಬೆಡಂ
ಗೊಂದಿವಜಿೂಳಿಮರೆ ಪೇವಿಳ್
ಸುಂದರ ರೂಪಾ ಬೆದಂಡೆ ಗಬ್ಬದಾದಕ್ಕುಂ (ಕ.ರಾ.ಮಾ. ಪದ್ಯ 34)

ಕವಿರಾಜಮಾರ್ಗಕಾರ 'ಬೆಡಂಗು' ಎಂಬುದನ್ನು ಸೌಂದರ್ಯ ಎಂಬರ್ಥದಲ್ಲಿ ಬಳಸಿರುವುದನ್ನು ಈ ಪದ್ಯದ ಪರಿಶೀಲನದಿಂದ ತಿಳಿಯಬಹುದು. ಆದಿಕವಿ ಪಂಪನೂ

ತನ್ನ ಧಾರ್ಮಿಕ ಕೃತಿಯಾದ "ಆದಿಪುರಾಣ"ದಲ್ಲಿ ಪುಷ್ಪೋದ್ಯಾನವನ್ನು ವರ್ಣಿಸುವಾಗ ಲಲನೆಯರು ಮಾವಿನ ಮರವೊಂದನ್ನು ತಬ್ಬಿಕೊಂಡು ಉದ್ಗಾರವೆತ್ತುತ್ತಾ 'ತಳಿರೋಳ್ ನೀನೆ ಬೆಡಂಗನಾಯ್' ಎಂಬಲ್ಲಿಯೂ ಮಾವಿನ ಮರದ ಸೌಂದರ್ಯವನ್ನೇ ಕುರಿತಾಡಿರುವುದನ್ನು ಕಾಣುತ್ತೇವೆ. ರತ್ನಾಕರವರ್ಣಿ ತನ್ನ "ಭರತೇಶ ವೈಭವ"ದಲ್ಲಿ ಭರತೇಶನ ಆಸ್ಥಾನ ವೈಭವವನ್ನು ವರ್ಣಿಸುವಾಗ:

ಸಿಂಗರಿಸಿದ ರಝಲ್ಲಿ ಪಟ್ಟೆ ಪೂಮಾಲೆ ಬೆ–1
ಡಂಗಾದ ಮಂಟಪದಲ್ಲಿ !
ಶೃಂಗಾರವನದೊಳು ಮೆಱೆವ ವಸಂತ ರಾ
ಜಂಗೆಣೆಯಾದನಾ ಸೊಬಗ ॥

—ಎಂದು 'ಬೆಡಂಗು' ಎನ್ನುವ ಶಬ್ದವನ್ನು ಸೌಂದರ್ಯ ಎಂಬರ್ಥದಲ್ಲಿ ಪ್ರಚುರಗೊಳಿಸಿದ್ದಾನೆ.

'ಬೆಡಗು' ಎಂಬುದನ್ನು 'ಒಗಟು' ಎಂದು ಕರೆದಿರುವುದುಂಟು. 'ಒಗಟು' ಎಂದರೆ ಸಮಸ್ಯೆ, ಒಡಪು ಎಂಬರ್ಥಗಳು "ಸಿರಿಗನ್ನಡ ಅರ್ಥಕೋಶ" ದಲ್ಲಿವೆ. "ಒಗಟು" ಎನ್ನುವುದಕ್ಕೆ ಪರ್ಯಾಯ ಪದ 'ಮುಂಡಿಗೆ' ಎಂದು. ಇದು ಸಂಸ್ಕೃತದ 'ಮುಂಡಕ' ಶಬ್ದದಿಂದ ಬಂದದ್ದು. ಅರ್ಥ ಒಗಟು, ಸಮಸ್ಯೆ ಎಂದು. ಪದಾರ್ಥಾಂತರದಿಂದ ಒಂದು ವಸ್ತುವನ್ನು ವರ್ಣಿಸಿ ಚಮತ್ಕಾರ ಜನ್ಯ ಆನಂದವನ್ನುಂಟುಮಾಡುವುದು.[1] ಒಗಟು ಅಥವಾ ಬೆಡಗು ಬುದ್ಧಿ ಜನ್ಯವಾದುದಾದರೂ ಭಾವಗರ್ಭಿತವೂ ಆಗಿರುವುದುಂಟು ವಾಚ್ಯಕ್ಕಿಂತಲೂ ಸೂಚ್ಯದಲ್ಲಿಯೇ ಸೌಂದರ್ಯ ಹೆಚ್ಚು. ಒಗಟು ಅಥವಾ ಬೆಡಗು ಸೂಚ್ಯಾರ್ಥವುಳ್ಳದ್ದಾಗಿ ಭಾವ. ಅರ್ಥದ, ಪರಿಧಿಗಳನ್ನು ಹಿಗ್ಗಿಸುತ್ತಾ ವಿಸ್ತೃತಗೊಂಡು ಆನಂದದಾಯಕವಾಗುತ್ತದೆ. ಬೆಡಗು ಬುದ್ಧಿ ಭಾವಗಳ ವಿದ್ಯುದಾಲಿಂಗನದ ಫಲ. ಕಾವ್ಯ ಮೀಮಾಂಸೆಯ ಪರಿಭಾಷೆಯಲ್ಲಿ ಹೇಳುವುದಾದರೆ ಬೆಡಗು "ನಾರೀಕೇಳಪಾಕ".

ಗಾದೆ, ಒಗಟು – ಬೆಡಗು ಜಾನಪದ ಸಾಹಿತ್ಯದಲ್ಲಿ ಕಾಣುವ ಪ್ರಭೇದಗಳು, ಜನಪದವ ಕನ್ನೆ ನೆಲದಲ್ಲಿ ಬೇರುಬಿಟ್ಟ ಅನುಭವ ಸುಂದರವಾಗಿ ಅರಳಿರುವುದನ್ನು ಅಲ್ಲಿ ಕಾಣುತ್ತೇವೆ. ಅಲ್ಲಿ ಬೇರು ಜನವಾಣಿ, ಹೂವೂ ಜನವಾಣಿ. ಬದುಕನ್ನು ಕಾವ್ಯ ಯೋಗವೆಂದು ತಿಳಿದ ಜನಪದ ಕವಿಗಳ ವಚನಕಾರರ ಕೃತಿಗಳಲ್ಲಿ ಸಮಾನ ಮನೋಧರ್ಮ ಅಭಿವ್ಯಕ್ತಗೊಂಡಿದೆ. "ವಚನ ಸಾಹಿತ್ಯ ಮತ್ತು ಜಾನಪದ ಸಾಹಿತ್ಯ ಅಭಿನ್ನವೆನ್ನಬಹುದು. ಜೀವನ ಮೌಲ್ಯಗಳಲ್ಲಿ ಪ್ರೇರಣೆ ಅಭಿವ್ಯಕ್ತಿಗಳಲ್ಲಿ ಭಾಷೆಯ ಬಳಕೆಯಲ್ಲಿ ವಚನಕಾರರಿಗೂ ಜನಪದ ಕವಿಗಳಿಗೂ ಅಂತರವಿಲ್ಲ".[2] ಜನಪದ ಕವಿಗಳು ಉದ್ದೇಶ

---

1 ಸುಧಾಕರ: ಕನ್ನಡ ಒಗಟುಗಳು—"ಹೊನ್ನಬಿತ್ತೇವು ಹೊಲಕೆಲ್ಲ". ಪುಟ. 243

2 ಸಿ. ಪಿ. ಕೆ. : ಜಾನಪದ ಪ್ರತಿಭೆ

ಬಿಂಬಿಸಿಕೊಂಡು ಬರೆದವರಲ್ಲ. ವಚನಕಾರರಿಗಾದರೋ ಧರ್ಮ ತತ್ವಗಳನ್ನು ಜನ ಸಾಮಾನ್ಯರಿಗೆ ತಿಳಿಯಾದ ಮಾತುಗಳಲ್ಲಿ ತಿಳಿಯ ಹೇಳಬೇಕೆಂಬ ಉದ್ದೇಶವಾದರೂ ಇತ್ತು. ಜನಪದ ಕವಿಗಳಲ್ಲಿ ಕಾಣಬಂದ ಅನೇಕ ಪ್ರೇರಣೆ ಅಭಿವ್ಯಕ್ತಿಯ ಮಾಧ್ಯಮಗಳು ವಚನ ಸಾಹಿತ್ಯದಲ್ಲಿ ಕಾಣಿಸಿಕೊಂಡಿರುವುದನ್ನು ಪರಿಶೀಲಿಸಿದಾಗ ಜನಪದ ಸಾಹಿತ್ಯದ ಪ್ರಭಾವ ವಚನಸಾಹಿತ್ಯದ ಮೇಲಾಗಿರಬಹುದು ಎಂದು ಊಹಿಸಿದರೆ ತಪ್ಪಾಗಲಾರದು.

ಜನಪದ ಸಾಹಿತ್ಯದಲ್ಲಿ ಬೆಡಗುಗಳು ಹೇಗೆ ಬರುತ್ತವೆ? ಅವುಗಳ ಕೆಲಸವೇನು ಅದರಿಂದಾಗುವ ಪ್ರಯೋಜನವೇನು? ಎಂಬುವನ್ನು ಒಂದು ಉದಾಹರಣೆಯ ಮೂಲಕ ನೋಡಬಹುದು.

ತೊಟ್ಟುಂಟು ಮುಳ್ಳಿಲ್ಲ ಸುತ್ತಲೆಲೆಯಿಲ್ಲ
ಮುಟ್ಟಿದರೆ ಮೃದುವುಂಟು ಹಣ್ಣು ತಾನಲ್ಲ
ನೆಟ್ಟನೇ ಮೆಲಬಹುದು ಕೊಯ್ಯಲಳವಲ್ಲ
ಸೃಷ್ಟಿಯೊಳ್ ಈ ಬೆಡಗ ಶಿವ ತಾನೇ ಬಲ್ಲ ॥

ಈ ಬೆಡಗಿನಲ್ಲಿ ಮೇಲುನೋಟಕ್ಕೆ ಕಾಣಿಸುವುದು ಯಾವುದೋ ಒಂದು ಹಣ್ಣಿನ ಚಿತ್ರ. ಆದರೆ ಅದರ ಪರಿಚಯ ಸ್ಪಷ್ಟವಾಗುವುದಿಲ್ಲ. ತೊಟ್ಟು, ಮುಳ್ಳು, ಎಲೆ, ಮುಟ್ಟು, ಮೃದು, ಹಣ್ಣು, ಮೆಲುವುದು, ಕೊಯ್ಯುವುದು ಮುಂತಾದ ಶಬ್ದಗಳಿಂದ ವಿರೋಧಾಭಾಸವನ್ನು ತಂದು ತನ್ಮುಖೇನ ಬೆಡಗಿನ ಅರ್ಥವನ್ನು ದೀಪ್ತಗೊಳಿಸುವತ್ತ ಪ್ರಯತ್ನ ಸಾಗಿದೆ. ಅದು "ತಾಯಮೊಲೆ" ಎಂದು ಹೊಳೆದಾಗ ಚಮತ್ಕಾರಜನ್ಯವಾದ ಸಂತೋಷವುಂಟಾಗಿ ಬುದ್ಧಿಯನ್ನು ಹಿಮ್ಮುಖವಾಗಿ ಪಯಣ ಬೆಳೆಸಲು ಪ್ರಚೋದಿಸಿ ಆ ಪ್ರಯತ್ನದಲ್ಲಿ ಭಾವಪರಿಧಿಯನ್ನು ಹಿಗ್ಗಿಸುತ್ತಾ ಆನಂದವನ್ನುಂಟುಮಾಡುತ್ತದೆ.

ಬೆಡಗಿನ ಈ ತಂತ್ರ ಕೇವಲ ಜನಪದ ಸಾಹಿತ್ಯಕ್ಕೇ ಸೀಮಿತವಾಗಿಲ್ಲ. ಪ್ರೌಢ ಸಾಹಿತ್ಯದಲ್ಲಿಯೂ ಅದರ ಕೃಷಿ ನಡೆದಿದೆ. ಪ್ರತಿಭಾವಂತನಾದ ಕುಮಾರವ್ಯಾಸ ಮಹಾಕವಿಯು ಭಾರತದಲ್ಲಿ ಕಾಣುವ ಈ ಪದ್ಯವನ್ನು ಲಕ್ಷಿಸಬಹುದು:

ವೇದಪುರುಷನ ಸುತನ ಸುತನ ಸ-
ಹೋದರನ ಮೊಮ್ಮಗನ ಮಗನ ತ-
ಳೋದರಿಯ ಮಾತುಳನ ಮಾವನತುಳಭುಜಬಲದಿ
ಕಾದಿ ಗೆಲಿದನನಣ್ಣನವ್ವೆಯ
ನಾದಿನಿಯ ಜಠರದಲಿ ಜನಿಸಿದ
ನಾದಿ ಮೂರುತಿ ಸಲಹೊ ಗದುಗಿನ ವೀರನಾರಾಯಣ ॥

ಈ ಪದ್ಯ ವೀರನಾರಾಯಣನನ್ನು ಕುರಿತದ್ದಾಗಿದೆ. ಆ ವೀರನಾರಾಯಣ ಯಾರು ಎಂಬುದನ್ನು ಗುಂಫಿತವಾದ ಸಂಬಂಧಗಳಿಂದ ನಿರೂಪಿಸಿದೆ. ಪದ್ಯ ಓದಿದಾಗ ಕುತೂಹಲ

ಕೇಳುತ್ತದೆ. ವೇದಪುರುಷನಾರು? ಆತನ ಸುತನಾರು? ಅವನ ಸುತನಾರು? ಇತ್ಯಾದಿ. "ಅದಕ್ಕೆ ನಾರಾಯಣನ ಸುತನಾದ ಬ್ರಹ್ಮನ, ಅವನ ಮಗನಾದ ನಾರದನ, ಅವನ ತಮ್ಮನಾದ ಮರೀಚಿಯ, ಮೊಮ್ಮಗನಾದ ಇಂದ್ರನ, ಮಗನಾದ ಅರ್ಜುನನ ವಧುವಾದ ಸುಭದ್ರೆಯ ಸೋದರಮಾವನಾದ ಕಂಸನ ಮಾವನಾದ ಜರಾಸಂಧನನ್ನು ಅತ್ಯಂತ ಶೌರ್ಯದಿಂದ ಕಾದಿ ವಿಜಯ ಸಂಪಾದಿಸಿದ ಭೀಮನ ಅಣ್ಣನಾದ ಧರ್ಮರಾಯನ, ತಾಯಿಯಾದ ಕುಂತಿಯ ನಾದಿನಿಯಾದ ದೇವಕಿಯ ಗರ್ಭದಲ್ಲಿ ಹುಟ್ಟಿದ ಅನಾದಿ ಮೂರುತಿಯಾದ ಗದುಗಿನ ವೀರನಾರಾಯಣನೇ ರಕ್ಷಿಸು"[3] ಎಂದು ಅರ್ಥವಾಗುತ್ತದೆ. ಇಲ್ಲೆಲ್ಲಾ ನಡೆದಿರುವುದು ಕೇವಲ ಬುದ್ಧಿಯ ಕಸರತ್ತು, ಕೂತು ಕಟ್ಟಿದ್ದು ಪ್ರತಿಭೆಗಿಂತಲೂ ಪಾಂಡಿತ್ಯದ ಪ್ರದರ್ಶನವನ್ನು ಇಲ್ಲಿ ಕಾಣುತ್ತೇವೆ.

ಕುತೂಹಲ ವ್ಯಕ್ತಿತ್ವದ ವಿಕಾಸಕ್ಕೆ ಮನಸ್ಸಿನಲ್ಲಿ ಮೂಡುವ ಅನೇಕ ಭಾವನೆಗಳಿಗೆ ಆಲೋಚನೆಗಳಿಗೆ ಮೂಲಬಂಡವಾಳ. ಇದು ಏಕೆ ಹೀಗೆ ಇದಕ್ಕೂ ತನಗೂ ಯಾವ ಸಂಬಂಧ ಎನ್ನುವಂಥ ಕುತೂಹಲ ಬಾಲ್ಯದಿಂದಲೂ ವ್ಯಕ್ತಿಯ ಮನಸ್ಸಿನಲ್ಲಿ ಮೂಡುವ ಸಹಜ ಪ್ರವೃತ್ತಿ. ಆಧುನಿಕ ಕನ್ನಡ ಕವಿಗಳಲ್ಲಿ ಪ್ರಮುಖರಲ್ಲಿ ಒಬ್ಬರಾದ ಪು. ತಿ. ನ. ರವರ

"ಈ ಹೊರಜಗಕೂ ನನ್ನ ಒಳ ಮುದಕೂ
ಏತರ ನಂಟೆಂತದಕೂ ಇದಕೂ"

ಎಂಬ ಸಾಲುಗಳನ್ನು ಕಂಡಾಗ ಕುತೂಹಲವೆಂಬುದು ಬೆಳವಣಿಗೆಗೆ ಸಾಧನವೂ ಹೌದೆಂಬುದಲ್ಲದೆ ವ್ಯಕ್ತಿ ವಿಶಿಷ್ಟವೂ ಹೌದೆಂಬುದನ್ನು ಒಪ್ಪಬೇಕಾಗುತ್ತದೆ. ಏಕೆಂದರೆ ಪು. ತಿ. ನ. ರವರ ಅನೇಕ ಕವನಗಳಲ್ಲಿ ಈ ಕುತೂಹಲ ಬಗೆ ಬಗೆಯಾಗಿ ಅಭಿವ್ಯಕ್ತವಾಗಿರುವುದನ್ನು ಗಮನಿಸಿದಾಗ 'ವ್ಯಕ್ತಿವಿಶಿಷ್ಟ' ವೆಂದು ಅನ್ನಿಸದಿರದು.

ವಚನ ಸಾಹಿತ್ಯದಲ್ಲಿಯೂ 'ಬೆಡಗು' ಎಂಬುದು ಸೌಂದರ್ಯ ಎಂಬರ್ಥದಲ್ಲಿ ಬಳಕೆಯಾಗಿರುವುದು ಪರಿಶೀಲನೆಯಿಂದ ವ್ಯಕ್ತವಾಗುವ ಅಂಶ. ವಚನ ಸಾಹಿತ್ಯದಲ್ಲಿ ಬೆಡಗಿನ ವಚನಗಳದೇ ಒಂದು ವಿಶಿಷ್ಟ ಪ್ರಕಾರ. ಬೆಡಗಿನ ವಚನವೆಂಬುದಕ್ಕೆ ಕಿಟಲ್ ಶಬ್ದಕೋಶದಲ್ಲಿ "Riddle—like vacana" ಎಂದಿದೆ. ಬೆಡಗಿನ ವಚನಗಳ ಮುಖ್ಯ ಉದ್ದೇಶವಾದರೂ ಕುತೂಹಲದ ಮುಖೇನ ಅರ್ಥವನ್ನು ಪ್ರಚುರಪಡಿಸುವುದು. ಅದರ ಕೆಲಸ ಮಾನಸಿಕವಾದುದು. ಬೌದ್ಧಿಕವಾದುದು. ಅಂತರಂಗದ ಅನುಸಂಧಾನಕ್ಕೆ ಪ್ರೇರಕವಾದುದು.

---

3. ಸಂ.ಗೋ. ಬಂದೂರಾಯರು—ಭಾರತಸಾರೋದ್ಧಾರ. ಪು. 1-2.

"ಎತ್ತಣ ಮಾಮರ ಎತ್ತಣ ಕೋಗಿಲೆ
ಎತ್ತಣಿಂದೆತ್ತ ಸಂಬಂಧವಯ್ಯಾ"

ಎನ್ನುವಲ್ಲಿ ಆ ಕುತೂಹಲ ಮೂರ್ತರೂಪ ತಾಳಿರುವುದನ್ನು ಕಂಡಾಗ ಬೆಡಗಿನ ಬೆಡಗಿಗೆ ಸೋಜಿಗಗೊಳ್ಳುತ್ತೇವೆ.

ಬೆಡಗಿನ ವಚನ ಎಂಬುದು ವಚನ ಸಾಹಿತ್ಯದಲ್ಲಿ ಕಾಣಿಸಿಕೊಂಡ ಒಂದು ಬಗೆ. "ಬೆಡಗಿನ ವಚನಗಳಲ್ಲಿ ಹಲವಾರು ಪ್ರಭೇದಗಳಿವೆ. ವಿರೋಧಾಭಾಸವೇ ಅವೆಲ್ಲಕ್ಕೂ ಜೀವಾಳ. ಪ್ರಕೃತಿಗೆ, ಸಮಾಜಕ್ಕೆ, ಸಂಪ್ರದಾಯಕ್ಕೆ ವಿರುದ್ಧವೆಂಬಂಥ ಗೌಣವಾದ ಅರ್ಥ ಬರುವ ಮಾತುಗಳನ್ನಾಡಿ ಅದಕ್ಕೆ ಬಳಸಿರುವ ಪದಗಳಿಗೆ ಬೇರೆ ಒಂದು ಮುಖ್ಯ ವಾದ ಅಂತರಾರ್ಥವು ಬರುವಂತಾಗಿಸುವುದೇ ಇವುಗಳ ಮುಖ್ಯ ತಂತ್ರ. ಇಂಥ ಪದಗಳಿಗಿರುವ ಅಂತರಾರ್ಥ ಅಥವಾ ಸಾಂಕೇತಿಕ ಪದಗಳಿಗಿರುವ ಪ್ರತ್ಯೇಕವಾದ ನಿಯತಾರ್ಥವು ಆಕಸ್ಮಿಕವಾದುದಲ್ಲ. ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಯಿಸುವ ಸ್ವಚ್ಛಂದ ರೀತಿಯದಲ್ಲ. ಈ ಬೆಡಗಿನ ಸಂಪ್ರದಾಯವು ಅನೂಚಾನವಾದುದು ಮತ್ತು ಯುಕ್ತಾ ಯುಕ್ತವೂ ರೂಪಕ ಮೂಲವೂ ಆದುದು"[4] ಅಂದರೆ ಬೆಡಗಿನ ವಚನಗಳಲ್ಲಿ ಎದ್ದು ಕಾಣುವ ಅಂಶ ಅಸಂಗತ ವಿಷಯಗಳಿಂದ ಸಾಂಗತ್ಯವನ್ನುಂಟುಮಾಡುವುದು. ಹೇಳುವ ಮಾತಿಗೂ ಪ್ರಚುರವಾಗುವ ಅರ್ಥಕ್ಕೂ ದೀಪ್ತವಾಗುವ ಭಾವಕ್ಕೂ ಸಂಬಂಧವಿಲ್ಲ ವೆಂಬಂತೆ ಕಂಡು ಅನಂತರ ಬುದ್ಧಿ ಭಾವಗಳ ಸರ್ಕಸ್ಸು ನಡೆದು ಸುಂದರ ಪ್ರತಿಮೆ ಹೊಳೆಯುವುದು. ಬೆಡಗಿನ ವಚನಗಳ "ಈ ಸಂಪ್ರದಾಯದ ಉದ್ದೇಶವು ಸಹಜ ಪ್ರವೃತ್ತಿಗೆ ಅನುಗುಣವಾದುದು. ಕುತೂಹಲವನ್ನು ಕೆರಳಿಸಲು ಅದ್ಭುತವನ್ನೋ, ಅತಿ ಶಯವನ್ನೋ, ವಿರೋಧಾಭಾಸವನ್ನೋ. ಅರ್ಥಾಂತರತೆಯನ್ನೋ ಅನುಸರಿಸುವುದು ಮಾನವನ ಸಂಸ್ಕೃತಿಚರಿತ್ರೆಯಲ್ಲಿ ಬಹಳ ಪುರಾತನ ತಂತ್ರ. ಕುತೂಹಲದಿಂದ ಜನತೆಯ ಮನಸ್ಸನ್ನು ಆಕರ್ಷಿಸಿ ಏಕಾಗ್ರವಾಗಿಸಿ ಆಗ ಅದರ ಮೂಲಕ ಮಹಾತತ್ತ್ವ ವೊಂದರ ಆವಿಷ್ಕಾರವಾಗುವಂತೆ ಮಾಡಿದರೆ ಆದ ಅನುಭವವು ಸಾಕ್ಷಾತ್ಕಾರವಾದಷ್ಟು ದಿವ್ಯಸ್ಥಿತಿಗೇರಿ ಆ ವ್ಯಕ್ತಿಯನ್ನು ದಿವ್ಯತೆಗೇರಿಸುವುದು".[5] ಸಹಜ ಪ್ರವೃತ್ತಿಯಾದ ಈ ಕುತೂಹಲ ವಚನ ಸಾಹಿತ್ಯದಲ್ಲಿ ಸಹಜ ಸುಂದರವಾಗಿ ಮೂಡಿರುವುದನ್ನು ಯಾರೂ ಕಾಣಬಹುದು. ವಚನ ಸಾಹಿತ್ಯದ ಅಧ್ಯಯನದಿಂದ ಬೆಡಗು ಬರಿ ಬುದ್ಧಿಜನ್ಯವಾದು ದಲ್ಲ. ಅದು ಪ್ರತಿಭಾಜನ್ಯವೂ ಸಹ ಎಂಬುದನ್ನು ಮನಗಾಣಬಹುದು. ಬೆಡಗಿನ ವಚನಗಳಲ್ಲಿ ಕುತೂಹಲ ಕೊನರಿದೆ. ಫಲಕೊಟ್ಟಿದೆ.

---

4 ಎಲ್. ಬಸವರಾಜು: ಅಲ್ಲಮನ ವಚನ ಚಂದ್ರಿಕೆ. ಪುಟ. 16

5 ಎಲ್. ಬಸವರಾಜು: ಅಲ್ಲಮನ ವಚನ ಚಂದ್ರಿಕೆ. ಪುಟ. 17

ಬೆಡಗಿನ ವಚನಗಳಲ್ಲಿ ಹೆಚ್ಚಿನ ಕೃಷಿ ಮಾಡಿರುವವರು ಅಲ್ಲಮ ಪ್ರಭುಗಳು. ಅವರ ಈ ಒಂದು ವಚನದ ಅಭ್ಯಾಸದಿಂದ ಬೆಡಗಿನ ವಚನದ ವೈಶಿಷ್ಟ್ಯವನ್ನು ಅರಿಯಬಹುದು.

ಕೋಣನ ಕೊಂಬಿನ ತುದಿಯಲ್ಲಿ
ಏಳನೂಱೆಪ್ಪತ್ತು ಸೇದೆಯಭಾವಿ
ಭಾವಿಯೊಳಗೊಂದು ಬಗರಿಗೆ
ಬಗರಿಯೊಳಗೊಬ್ಬ ಸೂಳೆ ನೋಡಯ್ಯಾ
ಆ ಸೂಳೆಯ ಕೊರಳಲ್ಲಿ ಏಳುನೂಱೆಪ್ಪತ್ತಾನೆ
ನೇಱಿತ್ತ ಕಂಡೆ ಗುಹೇಶ್ವರ ॥

ಈ ವಚನದ ತಲೆ ಬುಡವೇ ಗೊತ್ತಾಗುವುದಿಲ್ಲ ಮೇಲುನೋಟಕ್ಕೆ. ಒಂದಕ್ಕೊಂದು ಸಂಬಂಧವೇ ಹೊಂದುವುದಿಲ್ಲವಲ್ಲ ಎನ್ನುವಂತಿವೆ ಬಳಸಿರುವ ಪದಗಳು. ಕೋಣ, ಕೊಂಬು. ಸೇದೆಯ ಭಾವಿ. ಬಗರಿಗೆ. ಸೂಳೆ – ಎಲ್ಲ ಅಸಂಗತವೆನ್ನಿಸುವಂತೆ ಪ್ರಯೋಗವಾಗಿವೆ. ಸಾಂಗತ್ಯ ಸಾಮರಸ್ಯ ಕಾಣಲಿಕ್ಕೇ ಆಗದು ಎಂಬಂತೆ ವ್ಯಕ್ತವಾಗಿದೆ. ಬೆಡಗಿನ ವಚನಗಳಲ್ಲಿ "ಬೆಡಗಿನ ಪ್ರತಿಯೊಂದು ಪದಕ್ಕೂ ಒಂದು ವಿಶಿಷ್ಟವಾದ ಅರ್ಥವಿದೆ[6] ಎಂಬುದನ್ನು ಗಮನಿಸಬೇಕು.

ವಚನದಲ್ಲಿ ಬಂದಿರುವ ಕೋಣ, ಕೊಂಬು. ಬಗರಿಗೆ. ಸೂಳೆ ಈ ಶಬ್ದಗಳಿಗೆ ವಿಶಿಷ್ಟವಾದ ಅರ್ಥವೇ ಪ್ರಚುರವಾಗುತ್ತದೆ. ಕೋಣ ಅಜ್ಞಾನಿಯ ಸಂಕೇತ. ವ್ಯವಹಾರದಲ್ಲಿ ಈ ಮಾತಿನ ಬಳಕೆ ಇದೆ. ದಡ್ಡನನ್ನು ಕೋಣನಿಗೆ ಹೋಲಿಸಿ ಮಾತನಾಡುವುದು ವಾಡಿಕೆಯಲ್ಲಿರುವ ಸಂಗತಿ. 'ಅವನೊಂದು ಕೋಣ' ಎಂದಾಗ ಏನೂ ತಿಳಿಯದವನು ಎನ್ನುವುದಲ್ಲದೆ ಗರ್ವ, ಮದ ಮುಂತಾದುವುಗಳಿಂದ ಕೊಬ್ಬಿ ಬೆಳೆದವನು ಎನ್ನುವುದು ಸೂಚ್ಯ. ಅರಸಿಕರ ಮುಂದೆ ಕಾವ್ಯ ಮುಂತಾದುವನ್ನು ವಿವರಿಸುವುದನ್ನು ಕೋಣನ ಮುಂದೆ ಕಿನ್ನರಿ ಬಾರಿಸಿದ ಹಾಗೆ ಎಂಬುದುಂಟು. ಅಲ್ಲಿಯೂ ಕೋಣ ಅಜ್ಞಾನದ ಸಂಕೇತವಾಗಿರುವುದನ್ನು ಗಮನಿಸಿದಾಗ ವಿವೇಚನೆಯಿಲ್ಲದ ವಿವೇಕವನ್ನು ಕಳೆದುಕೊಂಡ ಪ್ರಾಣಿಯೆಂಬುದು ಸರ್ವ ಸಾಮಾನ್ಯ ಅಭಿಪ್ರಾಯ.

ಕೊಂಬು. ಅಹಂಕಾರದ ಮತ್ತು ಅದರಿಂದ ಕವಿಯುವ ಸ್ವಾರ್ಥಕ್ಕೆ ಸಂಕೇತ. "ನಿನಗೇನು ಕೊಂಬು ಮೂಡಿವೆಯೇ?" ಎನ್ನುವ ಆಡುನುಡಿಯಲ್ಲಿ "ಕೊಂಬು ಮೆಟ್ಟಿ ಕೂಗೆಂದ" ಎಂಬ ಬಸವಣ್ಣನವರ ಮಾತಿನಲ್ಲಿ ಕೊಂಬು ಜಂಬವನ್ನೇ ಸೂಚಿಸುವ ಸಂಕೇತವಾಗಿದೆ. ಅಲ್ಲದೆ "ಮೊದಲು ಬಂದ ಕಿವಿಗಿಂತ ನಂತರ ಬಂದ ಕೊಂಬಿನದೇ ಜಂಬ"

---

6 ಎಲ್. ಬಸವರಾಜು: ಅಲ್ಲಮನ ವಚನ ಚಂದ್ರಿಕೆ. ಪುಟ. 17

ಎಂಬಲ್ಲಿ ಅದಿನ್ನೂ ಸಾರ್ಥಕವಾಗಿ ಪ್ರಯೋಗವಾಗಿದೆ. ಇಲ್ಲೆಲ್ಲ ಕೊಂಬು ಕೊಂಬಿನ ಅನರ್ಥಕಾರಕ ಕ್ರಿಯೆಗಳನ್ನು ಧ್ವನಿಸುತ್ತಾ ಅದು ಅಹಂಕಾರಕ್ಕೆ ಸಂಕೇತವಾಗಿ ಅಜ್ಞಾನಿಯ ಮನೋಧರ್ಮವನ್ನು ಸಮರ್ಥವಾಗಿ ಅಭಿವ್ಯಕ್ತಗೊಳಿಸುತ್ತದೆ.

ಬಾವಿ ವಿಷಯಾಸಕ್ತಿಯನ್ನು ಸಂಕೇತಿಸುತ್ತದೆ. ಬಾವಿಗಳು ಅಸಂಖ್ಯ ಎಂಬುವನ್ನು "ಏಳುನೂಱಿಪ್ಪತ್ತು" ಎಂಬ ಸಂಖ್ಯೆ ಸೂಚಿಸುತ್ತದೆ. ಬಾವಿಯ ಆಳ ವಿಷಯಾಸಕ್ತಿಯ ಆಳವನ್ನು ಸೂಚ್ಯವಾಗಿಸಿ ಭಯಭೀತಿಯನ್ನು ವ್ಯಕ್ತಪಡಿಸುವ ಪರಿಣಾಮಕಾರಿಯಾದ ಸಂಕೇತವಾಗಿದೆ. ಈ ವಿಷಯಾಸಕ್ತಿಗಳಿಗೆ ಆಕರವಾಗಿರುವುವಂಥದ್ದು "ಬಗರಿಗೆ". ಬಗರಿಗೆಯನ್ನು ಡಬರಿಗೆ, ತಪ್ಪಲೆ ಎಂಬ ಪರ್ಯಾಯ ಪದಗಳಿಂದಲೂ ಕರೆಯುವುದು ವಾಡಿಕೆಯಲ್ಲಿದೆ. ಈ ಬಗರಿಗೆ ದೇಹಕ್ಕೆ ಸಂಕೇತ. ವಿಷಯಾಸಕ್ತಿಯ ಪ್ರನಾಳಗಳು ಹಲವು ಹನ್ನೊಂದು ಸಂಗಮಿಸಿವೆ ದೇಹವೆಂಬ ಬಗರಿಗೆಯಲ್ಲಿ. ಅಂಥ ಬಗರಿಗೆಯಲ್ಲಿ ಸೂಳೆಯೊಬ್ಬಳಿದ್ದಾಳೆ.

ಸೂಳೆ, ಮಾಯೆಗೆ ಸಂಕೇತ. ಸೂಳೆ ತಳುಕು ಬಳುಕಿನ ಹೆಣ್ಣು. ಅವಳ ತಳುಕು ಬಳಕಿಗೆ ಬಲಿಯಾದ ಜೀವಿ ಅಂತ್ಯದಲ್ಲಿ ದುಃಖಕ್ಕೆ ಬಲಿಯಾಗಬೇಕಾಗುತ್ತದೆ. ಮಾಯೆಯ ವ್ಯವಹಾರವಾದರೂ ಇಂಥದೇ ಎನ್ನುತ್ತದೆ ವಚನ. ಮಾಯೆಯೆಂದರೇನು ಎಂಬ ಪ್ರಶ್ನೆ ಇಲ್ಲಿ ತಲೆಯೆತ್ತುತ್ತದೆ.

"ಗಂಡಿಂಗೆ ಹೆಣ್ಣಾಗಿ ಕಾಡಿತ್ತು ಮಾಯೆ
ಹೆಣ್ಣಿಂಗೆ ಗಂಡಾಗಿ ಕಾಡಿತ್ತು ಮಾಯೆ"

ಗಂಡು ಹೆಣ್ಣುಗಳ ಮಧ್ಯೆ ಉದ್ಭವಿಸುವ ಹಲವು ಹನ್ನೊಂದು ವಿಧದ ಬಂಧನ ಮಾಯೆಯೆಂಬುದು ಭಾಸವಾಗುತ್ತದೆ.

ಪ್ರಭುದೇವರ ಇನ್ನೊಂದು ವಚನ ಮಾಯೆಯಾವುದೆಂಬುದನ್ನು ನಿಚ್ಚಳವಾಗಿ ಸ್ಪಷ್ಟಪಡಿಸುತ್ತದೆ.

ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ್ಲ
ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ
ಮನದ ಮುಂದಣ ಆಸೆಯೇ ಮಾಯೆ ಕಣಾ ಗುಹೇಶ್ವರ ॥

'ಮಾಯೆ' ಎಂಬುದು ಮಣ್ಣಲ್ಲ, ಹೊನ್ನಲ್ಲ, ಹೆಣ್ಣಲ್ಲ; ಅದು ಆಸೆ. ಆ ಆಸೆಗಳು ಅನಂತ. ವೈವಿಧ್ಯಪೂರ್ಣ. ಆ ಆಸೆಗಳಿಗೆ ಬಲಿಯಾದಾಗ ಜೀವಿ ಕೊನೆಗಾಣುತ್ತ ಅಹಂಕಾರಕ್ಕೆ ಒಳಗಾಗುತ್ತಾನೆ. ಅಜ್ಞಾನ ವಶವರ್ತಿಯಾಗಿ ಆಚರಿಸುತ್ತಾನೆ. ಅಹಂಕಾರ

ಮಮಕಾರಗಳು ವ್ಯಕ್ತಿತ್ವವನ್ನು ಹಾಳುಮಾಡಿ ಜ್ಞಾನದ ಬೆಳಕಿನಿಂದ ದೂರನಿಲ್ಲುವಂತೆ ಎಸಗುತ್ತವೆ. "ಜೀವನೆಂಬ ಪಶುವಿಗೆ ಅಹಂಕಾರ ಮಮಕಾರಗಳೆಂಬ ಎರಡು ಕೋಡು. ಆ ಅಹಂಕಾರ ಮಮಕಾರಗಳ ಸಂಕಲ್ಪ ಮಾರ್ಗ ಭೇದದಿಂದ ಏಳುನೂರೆಪ್ಪತ್ತು ನಾಳಗಳು ಸಂಸಾರ ವಿಷಯರಸವನ್ನು ಆಸ್ವಾದಿಸಿಕೊಂಡಿರುವುವು. ಆ ನಾಳಗಳೆಲ್ಲಕ್ಕೂ ಮಧ್ಯಸ್ಥಾನವಾಗಿ ನವಚ್ಛಿದ್ರವಾದ ತನುವೆಂಬುದೊಂದು ಬಗರಿಗೆಯಿದೆ. ಆ ತನುವಿನೊಳಗೊಬ್ಬ ಮಾಯಿ. ಏಳುನೂರೆಪ್ಪತ್ತು ನಾಳಗಳಲ್ಲಿ ವ್ಯವಹರಿಸುವ ಜೀವನ ಅಹಂಕಾರಾದಿ ವಿಕಾರಗಳು ಆ ಮಾಯೆಯ ಕೊರಳಿಗೆ ತಕ್ಕ ಭೂಷಣಗಳೆನಿಸಿಕೊಂಡಿವೆ" ಎಂಬುದಾಗಿ ಪ್ರಭುದೇವರ ಈ ಬೆಡಗಿನ ವಚನಕ್ಕೆ ಮಹಲಿಂಗನ ವ್ಯಾಖ್ಯಾನವನ್ನಾಧರಿಸಿ ಡಾ॥ ಎಲ್ ಬಸವರಾಜುರವರು ಭಾವಾನುವಾದ ಮಾಡಿರುವುದನ್ನು ಗಮನಿಸಬೇಕು. ಅಲ್ಲಮ ಪ್ರಭುಗಳು ಈ ವಚನದಲ್ಲಿ ಅಜ್ಞಾನಿಯಾದ ಜೀವಿಯ ಚಿತ್ರವನ್ನು ಪ್ರತಿಭಾಪೂರ್ಣವಾಗಿ ಅಭಿವ್ಯಕ್ತಗೊಳಿಸಿದ್ದಾರೆ. ವಚನದ ಭಾಷೆ ಸರಳ, ಭಾವ ಗಹನವಾಗಿದ್ದು ಉದ್ದೇಶ ಸಾರ್ಥಕವಾಗಿದೆ. ಭಾವಕ್ಕೆ ತಕ್ಕ ಹಾಗೆ – ಬಾಳೆಗೊನೆ ಬಾಗುವಂತೆ – ಭಾಷೆ ಬಾಗಿದೆ. ಅರ್ಥ ಪ್ರದೀಪ್ತವಾಗಿ ವಿಚಾರದ ಪರಧಿಯನ್ನು ಹಿಗ್ಗಿಸಿದೆ. ಹೀಗೆ ಬೆಡಗಿನ ವಚನಗಳು ವಿರೋಧಾಭಾಸದ ಮೂಲಕ ಅಭಿವ್ಯಕ್ತವಾಗಿ ವಾಚ್ಯಾರ್ಥ ಅಸಂಗತವೆನ್ನುವಂತೆ ಪ್ರಚುರವಾಗಿ ಆ ಅಸಂಗತದ ಮೂಲಕವೇ ಬೇರೊಂದು ತಿರುವನ್ನು ಪಡೆದುಕೊಂಡು ಸಾರ್ಥಕವಾಗುತ್ತದೆ; ಉದ್ದೇಶವನ್ನು ಸಾಧಿಸುತ್ತದೆ. ಬೆಡಗಿನ ವಚನಗಳಲ್ಲಿ ಕಾಣಿಸಿಕೊಂಡ ಈ ತಂತ್ರ ಇತ್ತೀಚಿನ ಕಾವ್ಯಕ್ಷೇತ್ರದಲ್ಲಿ ಬೆಳೆಯುತ್ತಿರುವುದು ಕನ್ನಡ ಭಾಷೆ ಜೀವಂತವಾದುದೆಂಬುದರ ಲಕ್ಷಣವಾಗಿದೆ. ಬೆಡಗಿನ ವಚನಗಳು ಕನ್ನಡ ಭಾಷೆಯನ್ನು ಸರಿಯಾಗಿ ದುಡಿಸಿಕೊಂಡವು, ಭಾಷೆಯ ಸಿದ್ಧಿಯ ದ್ಯೋತಕವೂ ಆದುವು.

ತುಳುನಾಡಿನ ಇತಿಹಾಸ

ಪಿ. ಗುರುರಾಜಭಟ್

ದಕ್ಷಿಣ ಕನ್ನಡ ಜಿಲ್ಲೆಗೆ ಇದ್ದ ಐತಿಹಾಸಿಕ ಹೆಸರು ತುಳುನಾಡು. ಪಶ್ಚಿಮ ಕರಾವಳಿಯ ಇತಿಹಾಸದಲ್ಲಿ ಪ್ರಸಿದ್ಧಿಯನ್ನು ಪಡೆದ ಈ ತುಳುನಾಡಿನಲ್ಲಿ ಉತ್ತರಕನ್ನಡ ಜಿಲ್ಲೆಯ ಕೆಲವು ಭಾಗಗಳೂ ಘಟ್ಟದ ಮೇಲಣ ಶಿವಮೊಗ್ಗೆಯ ಕೆಲವು ಭಾಗಗಳೂ ಸೇರಿದ್ದುವು. ವಿಜಯನಗರದ ಕಾಲದಲ್ಲಿ ತುಳುನಾಡಿನ ವಿಸ್ತೀರ್ಣ ಉತ್ತರದಲ್ಲಿ ಗೋಕರ್ಣದವರೆಗೂ ಒಮ್ಮೆ ಪಸರಿಸಿತ್ತು.

ತುಳುನಾಡಿನ ಪೂರ್ವೇತಿಹಾಸದ ಬಗ್ಗೆ ನಮಗೆ ಇಷ್ಟರತನಕ ಹೆಚ್ಚಿನ ಪ್ರಮಾಣದ ಅವಶೇಷಗಳು ದೊರಕಲಿಲ್ಲ. ಉಡುಪಿಯ ಸಮೀಪವಿರುವ ಉದ್ಯಾವರ (ಉದಯ ಪುರ) ಮತ್ತು ಬಾರಕೂರು (ಬಾರಹಕನ್ಯಾಪುರ) – ಈ ಸ್ಥಳಗಳನ್ನು ಅಗತೆ ಮಾಡಿದರೆ ಕ್ರಿ. ಶ. ದ ಆದಿಯ ಇತಿಹಾಸವನ್ನು ಬೆಳಕಿಗೆ ತರಬಹುದು. ಈ ಸ್ಥಳಗಳಲ್ಲಿ ಕ್ರಿ. ಪೂ. ಒಂದೆರಡು ಶತಮಾನಗಳಷ್ಟು ಹಿಂದಿನ ಕುರುಹುಗಳು ದೊರತಿವೆ.

ಅಶೋಕನ ಶಿಲಾ ಲೇಖದಲ್ಲಿ ಉಲ್ಲೇಖಗೊಂಡಿರುವ 'ಸತಿಯಪುತ್ರ'ವು ತುಳು ನಾಡೆಂಬುದಾಗಿ ವಿದ್ವಾಂಸರಿಂದ ತಿಳಿಯಲ್ಪಟ್ಟಿದೆ. ತುಳುನಾಡಿನ ಇತಿಹಾಸಕ್ಕೆ ಅನ್ವಯಿಸಿಕೊಂಡು ಪರಶುರಾಮನ ಕತೆ. ಮಯೂರವರ್ಮನ ಕತೆ. ಭೂತಾಳ ಪಾಂಡ್ಯರಾಯನ ಕತೆ – ಇವುಗಳನ್ನು ಹೇಳುವುದು ವಾಡಿಕೆ. ಆದರೆ ನಮಗಿಷ್ಟರ ತನಕ ದೊರಕಿದ ಯಾವತ್ತೂ ದಾಖಲೆಗಳಾಗಲೀ ಈ ಬಗೆಗೆ ಉಲ್ಲೇಖ ದೊರಕಿಲ್ಲ.

ಪರಶುರಾಮನ ಕತೆಯಿಂದ ಒಂದು ಅನುಮಾನಿತ ಸತ್ಯವನ್ನು ಪ್ರತಿಪಾದಿಸ ಬಹುದು. ಬಹಳ ಹಳೆಗಾಲದಲ್ಲಿ ತುಳುನಾಡು ಸಮುದ್ರದಿಂದ ಆವರಿಸಲ್ಪಟ್ಟಿತ್ತೆಂದೂ ಕಾಲಕ್ರಮೇಣ ಈ ಭೂಭಾಗವು ಜನ ವಸತಿಗೆ ಯೋಗ್ಯವಾಯಿತೆಂದೂ ತಿಳಿಯಬಹುದು. ಪರಶುರಾಮನು ಕಬ್ಬಿಣ ಯುಗದ ಗಣ್ಯ ಮಾನವನೋ ಏನೊ?

ದಕ್ಷಿಣ ಕನ್ನಡಕ್ಕೆ "ತುಳುನಾಡು" ಮತ್ತು "ಆಳ್ವಖೇಡ" ವೆಂಬ ಹೆಸರುಗಳಿದ್ದುವು. ತುಳುವರಿಂದ ತುಳುನಾಡೆಂಬ ಹೆಸರೂ 'ಆಳುಪ' ರೆಂಬ ಅರಸೊತ್ತಿಗೆಯಿಂದ "ಆಳ್ವಖೇಡ" ವೆಂಬ ಹೆಸರೂ ಬಳಕೆಗೆ ಬಂತೆನ್ನಬಹುದು. ತಮಿಳು ಸಾಹಿತ್ಯದಲ್ಲಿ (ಸಂಗಮ್ ಸಾಹಿತ್ಯ) ತುಳುನಾಡಿನ ಉಲ್ಲೇಖವಿದೆ. (ಈ ಸಾಹಿತ್ಯವನ್ನು ವಿದ್ವಾಂಸರು



ಕದ್ರಿ ಲೋಕೇಶ್ವರ ಮೂರ್ತಿಯ ಮೇಲ್ಭಾಗ.


[illegible] ಈ ಮೂರ್ತಿ ಭಾರತದ ಶ್ರೇಷ್ಠ ಶಿಲ್ಪಗಳಲ್ಲಿ ಒಂದು



ಬ್ರಂದೂರು ಸೋಮೇಶ್ವರ ದೇವಾಲಯದ ನವರಂಗದ ಒಂದು ಸ್ತಂಭ:
ಕಲ್ಯಾಣ ಚಾಳುಕ್ಯ ಶೈಲಿ



ಶ್ರೀ ಹಸ್ತಾಮಲಕರಿಂದ ಪ್ರತಿಷ್ಠಾಪಿತವಾದ ಶ್ರೀ ಕೃಷ್ಣ (ಉಡುಪಿ).
ಕ್ರಿ.ಶ. 9ನೇ ಶತಮಾನದ, ದಕ್ಷಿಣ ಭಾರತದ. ಅತಿ ಪ್ರಾಚೀನ ಮೂರ್ತಿಗಳಲ್ಲಿ ಒಂದು.



ಶ್ರೀ ಸುಬ್ರಹ್ಮಣ್ಯ ಕ್ಷೇತ್ರದ ಪಂಚಲೋಹದ ಉಮಾಮಹೇಶ್ವರ ಮೂರ್ತಿ

ಸುಮಾರು ಕ್ರಿ. ಶ. 4 ನೇ ಶತಮಾನಕ್ಕೆ ಅನ್ವಯಿಸುತ್ತಾರೆ.) ಶಾಸನಾಧಾರದಂತೆ ಕಿ. ಶ. 7 ನೇ ಶತಮಾನದ ಪಲ್ಲವ ಎರಡನೇ ನಂದಿವರ್ಮನ ಶಾಸನದಲ್ಲಿ 'ತುಳು'ವೆಂಬ ಉಲ್ಲೇಖವಿದೆ (ಇಲ್ಲಿ 'ತುಳು' ರಾಜನನ್ನು 'ತುಳು' ಎಂಬುದಾಗಿ ನಮೂದಿಸಿದೆ) ಕನ್ನಡ ಶಾಸನದಲ್ಲಿ 'ತುಳುವ'ಕ್ಕೆ (ತುಳುನಾಡಿಗೆ) ಪ್ರಥಮ ಉಲ್ಲೇಖ ಕಿ. ಶ. 1012 ರಲ್ಲಿ.

ತುಳುನಾಡಿನಲ್ಲಿ ಸುಮಾರು ಕ್ರಿ. ಶ. ಎರಡನೇ ಶತಮಾನದಿಂದ ಆರಂಭವಾಗಿ ವಿಜಯನಗರದ ಸ್ಥಾಪನೆಯವರೆಗೆ (ಕ್ರಿ. ಶ. 1336) ಆಳಿದ ಅರಸು ಮನೆತನವೆಂದರೆ ಆಳುಪರದ್ದು. ಈ ಮನೆತನದಿಂದ ಈ ಪ್ರದೇಶಕ್ಕೆ 'ಆಳ್ವಖೇಡ'ವೆಂಬ ಹೆಸರು ಪ್ರಸಿದ್ಧವಾಯಿತೆನ್ನಬಹುದು. ಈ ಮನೆತನವು ಅವಿಚ್ಛಿನ್ನವಾಗಿ ಸುಮಾರು 1200 ವರ್ಷಗಳ ತನಕ ಆಳಿಕೊಂಡಿದ್ದುದು ಅದರ ಪ್ರಾಬಲ್ಯ ಹಾಗೂ ದಕ್ಷತೆಯನ್ನು ಸೂಚಿಸುತ್ತದೆ. ಗ್ರೀಕ್ ಭೂಗೋಳಜ್ಞನಾದ ಟೋಲೆಮಿಯ ಸಾಹಿತ್ಯದಲ್ಲಿ ಬರುವ 'ಒಲಖ್ಯೊರಾ' ಎಂಬುದು ಆಳ್ವಖೇಡವೇ ಆಗಿದೆ (ಕ್ರಿ. ಶ. 3ನೇ ಶತಕ). ಎಂದರೆ ಕ್ರಿ. ಶ. ಎರಡನೇ ಶತಮಾನದಲ್ಲೇ ಈ ಭೂಭಾಗವು ವ್ಯವಸ್ಥಿತವಾದ ರಾಜ್ಯಾಡಳಿತೆಯೊಳಗಿತ್ತೆಂದು ಊಹಿಸಬಹುದು. ಕಿ. ಶ. 7ನೇ ಶತಮಾನಕ್ಕಿಂತ ಮೊದಲಣ ಆಳುಪರ ರಾಜಕೀಯ ವ್ಯವಸ್ಥೆಯ ವಿಷಯವಾಗಿ ನಮಗೆ ಸಮರ್ಪಕವಾದ ದಾಖಲೆಗಳು ದೊರೆಕದಿರುವುದು ವಿಷಾದಕರವಾಗಿದೆ.

ಕ್ರಿ. ಶ. 7–8 ನೇ ಶತಮಾನದಲ್ಲಿ ಆಳುಪರಸರು ಕದಂಬ ಮಂಡಲವನ್ನು ಆಳುತ್ತಿದ್ದರೆಂದು ಶಾಸನಗಳಿಂದ ತಿಳಿದು ಬರುತ್ತದೆ. ಇವರ ಮೊದಲ ರಾಜಧಾನಿಯು ಮಂಗಳೂರು (ಮಂಗಲಪುರ) ಅನಂತರ ಉದ್ಯಾವರಕ್ಕೆ (ಉದಯಪುರ) ಸ್ಥಳಾಂತರವಾಯಿತು. ಅನಂತರ ಬಾರಕೂರು ಕೇಂದ್ರ ಸ್ಥಳವಾಯಿತು. ಪುನಃ ಮಂಗಳೂರು ರಾಜಧಾನಿಯಾಗಿ ವ್ಯವಹರಿಸಲ್ಪಡುತ್ತಿತ್ತು.

ಆಳುಪರ ಮನೆತನವ ಆಳ್ವಿಕೆಯನ್ನು ಪ್ರಾಚೀನ ಆಳುಪರು. ಮಧ್ಯಯುಗೀನ ಆಳುಪರು ಮತ್ತು ಕೊನೆಯ ಆಳುಪರು ಎಂಬುದಾಗಿ ಮೂರು ಹಂತಗಳಾಗಿ ವಿಭಾಗಿಸಬಹುದು. (ಈಗಲೂ ಬಳಕೆಯಲ್ಲಿರುವ 'ಆಳ್ವ'ವೆಂಬ ಕುಲನಾಮವು 'ಆಳುಪ' ಮನೆತನದಿಂದ ಬಂದ ಹೆಸರು.)

ಆಳುಪರು ಶೈವ ಮತ್ತು ಶಾಕ್ತ ಧರ್ಮಾವಲಂಬಿಗಳಾಗಿದ್ದರು. ಕೆಲವೊಮ್ಮೆ ಜೈನಧರ್ಮವನ್ನು ಅನುಸರಿಸುತ್ತಿದ್ದರು. ನಾಥಪಂಥಕ್ಕೆ ಪ್ರೋತ್ಸಾಹವನ್ನೂ ಕೊಡುತ್ತಿದ್ದರು. ಮಂಗಳೂರಿನ ಕಡೆ ಮಂಜುನಾಥ ದೇವಾಲಯದಲ್ಲಿರುವ ಲೋಕೇಶ್ವರವೆಂಬ ಅಪೂರ್ವ ಪಂಚಲೋಹದ ವಿಗ್ರಹದ ಪಾಣಿ ಪೀಠದಲ್ಲಿ ಕ್ರಿ. ಶ. 968 ರ ಒಂದು ಶಾಸನವಿದೆ. ಇದು ಗ್ರಂಥಲಿಪಿಯಲ್ಲಿದ್ದು ಕುಂದವರ್ಮನೆಂಬ ಆಳುಪರಸನು ಈ ವಿಗ್ರಹವನ್ನು

'ಕದರಿಕಾವಿಹಾರ' ದಲ್ಲಿ ಪ್ರತಿಷ್ಠಿಸಿದನೆಂದು ಈ ಶಾಸನದಿಂದ ತಿಳಿದುಬರುತ್ತದೆ. ಈ ಲೋಕೇಶ್ವರ ವಿಗ್ರಹವು ನಾಥಪಂಥದ ಬಿಂಬವಾಗಿದೆ. ಆಳುಪರು ಸಪ್ತ ಮಾತೃಕೆಯರ ಆರಾಧಕರೆಂಬುದೂ ಪೊಳಲಿ, ಉದ್ಯಾವರ ಮತ್ತು ಬಾರಕೂರಿನಲ್ಲಿರುವ ಸಪ್ತ ಮಾತೃಕೆಯರ ಆಳು ಪ್ರಮಾಣದ ಮಣ್ಣಿನ ಮೂರ್ತಿಗಳಿಂದ ವಿದಿತವಾಗುತ್ತದೆ. ಇವರ ಕಾಲದಲ್ಲಿ 52 ರಿಂದ 56 ಗ್ರೈನು ಭಾರವುಳ್ಳ ಚಿನ್ನದ ಮತ್ತು ಬೆಳ್ಳಿಯ 'ಗದ್ಯಾಣ' ವೆಂಬ ನಾಣ್ಯಗಳು ಬಳಕೆಯಲ್ಲಿದ್ದುವು. ಈ ನಾಣ್ಯಕ್ಕಿಂತ ಚಿಕ್ಕ ನಾಣ್ಯಗಳೂ ಇದ್ದುವು' ಈ ನಾಣ್ಯದ ಒಂದು ಭಾಗದಲ್ಲಿ ಎರಡು ಮೀನು, ಶಂಖ ಮತ್ತು ಪೂರ್ಣಕುಂಭ ಅಥವಾ ಕಾಲು ದೀಪ, ಇನ್ನೊಂದು ಬದಿಯಲ್ಲಿ "ಶ್ರೀಪಾಣ್ಡ್ಯ ಧನಂಜಯ" ವೆಂಬ ಬರಹವೂ ಇರುತ್ತಿತ್ತು. ಬರಹವು ದೇವನಾಗರಿ ಮತ್ತು ಕನ್ನಡ ಅಕ್ಷರಗಳಲ್ಲಿರುತ್ತಿತ್ತು. ಬಾರಕೂರು ಮತ್ತು ಮಂಗಳೂರು ಗದ್ಯಾಣಗಳು ಪ್ರತ್ಯೇಕವಾಗಿ ಇದ್ದುವು.

ಹೊಯ್ಸಳ ಅರಸನಾದ ಮೂರನೇ ವೀರಬಲ್ಲಾಳನ ಕಾಲದಲ್ಲಿ ತುಳುನಾಡು ಪ್ರತ್ಯಕ್ಷವಾಗಿ ಹೊಯ್ಸಳ ಸಾಮ್ರಾಜ್ಯಕ್ಕೆ ಸೇರಿಕೊಂಡಿತು. ಆಳುಪರಾಣಿಯಾದ ಚಿಕ್ಕಾಯಿ ತಾಯಿ ಎಂಬವಳು ವೀರಬಲ್ಲಾಳನನ್ನು ವಿವಾಹವಾಗಿದ್ದಳು. ಇವನಿಗಿಂತ ಮುಂಚೆ ತುಳುನಾಡು ಬಾದಾಮಿ ಚಾಳುಕ್ಯರ, ಮಾನ್ಯ ಖೇಟದರಾಷ್ಟ್ರ ಕೂಟರ, ಕಲ್ಯಾಣದ ಚಾಳುಕ್ಯರ ಅಂಕೆಯೊಳಗಿತ್ತೆಂದು ತಿಳಿದುಬರುತ್ತದೆ.

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಾದ ಅನಂತರ (ಕ್ರಿ. ಶ. 1336) ತುಳುನಾಡು ಮಂಗಳೂರು ಮತ್ತು ಬಾರಕೂರು ಎಂಬ ಎರಡು ನಿರ್ದಿಷ್ಟವಾದ ಪ್ರಾಂತ್ಯಗಳಾಗಿ ವಿಭಾಗಿಸಲ್ಪಟ್ಟಿತು. ಇವುಗಳನ್ನು ಈರ್ವರು ರಾಜ್ಯಪಾಲರುಗಳು ಆಳುತ್ತಿದ್ದರು. ವಿಜಯನಗರ ಸಾಮ್ರಾಜ್ಯಕ್ಕೆ ಈ ಎರಡೂ ಪ್ರಾಂತ್ಯಗಳಿಂದ ತುಂಬ ಲಾಭವಿತ್ತು. ಸಮುದ್ರಯಾನ ವ್ಯಾಪಾರ ವ್ಯವಹಾರಕ್ಕೆ ತುಳುನಾಡಿನ ಆವಶ್ಯಕತೆ ಇತ್ತು. ವಿಜಯನಗರ ಸಾಮ್ರಾಜ್ಯದ 28 ಹೆಸರುವಾಸಿಯಾದ ನಗರಗಳಲ್ಲಿ ನಾಲ್ಕು ತುಳುನಾಡಿಗೆ ಸೇರಿದ್ದುವು—ಮಂಗಳೂರು, ಬಾರಕೂರು, ಭಟಕಳ ಮತ್ತು ಹೊನ್ನಾವರ.

ವಿಜಯನಗರದ ಆಧಿಪತ್ಯದ ಕಾಲದಲ್ಲಿ ತುಳುನಾಡಿನಲ್ಲಿ ಅರಸೊತ್ತಿಗೆಗಳಿದ್ದುವು. ಇವುಗಳು ವಿಜಯನಗರದ ರಾಜ್ಯಪಾಲರ ಅಧೀನದಲ್ಲಿದ್ದು ಸ್ಥಳೀಯ ಆಡಳಿತೆಯನ್ನು ನಡೆಸುತ್ತಿದ್ದುವು. ಬಂಗವಾಡಿಯ ಬಂಗರು, ಪುತ್ತಿಗೆಯ ಚವುಟರು, ವೇಣೂರಿನ (ಏಣೂರು) ಅಜಿಲರು, ಕಾರಕಳದ ಭೈರರಸರು, ಮೂಲಿಕೆಯ (ಸಿಮಂತೂರಿನ) ಸಾಮಂತರು, ಸೂರಾಲಿನ ತೋಳಹರು, ಹೊಸಂಗಡಿಯ ಹೊನ್ನೆಕಂಬಳಿ ಅರಸರು, ಕಾಪಿನ ಮರ್ದ ಹೆಗ್ಗಡೆಯರು, ಎಲ್ಲೂರಿನ ಕುಂದ ಹೆಗ್ಗಡೆಯರು, ಎರ್ಮಾಳಿನ ಮಾರಮ್ಮ ಹೆಗ್ಗಡೆಯರು, ಕುಂಬಳೆಯ ರಾಜರು, ಹಾಡುವಳ್ಳಿ ಮತ್ತು ಗೇರುಸೊಪ್ಪೆಯ ತುಳುವರಸರ ಈ ಅರಸೊತ್ತಿಗೆಗಳಲ್ಲಿ ಪ್ರಾಮುಖ್ಯರಾದವರು. ಆಡಳಿತೆಯಲ್ಲಿ ಇವರಿಗೆ ಸಹಾಯಕರಾಗಿ

ಸೇನಾಪತಿಗಳೂ, ಕರಣೀಕರೂ, ಸೇನಬೋವರೂ, ಹೆಗ್ಗಡೆಗಳೂ, ಬಲ್ಲಾಳರೂ, ಪುರೋಹಿತರೂ ನೇಮಿಸಲ್ಪಡುತ್ತಿದ್ದರು. ಕುಂಬಳೆರಾಜರ ಹೊರತಾಗಿ ಇತರರು ಜೈನ ಮತಾವಲಂಬಿಗಳಾಗಿದ್ದರು. ಆದರೂ ಅವರ ರಾಜ್ಯದ ಹಿಂದೂ ದೇವತೆಯೇ ಅಧಿ ದೇವತೆಯಾಗಿ ಆರಾಧಿಸಲ್ಪಡುತ್ತಿತ್ತು.

ಕುಟುಂಬಗಳು ನಾನಾ ತರಹದ 'ಬಳಿ'ಗಳ ಮುಖೇನ ತಮ್ಮ ವೈಶಿಷ್ಟ್ಯಗಳನ್ನು ಹೊಂದಿದ್ದುವು. ಬ್ರಾಹ್ಮಣರಿಗೆ ಗೋತ್ರಗಳಿದ್ದಂತೆ ಬ್ರಾಹ್ಮಣೇತರರಿಗೆ 'ಬಳಿ'ಗಗಳಿದ್ದುವು ಬಾಹ್ಮಣೇತರರಲ್ಲಿ ಅಧಿಕಾರ ಪರಂಪರೆಯೂ ಹೆಣ್ಣಿನ ಮೂಲಕವಾಗಿತ್ತು. ಇದನ್ನು ಅಳಿಯ ಸಂತಾನ ಸಂಪ್ರದಾಯವೆನ್ನುತ್ತಾರೆ. ಇದೊಂದು ಬಹು ಪ್ರಾಚೀನ ಕೌಟುಂಬಿಕ ವ್ಯವಸ್ಥೆ ಎನ್ನಬಹುದು. ಸುಮಾರು 140 ಬಳಿಗಳ ಹೆಸರುಗಳು ಶಾಸನಗಳಲ್ಲಿ ದೊರಕುತ್ತವೆ. ಬೇರೆ ಬೇರೆ ಹಂತಗಳಲ್ಲಿ ಜನಪ್ರಭೇದಗಳು ಹೊರಗಿನಿಂದ ತುಳು ನಾಡಿನಲ್ಲಿ ನೆಲೆಸಿದ ಪರಿಣಾಮವಾಗಿ ಪರಸ್ಪರ ಜಾತಿ ಸಂಕೀರ್ಣಕ್ಕೆ ಕಾರಣವಾಯಿ ತೆನ್ನಬಹುದು.

ಮೊಗೇರರು ಮೀನುಗಾರಿಕೆಯಲ್ಲಿ ಜಾಣರಾಗಿದ್ದರೆ, ಬಿಲ್ಲವರು ಬೇಟೆಗಾರಿಕೆಯಲ್ಲಿ ನಿಪುಣರಾಗಿದ್ದರೆನ್ನಬಹುದು. ಈ ಎರಡೂ ವರ್ಗಗಳ ಬುಡಕಟ್ಟು ಒಂದೇ ಎನ್ನ ಬಹುದು. ನಾಡವರು ಮೊದಲು ವ್ಯವಸಾಯ ಪ್ರಧಾನ ಉದ್ಯೋಗದಲ್ಲಿ ಜಾಗೃತ ರಾಗಿದ್ದು ಕಾಲಕ್ರಮೇಣ ಸಮಾಜದ ಪ್ರಬಲ ಹಾಗೂ ವಿಶಿಷ್ಟ ವ್ಯಕ್ತಿಗಳೂ ಆದರು. ಕ್ರಿ. ಶ. 7 ನೇ ಶತಮಾನದಲ್ಲಿ ಬ್ರಾಹ್ಮಣರು ಇಲ್ಲಿ ನೆಲೆಯೂರಿದ್ದರು ಎಂಬುದಕ್ಕೆ ಉಡುಪಿ ತಾಲ್ಲೂಕಿನ ವಡ್ಡರ್ಸೆಯಲ್ಲಿ ದೊರಕಿದ ಶಿಲಾಶಾಸನವೇ ದೃಷ್ಟಾಂತ. ದಕ್ಷಿಣ ಕನ್ನಡಲ್ಲಿ ಬ್ರಾಹ್ಮಣರ ಮೊದಲ ವಾಸ್ತವ್ಯ ಉಡುಪಿಯಲ್ಲಿ (ಶೀವಳ್ಳಿಯಲ್ಲಿ). ಜೈನಧರ್ಮವು ಸುಮಾರು 11 ನೇ ಶತಮಾನದಲ್ಲಿ ಬೇರೂರಿತ್ತೆಂದು ನಿರ್ಧರಿಸಬಹುದು. ಸಾಧಾರಣ ಎಲ್ಲಾ ತುಂಡರಸರು ಜೈನಧರ್ಮಾವಲಂಬಿಗಳಾಗಿದ್ದರು. ತುಳುನಾಡಿನಲ್ಲಿ 180 ಜೈನ ಬಸತಿಗಳಿದ್ದುವು. ಸುಮಾರು ಕ್ರಿ. ಶ. 10ನೇ ಶತಮಾನದ ತನಕ ಬೌದ್ಧ ಧರ್ಮವು ಪ್ರಚಾರದಲ್ಲಿದ್ದಂತೆ ತಿಳಿದುಬರುತ್ತದೆ. ದೇವಾಲಯಗಳು ಸುಮಾರು ಕ್ರಿ. ಶ. 5–6 ನೇ ಶತಮಾನದಿಂದ ನಿರ್ಮಾಣಹೊಂದಲು ಪ್ರಾರಂಭವಾದುವು. ಪ್ರಾಚೀನ ದೇಗುಲಗಳು ಗಜಪೃಷ್ಠಾಕಾರದಲ್ಲಿವೆ. ಕೆಲವು ಆಯತಾಕಾರವಾಗಿಯೂ ಹೆಚ್ಚಿನವು ಚೌಕಾಕಾರವಾಗಿಯೂ ಕೆಲವು ಮಾತ್ರ ಮಂಡಲಾಕಾರವಾಗಿಯೂ ದೇವಾಲಯಗಳು ನಿರ್ಮಿತವಾಗಿವೆ. ಇವುಗಳಲ್ಲಿ ಹಲವಾರು ತರದ ಮೂರ್ತಿಗಳು ಪೂಜೆಗೊಳ್ಳುತ್ತಿದ್ದುವು. ಹಲವು ವಿಧದ ವೈಷ್ಣವ ವಿಗ್ರಹಗಳೂ (ಕೃಷ್ಣ, ಜನಾರ್ದನ, ಕೇಶವ, ಅನಂತಪದ್ಮನಾಭ, ವಾಸುದೇವ, ಪರವಾಸುದೇವ, ವಿಷ್ಣುಮೂರ್ತಿ, ಲಕ್ಷ್ಮೀನಾರಾಯಣ, ನರಸಿಂಹ, ಹಯ ಗ್ರೀವ, ಭೂವರಾಹ ಮೂರ್ತಿಗಳು), ದೇವಿ ವಿಗ್ರಹಗಳೂ (ಸಪ್ತಮಾತೃಕೆಯರಾದ ಮಹಿಷಾಸುರ ಮರ್ದಿನಿ, ನಾರಾಯಣಿ, ಸರಸ್ವತಿ, ಶಾರದೆ, ಪರಮೇಶ್ವರಿ, ಅಂಬಿಕಾ, ಕಾಳಿ,

ಲಕ್ಷ್ಮೀಪ್ರಭೇದಗಳು), ಶೈವಸಂಬಂಧವಾದ ಮೂರ್ತಿಗಳೂ (ಉಮಾಮಹೇಶ್ವರ, ಲೋಕೇಶ್ವರ, ಸ್ಕಂದ. ಶಾಸ್ತಾರ. ಗಣಪತಿ. ಹರಿಹರ. ವೀರಭದ್ರ. ಭೈರವ. ಕಲ್ಯಾಣ ಸುಂದರಮೂರ್ತಿ. ಸೋಮಸ್ಕಂದ ಪ್ರಭೇದಗಳು) ಸೂರ್ಯವಿಗ್ರಹಗಳೂ ಬಹುಸಂಖ್ಯೆ ಯಲ್ಲಿ ಕಂಡುಬರುತ್ತವೆ. ಈ ಮೂರ್ತಿಗಳು ಕಡುಶರ್ಕರ ಪಾಕದಿಂದಲೂ ಶಿಲೆ ಯಿಂದಲೂ ಪಂಚಲೋಹದಿಂದಲೂ ಮರದಿಂದಲೂ ರೂಪುಗೊಂಡಿವೆ.

ತುಳುನಾಡಿನಲ್ಲಿ ಸಾವಿರಾರು ದೇವಸ್ಥಾನಗಳಿವೆ: ದೈವಸ್ಥಾನಗಳೂ ಇವೆ. ಈ ದೇವಾಲಯಗಳ ಮೂರ್ತಿ ಶಿಲ್ಪಗಳನ್ನು ಪರಿಶೀಲಿಸಿದರೆ ಕರ್ನಾಟಕ ಶಿಲ್ಪದ ಪ್ರಭಾವ ಚೆನ್ನಾಗಿ ಕಂಡುಬರುತ್ತದೆ. ಪಲ್ಲವ. ಚೋಳ ಶೈಲಿಯೂ ಕಂಡು ಬರುತ್ತದೆ.

ತುಳುನಾಡಿನಲ್ಲಿ ಶ್ರೀ ಶಂಕರಾಚಾರ್ಯರ ಪಂಚಾಯತನ ಆರಾಧನೆಯೂ ಶ್ರೀ ಮಧ್ವಾಚಾರ್ಯರ ವೈಷ್ಣವ ಸಿದ್ಧಾಂತವೂ ಒಟ್ಟೊಟ್ಟಿಗಿವೆ.

ತುಳುನಾಡಿನ ಧರ್ಮ ವೈಶಿಷ್ಟ್ಯಗಳಲ್ಲಿ ಭೂತಾರಾಧನೆ ಪ್ರಮುಖವಾದುದು. ತುಳುನಾಡಿನಲ್ಲಿ ಎಲ್ಲೆಲ್ಲೂ ದೈವಸ್ಥಾನಗಳಿವೆ (ಭೂತಸ್ಥಾನಗಳು): ಆಲಡೆಗಳಿವೆ: ಬ್ರಹ್ಮ ಸ್ಥಾನಗಳಿವೆ. ದೈವಗಳ ಸಂಖ್ಯೆಯನ್ನು ಎಣಿಕೆಮಾಡುವುದು ಕಷ್ಟ. ಇವುಗಳಲ್ಲಿ ಪ್ರಮುಖ ವಾದುವುಗಳು – ಪಂಜಲಿನ್ ಲೆಕ್ಕೇಸಿರಿ. ಜುಮಾದಿ. ಕಲ್ಲುರ್ಟಿ. ಜೊಮ್ಮೆಯ್ಯ. ನಂದಿಗೋಣ. ಕೋಟಿ – ಚನ್ನಯ್ಯ. ಕೊಡಮಂತಾಯ. ಮಗ್ರಂತಾಯ ಇತ್ಯಾದಿ. ಆಲಡೆ ಅಥವಾ ಬ್ರಹ್ಮ ಸ್ಥಾನಗಳಲ್ಲಿ ಪಂಚದೈವಗಳ ಆರಾಧನೆ ನಡೆಯುತ್ತದೆ— ರಕ್ತೇಶ್ವರಿ (ಲೆಕ್ಕೇಸಿರಿ), ನಾಗ. ಬ್ರಹ್ಮ. ನಂದಿಗೋಣ ಮತ್ತು ಕ್ಷೇತ್ರಪಾಲ. ಇದೊಂದು ವಿಚಿತ್ರ ರೀತಿಯ ಸಂಪ್ರದಾಯ. ದೈವಗಳ ಪ್ರಾರ್ಥನೆಯು. 'ಪಾಡ್ದನ'ವೆನಿಸಿಕೊಳ್ಳು ತ್ತದೆ. ಪ್ರತಿದೈವಕ್ಕೂ ಅದರ ಹುಟ್ಟು. ಬೆಳವಣಿಗೆ ಹಾಗೂ ಸಂಚಾರ ಮತ್ತು ವಾಸ್ತವ್ಯದ ಬಗೆಗೆ ವಿವರಿಸುವ 'ಪಾಡ್ದನ' ವಿದೆ. ಇದು ಜಾನಪದ ಸಾಹಿತ್ಯವೇ ಆಗಿದೆ. ದೈವಗಳಿಗೆ ತಂಬಿಲ. ನೇಮ. ಆಯನ ಮತ್ತು ಕೋಲವೆಂಬ ಧಾರ್ಮಿಕ ಸಮಾರಂಭಗಳು ಜರಗುತ್ತವೆ. ತುಳುನಾಡಿನಲ್ಲಿ ನಾಗಾರಾಧನೆಯೂ ಸ್ಕಂದಾರಾಧನೆಯೂ ಅಭೇದ್ಯ ನಾಗನ ಪ್ರೀತಿಗಾಗಿ 'ಢಕ್ಕೆಬಲಿ' ಮತ್ತು 'ನಾಗಮಂಡಲ'ಗಳೆಂಬ ಧಾರ್ಮಿಕ ಸಮಾರಂಭ ಗಳು ನಡೆಯುತ್ತವೆ. ಕೋಟಿ – ಚನ್ನಯರಿಗೆ ನಿರ್ಮಿತವಾದ ಭೂತಾಲಯಗಳಿಗೆ "ಗರಡಿ"ಗಳೆನ್ನುತ್ತಾರೆ. ಗರಡಿಗಳು ದೈಹಿಕವ್ಯಾಯಾಮ ನಡೆಯುತ್ತಿದ್ದ ಸ್ಥಳಗಳೂ ಆಗಿದ್ದುವು.

ವಿಜಯನಗರದ ಪತನವಾದ ಅನಂತರ ಕೆಳದಿನಾಯಕರ ಆಳ್ವಿಕೆಯೊಳಗೆ ತುಳುನಾಡು ಸೇರಿತು. ಕ್ರಿ. ಶ. 18 ನೇ ಶತಮಾನದ ಅಂತ್ಯದ ವರೆಗೆ ಕೆಳದಿ ನಾಯಕರ ಅಧಿಪತ್ಯವಾಯಿತು. ಆಗ ತುಳುನಾಡು ಒಂದೇ ರಾಜಕೀಯ ಘಟಕವಾಗಿ ರೂಪಾಂತರ

ವಾಯಿತು. ಅನಂತರ ಸ್ವಲ್ಪ ಸಮಯದವರೆಗೆ ತುಳುನಾಡು ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಅಧೀನವಾಯಿತು. ಹತ್ತೊಂಭತ್ತನೆಯ ಶತಮಾನದ ಆದಿಯಲ್ಲಿ ಇಂಗ್ಲೀಷರ ಅಂಕೆಯೊಳಗೆ ತುಳುನಾಡು ಸೇರಿತು.

ತುಳುನಾಡಿನಲ್ಲಿ ಸುಮಾರು ಕ್ರಿ. ಶ. 12–13 ನೇ ಶತಮಾನದಿಂದ ಇಸ್ಲಾಂ ಧರ್ಮವೂ ಸುಮಾರು ಕ್ರಿ. ಶ. 15–16 ನೇ ಶತಮಾನದಿಂದ ಕ್ರೈಸ್ತ ಧರ್ಮವೂ ಪ್ರಚಾರಕ್ಕೆ ಬಂದಿತೆನ್ನಬಹುದು.

ಕ್ರಯ ನಿರ್ಣಯ ಶಾಸ್ತ್ರ

ದಾಮೋದರ ಕೃಷ್ಣ ಪೊದುವಾಳ

ಭಾರತವು ಈಗ ಕೈಗಾರಿಕೆಗಳ ಕ್ಷೇತ್ರದಲ್ಲಿ ಪ್ರಗತಿಪರವಾಗುತ್ತಲಿರುವ ದೇಶ. ಅಭಿವೃದ್ಧಿ ಹೊಂದಿದ ದೇಶಗಳಿಂದ ಹರಿದು ಬರುತ್ತಿರುವ ಸಾಲರೂಪದ ಹಣಕ್ಕೆ ಹಂತ ಹಂತವಾಗಿ ನಾವು ಚರಮಗೀತೆಯನ್ನು ಹಾಡಲೇಬೇಕಾಗಿದೆ. ಖಾಸಗಿ ಮತ್ತು ಸರಕಾರಿ ವಲಯಗಳ ಕೈಗಾರಿಕಾ ಘಟಕಗಳು ತಮ್ಮ ಕಾಲಮೇಲೆ ತಾವು ನಿಲ್ಲಲು ಹವಣಿಸುತ್ತ ದೇಶದ ಆರ್ಥಿಕ ಪ್ರಗತಿಯ ಚಕ್ರ ತಿರುಗಲು ನೆರವಾಗಬೇಕಾದ ಪರಿಸ್ಥಿತಿ ಬಂದೊದಗಿದೆ. ಹಾದಿಯಲ್ಲಿ ಅಸಂಖ್ಯ ಆಂತರಿಕ ಹಾಗೂ ಬಾಹ್ಯ ಸಮಸ್ಯೆಗಳಿವೆ. ಪರಿಹರಿಸಲು ಅನೇಕ ಮಾರ್ಗಗಳೂ ಇವೆ.

ಈ ದಿಶೆಯಲ್ಲಿ ಕ್ರಯನಿರ್ಣಯ (ಮೌಲ್ಯಮಾಪನ) ಶಾಸ್ತ್ರದ ಪಾತ್ರ ತುಂಬ ಮಹತ್ವದ್ದು. ಸೇವೆಗಳಿಗೆ ಸಂಬಂಧಿಸಿದ ಕೈಗಾರಿಕೆಗಳಲ್ಲಿ ಕ್ರಯನಿರ್ಣಯ ಅಳವಡಿಸುವುದು ಅಸಾಧ್ಯವೇನಲ್ಲವೆಂದು ಇತ್ತೀಚಿನ ಸಂಶೋಧನೆಗಳು ಇದಕ್ಕೆ ಒತ್ತಾಸೆ ನೀಡಿವೆ. ಕ್ರಯನಿರ್ಣಯಶಾಸ್ತ್ರ ಎಂದರೇನು ಮತ್ತು ಅದರ ಕ್ಷೇತ್ರವ್ಯಾಪ್ತಿ ಏನು ಎಂಬುದರ ಬಗ್ಗೆ ಬೆಳಕು ಚೆಲ್ಲಲು ಪ್ರಯತ್ನಿಸುವುದು ಪ್ರಸ್ತುತ ಲೇಖನದ ಉದ್ದೇಶ.

ಕ್ರಯನಿರ್ಣಯ ಶಾಸ್ತ್ರ ಎಂದರೇನು? : ಕೈಗಾರಿಕಾ ಪ್ರಪಂಚದಲ್ಲಿ ಪ್ರತಿಯೊಂದು ಸಾಮಗ್ರಿಯ ಕ್ರಯವನ್ನು ಮುಂಚಿತವಾಗಿ ತಿಳಿಯುವ ಅವಶ್ಯಕತೆ ತುಂಬ ಇದೆ. ಆ ಸಾಮಗ್ರಿಯ ಒಟ್ಟು ಕ್ರಯಕ್ಕೆ ಕಾರಣವಾದ ವಿವಿಧ ಕಚ್ಚಾ ಘಟಕಗಳ ಕ್ರಯಗಳನ್ನು ಹಂತಹಂತವಾಗಿ ತಿಳಿಯುವ ಬಗೆಯನ್ನು ಕ್ರಯನಿರ್ಣಯ ಶಾಸ್ತ್ರವು ಮನವರಿಕೆ ಮಾಡಿ ಕೊಡುತ್ತದೆ. ಕಚ್ಚಾ ಪದಾರ್ಥದಿಂದ ಮೊದಲುಗೊಂಡು, ಅದು ಸಿದ್ಧ ವಸ್ತುವಾಗುವ ವರೆಗಿನ ತಪ್ಪೆಗಳ ನೆರವಿನಿಂದ ವಿವಿಧ ಘಟ್ಟಗಳಲ್ಲಿ ಘಟಕವೊಂದರ ಕ್ರಯ ಕಂಡು ಹಿಡಿಯುವುದು ಈ ಶಾಸ್ತ್ರದ ಹೆಗ್ಗುರಿಯಾಗಿದೆ.

ಕ್ರಯಗಳ ವಿಶ್ಲೇಷಣೆಯಿಂದ ಪ್ರಯೋಜನ ಹೊಂದಲು ಕ್ರಯನಿರ್ಣಯ ಶಾಸ್ತ್ರವು ಅನೇಕ ತತ್ವಗಳನ್ನು ಅನುಷ್ಠಾನಕ್ಕೆ ತರುತ್ತದೆ. ಇದು ಪರಿಣಾಮಕಾರಿಯಾಗಬೇಕಾದರೆ ಖರ್ಚುಗಳ ವಿವರಗಳನ್ನು ಕ್ರಮಬದ್ಧವಾಗಿ ಗುರ್ತಿಸುವುದು ಸಂಗ್ರಹಿಸುವುದು ಮತ್ತು ವಿಶ್ಲೇಷಿಸುವುದು ಅವಿಭಾಜ್ಯ ಅಂಗಗಳಾಗುತ್ತವೆ.

ಕ್ರಯ ಕಂಡು ಹಿಡಿಯುವ ತಂತ್ರ ಹಾಗೂ ರೀತಿ ; "ಒಂದು ಪದಾರ್ಥದ ಮೇಲೆ ಬೀಳುವ ಒಟ್ಟು ವೆಚ್ಚಗಳ ಮೊತ್ತ - ಅದರ ಕ್ರಯ. ಕೈಗಾರಿಕೆಯೊಂದರಲ್ಲಿ ಅನುಸರಿಸಬಹುದಾದ ತತ್ವಗಳನ್ನು ನಿರ್ಧರಿಸಲು ಈ ಕೆಳಕಂಡ ವಿಷಯಗಳ ಬಗ್ಗೆ ಮಾಹಿತಿ ಅನಿವಾರ್ಯ: ಉತ್ಪಾದಿಸುವ ವಸ್ತುವಿನ ಸ್ವಭಾವ, ತಯಾರಿಸುವ ವಿಧಾನಗಳ ಬಗೆ, ವಸ್ತುವಿನ ಕ್ರಯದ ಮೇಲೆ ಪ್ರತಿಯೊಂದು ವೆಚ್ಚದಂಶವೂ ಬೀರಬಹುದಾದ ಪ್ರಭಾವ ಮತ್ತು ಆಡಳಿತ ಮಂಡಳಿಯ ಅವಶ್ಯಕತೆಗಳು ಇತ್ಯಾದಿ. ಕ್ರಯನಿರ್ಣಯ ಶಾಸ್ತ್ರವು ಈ ಬಗ್ಗೆ ತತ್ವಗಳನ್ನು ಸವಿಸ್ತಾರವಾಗಿ ವಿಶದಪಡಿಸುತ್ತ ವಿವಿಧ ಕೈಗಾರಿಕೆಗಳ ಸ್ವಭಾವಕ್ಕೆ ತಕ್ಕಂತೆ ಅವುಗಳನ್ನು ಅನುಷ್ಠಾನಕ್ಕೆ ತರುವ ಬಗೆಯನ್ನು ಯೋಜಿಸುತ್ತದೆ.

ಕ್ರಯನಿರ್ಣಯದ ಅವಶ್ಯಕತೆ ಏನು? :ಗಳಿಸಿದ ಲಾಭ ಅಥವಾ ನಷ್ಟಗಳ ಬಗ್ಗೆ ಇರುವ ಮಾಹಿತಿಯಿಂದ ಮಾತ್ರವೇ ಆಡಳಿತ ಮಂಡಳಿಯು ತನ್ನ ನಿಲುವುಗಳನ್ನು ಅಥವ ತೀರ್ಮಾನಗಳನ್ನು ಕೈಗೊಳ್ಳುವುದು ಸಾಧ್ಯವಿಲ್ಲದ ಮಾತು. ಅಲ್ಲದೇ, ಅಂತಹ ವಿವರಗಳಿಗೆ ಸಂಬಂಧಿಸಿದ ತಖ್ತೆಗಳು ಆಡಳಿತದ ದಕ್ಷತಾ ಮಟ್ಟವನ್ನು ಪ್ರತಿನಿಧಿಸಲು ಅಸಮರ್ಥವಾಗುತ್ತದೆ. ಲಾಭ–ನಷ್ಟ ತಖ್ತೆ ಹಾಗೂ ಆಸ್ತಿ–ಸಾಲ ಹೊಣೆಗಾರಿಕೆ ಪಟ್ಟಿಗಳ ಅಂಕಿ ಅಂಶಗಳು ಈ ಕೆಳಗಿನ ಪ್ರಶ್ನೆಗಳಿಗೆ ದಾರಿ ಮಾಡಿ ಕೊಟ್ಟಿವೆ:

1. ಗಳಿಸಲ್ಪಟ್ಟ ಲಾಭ ಆ ಕೈಗಾರಿಕಾ ಸಂಸ್ಥೆಯ ದಕ್ಷತಾಮಟ್ಟಕ್ಕೆ ಸಮನಾದುದೇ ?
2. ಈ ಲಾಭವು ಮುಂದಿನ ವರ್ಷಗಳ ಲಾಭಗಳೊಂದಿಗೆ ಮತ್ತು ಅದೇ ಉದ್ಯಮಶೀಲ ಇತರ ಸಂಸ್ಥೆಗಳು ಸಂಪಾದಿಸುವ ಲಾಭಗಳ ಜತೆ ತುಲನೆ ಹೊಂದುವುದೆ?
3. ಯಾವ ಯಾವ ಸಾಮಗ್ರಿಗಳು ಲಾಭ ಗಳಿಸುತ್ತವೆ ಮತ್ತು ಎಷ್ಟು ?
4. ಯಾವ ಸಾಮಗ್ರಿಗಳು ಲಾಭ ಗಳಿಸುತ್ತವೆ ಮತ್ತು ಲಾಭಗಳನ್ನು ಯಾವ ಬಗೆಯಲ್ಲಿ ಸುಧಾರಿಸಬಹುದು ?
5. ಸರಕುಗಳ ದಾಸ್ತಾನಿಗಾಗಿ ತೊಡಗಿಸಿದ ಬಂಡವಾಳ ಸರಿಯಾದುದೇ ಅಥವಾ ಮಿತಿಮೀರಿದುದಾಗಿದೆಯೇ ?
6. ಕೈಗಾರಿಕಾ ಸಂಸ್ಥೆಯನ್ನು ನಡೆಸಲು ಬೇಕಾಗುವ ವೆಚ್ಚಗಳನ್ನು ಸಾಧ್ಯವಿದ್ದಷು ಕನಿಷ್ಟ ಮಟ್ಟದಲ್ಲಿ ಇಡಲಾಗಿದೆಯೇ ?
7. ಎಷ್ಟು ಪರಿಣಾಮಕಾರಿಯಾಗಿ ಬಂಡವಾಳ ತೊಡಗಿಸಲ್ಪಟ್ಟಿದೆ ?
8. ಬೆಲೆಗಳನ್ನು ಪರಿಷ್ಕೃತಗೊಳಿಸುವ ಅಗತ್ಯತೆ ಇದೆಯೆ ?
9. ಉತ್ಪಾದನಾ ಹಂತಗಳು ಪರಿಣಾಮಯುತವಾಗಿ ಕಾರ್ಯಮಗ್ನವಾಗಿವೆಯೇ ಮತ್ತು ಪ್ರತಿಯೊಂದು ಹಂತದಲ್ಲೂ ಸಂಭವಿಸುವ ವ್ಯರ್ಥವೆಚ್ಚವನ್ನು ತಡೆಹಿಡಿಯಲು ಕಾರ್ಯಕ್ರಮ ರೂಪಿತವಾಗಿದೆಯೇ?

ಮೇಲಿನ ಸಮಸ್ಯಾಪೂರ್ಣ ಪ್ರಶ್ನೆಗಳಿಗೆ ಕ್ರಯನಿರ್ಣಯಶಾಸ್ತ್ರವು ಉತ್ತಮ ಉತ್ತರಗಳನ್ನು ನೀಡಬಲ್ಲುದು. ಪ್ರಗತಿಯ ಹಾಗೂ ಮುಂಚೆಯೇ ನಿರ್ಧರಿಸುವ ಕಾರ್ಯದಕ್ಷತೆಯ ಮಾನಗಳನ್ನು, ಸಾಮಗ್ರಿಯ ಕ್ರಯವನ್ನು ತಿಳಿಯುವ ಮತ್ತು ಸಂಘಟಿಸಿದ ಖರ್ಚುಗಳಿಗೂ ಹಾಗೂ ಪೂರ್ವನಿರ್ದೇಶಿತವಾದ ಖರ್ಚುಗಳಿಗೂ ಇರುವ ಅಂತರಗಳನ್ನು ಕಾಲಕಾಲಕ್ಕೆ ವಿಶ್ಲೇಷಣೆಗೊಳಗಾಗಿಸುವ ಕ್ರಮಗಳು ಶಾಸ್ತ್ರದ ವೈಶಿಷ್ಟ್ಯಗಳು.

ಪದಾರ್ಥದ ಖರ್ಚುಗಳ ಬಗ್ಗೆ, ಉತ್ಪಾದನಾ ಕ್ರಯದ ಬಗ್ಗೆ, ಖರ್ಚು ಹಾಗೂ ಮಾರಾಟಬೆಲೆಗಿರುವ ಪರಸ್ಪರ ಭಾಜ್ಯ—ಭಾಜಕ ಸಂಬಂಧದ ಬಗ್ಗೆ, ಮಾರಾಟದಿಂದ ಲಾಭದಲ್ಲಿ ಹೆಚ್ಚುವರಿಯಾಗಿದೆಯೇ ಎಂಬುದರ ಬಗ್ಗೆ, ತೊಡಗಿಸಿದ ಬಂಡವಾಳದ ಹುಟ್ಟುವಳಿಯ ಬಗ್ಗೆ—ಪ್ರಸಕ್ತ ಕೈಗಾರಿಕಾ ವಿಸ್ತರಣ ಯುಗದಲ್ಲಿ ಈ ಎಲ್ಲದರ ಕುರಿತು ಆಸ್ಥೆ ವಹಿಸುವ ಅವಶ್ಯಕತೆ ತುಂಬ ಇದೆ.

ಕೈಗಾರಿಕಾ ಪ್ರಗತಿ ಸಾಧಿಸಲು ಸಾಮಗ್ರಿಗಳ ಕ್ರಯಗಳಲ್ಲಿ ಇಳಿತ ಸಾಧಿಸುವುದು ಅನಿವಾರ್ಯ. ಈ ದಿಶೆಯಲ್ಲಿ ಈ ಶಾಸ್ತ್ರ ದಿವ್ಯವಾದ ವರವಾಗಿದೆ—ಸರ್ಕಾರಿ ಹಾಗೂ ಖಾಸಗೀ ವಲಯಗಳ ಕೈಗಾರಿಕಾ ಘಟಕಗಳಿಗೆ.

ಶಾಸ್ತ್ರದ ಮೂರು ಸ್ಥೂಲವಾದ ವಿಭಾಗಗಳು : ಕ್ರಯನಿರ್ಣಯ ಶಾಸ್ತ್ರದ ವ್ಯಾಪ್ತಿ ಮತ್ತು ಸ್ವಾಭಾವಿಕ ಕ್ರಿಯೆಗಳು ಕ್ರಯವನ್ನು ಕಂಡುಹಿಡಿಯುವುದು ಮಾತ್ರವೇ ಅಲ್ಲ, ಕ್ರಯ ಹತೋಟಿ ಮತ್ತು ಕ್ರಯವನ್ನು ಅವಗಾಹನೆಗಾಗಿ ಸಿದ್ಧಪಡಿಸುವುದು ಅದರಲ್ಲಿ ಅಡಗಿದೆ. ಕ್ರಯ ಹತೋಟಿಯೇ ಅತಿ ಪ್ರಾಮುಖ್ಯವಾದ ಗುರಿ ಎನ್ನಬಹುದು. ಈ ಗುರಿಯ ಸಾಧನೆಗಿರುವ ಎರಡು ಮಾರ್ಗಗಳು ಉಳಿದೆರಡು ಎಂದೂ ಹೇಳಬಹುದಾಗಿದೆ.

ಕ್ರಯ ಹತೋಟಿಯು ಶಾಸ್ತ್ರದಲ್ಲಿ "ಆಗಿರಲೇ ಬೇಕಾದ ಕ್ರಯ"ದ ಬಗ್ಗೆ ತಿಳಿ ಹೇಳುವುದು, ನಿಜವಾಗಿ ಖರ್ಚಾದ ಕ್ರಯ ಮಾಹಿತಿಯನ್ನು ಹಾಗೂ ಆಗಿರಲೇಬೇಕಾದ ಕ್ರಯಮಾಹಿತಿಯನ್ನು ಅವಗಾಹನಾ ಕ್ರಯ ಪಟ್ಟಿಗಳು ಒದಗಿಸುತ್ತವೆ.

(1) ಕ್ರಯ ಕಂಡು ಹಿಡಿಯುವುದು: ಕ್ರಮ, ವಿಧಾನ ಮತ್ತು ತಂತ್ರಗಳಿಗೆ ಕ್ರಯ ಕಂಡುಹಿಡಿಯುವುದರಲ್ಲಿ ಅವುಗಳದೆ ಆದ ಮಹತ್ವವಿದೆ. ಕ್ರಯಗಳು ಅವಲಂಬಿತವಾದ ಕ್ರಮ, ವಿಧಾನ ಹಾಗೂ ತಂತ್ರಗಳನ್ನು ಅರಿಯದ ವಿನಾ ಸಾಮಗ್ರಿಯ ಕ್ರಯ ಪತ್ತೆ ಹಚ್ಚುವ ಚಿಂತನೆ ಅಪೂರ್ಣವಾಗುವುದು.

ಕ್ರಯ ಕಂಡುಹಿಡಿಯುವುದರಲ್ಲಿ ಮೂರು ಬಗೆಗಳಿವೆ:

(I) ಖರ್ಚುಗಳ ಸಂಗ್ರಹ ಹಾಗೂ ವಿಶ್ಲೇಷಣೆ:

1. ಕಂಡುಹಿಡಿಯುವುದು. 2. ವಿಶ್ಲೇಷಿಸುವುದು. 3. ಹಂಚುವುದು. 4. ವಿಭಾಗಿಸುವುದು. 5. ಲೀನತ್ವ ಸಾಧಿಸುವುದು.

(II) ವಿವಿಧ ಉತ್ಪಾದನಾ ಹಂತಗಳಲ್ಲಿ ವಿವಿಧ ಸಾಮಗ್ರಿಗಳ ಉತ್ಪಾದನೆಯನ್ನು ಅಳೆಯುವುದು.

(III) ಉತ್ಪಾದನೆಗೆ ವೆಚ್ಚಗಳೊಂದಿಗೆ ಸಂಬಂಧ ಕಲ್ಪಿಸುವುದು.

(2) ಕ್ರಯ ಹತೋಟಿ: ಒಂದು ಕೈಗಾರಿಕಾ ಘಟಕವನ್ನು ನಡೆಸಲು ಬೇಕಾಗುವ ವೆಚ್ಚಗಳ ನೇತೃತ್ವ ಮತ್ತು ನಿಯಂತ್ರಣದ ಬಗ್ಗೆ ನಡೆಯುವ ನಿರ್ವಾಹಕ ಕಾರ್ಯಕ್ಕೆ "ಕ್ರಯ ಹತೋಟಿ" ಎನ್ನುವರು. ಕ್ರಯ ಹತೋಟಿಯನ್ನು ಸಾಧಿಸಲು ಅತ್ಯಾವಶ್ಯಕವಾದ ಹೆಜ್ಜೆಗಳು:

1. ಉತ್ಪಾದನಾ ಪ್ರಗತಿ ಮತ್ತು ವೆಚ್ಚಗಳ ಗುರಿಗಳನ್ನು ಸ್ಥಾಪಿಸುವುದು.

2. ಖರ್ಚುಗಳನ್ನು ಹಾಗೂ ಉತ್ಪಾದನಾ ಪ್ರಗತಿಯನ್ನು ಕಾಲಕಾಲಕ್ಕೆ ಅಳೆಯುತ್ತಿರುವುದು.

3. ಸಂಭವಿಸಿದ ಖರ್ಚುಗಳನ್ನು ಪೂರ್ವನಿರ್ಣಿತವಾದ ಅಂಕೆಗಳೊಂದಿಗೆ ಹೋಲಿಸಿ ವ್ಯತ್ಯಾಸಗಳನ್ನು ಕಂಡುಹಿಡಿಯುವುದು.

4. ವ್ಯತ್ಯಾಸಗಳನ್ನು ಕಾರಣಗಳಿಂದ ವಿಶ್ಲೇಷಿಸುವುದು ಮತ್ತು ಅವುಗಳಿಗೆ ಕಾರಣವಾದ ಕಾರಕಗಳನ್ನು ಪತ್ತೆಹಚ್ಚುವುದು.

5. ವ್ಯತ್ಯಾಸಗಳನ್ನು ಹೋಗಲಾಡಿಸಲು ಸರಿಪಡಿಸುವ ಕ್ರಮಗಳನ್ನು ಕೈಗೊಳ್ಳುವುದು ಮತ್ತು ಅದರಿಂದ ಸಂಭವಿಸುವ ಖರ್ಚುಗಳನ್ನು ಪೂರ್ವನಿರ್ಣಿತ ಖರ್ಚುಗಳ ಹತ್ತಿರ ತರುವುದು. ಮುಂಗಡ ಹತೋಟಿ ಹಾಗೂ ಪರಿಪೂರ್ಣತೆಯ ನಿರ್ಣಯಗಳು ಕ್ರಯಹತೋಟಿ ಸಾಧಿಸಲು ಇರುವ ಮುಖ್ಯ ಕ್ರಯನಿರ್ಣಯ ಬಗೆಗಳಾಗಿವೆ.

6. ಕ್ರಯವನ್ನು ಅವಗಾಹನೆಗಾಗಿ ಸಿದ್ಧಪಡಿಸುವುದು.

ಸರಿಯಾದ ವಿಷಯವನ್ನು ಸರಿಯಾದ ವ್ಯಕ್ತಿಗೆ ಸರಿಯಾದ ಸಮಯದಲ್ಲಿ ಸರಿಯಾದ ರೀತಿಯಲ್ಲಿ ಒದಗಿಸುವುದು ಇದರ ಗುರಿ: ಈ ನಿಟ್ಟಿನಲ್ಲಿ ಕೆಳಕಂಡ ವಿಷಯಗಳು ಸಂಬಂಧಪಡುತ್ತವೆ.

1. ಅವಗಾಹನೆಗೆ ನೀಡಬೇಕಾದ ವಿಷಯದ ನೈಜ ಸ್ವರೂಪದ ಬಗ್ಗೆ ಗಮನ.

2. ಯಾರ ಅವಗಾಹನೆಗೆ ಅದು ಸಿದ್ಧವಾಗುತ್ತದೆಯೋ ಅವನ ಕಾರ್ಯ. ಸ್ಥಾನಮಾನಗಳ ಬಗ್ಗೆ ಜ್ಞಾನ.

3. ಎಷ್ಟು ಸಮಯದೊಳಗಾಗಿ ಅದು ಸಿದ್ಧವಾಗಬೇಕಾಗಿದೆ ಅಥವಾ ಎಷ್ಟು ಬಾರಿ ಅಂತಹ ವರದಿಗಳು ಸಿದ್ಧವಾಗಬೇಕಾಗಿದೆ ಎಂಬುದರ ಬಗ್ಗೆ ಮಾಹಿತಿ.

4. ಅವಗಾಹನೆಗಾಗಿ ಅನುಸರಿಸುವ ವಿಧಾನ ಅಥವಾ ರೀತಿಯ ಬಗ್ಗೆ ಕೂಲಂಕಷ ತಿಳುವಳಿಕೆ.

ಕ್ರಯನಿರ್ಣಯ ಶಾಸ್ತ್ರದ ಅನಿವಾರ್ಯತೆ: ಬ್ಲಾಕರ್ ಎಂಬ ಮಹನೀಯನು ಶಾಸ್ತ್ರದ ಪರಿಚಯವನ್ನು ತನ್ನ ನಿರ್ಣಯ ವಾಕ್ಯದಿಂದ ಈ ರೀತಿ ಮಾಡಿಕೊಟ್ಟಿದ್ದಾನೆ.

ಕಾರ್ಯಕಾರಿ ಮಂಡಳಿಯು ಅನುಸರಿಸುವ ನಿಯಮಗಳು ಬದಲಾಗುತ್ತಿರುವ ಪರಿಸ್ಥಿತಿಗೆ ಅನುಗುಣವಾಗಿ ಹೊಂದಿಕೊಳ್ಳುವಂತಿರಬೇಕು: ಸಂಭವಿಸುವ ವೆಚ್ಚಗಳನ್ನು ಪೂರ್ವನಿರ್ದೇಶಿತವಾದ ವೆಚ್ಚಗಳೊಂದಿಗೆ ತುಲನೆ ಮಾಡುವ ಕಾರ್ಯದಲ್ಲಿ ಕ್ರಯನಿರ್ಣಯ ಶಾಸ್ತ್ರವು ಸಹಾಯ ಮಾಡಬೇಕು. ನಿಯಮಗಳನ್ನು ಜಾರಿಗೆ ತರುವಲ್ಲಿ ಇವರ ಪಾತ್ರ ಬಹಳ ಪರಿಣಾಮಕಾರಿಯಾದುದು.

ಪ್ರಸಕ್ತ ಶಾಸ್ತ್ರದ ಇನ್ನೂ ಕೆಲವು ಮಹತ್ವದ ಅಂಶಗಳನ್ನು ಕೆಳಕಂಡಂತೆ ನಮೂದಿಸಬಹುದಾಗಿದೆ:

1. ಒಂದು ಕಂಪೆನಿಯು ತಯಾರಿಸುವ ವಿವಿಧ ಸಾಮಗ್ರಿಗಳ ಪ್ರತಿಘಟಕದ ಕ್ರಯ ಪತ್ತೆ ಹಚ್ಚಲು.

2. ಕ್ರಯದ ವಿವಿಧ ಘಟಕಾಂಶಗಳಲ್ಲಿ ಮತ್ತು ಉತ್ಪಾದನಾ ಹಂತಗಳಲ್ಲಿ ಪತ್ತೆ ಹಚ್ಚಿದ ಕ್ರಯದ ಬಗ್ಗೆ ಸರಿಯಾದ ವಿಶ್ಲೇಷಣೆ ನೀಡಲು.

3. ಉತ್ಪಾದನೆಯ ಪ್ರತಿ ಹಂತದಲ್ಲೂ ಸಂಭವಿಸುವ ವ್ಯರ್ಥಪದಾರ್ಥದ ಪ್ರಮಾಣವನ್ನು ಕಂಡುಹಿಡಿಯಲು ಮತ್ತು ಅದನ್ನು ತಡೆಗಟ್ಟಲು ಅನುಗುಣವಾದ ವರದಿಗಳನ್ನು ಸಿದ್ಧಪಡಿಸಲು.

4. ಮಾರಾಟದ ಬೆಲೆಗಳನ್ನು ಗೊತ್ತುಪಡಿಸಲು ಬೇಕಾದ ಅಂಕಿ ಅಂಶಗಳನ್ನು ಒದಗಿಸಲು.

5. ಪ್ರತಿಯೊಂದು ಪದಾರ್ಥವು ಗಳಿಸಿದ ಲಾಭವನ್ನು ಕಂಡುಹಿಡಿಯಲು ಹಾಗೂ ಈ ಲಾಭಗಳನ್ನು ಉತ್ತಮಪಡಿಸಲು ಯಾವ ಕ್ರಮಗಳನ್ನು ಕಾರ್ಯಕಾರಿ ಮಂಡಳಿಯು ಕೈಗೊಳ್ಳಬಹುದು ಎಂಬ ಸಲಹೆ ನೀಡಲು.

6. ಕಚ್ಚಾ ಪದಾರ್ಥ, ಉಪಯೋಗಿ ಸಾಮಗ್ರಿ. ಉತ್ಪಾದನಾ ಹಂತದಲ್ಲಿರುವ ಸರಕು ಮತ್ತು ಪೂರ್ಣತೆಯನ್ನು ಪಡೆದ ಸಾಮಗ್ರಿಗಳಲ್ಲಿ ತೊಡಗಿಸಿದ ಬಂಡವಾಳ ಮಿತಿಮೀರದಂತೆ ನೋಡಿಕೊಳ್ಳಲು ಹಾಗೂ ಕನಿಷ್ಠ ಮಟ್ಟದಲ್ಲಿ ಇರುವಂತೆ ನಿಗಾ ಇಡಲು.

7. ಕಚ್ಚಾಪದಾರ್ಥ, ಕಾರ್ಮಿಕ ಹಾಗೂ ಇತರ ಖರ್ಚುಗಳ ಮೇಲೆ ನಿಯಂತ್ರಣವಿಡಲು ಬೇಕಾದ ಕ್ರಯಹತೋಟಿ ಪದ್ಧತಿಗಳನ್ನು ಜಾರಿಗೆ ತರಲು.

8. ಮುಂದಿನ ವಿಸ್ತರಣಾ ನೀತಿಗಳಲ್ಲಿ ಮತ್ತು ಯೋಜಿತ ಬಂಡವಾಳ ಹೂಡಿಕೆಗಳಲ್ಲಿ ವ್ಯವಸ್ಥಾಪಕ ಮಂಡಲಿಗೆ ಸಲಹೆಯೀಯಲು.

9. ದಕ್ಷ ರೀತಿಯಲ್ಲಿ ತಮ್ಮ ಅಧಿಕಾರಿಗಳು ಜವಾಬ್ದಾರಿ ನಿರ್ವಹಿಸಲು ಬೇಕಾದ ಕ್ರಯ ವಿವರ ತಕ್ಕ ವೇಳೆಯಲ್ಲಿ ದೊರಕುವುದಕ್ಕಾಗಿ ದಕ್ಷರೀತಿಯ ಕ್ರಯ ಮಾಹಿತಿಯನ್ನು ಅವಗಾಹನೆಗೆ ಸಿದ್ಧಪಡಿಸಲು.

10. ಹೆಚ್ಚುವರಿ ಉತ್ಪಾದನೆ ಮತ್ತು ಕ್ರಯ ಉಳಿತಾಯಗಳ ಮೇಲೆ ನಿರೂಪಿತವಾದ ಪ್ರೋತ್ಸಾಹಕರ ಬೋನಸ್ ಕ್ರಮಗಳನ್ನು ರೂಪಿಸುವುದರಲ್ಲಿ ಹಾಗೂ ಜಾರಿಗೆ ತರುವುದರಲ್ಲಿ ವ್ಯವಸ್ಥಾಪಕ ಮಂಡಳಿಗೆ ಸಲಹೆಯೀಯಲು.

11. ಹೊಸ ಸಾಮಗ್ರಿಗಳ ಲಾಭಪರತೆ ಬಗ್ಗೆ ಸಲಹೆಯೀಯಲು: ಬೇರೆ ಬೇರೆ ರೀತಿಯ ಉತ್ಪಾದನಾ ಹಂತಗಳ ಗುಣದೋಷಗಳನ್ನರಿಯಲು: ಗಣಕೀಕರಣ ಮತ್ತು ಕಂಪೆನಿಯ ಪ್ರಗತಿಯನ್ನು ತೀವ್ರಗೊಳಿಸುವ ಇನ್ನಾವುದಾದರೂ ನೀತಿಯ ಬಗ್ಗೆ ಸಲಹೆಯೀಯಲು.

ಈ ಮೇಲ್ಕಂಡ ವಿಷಯಗಳೊಂದಿಗೆ ಮುಂದುವರಿಯುತ್ತಲಿರುವ ಆಧುನಿಕ ಕೈಗಾರಿಕಾ ಪ್ರಪಂಚವು ಇನ್ನೂ ಕೆಲವನ್ನು ಸೇರಿಸಿದೆ:

1. ಅಂಕಿಅಂಶಗಳ ಪರಿವರ್ತನಾ ವಿಂಗಡಣೆ ಅಥವಾ ರಂಧ್ರ ಕೊರೆಯಲ್ಪಟ್ಟ ಕಾರ್ಡ್ ಲೆಕ್ಕಾಚಾರ ಕಾರ್ಯದ ಮೇಲ್ವಿಚಾರಣೆ ಮಾಡುವುದು.

2. ಕಾಲಕಾಲಕ್ಕೆ ಜಾರಿಗೆ ಬರುವ ಲೆಕ್ಕಾಚಾರ ಹತೋಟಿ ಹಾಗೂ ಉತ್ಪಾದನಾ ಹತೋಟಿ ಕ್ರಮಗಳನ್ನು ಸುವ್ಯವಸ್ಥಿತ ರೀತಿಯಲ್ಲಿಡಲು ಆಂತರಿಕ ಲೆಕ್ಕ ಶೋಧನಾ ಕ್ರಮಗಳನ್ನು ರೂಪಿಸುವುದು.

3. ಉತ್ಪಾದನಾ ಕ್ರಮ ಸುಧಾರಣೆಗೆ ಹಾಗೂ ಕ್ರಯ ಇಳಿತ ಯೋಜನೆಗಳನ್ನು ರೂಪಿಸುವುದರಲ್ಲಿ ಮತ್ತು ಅನುಷ್ಠಾನಕ್ಕೆ ತರುವುದರಲ್ಲಿ ಕೈಗಾರಿಕಾ ಯಂತ್ರ ಶಿಲ್ಪಿಗಳೊಂದಿಗೆ ಸಮಾಲೋಚನೆ ನಡೆಸುವುದು.

4. ತಮ್ಮ ಕ್ರಯ ಲೆಕ್ಕ ಶೋಧನೆಯಲ್ಲಿರುವ ದಕ್ಷ ಹಾಗೂ ತಜ್ಞಜ್ಞಾನವನ್ನು ಸರಕಾರಿ ಅಥವಾ ಇನ್ನಿತರ ಅಂತಹ ಸಂಸ್ಥೆಗಳಿಗೆ ಸೇವಾಭಾವದಲ್ಲಿ ಒದಗಿಸುವುದು.

ಭಗವತಿ ಲಲಿತ (ಲಲಿತಾ ಸಹಸ್ರನಾಮ)

ಎನ್. ವಿ. ವಿಮಲ

ವೈದಿಕ ವಾಙ್ಮಯದಲ್ಲಿ ಪುರುಷ ದೇವತೆಗಳಿಗೆ ಮತ್ತು ಅವರ ಆರಾಧನೆಗೆ ಹೆಚ್ಚು ಪ್ರಾಶಸ್ತ್ಯವಿದೆ. ಮಾನವನು, ಬಹು ಮುಖವಾದ ತನ್ನ ಸುಖ, ಸಂತೋಷ, ಆಸೆಗಳನ್ನು ತೃಪ್ತಿಪಡಿಸಿಕೊಳ್ಳಲು ದೇವತಾರಾಧನೆ ಒಂದು ಸಾಧನೆಯಾಗಿದೆ. ಪುರುಷದೇವತೆಗಳಂತೆ. ಸ್ತ್ರೀ ದೇವತೆಗಳೂ ಕ್ರಮೇಣ ಪ್ರಾಮುಖ್ಯವನ್ನೂ, ಗೌರವಯುತ ಸ್ಥಾನವನ್ನೂ ಪಡೆಯಲಾರಂಭಿಸಿದರು. ಈ ಬೆಳವಣಿಗೆಯನ್ನು ಇಡೀ ಸಾಹಿತ್ಯ ಪ್ರಪಂಚದಲ್ಲಿ ಕಾಣಬಹುದು. ಬಹುಶಃ ಪುರಾಣದಿಂದೀಚೆಗೆ ಸ್ತ್ರೀ ದೇವತೆಗಳು ಪ್ರಾಬಲ್ಯಗೊಂಡು ಭಕ್ತಾದಿಗಳ ಮನಸ್ಸಿನಲ್ಲಿ ತಮ್ಮ ವರ್ಚಸ್ಸನ್ನು ಬೀರಿರಬಹುದೆಂದು ತೋರುತ್ತದೆ. ಈ ಸ್ತ್ರೀ ದೇವತೆಗಳು ಕ್ರಮಶಃ ಪ್ರಾಬಲ್ಯಕ್ಕೆ ಬಂದಿರುವುದು ಸ್ಪಷ್ಟವಾಗಬೇಕಾದರೆ ನಾವು ನಮ್ಮ ಗಮನವನ್ನು ಲಲಿತಾ ಸಹಸ್ರನಾಮದ ಕಡೆಗೆ ಕೇಂದ್ರೀಕರಿಸಬೇಕು. ವೇದವ್ಯಾಸರಿಂದ ರಚಿತವಾಗಿರಬಹುದಾದ 18 ಪುರಾಣಗಳಲ್ಲಿ ಕೊನೆಯದಾದ ಬ್ರಹ್ಮಾಂಡ ಪುರಾಣದ ಉತ್ತರ ಕಾಂಡದಲ್ಲಿ ಲಲಿತಾ ಸಹಸ್ರ ನಾಮವು ಅಂತರ್ಗತವಾಗಿದೆ. ಸ್ತ್ರೀ ದೇವತೆಗಳ ಮಹತ್ವವನ್ನು. ಅದರಲ್ಲೂ ಭಗವತಿ ಲಲಿತಳ ಅತಿಶಯವಾದ ಶಕ್ತಿ ಸಾಮರ್ಥ್ಯವನ್ನೂ, ದೇವಿಯ ಸೊಬಗನ್ನೂ. ಭಕ್ತಕೋಟಿಯನ್ನು ಕಾಪಾಡುವ ಅವಳ ಕಾರುಣ್ಯಮಯತೆಯನ್ನೂ ಲಲಿತಾ ಸಹಸ್ರ ನಾಮವು ವಿವರಿಸುತ್ತದೆ. ಯಾರು ಅವಳನ್ನು ಅನನ್ಯ ಭಕ್ತಿಯಿಂದ ಪೂಜಿಸಿ. ಅವಳಿಗಾಗಿ ಯಾರು ಕಠಿಣ ತಪಶ್ಚರ್ಯೆಯನ್ನು ಮಾಡುತ್ತಾರೆಯೋ ಅವರ ಸಕಲ ಕಷ್ಟಗಳನ್ನು ಪರಿಹಾರಮಾಡುವ ಶಕ್ತಿಶಾಲಿಯಾಗಿದ್ದಾಳೆ. ಹೀಗೆ ಅವಳ ಗುಣಗಾನಮಾಡುವ. ಅವಳನ್ನು ಭಕ್ತಿ ಶ್ರದ್ಧಾದಿಗಳಿಂದ ಆರಾಧಿಸುವ ಭಕ್ತಕೋಟಿಯ ಸಾಮಾನ್ಯ ಹಾಗೂ ವಿಶೇಷವಾದ ಬೇಡಿಕೆಗಳನ್ನು. ಇಷ್ಟಾರ್ಥಗಳನ್ನು ಈಡೇರಿಸುತ್ತಾಳೆ.

ಲಲಿತಾ ಸಹಸ್ರನಾಮವು ಹಯಗ್ರೀವ ಮತ್ತು ಅಗಸ್ತ್ಯರ ನಡುವಿನ ಸಂವಾದ. ದೇವಿ ಲಲಿತಳನ್ನು ಸುಪ್ರಸನ್ನಗೊಳಿಸುವ ಮಂತ್ರ. ನ್ಯಾಸ. (ಆಯಾ ದೇವತೆಗಳನ್ನು ಆಯಾ ಅವಯವಗಳಲ್ಲಿ ಸ್ಥಾಪಿಸಿ ಧ್ಯಾನ ಮಾಡುವುದಕ್ಕೆ ನ್ಯಾಸವೆಂದು ಹೆಸರು). ಪೂಜೆ, ಹೋಮ. ಸ್ತೋತ್ರ – ಇವುಗಳನ್ನು ಸುಪ್ರಸಿದ್ಧ ಮಂತ್ರ ದ್ರಷ್ಟಾರರಾದ ಅಗಸ್ತ್ಯರು ತಿಳಿದಿದ್ದರೂ ಸಹ ಲಲಿತಾ ಸಹಸ್ರನಾಮದ ಮಹಿಮೆಯನ್ನು ತಿಳಿಯಲು ಕಾತುರರಾಗಿದ್ದರು. ಭಗವತಿ ಲಲಿತಳಲ್ಲಿ ಯಾರಿಗೆ ಅಕೃತ್ರಿಮವಾದ ನಂಬಿಕೆ. ಶ್ರದ್ಧಾ, ಭಕ್ತಿಗಳಿವೆಯೋ ಅಂಥ

ವರಿಗೆ ಮಾತ್ರ ಈ ಸ್ತೋತ್ರವನ್ನು ತಿಳಿಸುವುದೆಂದು ಹಯಗ್ರೀವರು ಮೊದಲು ಲಲಿತಾ ಸಹಸ್ರನಾಮವನ್ನು ಯಾರಿಗೂ ತಿಳಿಸದೆ ರಹಸ್ಯವಾಗಿಟ್ಟಿದ್ದರು. (ನೋಡಿ. ಲ. ಸ. 3) ಅಗಸ್ತ್ಯರು ಹಯಗ್ರೀವರನ್ನು ಸುಪ್ರೀತಿಗೊಳಿಸಿದ ತಕ್ಷಣ ಅವರಿಂದ ಅಗಸ್ತ್ಯರಿಗೆ ಲಲಿತಾ ಸಹಸ್ರನಾಮದ ಉಪದೇಶವಾಯಿತು. ಇದರಿಂದ ಅದೃಷ್ಟವಶಾತ್ ನಮಗೆ ಇಂದು ಲಲಿತಾ ಸಹಸ್ರನಾಮವು ಸ್ತೋತ್ರರೂಪದಲ್ಲಿ ದೊರೆತು ನಮ್ಮ ಸರ್ವತೋಮುಖ ಏಳಿಗೆಗೆ ಕಾರಣವಾಗಿದೆ. ಲಲಿತಾ ಸಹಸ್ರನಾಮದಲ್ಲಿ ಇನ್ನೂ ಕೆಲವು ಪಾತ್ರಗಳಿವೆ. ಉದಾ: ದೇವತೆಗಳು, ಸೂತ, ಮುನಿ, ಪುರಾಣದ ಪ್ರಧಾನ ನಿರೂಪಕ ಮತ್ತು ಭಗವತಿ ಲಲಿತ.

ಲಲಿತಾ ಸಹಸ್ರನಾಮದ ಉಗಮದ ಕಾಲವು ಸಾಕಷ್ಟು ಪ್ರಾಚೀನವಾದುದು ಇದರ ಕಾಲವನ್ನು ನಿಖರವಾಗಿ ಹೇಳಲು ಮಾಡುವ ಪ್ರಯತ್ನ ನಿರರ್ಥಕ ಹಾಗೂ ಚರ್ಚಾಸ್ಪದವಾಗುತ್ತದೆಂದು ಇದರಿಂದ ಸೂಚಿತವಾಗುತ್ತದೆ. ಇದರ ಕಾಲವು ಪ್ರಾಚೀನ ತಮವಾದುದೆಂದಾಯಿತು.

ಲಲಿತಾ ಸಹಸ್ರನಾಮದಲ್ಲಿ ಬರುವ ಒಂದು ಆಖ್ಯಾನವು ಈ ಸ್ತೋತ್ರದ ಉಗಮ ಮತ್ತು ಅವಶ್ಯಕತೆಗಳನ್ನು ಸಂಕ್ಷಿಪ್ತವಾಗಿ ಹೀಗೆ ತಿಳಿಸುತ್ತದೆ:

ಒಂದು ಸಲ ಭಗವತಿ ಲಲಿತಳು ತನ್ನ ಭಕ್ತವೃಂದಕ್ಕೆ, ಲೋಕಕ್ಕೆ ಸನ್ಮಂಗಳವನ್ನುಂಟು ಮಾಡಲು ವಾಗ್ದೇವಿಯೇ (ವಾಗ್ದೇವಿವಾಸಿನಿ) ಮೊದಲಾದ ಎಲ್ಲಾ ದೇವತೆಗಳ ಸಭೆಯನ್ನು ಕರೆಸಿದಳು – ಈ ಸಭೆಯಲ್ಲಿ ದೇವಿ ಲಲಿತಳು ತನ್ನನ್ನು ಕುರಿತು ಸಹಸ್ರನಾಮ ಸ್ತೋತ್ರವನ್ನು ಪಠಿಸಲು ವಾಗ್ದೇವಿಯನ್ನು ಒತ್ತಾಯ ಪಡಿಸಿದಳು. ನಂತರ ದೇವತೆಗಳು ಅತ್ಯಾನಂದದಿಂದ ಲಲಿತಳ ಸ್ತೋತ್ರವನ್ನು ಸಹಸ್ರನಾಮ ಸ್ತೋತ್ರರೂಪದಲ್ಲಿ ಹಾಡಿದರು. ಕಡೆಗೆ ದೇವಿಯು ಸುಪ್ರೀತಳಾಗಿ ಎಲ್ಲರನ್ನೂ ಹರಸಿದಳು. ತನ್ನನ್ನು ಯಾವ ಭಕ್ತನು ಪೂಜಿಸಿ ಗೌರವಿಸುತ್ತಾನೋ ಅವನನ್ನು ಕಾಪಾಡುತ್ತೇನೆಂದು ಅವರೆಲ್ಲರಿಗೂ ಆಶ್ವಾಸನೆಯನ್ನಿತ್ತಳು.

ಮೇಲಿನ ಘಟನೆಯು ದಂತಕತೆಯೆಂದೆನಿಸಿದರೂ ಅದರ ಮಹತ್ವಕ್ಕೇನೂ ಕುಂದಾಗುವುದಿಲ್ಲ. ಆದಿತ್ಯನಂತೆ ಸವಿತೃ ಮತ್ತು ಪ್ರಸಾವಿತ್ರಿಯಾದ ಭಗವತಿ ಲಲಿತಳ ಅನುಜ್ಞೆಯ ಮೇರೆಗೆ ವಾಗ್ದೇವಿಯಿಂದ ಹಾಡಲ್ಪಟ್ಟಿರುವುದರಿಂದ ಲಲಿತಾ ಸಹಸ್ರನಾಮ ರಚನೆಯು ದೈವೀಕೃತವಾದುದು. ಇದರಲ್ಲಿ ಬರುವ ಪ್ರಮುಖ ಪಾತ್ರಗಳಾದ ಸೂತ ಮತ್ತು ಹಯಗ್ರೀವರು ಇದರ ಪ್ರಸಾರಕರಾದರು. ಈ ಘಟನೆಯು ಲಲಿತಾ ಸಹಸ್ರನಾಮದ ಉಗಮಕ್ಕೆ ದೇವಿ ಲಲಿತಳೇ ಕಾರಣಳೆಂದು ತಿಳಿಸುವುದರಿಂದ ಈ ಸಹಸ್ರನಾಮವು ಪ್ರಸಿದ್ಧವಾಯಿತೆನ್ನಬಹುದು. ಇಷ್ಟೇ ಅಲ್ಲದೆ ಕಾಲಕ್ರಮದಲ್ಲಿ ಜನರಿಗೆ

ಲಲಿತಾ ಸ್ತೋತ್ರದ ಪಠನದಿಂದ ಉಂಟಾದ ಅನೇಕ ಸ್ವಂತ ಅನುಭವಗಳು ಈ ಸ್ತೋತ್ರದ ಪ್ರಭಾವವನ್ನೂ, ಮಹಿಮೆಯನ್ನೂ, ಉಪಯುಕ್ತತೆಯನ್ನೂ ಹೆಚ್ಚಿಸಿದುವು.

ಪ್ರಸ್ತುತ ಲೇಖನದಲ್ಲಿ ಲಲಿತಾ ಸಹಸ್ರನಾಮವನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಪರಿಶೀಲಿಸುವ ಪ್ರಯತ್ನ ನಡೆದಿದೆ. ಲಲಿತಾ ಸಹಸ್ರ ನಾಮವನ್ನು ಭಕ್ತಿಪೂರ್ವಕವಾಗಿ ಹೇಳುವಾಗ ಅದರಲ್ಲಡಗಿರುವ ಪಾಂಡಿತ್ಯ, ಅರ್ಥ ಗಾಂಭೀರ್ಯವನ್ನು ಅಷ್ಟಾಗಿ ಗಮನಿಸುವುದಿಲ್ಲ. ಆದರೆ ಇಲ್ಲಿ ವಿಚಾರಪೂರಿತ ದೃಷ್ಟಿಯಿಂದ ಗಮನಿಸಿದ್ದೇನೆ.

ಲಲಿತಾ ಸಹಸ್ರ ನಾಮವು ಮೂರು ಅಧ್ಯಾಯಗಳಿಂದ ಕೂಡಿ, ಒಟ್ಟು ಮುನ್ನೂರಿಪ್ಪತ್ತು ಶ್ಲೋಕಗಳನ್ನೊಳಗೊಂಡಿದೆ. ಈ ಮೂರು ಅಧ್ಯಾಯಗಳಲ್ಲಿ ಕ್ರಮವಾಗಿ 51, 182½ ಮತ್ತು 86½ ಶ್ಲೋಕಗಳಿವೆ. ಮೊದಲನೆಯ ಅಧ್ಯಾಯವು ಪೀಠಿಕೆಯಾದರೆ ಎರಡನೆಯದು ಅವರ ತಿರುಳು. ಮೂರನೆಯದು ಫಲಶ್ರುತಿ. ಲಲಿತಾ ಸಹಸ್ರ ನಾಮವನ್ನು ಭಕ್ತಿಯಿಂದ ಪಠಿಸಿದ ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸುವ ಭರವಸೆಯನ್ನು ನೀಡುತ್ತದೆ ಈ ಫಲಶ್ರುತಿ. ಲಲಿತಾ ಸಹಸ್ರನಾಮದ ಮೊದಲನೆಯ ಅಧ್ಯಾಯದಲ್ಲಿನ ಶ್ಲೋಕದ ವಿಂಗಡಣೆಯು ಪಾತ್ರಗಳು ಬರುವ ಕ್ರಮದಲ್ಲಿದೆ. ಉದಾ: ಅಗಸ್ತ್ಯ, ಸೂತ, ಹಯಗ್ರೀವ, ಭಗವತಿ ಲಲಿತ. ಅನುಕ್ರಮವಾಗಿ ಹೋಗಿದೆ. 10, 1, 25 (16 + 9½). 13 (3½ + 9½). ಧ್ಯಾನ ಶ್ಲೋಕವನ್ನು ಬೇರೆಯಾಗಿ ಸೇರಿಸಿದ್ದಾರೆ. ವಿಷಯದ ಜೋಡಣೆಯು ವೈಜ್ಞಾನಿಕವಾಗಿರದಿದ್ದರೂ, ಲಲಿತಾ ಸಹಸ್ರನಾಮದ ಶ್ಲೋಕಗಳ ವಿಂಗಡಣೆಯು ವೈಜ್ಞಾನಿಕವಾಗಿ, ಅನುಕೂಲವಾಗಿ ಜೋಡಣೆಯಾಗಿದೆ.

ಲಲಿತಾ ಸಹಸ್ರನಾಮದ ವ್ಯಾಖ್ಯಾನವನ್ನು ಸಂಸ್ಕೃತದಲ್ಲಿ ಐದು ಜನ ವಿದ್ವಾಂಸರು ಮಾಡಿದ್ದಾರೆ. ಅವರು 1. ವಿಮರ್ಶಾನಂದ ನಾಥಾ. 2. ವಿದ್ಯಾರಣ್ಯ ಮುನೀಶ್ವರ. 3. ಭಟ್ಟ ನಾರಾಯಣ. 4. ಶಂಕರಾಚಾರ್ಯ ಮತ್ತು ಭಾಸ್ಕರರಾಯ. ಇವರೆಲ್ಲರೂ ಬೇರೆ ಬೇರೆ ಕಾಲದಲ್ಲಿ ಲಲಿತಾ ಸಹಸ್ರ ನಾಮಕ್ಕೆ ಭಾಷ್ಯವನ್ನು ಬರೆದಿದ್ದಾರೆ. (ಇವುಗಳ ವಿವರಕ್ಕೆ ಆರ್. ಅನಂತಕೃಷ್ಣಶಾಸ್ತ್ರಿಗಳ ಲಲಿತ ಸಹಸ್ರನಾಮ, ಪು xiii ಮದ್ರಾಸ್. 1951 ನ್ನು ನೋಡಿ.) ಇದು ಇತರ ಭಾಷೆಗಳಲ್ಲಿ ಅನುವಾದವಾಗಿದೆ. ಮೊಟ್ಟಮೊದಲನೆಯದಾಗಿ, ಆರ್. ಅನಂತಕೃಷ್ಣಶಾಸ್ತ್ರಿಗಳ ಆಂಗ್ಲ ಅನುವಾದವನ್ನು ಹೆಸರಿಸಬಹುದು. ಇವರು ಭಾಸ್ಕರರಾಯರ ಲಲಿತಾ ಸಹಸ್ರನಾಮದ ಭಾಷ್ಯವನ್ನೂ ಆಂಗ್ಲ ಭಾಷೆಗೆ ಅನುವಾದ ಮಾಡಿದ್ದಾರೆ.

ಲಲಿತಾ ಸಹಸ್ರನಾಮದ ಮೇಲಿನ ವ್ಯಾಖ್ಯಾನವು ಅದರ ಪ್ರಾಮುಖ್ಯವನ್ನೂ, ಪಾಂಡಿತ್ಯವನ್ನೂ, ಅದರ ಶ್ರೇಷ್ಠತೆಯನ್ನೂ ತಿಳಿಸುತ್ತದೆ. ಮತ್ತು ಇದು ಆ ಕಾಲದ ಸಮಾಜದ ಸಾಂಸ್ಕೃತಿಕ ಮಟ್ಟವನ್ನರಿಯುವ ಆಕರವಾಗಿದೆ. ಉದಾ: ಸ್ತ್ರೀಯರು

ಅವರ ಉಡುಗೆಗಳು, ಅವರ ಆಹಾರ ಪಾನೀಯಗಳು. ಅವರ ಅಭಿರುಚಿ. ಕಾರ್ಯ ಚಟುವಟಿಕೆ—ಇವುಗಳ ಬಗ್ಗೆ ನಮಗೆ ಅರಿವುಂಟಾಗುತ್ತದೆ. ಹೀಗಾಗಿ ಇದನ್ನು ಸಾಮಾಜಿಕವಾಗಿ ಕೂಡ ಅಭ್ಯಾಸ ಮಾಡಲು ಒಳ್ಳೆಯ ವಿಷಯವಾಗುತ್ತದೆ. ಇಷ್ಟೇ ಅಲ್ಲದೆ ಲಲಿತಾ ಸಹಸ್ರನಾಮವು ವಿಚಾರ ಪ್ರಚೋದನೆಯಿಂದಲೂ. ಅಧ್ಯಾತ್ಮಿಕತೆಯಿಂದಲೂ. ಸೊಗಸಾದ ಭಾಷೆ ಮತ್ತು ಶೈಲಿಯಿಂದಲೂ ಅತ್ಯಂತ ಮಹತ್ವದ್ದಾಗಿದೆ. ಈ ರೀತಿಯ ಅಭ್ಯಾಸವು ಉಳಿದ ಸಹಸ್ರ ನಾಮಗಳಿಗೂ ಅನ್ವಯಿಸುತ್ತದೆ.

ಭಗವತಿ ಲಲಿತಳನ್ನು ಕುರಿತು ಚರ್ಚೆಗೆ ತೊಡಗುವ ಮೊದಲು, ಈ ಕೃತಿಯ ಲಕ್ಷಣವನ್ನು ಮೊದಲು ತಿಳಿಯೋಣ. ಲಲಿತಾ ಸಹಸ್ರನಾಮವು ಮಂತ್ರ ಶಾಸ್ತ್ರಕ್ಕೆ ಸೇರಿದೆ – ಇದು ಓದುವುದಕ್ಕೆ ಅತ್ಯಂತ ಲಲಿತವೂ. ರಮಣೀಯವೂ ಆಗಿದ್ದರೂ ತಂತ್ರ ಶಾಸ್ತ್ರಗಳಿಗೆ ಸಂಬಂಧಪಟ್ಟ ಪಾರಿಭಾಷಿಕ ಪದಗಳಿಂದ ಮತ್ತು ಗುಪ್ತ ಸಂಜ್ಞೆಗಳಿಂದ ತುಂಬಿದೆ. ಈ ಕೃತಿಯು ಶ್ರೀ ವಿದ್ಯೋಪಾಸನ ಪದ್ಧತಿಗೆ ಉಪಯುಕ್ತವಾಗಿದೆ. ಶಾಕ್ತಮತವನ್ನು ಪ್ರವೇಶಿಸದವರಿಗೆ ಇದು ಅಸಾಧ್ಯವಾಗುತ್ತದೆ. ಇಲ್ಲಿ ಹೇಳಿರುವ ಉಪಾಸನಾ ಪದ್ಧತಿಯನ್ನು ಜಯಿಸುವುದು ಅಷ್ಟೇನು ಸುಲಭವಲ್ಲ. ಆದರೆ ಈ ಪೂಜಾಪದ್ಧತಿಯಲ್ಲಿ ಸಿದ್ಧಿಯನ್ನು ಪಡೆದ ಸಾಧಕನು ದೇವಿ ಲಲಿತಳ ಅನುಗ್ರಹಕ್ಕೆ ಪಾತ್ರನಾಗಿ ಅಲೌಕಿಕ ಆನಂದವನ್ನು ಪಡೆಯುತ್ತಾನೆ.

ಇಲ್ಲಿನ ಭಕ್ತಿಯ ಕ್ರಮವು ಹೀಗಿದೆ. ಮನುಷ್ಯರಲ್ಲಿ ಅಂತರ್ಗತವಾಗಿರುವ ಶಕ್ತಿಯನ್ನು ಎಚ್ಚರಗೊಳಿಸುವುದು ಶಾಕ್ತ ತಂತ್ರಗಳ ಮುಖ್ಯ ಸಾಧನೆಯಾಗಿದೆ. ಮೊದಲನೆಯದಾಗಿ "ಮೂಲಾಧಾರದಲ್ಲಿ ಸರ್ಪದಂತೆ ಸುತ್ತಿಕೊಂಡು ಸುಪ್ತವಾಗಿರುವ ಕುಂಡಲಿನೀ ಶಕ್ತಿಯನ್ನು ಮೇಲೆ ಮೇಲಿರುವ ಚಕ್ರಗಳ ಮೂಲಕ ಸಹಸ್ರಾರಕ್ಕೆ ಸೇರಿಸುವುದು. ಮುಂದಿನದು ಸಮಾಧಿ. ದೇವಿಯನ್ನು ಮನದಲ್ಲಿ ಉಪಾಸಿಸುವುದು. ಈ ಸಮಾಧಿ ಯೋಗದಲ್ಲಿ ದೇವಿಯ ಸಾಕ್ಷಾತ್ಕಾರ ಮತ್ತು ಪ್ರಸಾದವೂ ಆಗುತ್ತದೆ. ಇದು ಕುಂಡಲಿನೀ ಯೋಗದ ಮುಖ್ಯ ಉದ್ದೇಶ" (ಅನಂತಕೃಷ್ಣಶಾಸ್ತ್ರಿ. ಲ.ಸ.).

ಲಲಿತಾ ಸಹಸ್ರನಾಮದ ವಸ್ತುವು ಒಂದೇ ಕಡೆ ಇರದೆ ಅಲ್ಲಲ್ಲಿ ಚದುರಿದೆ. (ಅದೇ). ಇಲ್ಲಿ ಸಹಸ್ರನಾಮ ಪದವು ನಮ್ಮ ಗಮನವನ್ನು ಸೆಳೆಯುತ್ತದೆ. ಇದನ್ನು ಸುಲಭವಾಗಿ ದೇವಿ ಲಲಿತಳ 'ಸಾವಿರ ಹೆಸರು'ಗಳು ಎಂದು ಹೇಳಬಹುದು. ಈಗಲೂ ಅನೇಕ ಸಾಂಪ್ರದಾಯಿಕ ಹಿಂದೂ ಮನೆತನಗಳಲ್ಲಿ ಸಹಸ್ರನಾಮ ಪಾರಾಯಣ ಮತ್ತು ಸಹಸ್ರನಾಮ ಅರ್ಚನೆಗಳನ್ನು ಮಾಡುವ ಅಭ್ಯಾಸವಿದೆ. ಸಹಸ್ರನಾಮವು ಸಂಪೂರ್ಣವಾಗಿ ಭಕ್ತಿ ಪ್ರಧಾನವಾದುದೆಂದೂ. ಅದು ಸಾಹಿತ್ಯ ಗುಣದಿಂದ ಕೂಡಿಲ್ಲದೆಂದೂ ತಿಳಿದಿದ್ದರು. ಸಂಸ್ಕೃತದ ಸುಪ್ರಸಿದ್ಧ ಅಲಂಕಾರಿಕನಾದ ಕುಂತಕನು. ಮುನಿಗಳಿಂದ ರಚಿತವಾದ ಇವುಗಳು ಕಾವ್ಯಕ್ಕೆ ಉದಾಹರಣೆಯಾಗಲಾರವೆಂದು ಹೇಳಿದನು.

('ಮುನಿ ಪ್ರಣೀತಾನಿ ಸಹಸ್ರನಾಮಾದಿ ಸ್ತೋತ್ರಾಣಿ ನಾ ಕಾವ್ಯ ಸೋದಾಹರಣಾನಿ') ಈ ಸ್ತೋತ್ರಗಳಲ್ಲಿ ತಾನು ನಿರೀಕ್ಷಿಸಿದ್ದ ಕಾವ್ಯ ಸೌಂದರ್ಯ ಮತ್ತು ಗುಣಗಳು ಅವನಿಗೆ ಕಂಡುಬರಲಿಲ್ಲ. ಅಂದರೆ ಕುಂತಕನ ಈ ಹೇಳಿಕೆಯಿಂದ ಈ ಸ್ತೋತ್ರಗಳಲ್ಲಿ ಯಾವ ಶ್ರೇಷ್ಠ ಗುಣಗಳೂ ಇಲ್ಲವೆಂಬ ತಪ್ಪು ಅಭಿಪ್ರಾಯಕ್ಕೆ ಬರಬಾರದು. ಅವುಗಳಿಗೇ ವಿಶಿಷ್ಟವಾದ. ಸಂಸ್ಕೃತದ ವಿವಿಧ ಛಂದೋವೈವಿಧ್ಯಗಳಿಂದ ಕೂಡಿವೆ. ಈ ಸ್ತೋತ್ರಗಳನ್ನು ಪವಿತ್ರವಾದ, ಆಡಂಬರವಿಲ್ಲದ. ಸರಳವಾದ ವೇದ ಮಂತ್ರಗಳ ಶೈಲಿಗೆ ಹೋಲಿಸಬಹುದು. ಹೀಗಾಗಿ ಈ ಸ್ತೋತ್ರಗಳನ್ನು ಅಲಂಕಾರ ಶಾಸ್ತ್ರಕ್ಕೆ ಅನುಗುಣವಾಗಿಲ್ಲವೆಂದು ಸಂಪೂರ್ಣವಾಗಿ ಕಡೆಗಣಿಸಲಾಗುವುದಿಲ್ಲ.

ಸಹಸ್ರನಾಮ ಪದ್ಧತಿಯ ಪೂಜೆಯ ಉಗಮವನ್ನು ವೇದಗಳಲ್ಲಿ. ಅದರಲ್ಲೂ ಯಜುರ್ವೇದದಲ್ಲಿ ಕಾಣಬಹುದು. ತಮಗೆ ಇಷ್ಟಬಂದ ದೇವತೆಯನ್ನು ನಾನಾ ಹೆಸರ ಗಳಿಂದ ಕೊಂಡಾಡುವುದು ಇದು ಪುನರುಕ್ತಿಯಾದರೂ ಪರವಾಗಿಲ್ಲ. ಆ ದೇವತೆಗಳೇ ಪರಮಪೂಜ್ಯರೆಂದೂ. ಅತಿಶ್ರೇಷ್ಠರೆಂದೂ ಅವರನ್ನು ಕೀರ್ತಿಶಿಖರಕ್ಕೇರಿಸುವುದು—ಇವು ಆಯಾ ದೇವತೆಗಳನ್ನು ಕುರಿತು ರಚಿತವಾದ ಸಹಸ್ರನಾಮಗಳೆಲ್ಲದರ ಮೂಲೋದ್ದೇಶ. ಮೇಲಾಗಿ ಸಹಸ್ರನಾಮಗಳ ರಚಕರು ಮುನಿಶ್ರೇಷ್ಠರಾದುದರಿಂದ ಅವುಗಳು ಅನುಪಮವಾಗಿವೆ. ಮುನಿಗಳ ಇಷ್ಟಾರ್ಥಗಳು ಸಾಮಾನ್ಯವಾಗಿ ನೆರವೇರುತ್ತಿದ್ದುದರಿಂದ ಅವರು ಆಯಾ ದೇವತೆಗಳನ್ನು ಈ ಸ್ತೋತ್ರಗಳಲ್ಲಿ ಬಹುವಾಗಿ ಹೊಗಳುವ ಪರಿಪಾಠವಿದ್ದಿತೆಂದು ತೋರುತ್ತದೆ.

ವಿಷ್ಣು ಸಹಸ್ರನಾಮವೇ ಎಲ್ಲಾ ಸಹಸ್ರನಾಮಗಳಿಗಿಂತ ಪ್ರಾಚೀನವಾದುದೆಂದು ಪರಿಗಣಿಸಲಾಗಿದೆ. ನಂತರ ಶಿವ ಮತ್ತು ಉಳಿದ ಸಹಸ್ರನಾಮಗಳು ರಚಿತವಾದುವು. ಕ್ರಿ. ಶ. 6ನೆಯ ಶತಮಾನದ ಸಂಸ್ಕೃತದ ಸುಪ್ರಸಿದ್ಧ ಪ್ರಬಂಧಕಾರನಾದ ಬಾಣನು ವಿಷ್ಣು ಸಹಸ್ರನಾಮವನ್ನು ಉಲ್ಲೇಖಿಸುತ್ತಾನೆ. ಈಗ ನಮ್ಮಲ್ಲಿ ಪುರುಷ ದೇವತೆ ಮತ್ತು ಸ್ತ್ರೀ ದೇವತೆಗಳ ಗುಣಗಾನ ಮಾಡುವ ಅಸಂಖ್ಯ ಸಹಸ್ರನಾಮಗಳಿವೆ.

ದೇವೀ ಸಹಸ್ರನಾಮಗಳು ಅನೇಕವಾಗಿವೆಯೆಂದು ಲಲಿತ ಸಹಸ್ರನಾಮದಿಂದ ತಿಳಿಯುತ್ತದೆ. ಇವುಗಳಲ್ಲಿ ಹತ್ತನ್ನು ಮಾತ್ರ ರಹಸ್ಯವಾದುವುಗಳೆಂದು ಹೇಳುತ್ತಾರೆ. ಇವುಗಳಲ್ಲಿ ಲಲಿತಾ ಸಹಸ್ರನಾಮವು ಪ್ರಮುಖವಾದುದು. (ದೇವೀನಾಮ—ಸಹಸ್ರೇಷು ಮುಖ್ಯಂ............) ಹಯಗ್ರೀವನು ಅಗಸ್ತ್ಯರಿಗೆ ದೇವೀ ಲಲಿತಳ ಉಪಾಸನೆಯನ್ನು ಉಪದೇಶಿಸುವಲ್ಲಿ ತಡಮಾಡಿದುದಕ್ಕೆ ಇದೂ ಒಂದು ಕಾರಣವಿರಬಹುದು. ಉಪಾಸಕರಲ್ಲಿ ಅಗಸ್ತ್ಯರು ಮತ್ತು ಅವರ ಪತ್ನಿ ಲೋಪಾಮುದ್ರೆ ಇವರಿಬ್ಬರೇ ಮೊದಲಿಗರು ಮತ್ತು ಜಯಪ್ರದರಾದವರು. ಮತ್ತೊಂದು ಅಂಶವೆಂದರೆ ಲಲಿತಾ ಸಹಸ್ರನಾಮವು ದೇವೀ ಲಲಿತಳನ್ನು 'ಮಾತೆ'ಯೆಂದು ಪ್ರಾರಂಭದಲ್ಲಿ

ಸಂಬೋಧಿಸಿ. 'ಮಾತೆ'ಯೆಂದೇ ಮುಕ್ತಾಯ ಮಾಡುತ್ತವೆ. (ಶ್ರೀಮಾತಾ—ಲಲಿತಾಂಬಿಕಾ) ಮತ್ತೆ ಯಾವ ಸಹಸ್ರನಾಮದಲ್ಲಿಯೂ ಇದಕ್ಕೆ ಇಷ್ಟು ಪ್ರಾಮುಖ್ಯವಿಲ್ಲ.

ದೇವೀ ಲಲಿತಳನ್ನು ವಿಧಿಪೂರ್ವಕವಾಗಿ ಪೂಜಿಸಲು ಅನೇಕ ನಿಯಮಗಳಿವೆ. ಇವುಗಳನ್ನು ಮುಂದೆ ಗಮನಿಸಲಾಗುತ್ತದೆ. ಈ ನಿಯಮಗಳ ಮತ್ತು ಉಪಾಸನೆ (ಪೂಜೆ)ಯ ಕ್ರಮವು ಭಕ್ತನ ಆಶೋತ್ತರ ಇಷ್ಟಾರ್ಥಗಳನ್ನು ಅವಲಂಬಿಸಿರುತ್ತವೆ. ಒಂದು ವೇಳೆ ಭಕ್ತನು ಭಗವತಿಯ ಉಪಾಸನೆಯನ್ನು ಪ್ರತಿಫಲಾಪೇಕ್ಷೆಯಿಲ್ಲದೆ ಮಾಡಿದರೆ, ಅಂಥವನು ಈ ಸಂಸಾರ ಬಂಧನದಿಂದ ಮುಕ್ತನಾಗಿ ಶಾಶ್ವತ ಸುಖ. ಸಂತೋಷವನ್ನು ಪಡೆದು ದೇವಿಯ ಕೃಪಾಕಟಾಕ್ಷಕ್ಕೆ ಪಾತ್ರನಾಗುವನೆಂಬ ಆಶ್ವಾಸನೆಯನ್ನು ಇದು ನೀಡುತ್ತದೆ.

ದೇವೀ ಲಲಿತಳನ್ನು ಕುರಿತು ಮಾಡಿರುವ ವರ್ಣನೆ. ಅವಳ ಸ್ವರೂಪ. ಸೊಬಗು—ಇವುಗಳ ಸೂಕ್ಷ್ಮ ಪರಿಚಯವನ್ನು ಈಗ ಪಡೆಯೋಣ.

2

ದೇವೀ ಲಲಿತಳು ಸೊಬಗು. ಲಾವಣ್ಯದಿಂದ ಕೂಡಿದ ಅತ್ಯಂತ ಸುಂದರ ಸ್ತ್ರೀ. ಅವಳು ತೇಜಸ್ವಿನಿ ಮತ್ತು ಶಕ್ತಿಶಾಲಿನಿ. ತ್ರಿಲೋಕಗಳಿಗೂ ಅವಳು ಆದಿಪರಾಶಕ್ತಿ (ಶಕ್ತಿಯ ಮೂಲ). ಸೃಷ್ಟಿಯ ಸಚರಾಚರಗಳೆಲ್ಲವೂ ಅವಳ ಮಹಿಮೆಯನ್ನು ಗುರುತಿಸಿವೆ. ಅವಳು ಶಕ್ತಿ ಸ್ವರೂಪಿಣಿ. ಜಗತ್ತಿನ ಸಕಲ ಶಕ್ತಿಗಳಿಗೂ ಮೂಲ ಸ್ವರೂಪಳು.

ಭಗವತಿ ಲಲಿತಳಿಗೆ ಎಲ್ಲ ಮಾನವರಂತೆ ಜನನವಿದೆ. ಲಲಿತಾ ಸಹಸ್ರ ನಾಮದಲ್ಲಿ ಇದಕ್ಕೆ ಸಾಕಷ್ಟು ಉಲ್ಲೇಖವಿದೆ. (ಚಿದಗ್ನಿ ಕುಂಡ ಸಂಭೂತಾ) ('ಚಿತ್' ಎಂದರೆ ಬ್ರಹ್ಮ. ಅದೇ ಅಗ್ನಿಕುಂಡ. ಅವಿದ್ಯಾ ರೂಪವಾದ ತಮಸ್ಸಿಗೆ ವಿರೋಧವಾದ ಅಗ್ನಿ ಕುಂಡದಿಂದ ಜನಿಸಿದವಳು ಅಥವಾ ಚೈತನ್ಯವೆಂಬ ಗುಣದಿಂದ ಅಗ್ನಿಯಲ್ಲಿ ಚೆನ್ನಾಗಿ ಅವಸ್ಥಿತಳಾಗಿರುವವಳು ಎಂದು ಅರ್ಥವಾಗುತ್ತದೆ). 'ದೇವಕಾರ್ಯ ಸಮುದ್ಯತಾ' ಭಂಡಾಸುರ – ಮಹಿಷಾಸುರರ ವಧೆ ಇವೇ ಮೊದಲಾದ ದೇವತೆಗಳ ಕಾರ್ಯಕ್ಕಾಗಿ ಆವಿರ್ಭವಿಸಿದಳು. ದೇವತೆಗಳ ಇಷ್ಟಾರ್ಥವನ್ನು ಪೂರೈಸುವ ಸಲುವಾಗಿ. ಅವರ ಕಾರ್ಯಕ್ಕಾಗಿ ಜನಿಸಿದವಳು ಇತ್ಯಾದಿ. ಅವಳಿಗೆ ಜನನವಿಲ್ಲೆಂದು ತಿಳಿಸುವ ವಿಶೇಷಣಗಳೂ ಇಲ್ಲಿವೆ. ಉದಾ: (ಅಜಾ. ಅಯೋನಿಃ ಇತ್ಯಾದಿ) ಆದರೆ ಅವಳಿಗೆ ಜನನವಿಲ್ಲೆಂದು ಹೇಳುವ ವಿಶೇಷಣಗಳಿಗಿಂತ ಜನನವಿದೆ ಎಂದು ಹೇಳುವ ವಿಶೇಷಣಗಳೇ ಹೆಚ್ಚಾಗಿ ಕಂಡುಬರುತ್ತವೆ.

ದೇವೀ ಲಲಿತಳು ಸುಂದರ ದೇಹಕಾಂತಿಯುಳ್ಳವಳು ಮತ್ತು ಒಳ್ಳೆಯ ಆಕಾರಗಳುಳ್ಳ ಅಂಗಾಂಗಗಳನ್ನು ಪಡೆದಿದ್ದಾಳೆ. ತನ್ನ ದೇಹದ ಉಚಿತ ಸ್ಥಳಗಳಲ್ಲಿ ಒಡವೆಗಳನ್ನು

ಧರಿಸುತ್ತಾಳೆ. ಸರ್ವಾಲಂಕಾರ ಭೂಷಿತೆಯಾಗಿರುವ ದೇವಿಯು ಒಡವೆಗಳಿಂದ ಸೂರ್ಮಡಿಯಾಗಿ ಶೋಭಿಸುತ್ತಾಳೆ. ಕಾವ್ಯಗಳಲ್ಲಿ ವಿಶೇಷವಾಗಿ ಬರುವ ಅಷ್ಟಾದಶ ವರ್ಣನೆಗಳಲ್ಲಿ ಒಂದಾದ ಸ್ತ್ರೀ ವರ್ಣನೆಯಂತೆ ಲಲಿತಾ ಸಹಸ್ರ ನಾಮದ ಸ್ತ್ರೀವರ್ಣನೆಯು ಕಾಣುತ್ತದೆ.

'ಕಾಂತಾ', 'ಕಾಂತಾರ್ಧವಿಗ್ರಹ', 'ತ್ರಿಪುರ ಸುಂದರಿ' ಇತ್ಯಾದಿ. ಲಲಿತಾ ಸಹಸ್ರ ನಾಮದಲ್ಲಿ ಬರುವ ಈ ಪದಗಳು ದೇವಿಯನ್ನು ಅತ್ಯಂತ ಸುಂದರಳೆಂದು ವರ್ಣಿಸಿವೆ. ಸ್ತ್ರೀಯರಲ್ಲಿ ಲಾವಣ್ಯವು ಪ್ರಮುಖ ಗುಣವಾದುದರಿಂದ ದೇವಿಯನ್ನು ಲಾವಣ್ಯವತಿ ಯೆಂದು ವರ್ಣಿಸುತ್ತದೆ.

'ದಿವ್ಯಗಂಧಾಢ್ಯಾ', 'ಸಿಂಧೂರ ತಿಲಕಾಂಚಿತಾ'—ಇತ್ಯಾದಿ ಪದಗಳು ದೇವಿಯು ತನ್ನ ಸುಂದರ ದೇಹಕ್ಕೆ ಸುಗಂಧ ದ್ರವ್ಯಗಳನ್ನು ಲೇಪಿಸುತ್ತಾಳೆಂದು ತಿಳಿಸುತ್ತವೆ.

ದೇವಿಯು ಶಾಖಾಹಾರ. ಮಾಂಸಾಹಾರವೆರಡನ್ನೂ ಭುಜಿಸುತ್ತಾಳೆ. ಉದಾ ಹರಣೆಗೆ ಈ ವಿಶೇಷಣಗಳನ್ನು ಗಮನಿಸಬಹುದು. 'ಹರಿದ್ರಾನ್ನೈಕ ರಸಿಕಾ', 'ದಧ್ಯಾನ್ನಾಸಕ್ತ ಹೃದಯಾ', 'ಮುದ್ಗೌದನಾಸಕ್ತ ಚಿತ್ತಾ'. 'ಗುಡಾನ್ನಪ್ರೀತ ಮಾನಸಾ.' 'ಪಾಯಸಾನ್ನಪ್ರಿಯಾ'–ಇತ್ಯಾದಿ. ಇವು ಅವಳ ಶಾಖಾಹಾರ ಪ್ರಿಯತೆಯನ್ನು ತೋರಿಸುತ್ತವೆ. 'ಮಾಂಸಾನ್ನಿಷ್ಠಾ' ಎನ್ನುವುದು ಅವಳ ಮಾಂಸಾಹಾರ ಪ್ರಿಯತೆಯನ್ನೂ ತೋರಿಸುತ್ತದೆ. ಹೇಗಾದರೂ ದೇವಿಗೆ ಇಂಥದೇ ಆಹಾರವಾಗಬೇಕೆಂಬುದೇನೂ ಇಲ್ಲ. ಅವಳಿಗೆ ಯಾವ ತರಹದ ಆಹಾರ ದೊರಕುತ್ತದೋ ಅದು ಅವಳಿಗೆ ಪ್ರಿಯ ವಾಗುತ್ತದೆ. (ಸರ್ವೌದನ ಪ್ರೀತಚಿತ್ತಾ.). ಆದರೆ. ಅವಳಿಗೆ ಅತಿ ಹೆಚ್ಚು ಪಾಲಿನ ಆಹಾರ ಅಗತ್ಯವಾಗಿ ಬೇಕು. ಆದ್ದರಿಂದ ಅವಳು ಹೆಚ್ಚು ಆಹಾರವನ್ನು ಸ್ವೀಕರಿಸುತ್ತಾಳೆ. (ಮಹಾಶನಾ, ಮಹಾಗ್ರಾಸಾ).

ದೇವಿಗೆ ಪಾನೀಯವನ್ನು ಸೇವಿಸುವುದೆಂದರೆ ಬಹಳ ಇಷ್ಟ. ಪಾನಪ್ರಿಯಳು (ಗುಡೋದಕ). ಅವಳು ಮಧುವನ್ನು ಉನ್ಮತ್ತಳಾಗುವವರೆಗೂ ಸೇವಿಸುತ್ತಾಳೆ. (ಮಧು ಪ್ರೀತಾ, ಮಾಧ್ವೀ ಪಾನಾಲಸ ಮತ್ತಾ') ಅವಳು ತಾಂಬೂಲವನ್ನೂ ಸೇವಿಸು ತ್ತಾಳೆ. (ತಾಂಬೂಲ – ಪೂರಿತ – ಮುಖೀ.).

ಹೀಗೆ ದೇವಿಯು ಆಹಾರ. ಪಾನೀಯಗಳನ್ನು ತನಗೆ ತೃಪ್ತಿಯಾಗುವವರೆಗೂ ಸ್ವೀಕರಿಸುತ್ತಾಳೆ.

ದೇವಿಯು ಆವಾಸಸ್ಥಾನವುಳ್ಳವಳು. ಅವಳು ಸರ್ವಾಂತರ್ಯಾಮಿಯಾದರೂ ಸಹ ಅವಳಿಗೇ ಪ್ರತ್ಯೇಕವಾದ ನಿವಾಸವಿದೆ. ಉದಾ: ಮಹಾಪದ್ಮಾಟವೀ ಸಂಸ್ಥಾ,

(ತಾವರೆಯ ಹೂಗಳ ಸಮೂಹದಲ್ಲಿ ನೆಲಸಿದವಳು) ಕದಂಬವನವಾಸಿನೀ. (ಕದಂಬ ವನಗಳ ಮಧ್ಯದಲ್ಲಿ ನೆಲಸಿದವಳು) ಸುಮೇರು ಶೃಂಗ ಮಧ್ಯಸ್ಥಾ (ಮೇರು ಪರ್ವತದ ಶಿಖರದಲ್ಲಿ ನೆಲಸಿದವಳು), ಸುಧಾಸಾಗರ ಮಧ್ಯಸ್ಥಾ. (ಅಮೃತ ಸಾಗರದ ಮಧ್ಯದಲ್ಲಿ ವಾಸಿಸುವವಳು). ಭಾನು ಮಂಡಲ ಮಧ್ಯಸ್ಥಾ–ಇತ್ಯಾದಿ. (ಸೂರ್ಯಮಂಡಲದ ಮಧ್ಯದಲ್ಲಿರುವವಳು) — ಇವು ದೇವಿಯು ವಾಸಿಸುವ ಸ್ಥಳಗಳನ್ನು ಸೂಚಿಸುತ್ತವೆ. ಚಿಂತಾಮಣಿಗಳಿಂದ ಮಾಡಿದ ಮನೆಗಳಲ್ಲಿ ವಾಸಿಸುತ್ತಾಳೆ. (ಚಿಂತಾಮಣಿಗೃಹಾಂತಸ್ಥಾ). ಅವಳು ಪಟ್ಟಣಗಳಲ್ಲಿ ವಾಸಿಸಲು ಇಷ್ಟಪಡುತ್ತಾಳೆ. ಅವಳು ಸ್ವರ್ಗದಲ್ಲಿಯೂ, ತ್ರಿಲೋಕಗಳಲ್ಲಿಯೂ ನೆಲೆಸಿರುತ್ತಾಳೆ. (ತ್ರಿವರ್ಗ ನಿಲಯಾ).

ಇದರಿಂದ ದೇವಿಯು ಸರ್ವಾಂತರ್ಯಾಮಿಯೆಂದೂ, ಎಲ್ಲಾ ಸ್ಥಳಗಳಲ್ಲಿಯೂ ಇರುವವಳೆಂದೂ ವೇದ್ಯವಾಗುತ್ತದೆ. ಆದರೆ ಅವಳು ಭಕ್ತರ ಹೃನ್ಮನಗಳಲ್ಲಿ ನೆಲೆಸಿರುತ್ತಾಳೆಂದು ಅನೇಕರು ಭಾವಿಸುತ್ತಾರೆ. (ಹೃದಯಸ್ಥಾ. ಭಕ್ತಮಾನಸ ಹಂಸಿಕಾ. ಇತ್ಯಾದಿ). ಅವಳಾದರೋ ಭಕ್ತರಿಗೆ ಅತಿ ಸಮೀಪದಲ್ಲಿ ಇರುವವಳೂ ಹೌದು. ಅತಿ ದೂರ ಇರುವವಳೂ ಹೌದು. ಅವಳು ಅತಿ ಸುಲಭಳೂ ಹೌದು, ಅತಿ ದುರ್ಲಭಳೂ ಹೌದು. ಹೀಗೆ ದೇವಿಯ ಸರ್ವಾಂತರ್ಯಾಮಿತ್ವವನ್ನು ಸಹಸ್ರ ನಾಮವು ತಿಳಿಸುತ್ತದೆ.

ಲಲಿತಳು ತನ್ನ ಸುಖ, ಸಂತೋಷಕ್ಕಾಗಿ ಅನೇಕ ವಾಹನಗಳನ್ನು ಪಡೆದಿದ್ದಾಳೆ. ಅನೇಕ ರಥಗಳ ಒಡೆಯಳೆಂದು ಅವಳನ್ನು ವರ್ಣಿಸುತ್ತಾರೆ. ಅವುಗಳಲ್ಲಿ ಪ್ರಮುಖ ವಾದ ಚಕ್ರರಾಜ ರಥವನ್ನು ದೇವಿಯು ಉಪಯೋಗಿಸುತ್ತಾಳೆ. (ಚಕ್ರರಾಜ–ರಥಾ–ರೂಢಾ). ಅವಳು ಕುದುರೆಗಳನ್ನೂ ತನ್ನ ವಾಹನಗಳಾಗಿ ಬಳಸುತ್ತಾಳೆ. (ಅಶ್ವಾ ರೂಢಾ) ಆಲಂಕಾರಿಕವಾಗಿ ದೇವತೆಗಳನ್ನು ಮತ್ತೊಬ್ಬರೊಡನೆ ಹೋಲಿಸುವುದ ರಿಂದ ಅವರ ವ್ಯಕ್ತಿತ್ವಕ್ಕೆ ಮತ್ತಷ್ಟು ಕಳೆಯೇರುತ್ತದೆ. ದೇವೀ ಲಲಿತಳೂ ಕೂಡ ಅಂತಹ ವಿಶೇಷತೆಯನ್ನು ಪಡೆದಿದ್ದಾಳೆ. ರೂಪಕಗಳು ಈ ಸಂದರ್ಭದಲ್ಲಿ ಅನಿವಾರ್ಯ ವಾಗುತ್ತವೆ—ಲಲಿತಳನ್ನು ಸಕಲ ಸುಜ್ಞಾನಗಳ ಮೂಲವೆಂದೂ ಮತ್ತು ಅವಳನ್ನು ವಿಷ್ಣು, ಸರಸ್ವತಿ ಮೊದಲಾದ ದೇವತೆಗಳೊಂದಿಗೆ ತಾದಾತ್ಮ್ಯಗೊಳಿಸಿದ್ದಾರೆ.

ದೇವಿಗೆ ಒಂದೇ ರೂಪವಾಗಲೀ, ಅಂತ್ಯರೂಪವಾಗಲೀ ಇಲ್ಲ. ಅವಳಿಗೆ ಬಹು ರೂಪಗಳುಂಟು. (ಭೂಮರೂಪ) ಅವಳು ಹೀಗೆಯೇ ಇರಬೇಕು ಎಂದು ತಿಳಿಸುವ ಯಾವ ಒಂದು ರೂಪವೂ ಅವಳಿಗೆ ಇಲ್ಲ—ಇದಕ್ಕನುಗುಣವಾಗಿ ಅವಳ ಮುಖಗಳನ್ನು, ಕಣ್ಣುಗಳನ್ನು, ಕೈಗಳನ್ನು,— ವರ್ಣಿಸುವ ಅನೇಕ ವಿಶೇಷಣಗಳುಂಟು. ಇದು ಅಸಂಖ್ಯ ವಾಗಿರುತ್ತವೆ. ಅತಿ ಹೆಚ್ಚಿನ ಸಂಖ್ಯೆ ಎಂದರೆ ಸಾವಿರ. (ಉದಾಹರಣೆಗೆ ಸಹಸ್ರಾಕ್ಷಿ) ಈ ತರಹದ ಬಹುರೂಪ ತತ್ವವು ಅವಳ ಮಾನವಾತೀತ (ದಿವ್ಯ) ಶಕ್ತಿಯನ್ನು ತೋರಿ

ಸುತ್ತದೆ. ಇದರಿಂದ ಅವಳು ಲೋಕ ರಕ್ಷಣೆ ಮತ್ತು ಲೋಕ ಕಲ್ಯಾಣಕ್ಕಾಗಿ ಅದ್ಭುತ ಕಾರ್ಯಗಳನ್ನು ಮಾಡಲು ಅನುಕೂಲವಾಗುತ್ತದೆ. ಈ ಎಲ್ಲ ಕಲ್ಪನೆಯೂ ಭಕ್ತನ ಮನಸ್ಸನ್ನು ಅವಲಂಬಿಸಿರುತ್ತದೆ.

ಭಗವತಿ ಲಲಿತಳನ್ನು ಆದಿಪರಾಶಕ್ತಿ ಎಂದು ಗುರುತಿಸುವಲ್ಲಿ. ಅವಳಲ್ಲಿರುವ ಆಧ್ಯಾತ್ಮಿಕ ಶಕ್ತಿಯನ್ನು ಗಮನಿಸಬೇಕು.

ದೇವಿಯು ಕಾಂತಿಯುಕ್ತಳು ಮತ್ತು ಪ್ರಕಾಶಮಾನಳು ಎಂದು ಅನೇಕ ವಿಶೇಷಣಗಳು ತಿಳಿಸುತ್ತವೆ. ಉದಾಹರಣೆಗೆ ದೇವೀ, ಭಗವತಿ, ದಿವ್ಯವಿಗ್ರಹಾ, ಕಾಂತಾ, ಇತ್ಯಾದಿ.

ಈ ಪ್ರಭೆಯು ಯಾವ ದೇವತೆಯಲ್ಲಾದರೂ ಇರಬಹುದಾದಂತಹ ಪ್ರಮುಖಗುಣ.

ದೇವಿಯು ನೋಡುವುದಕ್ಕೆ ಭಯಂಕರ ಸ್ವರೂಪಳಲ್ಲ. ಅವಳು ಶಾಂತ ಸ್ವರೂಪಳೂ. ದಯಾಶಾಲಿಯೂ, ಸುಂದರಳೂ. ವಿನಯಶೀಲಳೂ. ಪ್ರೀತಿ ಪಾತ್ರಳೂ ಆಗಿ ಕಾಣಿಸುತ್ತಾಳೆ. ಆದರೆ ಶತ್ರುಗಳ ನಿಗ್ರಹಕಾಲದಲ್ಲಿ ಮತ್ತು ದುಷ್ಟಶಕ್ತಿಗಳ ನಿಗ್ರಹ ಕಾಲದಲ್ಲಿ ಅವಳು ಊಹಿಸಲಸಾಧ್ಯವಾದ ಭಯಂಕರ ಸ್ವರೂಪಳಾಗಿ ಕಾಣಿಸುತ್ತಾಳೆ. ಉದಾಹರಣೆಗೆ: ರುದ್ರರೂಪಾ, ಭಯಂಕರೀ, ಘೀಷಾಕೃತಿಃ ಇತ್ಯಾದಿ. ಒಟ್ಟಿನಲ್ಲಿ ಇವಳು ಒಳ್ಳೆಯವರಿಗೆ ಸ್ಫೂರ್ತಿದಾಯಿನಿ ಮತ್ತು ಬೇರೆಯವರಿಗೆ (ದುಷ್ಟರಿಗೆ) ಭಯಂಕರಿ. ಪಶುಲೋಕ ಭಯಂಕರೀ (ಅಜ್ಞಾನಿಗಳಿಗೆ, ಪಶುಸಮಾನರಾದವರಿಗೆ ಭಯವನ್ನುಂಟುಮಾಡುವವಳು).

ದೇವಾಧಿದೇವತೆಗಳ ಸಮೂಹದಲ್ಲಿ. ಜಗತ್ತಿನ ಸಕಲ ಚರಾಚರ ಸೃಷ್ಟಿಯಲ್ಲಿ ದೇವಿಯು ವಿಶಿಷ್ಟಸ್ಥಾನ. ಮಾನಗಳನ್ನು ಪಡೆದಿದ್ದಾಳೆ. ಸೃಷ್ಟಿ, ಸ್ಥಿತಿ, ಲಯ—ಕಾರಕರಾದ ತ್ರಿಮೂರ್ತಿಗಳು ಇವಳ ಸಹಾಯಕರಾದರೂ ಕೂಡ (ಅನುವರ್ತಿಗಳು) ಇವಳ ಸಂಕಲ್ಪವೇ (ಇಷ್ಟ) ಮೇಲುಗೈಯಾಗಿರುತ್ತದೆ. 'ಇಚ್ಛಾಶಕ್ತಿ. ಕ್ರಿಯಾ ಶಕ್ತಿ, ಜ್ಞಾನಶಕ್ತಿ ಸ್ವರೂಪಿಣೀ'—ಎಂಬುದು ಇದನ್ನು ದೃಢ ಪಡಿಸುತ್ತದೆ. 'ಸರ್ವಾನುಲ್ಲಂಘ್ಯ ಶಾಸನಾ'—ಇತ್ಯಾದಿ. ಆದುದರಿಂದ ಇವಳು ಜಗತ್ತಿನ ಎಲ್ಲಾ ಶಕ್ತಿ, ಸಾಮರ್ಥ್ಯಗಳ ಮೂಲ ಸ್ವರೂಪಳೆಂಬುದು ಇದರಿಂದ ವೇದ್ಯವಾಗುತ್ತದೆ. ಲಲಿತಾ ಸಹಸ್ರನಾಮವು ದೇವಿಯಲ್ಲಿ ಪ್ರಧಾನವಾಗಿರುವ ಈ ಅಂಶವನ್ನು ಹೆಚ್ಚು ಸ್ಪಷ್ಟಪಡಿಸುತ್ತದೆ. ಮತ್ತು ದೇವಿಯ ಈ ಪ್ರಭಾವವನ್ನು ಹೆಚ್ಚಿಸುವುದರಲ್ಲಿ ಲಲಿತಾ ಸಹಸ್ರನಾಮವು ಯಶಸ್ವಿಯಾಗಿದೆ.

ಮೇಲಿನ ಹೇಳಿಕೆಗಳು ದೇವಿಯು ಅತ್ಯಂತ ಧೈರ್ಯಶಾಲಿನಿ ಎಂದು ಸೂಚಿಸುತ್ತವೆ. ಲಲಿತಾ ಸಹಸ್ರನಾಮದಲ್ಲಿ ಇದು ಅನೇಕ ಬಾರಿ ಪುನರುಕ್ತಿಯಾಗಿದೆ. ಲೋಕಕಂಟಕ

ರಾಗಿದ್ದ. ದುಷ್ಟರಾಗಿದ್ದ ಚಂಡ ಮುಂಡರೇ ಮೊದಲಾದ ಕ್ರೂರ ರಾಕ್ಷಸರೊಡನೆ ದೇವಿಯು ಯುದ್ಧಮಾಡಿ ಜಯಿಸಿದಳೆಂದು ಲಲಿತೋಪಾಖ್ಯಾನದಲ್ಲಿ ವ್ಯಕ್ತವಾಗಿದೆ. ದೇವಿಯೊಡನಿದ್ದ ಅಪಾರ ಸೇನೆಯು ಯಾವಾಗಲೂ ವಿಜಯಶಾಲಿಯಾಗಿರುತ್ತಿತ್ತು. (ಜಯತ ಸೇನಾ) ಅದು ಚತುರಂಗ ಸೇನೆ. (ಚತುರಂಗ ಬಲೇಶ್ವರೀ) ಕುದುರೆ ಸವಾರರು. ಯುದ್ಧದ ಆನೆಗಳು ಅವಳಲ್ಲಿ ಅಸಂಖ್ಯವಾಗಿದ್ದುವು. ಇವುಗಳ ಪಾಲಕ ರೆಲ್ಲರೂ ಸ್ತ್ರೀ ದೇವತೆಗಳಾಗಿದ್ದರು. ಲಲಿತಾ ಸಹಸ್ರ ನಾಮದಲ್ಲಿ ಇವರೆಲ್ಲರ ಹೆಸರುಗಳೂ ಉಲ್ಲೇಖವಾಗಿದೆ. ಇದು ಅವಳಿಗೆ ಯುದ್ಧ ವಿದ್ಯೆಯಲ್ಲಿದ್ದ ಜ್ಞಾನವನ್ನು ಸೂಚಿಸುತ್ತದೆ.

ದೇವಿಯು ಶಸ್ತ್ರಾಸ್ತ್ರಗಳನ್ನು ಸ್ವತಃ ಪ್ರಯೋಗಿಸುವುದರಲ್ಲಿ ಬಹಳ ಚತುರಳು. ಅವಳು ಎಲ್ಲಾ ಆಯುಧಗಳನ್ನು ಪ್ರಯೋಗಿಸಿದರೂ. (ಸರ್ವಾಯುಧಾ ಧರಾ) ಅವಳ ಪ್ರಮುಖ ಆಯುಧ ಪಾಶ. (ಪಾಶ ಹಸ್ತಾ) ರುದ್ರನಿಗ ಪಿನಾಕ ಹಸ್ತವಿದ್ದಂತೆ. ಇಂದ್ರನಿಗೆ ವಜ್ರ ಹಸ್ತವಿದ್ದಂತೆ, ಲಲಿತಳಿಗೆ ಪಾಶಹಸ್ತವಿದೆ. ದೇವಿಯು ವೈದಿಕ ದೇವತೆಗಳನ್ನೂ ಪರಾಕ್ರಮದಲ್ಲಿ ಮೀರಿಸುತ್ತಾಳೆ. ದೇವಿಯು ಅವಳೆಡೆಗೆ ಬರುವ ಎಲ್ಲಾ ಶಸ್ತ್ರಾಸ್ತ್ರ ಗಳನ್ನೂ ನಿಗ್ರಹಿಸುವ ಅದ್ಭುತ ಶಕ್ತಿಯನ್ನು ಹೊಂದಿದ್ದಾಳೆ. ಸವ ಯಬಂದರೆ. ಅವಳು ಮಾಯಾಶಕ್ತಿಯನ್ನೂ ಉಪಯೋಗಿಸುತ್ತಾಳೆ. (ತಿರೋಧಾನಕರೀಶ್ವರೀ. ಮಾಯಾಶಕ್ತಿ ......ಇತ್ಯಾದಿ).

ಲಾವಣ್ಯವತಿಯಾದ ಭಗವತಿಯು ಕಲಾಭಿಜ್ಞಳು ಮತ್ತು ಕಲಾಭಿಮಾನಿ ಯಾಗಿದ್ದಾಳೆ. ಸಂಗೀತ, ನೃತ್ಯ. ಮೊದಲಾದ ಲಲಿತ ಕಲೆಗಳಲ್ಲಿ ಪರಿಣತಳು. ಲಲಿತ ಕಲೆಗಳ ಅಧಿದೇವತೆ. ಕಾವ್ಯಕಲಾಪ ವಿನೋದಿನಿ. ನಾಟ್ಯ ಪ್ರಿಯಾ. ಲಯಕರೀ. ಕಲಾನಿಧಿಃ, ಕಾವ್ಯಕಲಾ—ಮೊದಲಾದ ನಾಮ ವಿಶೇಷಗಳು ದೇವಿಯ ಪಾಂಡಿತ್ಯವನ್ನೂ. ಕಲಾಸ್ವರೂಪವನ್ನೂ ಪ್ರಕಾಶಿಸುತ್ತವೆ. ದೇವಿಯು ಎಲ್ಲಾ ರಸಗಳ ಆಗರ. (ರಸಜ್ಞಾ ರಸಶೇವಧಿಃ) ಅವಳಲ್ಲಿ ಶೃಂಗಾರ ಮತ್ತು ಕರುಣ ರಸಗಳಿಗೆ ಉಳಿದ ರಸಗಳಿಗಿಂತ ಹೆಚ್ಚು ಪ್ರಾಶಸ್ತ್ಯವಿದೆ. (ಶೃಂಗಾರ ರಸ ಸಂಪೂರ್ಣಾ, ಕರುಣಾರಸ ಸಾಗರಾ) ಇತ್ಯಾದಿ. ಈ ವಿಶೇಷಣಗಳು ಈ ಅಂಶವನ್ನು ಸ್ಪಷ್ಟೀಕರಿಸುತ್ತವೆ. ವೇದಾಂತ. ತಂತ್ರ—ಮೊದಲಾದ ಆಧ್ಯಾತ್ಮಿಕ ಪದ್ಧತಿಗಳಿಗೆ ಅವಳು ಆಧಾರ ಸ್ವರೂಪಳು. (ಮಹಾಮಂತ್ರಾ. ಆತ್ಮ ವಿದ್ಯಾ. ಸರ್ವವೇದಾಂತ ಸಂವೇದ್ಯಾ) ಇತ್ಯಾದಿ. ಈ ವಿಶೇಷಣಗಳು ಅವಳಿಗೆ ಈ ವಿದ್ಯೆಗಳಲ್ಲಿರುವ ವಿಶೇಷ ಪಾಂಡಿತ್ಯವನ್ನು ಸೂಚಿಸುತ್ತವೆ. ಒಟ್ಟಿನಲ್ಲಿ. ಲಲಿತಾ ಸಹಸ್ರ ನಾಮವು ದೇವಿಯನ್ನು ಸರ್ವಶಾಸ್ತ್ರ ಪಾರಂಗತಳು. ಸರ್ವಶಾಸ್ತ್ರ ವಿಶಾರದೆ. ಲಲಿತ ಕಲೆಗಳ ಆಗರವೆಂದು ವಿಶೇಷವಾಗಿ ವರ್ಣಿಸುತ್ತದೆ.

ಲಲಿತಳಲ್ಲಿರುವ ವಿಶೇಷ ಗುಣಗಳನ್ನು ಮತ್ತಷ್ಟು ಸೂಕ್ಷ್ಮವಾಗಿ ಪರಿಶೀಲಿಸಿದರೆ. ಅವಳಿಗೆ ಪುಷ್ಪ ಮತ್ತು ಪತ್ರಗಳ ಮೇಲಿರುವ ವಿಶೇಷ ಪ್ರೀತಿಯು ಗೋಚರವಾಗುತ್ತದೆ.

ಪತ್ರಗಳಲ್ಲಿ ಅವಳಿಗೆ ಬಿಲ್ವ ಮತ್ತು ತುಳಸಿ ಪತ್ರಗಳು ಪ್ರಿಯವಾಗಿವೆ. ಹೂವುಗಳಲ್ಲಿ ಅವಳಿಗೆ ಹದಿಮೂರು ತರಹದ ಅಥವಾ ಅದಕ್ಕಿಂತ ಹೆಚ್ಚಿನ ಹೂವುಗಳು ಪ್ರಿಯ ವಾಗಿವೆ. ಅವು ಪದ್ಮ. ಚಂಪಕ. ಅಶೋಕ. ಸುಗಂಧಿ. ಪುನ್ನಾಗ. ಕಲ್ಹಾರ. ಕದಂಬ. ಜಾಜಿ ಕುಸುಮ. ಮಲ್ಲಿಕಾ. ಕರವೀರ. ಉತ್ಪಲ. ಕೇಸರ. ಮತ್ತು ಚೈತನ್ಯಕುಸುಮ ಇತ್ಯಾದಿ.

ದೇವಿಯ ಅನೇಕವಾದ ನಾಮೋಚ್ಚಾರಣೆ ಮಾಡುತ್ತಾ ಪೂಜಿಸಿದರೆ ಅವಳು ಸುಪ್ರೀತಳಾಗುತ್ತಾಳೆ. ಅವಳನ್ನು ಹೆಚ್ಚಾಗಿ ಸ್ತ್ರೀಯರು (ಸುಮಂಗಲಿಯರು) ಪೂಜಿಸು ತ್ತಾರೆ. (ಸುವಾಸಿನ್ಯಾರ್ಚನ ಪ್ರೀತಾ) ಅವರೆ ತುಂಬು ನಂಬಿಕೆ ಮತ್ತು ಶ್ರದ್ಧೆಯಿಂದ ಅವಳನ್ನು ಅರ್ಚಿಸಬೇಕೆಂಬುದನ್ನು ಮಾತ್ರ ಗಮನದಲ್ಲಿಡಬೇಕು. (ಸದಾದರಾತ್)

ಭಗವತಿ ಲಲಿತಳ ಸ್ಥಾನಮಾನ ಎಷ್ಟೇ ಹೆಚ್ಚಿದ್ದರೂ ಅವಳು ತನ್ನ ಪ್ರಿಯ ಭಕ್ತರಿಗೆ ಸುಲಭ ಸಾಧ್ಯಳು. 'ಲಲಿತ' ಎಂಬ ಅವಳ ಹೆಸರೇ ಇದನ್ನು ಸೂಚಿಸುತ್ತದೆ. ಲಲಿತಾ ಸಹಸ್ರನಾಮದಲ್ಲಿ ಧ್ಯಾನದಿಂದ (ಉಪಾಸನೆ) ಅವಳ ಹೃದಯವನ್ನು ಗೆಲ್ಲುವ ಸಾಧನೆಯ ಮಾರ್ಗವು ವ್ಯಕ್ತವಾಗಿದೆ. ಉದಾಹರಣೆಗೆ: ಧ್ಯಾನಗಮ್ಯಾ. ಜ್ಞಾನಗಮ್ಯಾ. ಗಾನಲೋಲುಪಾ. ಇತ್ಯಾದಿ. ಇವು ಈ ಅಂಶವನ್ನು ಸ್ಪಷ್ಟಪಡಿಸುತ್ತವೆ. ದೇವಿಯನ್ನು ಯಾರು ಉದಾಸೀನ ಮಾಡುತ್ತಾರೋ ಅವರಿಗೆ ದೇವಿಯು ಕಠಿಣಳಾಗಿರುತ್ತಾಳೆ. ದುರಾರಾಧ್ಯಾ (ಚಪಲೇಂದ್ರಿಯವುಳ್ಳವರಿಗೆ ದೇವಿಯ ಆರಾಧನೆಯು ಅಶಕ್ಯ), ದುರಾ ಧರ್ಷಾ (ದೇವಿಯ ಸಂಕಲ್ಪವನ್ನು ತಡೆಯಲು ಅಥವಾ ವಿರೋಧಿಸಲು ಯಾರಿಗೂ ಸಾಧ್ಯವಿಲ್ಲ). ಹೇಗಾದರೂ. ದೇವಿಯು ಎಲ್ಲರಿಗೂ ಸುಪರಿಚಿತಳು. ಇದು ಅವಳ ಸುಪ್ರಸಿದ್ಧಿಯನ್ನೂ. ಔದಾರ್ಯವನ್ನೂ ತೋರಿಸುತ್ತದೆ. ಆಬಾಲಗೋಪವಿದಿತಾ- ಬಾಲಕರಿಗೂ. ಗೋಪಾಲಕರಿಗೂ ಪರಿಚಿತಳಾದ ಮೇಲೆ ಉಳಿದವರಿಗೆ ಪರಿಚಿತಳಾಗು ವುದು ಹೆಚ್ಚೇನು!

ಈ ಹೇಳಿಕೆಗಳಿಂದ ದೇವಿಯ 'ಮಹತ್' ಅನ್ನೂ. ಅವಳ ಪ್ರಭಾವವನ್ನೂ. ಅಪೂರ್ವತೆಯನ್ನೂ. ಆದರ್ಶವನ್ನೂ ವಿಶೇಷವಾಗಿ ಗಮನಿಸಬಹುದು.

ಲಲಿತಾ ಸಹಸ್ರನಾಮವು ದೇವಿಯ ಘನವಾದ ಕಾರ್ಯ ಚಟುವಟಿಕೆಗಳನ್ನು ಮತ್ತು ಅವಳ ಪ್ರಗತಿಯನ್ನು ಹೆಚ್ಚು ಆಸಕ್ತಿಯಿಂದ ವರ್ಣಿಸುತ್ತದೆ. ಈ ಗುಣ ಅವಳ ನಡವಳಿಕೆಯಿಂದ ಗೋಚರವಾಗುತ್ತದೆ. ಭಕ್ತರ ಭಕ್ತಿ. ಶ್ರದ್ಧಾ ಪೂರ್ವಕವಾದ ಉಪಾ ಸನೆಯಿಂದ ದೇವಿಯು ಸುಪ್ರೀತಳಾದಮೇಲೆ ಭಕ್ತರ ಸಂಪೂರ್ಣ ಯೋಗಕ್ಷೇಮದ ಜವಾಬ್ದಾರಿಯನ್ನು ಹೊರುತ್ತಾಳೆ. ಈ ಸಂದರ್ಭದಲ್ಲಿ ಅವಳ ವಿಶೇಷ ಪ್ರತಿಭೆ, ಶಕ್ತಿ, ಸಾಮರ್ಥ್ಯ. ಮಹಿಮೆಗಳು ವ್ಯಕ್ತವಾಗುತ್ತವೆ.

ಭಕ್ತರ ಆಶೋತ್ತರಗಳನ್ನು ಈಡೇರಿಸುವ ಈ ಗುಣ ಎಲ್ಲಾ ದೇವತೆಗಳಲ್ಲೂ ಸಾಮಾನ್ಯವಾಗಿ ಕಂಡುಬರುತ್ತದೆ. ಇದಕ್ಕೆ ದೇವಿಯು ಹೊರತಲ್ಲ. ತನ್ನ ಉಪಾಸಕರೆಲ್ಲರನ್ನೂ ಅವರಿವರೆಂಬ ಭೇದಭಾವವಿಲ್ಲದೆ ಸಮಾನರೀತಿಯಲ್ಲಿ ಕಾಪಾಡುತ್ತಾಳೆ.

ಸುಖ, ಯೋಗ, ಮೋಕ್ಷಗಳನ್ನು ತನ್ನ ಭಕ್ತರಿಗೆ ದಯಪಾಲಿಸುವಾಗ ದೇವಿಯ ವಿಶಿಷ್ಟಗುಣವು ವ್ಯಕ್ತವಾಗುತ್ತದೆ. ನಿಷ್ಕಾಮಿಗಳಾದ ತನ್ನ ಭಕ್ತರಿಗೆ ಮೋಕ್ಷಮಾರ್ಗವನ್ನು ತೋರಿಸುವಾಗ ಅವಳು ಪರಮ ಪಂಡಿತಳಾಗಿ ಶೋಭಿಸುತ್ತಾಳೆ. (ಸಂಸಾರ......... ಸಮುದ್ಧರಣ ಪಂಡಿತಾ.) ಭಕ್ತರ ಪ್ರಾಪಂಚಿಕ ಇಷ್ಟಾರ್ಥಗಳನ್ನು ನೆರವೇರಿಸುವಲ್ಲಿ ದೇವಿಯು ಅವರ ಅಭಿಚಾರ, ಪಾಪ, ಸಂಕಷ್ಟ—ಮೊದಲಾದುವುಗಳನ್ನು ತೊಡೆದು ಹಾಕಿ, ಅವರು ಸನ್ಮಾರ್ಗದ ಹಾದಿಯಲ್ಲಿ ನಡೆಯುವಂತೆ ಮಾಡುತ್ತಾಳೆ. ಭಕ್ತರ ಪಾಪ ಪುಣ್ಯಗಳ ನಿರ್ಣಯ ಕಾರ್ಯದಲ್ಲಿ ನ್ಯಾಯಾಧೀಶಳಂತೆ ವರ್ತಿಸುತ್ತಾಳೆ. (ಪುಣ್ಯಾಪುಣ್ಯ ಫಲಪ್ರದಾ).

ಒಟ್ಟಿನಲ್ಲಿ ದೇವಿಯು ಭಕ್ತರ ಪ್ರಾಪಂಚಿಕ ಆಶೋತ್ತರಗಳನ್ನು ಈಡೇರಿಸುವುದರಿಂದ ಹಿಡಿದು ಅವರ ಆಧ್ಯಾತ್ಮಿಕ ಪ್ರಗತಿಯಲ್ಲಿಯೂ, ತನ್ನ ಕೈವಾಡ ತೋರಿಸುತ್ತಾಳೆಂದು ಇದರಿಂದ ವ್ಯಕ್ತವಾಗುತ್ತದೆ.

ಇತರರೊಡನೆ ಅವಳ ಸಂಬಂಧವನ್ನು ಅಥವಾ ಅವಳ ಸಂಬಂಧಿಕರನ್ನು ಗಮನಿಸಿದರೆ, ಅವಳ ಸಾಮಾಜಿಕ ಮತ್ತು ಸಾಂಸಾರಿಕ ಜೀವನದಲ್ಲಿ ಬಹಳ ಹೊಂದಾಣಿಕೆ ಇರುವಂತೆ ಕಂಡು ಬರುತ್ತದೆ.

ಲಲಿತಾ ಸಹಸ್ರನಾಮವು ಈ ಅಂಶವನ್ನು ವಿವರಿಸುತ್ತದೆ. ಅದು ದೇವಿಯನ್ನು ಒಂಬತ್ತು ವರ್ಷದ ಹುಡುಗಿಯನ್ನಾಗಿ ಚಿತ್ರಿಸುತ್ತದೆ. (ಬಾಲಾ).

ಅವಳು ಹಿಮವಂತನ ಮಗಳು (ಉಮಾ, ಶೈಲೇಂದ್ರ ತನಯಾ). ಅವಳು ದಕ್ಷನ ಮಗಳೂ ಹೌದು.

ಅವಳು ವಿಷ್ಣುವಿನ ಸಹೋದರಿ. (ಪದ್ಮನಾಭ ಸಹೋದರಿ). ಇದು ಅವಳಿಗೆ ಸಹೋದರನಿಲ್ಲೆಂಬ ಅಪವಾದವನ್ನು ಹೋಗಲಾಡಿಸುತ್ತದೆ. ಏಕೆಂದರೆ, ವೇದದ ಪ್ರಕಾರ ಸಹೋದರನಿಲ್ಲದ ಹುಡುಗಿಯು ಮದುವೆ ಮೊದಲಾದ ಶುಭಕಾರ್ಯಗಳಿಗೆ ಅರ್ಹಳಾಗುತ್ತಿರಲಿಲ್ಲ.

ಅವಳು ಮುಖ್ಯವಾಗಿ ಶಿವನ ಪ್ರಿಯ ಸತಿ. ಶಿವನನ್ನು ಈಶ್ವರ, ಭವ, ಶಂಭು—ಎಂಬ ಹೆಸರುಗಳಿಂದ ಸಂಬೋಧಿಸುತ್ತದೆ. ಶಿವನ ಮತ್ತು ಲಲಿತಳ ಈ ಸಂಬಂಧವು ಲಲಿತಾ ಸಹಸ್ರನಾಮದಲ್ಲಿ ಅನೇಕ ಕಡೆ ಉಲ್ಲೇಖವಾಗಿದೆ. (ಶಂಭು ಮೋಹಿನಿ

ಧವಾಸಿ, ಪತಿವ್ರತೆ.) ಅವಳ ಆಂತರಿಕ ಸೌಂದರ್ಯವು ಶಿವನೊಬ್ಬನಿಗೆ ಮಾತ್ರ ವೇದ್ಯ ವಾಗುತ್ತದೆ.

ಭಗವತಿ ಲಲಿತಳು ಕುಮಾರ. ಗಣಪ ಮತ್ತು ಬಾಲಾಳತಾಯಿ. (ಭಂಡ ಪುತ್ರ ವಧೋದ್ಯುಕ್ತ ಬಾಲಾ ವಿಕ್ರಮನಂದಿತಾ) (ಕುಮಾರ ಗಣನಾಥಾಂಬಾ). ಅವಳು ವೇದ ಮಾತೆ, ಬ್ರಹ್ಮನ ಜನನಿ. ವಿಯುತ್‌ನ ತಾಯಿ. (ಆಕಾಶ). ಎಲ್ಲಕ್ಕಿಂತ ಮಿಗಿಲಾಗಿ ಅವಳು ಜಗಜ್ಜನನಿ, ಜಗನ್ಮಾತೆ. (ವಿಶ್ವಮಾತೆ, ವಿಶ್ವಜನನಿ). ಈ ಸಂದರ್ಭದಲ್ಲಿ ಲಲಿತಾ ಸಹಸ್ರನಾಮದ ಮೊದಲು ಮತ್ತು ಕೊನೆಯಲ್ಲಿ ಬರುವ ಈ ಪದಗಳನ್ನು ಗಮನಿಸ ಬಹುದು. ಶ್ರೀಮಾತಾ ಮತ್ತು ಲಲಿತಾಂಬಿಕೆ. ಲಲಿತಾ ಸಹಸ್ರನಾಮವು ಮೊದಲಾಗು ವುದು ಮತ್ತು ಕೊನೆಯಾಗುವುದು 'ತಾಯಿ' ಎಂಬ ಅರ್ಥದ ಈ ಪದಗಳಿಂದ (ಮಾತಾ, ಅಂಬಿಕಾ).

ದೇವಿಯನ್ನು ತ್ರಿಲೋಕಗಳಲ್ಲಿಯೂ ಅನೇಕ ಮಂದಿ ಭಕ್ತರು ಪೂಜಿಸುತ್ತಾರೆ. ದೇವತೆಗಳು. ಸಿದ್ಧರು. ಗಂಧರ್ವರು, ಅಗಸ್ತ್ಯ ಮತ್ತು ಲೋಪಾಮುದ್ರೆ ಇತ್ಯಾದಿ. ಪುರುಷರಲ್ಲಿ ಅಗಸ್ತ್ಯ ಮಹರ್ಷಿಯೂ. ಸ್ತ್ರೀಯರಲ್ಲಿ ಲೋಪಾಮುದ್ರೆಯೂ ದೇವಿಯ ಉಪಾಸಕರಲ್ಲಿ ಮೊದಲಿಗರು.

ಲಲಿತಳು ತನ್ನ ಭಕ್ತರಿಗೆ ಒಳಿತನ್ನುಂಟು ಮಾಡುವುದರಲ್ಲಿ ಆಸಕ್ತಳು. ಹೀಗಾಗಿ ದೇವಿ ಮತ್ತು ಭಕ್ತರಲ್ಲಿ ಒಂದು ಒಳ್ಳೆಯ ಅನ್ಯೋನ್ಯತೆ ಇರುತ್ತದೆ. ಲಲಿತಾ ಸಹಸ್ರ ನಾಮದಲ್ಲಿ ಈ ಭಾವನೆಯನ್ನು ವ್ಯಕ್ತಪಡಿಸುವ ಅನೇಕ ಉಲ್ಲೇಖವಿದೆ.

ಶ್ರುತಿ ಅಥವಾ ವೇದ ಮತ್ತು ವೈದಿಕ ಮತಗಳೊಡನೆ ದೇವಿಯ ಸಂಬಂಧವನ್ನು ಲಲಿತಾ ಸಹಸ್ರನಾಮದ ಈ ಉಲ್ಲೇಖಗಳು ವ್ಯಕ್ತಪಡಿಸುತ್ತವೆ. ಉದಾಹರಣೆಗೆ: ವೇದಜನನಿ. ವೇದಮಾತೆ, ವೇದವಿದ್ಯಾ, ಸಾಮಗಾನಪ್ರಿಯೆ. ಯಜ್ಞಕರ್ತೃ, ಯಜಮಾನಸ್ವ ರೂಪಿಣೀ. ಸರ್ವೋಪನಿಷದ್‌-ಉದ್ಘುಷ್ಟಾ, ಪಂಚಯಜ್ಞೋಪ ಸೇವಿತಾ. ನಿಜಾಜ್ಞಾ ರೂಪ ನಿಗಮಾ. ಇತ್ಯಾದಿ. ಇವೆಲ್ಲವೂ ಅವಳು ಸನಾತನಳು ಪುರಾತನಳೆಂದು ತಿಳಿಸುತ್ತವೆ.

ದೇವಿಯು ತನಗೆ ತಾನೇ ಗುರು. (ಸ್ವಯಂಶಿಕ್ಷಕಳು) (ಗುರುಮೂರ್ತಿಃ) ಧಾರ್ಮಿಕ ಗುರು ವೃಂದದಲ್ಲಿ ಅವಳು ಸೇರಲು ಬಯಸುತ್ತಾಳೆ. (ಆ ಗುರು ಮಂಡಲ ವಾಸಿನಿ)

ಈ ಎಲ್ಲಾ ಉಲ್ಲೇಖಗಳೂ ದೇವಿಯ ಬಹುಮುಖ ವ್ಯಕ್ತಿತ್ವವನ್ನೂ. ಅನೇಕ ಕಾರ್ಯ ಚಟುವಟಿಕೆಗಳನ್ನೂ, ಗುರುತಿಸಲು ಸಹಕಾರಿಯಾಗಿವೆ.

ಪುರಾಣ. ಉಪಾಖ್ಯಾನಗಳ ಹಿನ್ನೆಲೆಯ ಜ್ಞಾನವಿರುವವರಿಗೆ ಲಲಿತಾ ಸಹಸ್ರನಾಮದಲ್ಲಿ ಬರುವ ಈ ವಿಶೇಷಣಗಳ ಹಿಂದಿರುವ ರಹಸ್ಯಾರ್ಥವು ಮನದಟ್ಟಾಗುತ್ತದೆ. ಅದಿಲ್ಲದಿದ್ದರೆ ಈ ವಿಶೇಷಣಗಳನ್ನು ಅರ್ಥಮಾಡಿಕೊಂಡು ಅರಗಿಸಿಕೊಳ್ಳುವುದು ಕಷ್ಟವಾಗುತ್ತದೆ.

ಕಡೆಯದಾಗಿ, ಲಲಿತಾ ಸಹಸ್ರನಾಮದಲ್ಲಿ ದೇವಿ ಲಲಿತಳ ವ್ಯಕ್ತಿತ್ವ. ಸ್ವರೂಪ. ಗುಣ, ವೈಶಿಷ್ಟ್ಯಗಳು ಚೆನ್ನಾಗಿ ವ್ಯಕ್ತವಾಗಿವೆ. ಇದರಿಂದ ದೇವಿಯ ಅಂತರ್ಯಾಮಿತ್ವ ಅತೀತತ್ವ ಸೂಚಿತವಾಗುತ್ತದೆ—ದೇವಿಯು ಸರ್ವಶಕ್ತಳೆಂದೂ, ಆದಿಪರಾಶಕ್ತಿಯೆಂದೂ ಸರ್ವವ್ಯಾಪಿಯೆಂದೂ, ಸರ್ವಜ್ಞಳೆಂದೂ ಅರಿವಾಗುತ್ತದೆ. ಸೌಕರ್ಯಕ್ಕಾಗಿ. ಅವಳಲ್ಲಿ ಮನುಷ್ಯತ್ವಾರೋಪಣೆ ಮಾಡಿ, ವರ್ಣಿಸಿ. ಚರ್ಚಿಸಿದರೂ ಅವಳು ಜಗತ್ತಿನ ಶಕ್ತಿ ಮತ್ತು ಪ್ರಭೆಯಿಂದ ಜನಿಸಿದವಳು. ಅವಳನ್ನು ಆದಿಶಕ್ತಿಯ ಕಳೆ (ಕಾಂತಿ)ಯೆಂದು ಗುರುತಿಸುತ್ತಾರೆ. ದೇವಿಯು ಭಯಂಕರವಾದ ಕಾರ್ಯಗಳನ್ನು ಮಾಡುವಾಗ ಈ ಕಳೆಯು ಭಯಾನಕವಾಗಿ ಮಾರ್ಪಡುತ್ತದೆ. ಆಗ ದೇವಿಯು ದುರ್ಗಾ ಚಂಡಿ. ಕಾಳಿ—ಎಂಬ ಹೆಸರಿನಿಂದ ಕರೆಯಲ್ಪಡುತ್ತಾಳೆ. ಆದರೆ ದೇವಿಯ ಸಾಮಾನ್ಯರೂಪವು (ಶಾಂತರೂಪ) ಸೌಮ್ಯವಾಗಿ, ಮನೋಹರವಾಗಿ ಕಂಗೊಳಿಸುತ್ತದೆ. ಅವಳ ಶಕ್ತಿಯ ಈ ಸ್ವರೂಪವು ಚೈತನ್ಯಪೂರ್ಣವಾಗಿ ತೇಜಃಪುಂಜವಾಗಿದೆ.

ಕೆಳಗಿನ ಈ ಕೆಲವು ಮುಖ್ಯಾಂಶಗಳನ್ನು ಗಮನಿಸಬಹುದು.

3

1. ದೇವಿಯ ವ್ಯಕ್ತಿತ್ವವು ಅಸಾಮಾನ್ಯವಾದುದೆಂದು ಲಲಿತಾ ಸಹಸ್ರನಾಮದಲ್ಲಿ ಸೂಚಿತವಾಗಿದೆ. ಅದರಲ್ಲಿ ಬರುವ ಅದ್ಭುತ ಚಾರಿತ್ರಾ, ವಾಂಛಿತಪ್ರದಾಯಿನೀ. ಮತ್ತು ಮೋಕ್ಷದಾ—ಈ ವಿಶೇಷಣಗಳು ದೇವಿಯ ಮಹತ್ವವನ್ನು ವರ್ಣಿಸುತ್ತವೆ. ಮತ್ತು ಅಂತರ್ಮುಖ ಸಮಾರಾಧ್ಯಾ, ಬಹಿರ್ಮುಖ ಸುದುರ್ಲಭಾ ಮತ್ತು ರಹಸ್ತರ್ಪಣ ತರ್ಪಿತಾ—ಈ ಪದಗಳು ಅವಳ ಉಪಾಸನೆಯಲ್ಲಿರುವ ರಹಸ್ಯವನ್ನು ವ್ಯಕ್ತಪಡಿಸುತ್ತವೆ.

2. ಲಲಿತಾ ಸಹಸ್ರನಾಮವನ್ನು ಯಜುರ್ವೇದದ ರುದ್ರಾಧ್ಯಾಯದೊಂದಿಗೆ ಹೋಲಿಸಬಹುದು. ದೇವಿಯ ವ್ಯಕ್ತಿತ್ವ ಮತ್ತು ಅಸ್ತಿತ್ವವನ್ನು ಒಪ್ಪಿಕೊಳ್ಳುವುದರಲ್ಲಿ ಅಥವಾ ಒಪ್ಪಿಕೊಳ್ಳದಿರುವಲ್ಲಿ ಇದು ರುದ್ರಾಧ್ಯಾಯವನ್ನು ಹೋಲುತ್ತದೆ. ಅವಳಿಗೆ ಜನನವಿದೆ ಅಥವಾ ಇಲ್ಲ. ಉದಾ: ಸಂಭೂತಾ (ಹುಟ್ಟು) ಅಜಾ (ಹುಟ್ಟಿಲ್ಲ), ಯೋನಿ ನಿಲಯಾ. ಅಯೋನಿಃ ಇತ್ಯಾದಿ

3. ಒಂದೆ ತಿಳಿಸಿದಂತೆ ಲಲಿತಾ ಸಹಸ್ರನಾಮದ ವಸ್ತುವಿನಲ್ಲಿ (ವಿಷಯ) ಏಕಸೂತ್ರತೆಯಾಗಲಿ, ಸುಸಂಬದ್ಧತೆಯಾಗಲಿ ಕಂಡುಬರುವುದಿಲ್ಲ. ಇದು ಎಲ್ಲಾ ಸಹಸ್ರ ನಾಮದಲ್ಲಿ ಸಾಮಾನ್ಯವಾಗಿ ಕಂಡುಬರುವ ಒಂದು ಕೊರತೆ. ಕಾರಣ, ದೇವಿಯ ಸೊಬಗು, ಲಾವಣ್ಯ, ಸೌಂದರ್ಯಗಳನ್ನು ವರ್ಣಿಸುವ ವಿಶೇಷಣಗಳು ಸಹಸ್ರನಾಮದ ತುಂಬ ಚದುರಿಹೋಗಿವೆ. ಇವುಗಳ ಜೋಡಣೆ ಕ್ರಮಬದ್ಧವಾಗಿಲ್ಲ. ಅನೇಕ ಕಡೆ ಪುನರುಕ್ತಿಯಾಗಿದೆ. ಅವಳ ಉಳಿದ ಲಕ್ಷಣಗಳನ್ನು ತಿಳಿಸುವ ವಿಶೇಷಣಗಳು ಬಹಳ ಕಡಿಮೆ ಇವೆ. ಬಹುಶಃ ಇಲ್ಲಿ ಬರುವ ಈ ತರಹದ ಪುನರುಕ್ತಿಯು, ದೇವಿಯ ವ್ಯಕ್ತಿತ್ವ ಮತ್ತು ಮಹಿಮೆಯು ಭಕ್ತರ ಹೃದಯಗಳಲ್ಲಿ ಸ್ಥಿರವಾಗಿ ನೆಲಸಬಹುದೆಂಬ ಉದ್ದೇಶದಿಂದ ಉಂಟಾಗಿರಬಹುದು.

4. ಲಲಿತಾ ಸಹಸ್ರನಾಮವು ಅದರ ಆಧ್ಯಾತ್ಮಿಕಭಾವನೆಗಳಿಂದ ಪೂಜ್ಯವಾಗಿದೆ. ಅದರಲ್ಲಿ ವೇದಾಂತ ಭಾವನೆಗಳು ತುಂಬಿ ತುಳುಕಾಡುತ್ತಿವೆ. ದೇವಿಯ ಉಪಾಸನೆ, ಪೂಜೆ, ಪಾರಾಯಣ, ಅರ್ಚನೆಗಳಿಂದ ಅನೇಕ ಭಕ್ತರು ಭಗವದನುಗ್ರಹವನ್ನು ಹೊಂದಿದ್ದಾರೆ ಇಂದಿಗೂ ದೇವಿಯನ್ನು ಶ್ರದ್ಧಾ ಭಕ್ತಿಗಳಿಂದ ಪೂಜಿಸಿ. ತಮ್ಮ ಇಷ್ಟಾರ್ಥವನ್ನು ಹೊಂದಿರುವ ಮತ್ತು ಲಲಿತಾ ಸಹಸ್ರನಾಮದಲ್ಲಿ ನಂಬಿಕೆಯುಳ್ಳ ಅನೇಕ ಭಕ್ತರು ಕಂಡುಬರುತ್ತಾರೆ. ಅನೇಕ ಹಿಂದುಗಳು ದೇವಿಯನ್ನು ವೆಂಕಟೇಶ್ವರ ಘಾಟಿಸುಬ್ರಹ್ಮಣ್ಯದ ದೇವರಂತೆ ಪ್ರತ್ಯಕ್ಷ ದೇವತೆಯೆಂದು ಪರಿಗಣಿಸುತ್ತಾರೆ ಭಕ್ತರು ನಂಬಿ ದೇವಿಯನ್ನು ಮನಃಪೂರ್ವಕವಾಗಿ ಕರೆದೆಡೆಯಲ್ಲಿ ಅವರ ಕರೆಗೆ ದೇವಿಯು ಓಗೊಡುತ್ತಾಳೆಂಬುದು ನಿಸ್ಸಂಶಯ. ಭಕ್ತರಿಗೆ ಈ ವಿಷಯದಲ್ಲಿ ತಮಗಾದ ಆಧ್ಯಾತ್ಮಿಕ ಅನುಭವಗಳನ್ನು ಬೇರೆಯವರಲ್ಲಿ ಹೇಳಿದಾಗ ಅವನ್ನು ನಂಬದಿರುವುದಾಗಲೀ. ಅಲ್ಲಗಳೆಯುವುದಾಗಲೀ, ನಮ್ಮ ಶಕ್ತಿಗೆ ಮೀರಿದುದು.

5. ಲಲಿತಾ ಸಹಸ್ರನಾಮದ ಪಾರಾಯಣ ಮಾಡಲು ಕೆಲವು ವಿಶೇಷ ದಿನಗಳು ಮತ್ತು ವೇಳೆಯನ್ನು ನಿಗದಿ ಮಾಡಿದೆ–ಸಂಜೆ ಮತ್ತು ರಾತ್ರಿ ವೇಳೆಯು ವಿಹಿತವಾದುದು. ಭಾನುವಾರ ಮತ್ತು ಶುಕ್ರವಾರಗಳು ಲಲಿತಾ ಸಹಸ್ರ ನಾಮದ ಪಾರಾಯಣಕ್ಕೆ ಉಪಾಸನೆಗೆ. ಅರ್ಚನೆಗೆ ಪ್ರಶಸ್ತವಾಗಿದೆ. ಏಕಾದಶಿ. ಚತುರ್ದಶಿ, ಪೂರ್ಣಿಮೆ. ಜನ್ಮತಿಥಿ –ಈ ದಿನಗಳೂ ಯೋಗ್ಯವಾಗಿವೆ, ದೇವಿಯ ಉಪಾಸನೆಯು ಸಾಮಾನ್ಯವಾಗಿ ಹದಿನೈದು ದಿನಗಳಿಂದ ಒಂದು ವರ್ಷದ ಅಂತರದವರೆಗೂ ನಡೆಯುತ್ತವೆ. ಈ ದೀಕ್ಷೆಯ ಗಡುವು ಭಕ್ತನ ಇಷ್ಟಾರ್ಥಗಳನ್ನು ಅವಲಂಬಿಸಿರುತ್ತದೆ. (ನೋಡಿ. ಲಲಿತಾ ಸಹಸ್ರ ನಾಮ. ch 3).

6. ಹೀಗೆ ಭಗವತಿ ಲಲಿತಳನ್ನು ಅತ್ಯಂತ ಶ್ರೇಷ್ಠಳೆಂದು ಸ್ತುತಿಸಿದ್ದಾರೆ. ದೇವಿಯ ಸ್ವರೂಪ ಮಹಿಮೆಯು ಅಲ್ಪಜ್ಞಾನಿಗಳ ಅರಿವಿಗೆ ಮೀರಿದುದು. ಅವಳಲ್ಲಿ ಶ್ರದ್ಧೆ, ತುಂಬು ನಂಬಿಕೆಯಿರುವವರಿಗೆ ವಯಸ್ಸು. ಜಾತಿ. ಮತಗಳನ್ನು ಲೆಕ್ಕಿಸದೆ ಅನುಗ್ರಹಿಸುತ್ತಾಳೆ. ಸುಖ. ಸಂಪತ್ತು, ಮೋಕ್ಷಗಳನ್ನು ದಯಪಾಲಿಸುತ್ತಾಳೆ. ತನ್ನ ಭಕ್ತರಲ್ಲಿರುವ ಅಭಿಚಾರ (ಪಾಪ)ಗಳನ್ನು ತೊಡೆದು ಹಾಕಿ ಅವರನ್ನು ಕಾಪಾಡುತ್ತಾಳೆ. ಒಟ್ಟಿನಲ್ಲಿ, ತೀಕ್ಷ್ಣವಾದ ಬುದ್ಧಿವಂತನೂ, ಶ್ರದ್ಧೆ, ನಂಬಿಕೆಯುಳ್ಳವನೂ ದೇವಿಯ ನಿಜವಾದ ಭಕ್ತನೆಂದು ಲಲಿತಾ ಸಹಸ್ರ ನಾಮವು ತಿಳಿಸುತ್ತದೆ.

7. ಲಲಿತಾ ಸಹಸ್ರನಾಮವು ಸೌಂದರ್ಯೋಪಾಸನೆಯನ್ನು ಸೂಚಿಸುತ್ತದೆ. ಇವನ್ನು ಸ್ತ್ರೀ ಉಪಾಸನೆಯೆಂದೂ ಹೇಳುತ್ತಾರೆ. 'ಸ್ತ್ರೀ'ಯು ಶಕ್ತಿಯ ಸಂಕೇತ. ಶಕ್ತಿಯಿಲ್ಲದ ಶಿವ ಯಾವ ಕಾರ್ಯ ಮಾಡಲೂ ಶಕ್ತನಾಗುವುದಿಲ್ಲ. (ಉದಾ. 1. 1. ಶಂಕರ–"ಸೌಂದರ್ಯ ಲಹರಿ") (ಶಿವಃ ಶಕ್ತ್ಯಾಯುಕ್ತೋಯದಿ ಭವತಿ ಶಕ್ತಃ ಪ್ರಭವಿತುಂ..................)

8. ಲಲಿತಾ ಸಹಸ್ರನಾಮದ ಭಾಷೆ ಮತ್ತು ಶೈಲಿಯು ಸರಳವಾಗಿಯೂ. ಸುಂದರವಾಗಿಯೂ ಇದೆ. ತಂತ್ರಶಾಸ್ತ್ರಕ್ಕೆ ಸಂಬಂಧಪಟ್ಟಹಾಗೆ ಪಾರಿಭಾಷಿಕ ಶಬ್ದಗಳೂ, ರಹಸ್ಯ ಅರ್ಥವುಳ್ಳ ದೀರ್ಘ ಸಮಾಸ ಪದಗಳೂ. ಸರಳ ಪದಗಳೂ ಹೇರಳವಾಗಿವೆ. ದೀರ್ಘಪದಗಳು, ಉದಾ: ಸಂಸಾರಪಂಕ ನಿಮಗ್ನ ಸಮುದ್ಧರಣ ಪಂಡಿತಾ ನಿಜ ಭ್ರಾತೃ ಮುಖಾಂಭೋಜ ನಿರೀಕ್ಷಣ ಸಮುತ್ಸುಕಾ ಇತ್ಯಾದಿ. ಸರಳ ಸಮಾಸಗಳು ಉದಾ: ವಿಪ್ರ ಪ್ರಿಯಾ. ಧನಾಧ್ಯಕ್ಷಾ.— ಇತ್ಯಾದಿ.

9. ಆದಿ ಮತ್ತು ಅಂತ್ಯ ಉಪಸರ್ಗಗಳಿಂದ ಕೂಡಿದ ಪದಗಳು ಕಿವಿಗೆ ಇಂಪಾಗಿರುತ್ತವೆ. ಆದಿ ಉಪಸರ್ಗ (ನಿ) (2–44–50) ನಿಸ್ಸಂಶಯಾ. ನಿರಾಧಾರಾ ಇತ್ಯಾದಿ. (ಸಂ) 2.42.43. (ಧು) (2.50–51) ಇತ್ಯಾದಿ. ಅಂತ್ಯ ಉಪಸರ್ಗ. ಉದಾ: ಸುಖದಾ. ಭೋಗದಾ. ಪ್ರಾಣದಾ, ಇತ್ಯಾದಿ ಈ ಪದಗಳು ಒಟ್ಟಾಗಿ ಸೇರಿದಾಗ ಕೇಳಲು ಕಿವಿಗೆ ಇಂಪಾಗಿರುತ್ತವೆ.

10. ಲಲಿತಾ ಸಹಸ್ರನಾಮದಲ್ಲಿ ಅಲಂಕಾರಗಳು ಬಹಳ ಅಪರೂಪವಾಗಿರುತ್ತವೆ. ಉಪಮೆಗಳು ಕಡಿಮೆಯಾಗಿರುತ್ತವೆ. ಆದರೆ ರೂಪಕಗಳು ಹೆಚ್ಚಾಗಿರುತ್ತದೆ. ಉದಾ: ಶ್ರೀ ವಿದ್ಯೈವತು ಮಂತ್ರಾಣಾಮ್......(1.17) ಪುರಾಣಾಂ ಶ್ರೀ ಪುರಂ ಇವಾ (1.8)—ಇಂತಹ ಉಪಮೆಗಳೂ. ಭವಾರಣ್ಯ ಕುಠಾರಿಕಾ. ರೋಗ ಪರ್ವಾತ ದಂಭೋಲಿ: ಇತ್ಯಾದಿ. ಈ ರೂಪಕಗಳು ಅವಳ ಕುಠಾರ ಪ್ರಾಯವಾದ ಶಕ್ತಿಯನ್ನು ಸೂಚಿಸುತ್ತವೆ. ಇವು ಪರಶುರಾಮನ ಕೊಡಲಿ. ಇಂದ್ರನ ವಜ್ರಾಯುಧದ ಶಕ್ತಿಯನ್ನು ಸೂಚಿಸುತ್ತವೆ.

11. ಲಲಿತಾ ಸಹಸ್ರನಾಮದ ಭಾಷೆ ಮತ್ತು ಶೈಲಿಯನ್ನು ಗಮನಿಸಿದರೆ ಇದು ಭಕ್ತಿ ಪೂರ್ವಕವಾಗಿ ರಚಿತವಾಗಿರುವುದರಿಂದ ಸಾಹಿತ್ಯಕವಾಗಿ ಅಷ್ಟು ಮೇಲ್ಮಟ್ಟಕ್ಕೆ ಬರಲಾರದು. ಜನ ಸಾಮಾನ್ಯರೆಲ್ಲರಿಗೂ ಇದು ಸಿಲುಕುವಂತಾಗಬೇಕೆಂಬುದೇ ಇದರ ಪ್ರಮುಖ ಉದ್ದೇಶ.

12. ಕೊನೆಯದಾಗಿ. ಲಲಿತಾ ಸಹಸ್ರನಾಮವನ್ನು ಭಗವಂತನ ಪ್ರೇರಣೆಯಿಂದ ಹಯಗ್ರೀವರು ಹೇಳಿದ್ದಾರೆ. ಈ ಪ್ರಸ್ತುತ ಪ್ರಯತ್ನವು ಭಗವತಿ ಲಲಿತಳ ಪ್ರೇರಣೆಯಿಂದ ಆಯಿತೆಂದು ವಿನಮ್ರಳಾಗಿ ತಿಳಿಸುತ್ತೇನೆ.*

"ಶ್ರೀ ಮಾತ್ರೇ ನಮಃ ಓಂ;
ಶ್ರೀ ಲಲಿತಾಂಬಿಕಾಯ್ಯೈನಮಃ ಓಂ".

---

* ಈ ಲೇಖನ ಸಿದ್ಧ ಪಡಿಸುವಲ್ಲಿ ಹೆಚ್ಚು ಉಪಯೋಗ ಪಡೆದುಕೊಂಡ ಈ ಕೆಳಗಿನ ಕೃತಿಗಳ ಲೇಖಕರಿಗೆ ಕೃತಜ್ಞಳಾಗಿದ್ದೇನೆ.

1 Dr C. L. Prabhakar—Goddess Lalitha (Lalitha Sahasranam) Bharatiya Vidya Vl. XXIX—1969.

2 ಸ್ವಾಮಿ ಆದಿದೇವಾನಂದ–ಶ್ರೀ ಲಲಿತಾ ಸಹಸ್ರನಾಮ (ಭಾಷ್ಯ ಸಹಿತ) ಶ್ರೀ ರಾಮಕೃಷ್ಣಾಶ್ರಮ, ಮೈಸೂರು.

ಶ್ರವಣಾತೀತ ಧ್ವನಿಯ ಪ್ರಯೋಜನಗಳು

ಜಿ. ಗೋ. ರಮೇಶ್

ಗಂಟೆ ಬಾರಿಸಿತು. ಸುತ್ತಲಿನ ಗಾಳಿಯನ್ನು ತಳ್ಳಿತು. ಗಾಳಿಯ ಅಲೆಗಳ ಮೂಲಕ ಗಂಟೆಯ ನಾದ ನಮ್ಮ ಕಿವಿಗೆ ಬಿತ್ತು. ಈ ನಾದ ಪ್ರಸಾರವಾಗುವುದಕ್ಕೆ ಗಾಳಿ ಸಹಾಯಮಾಡಿತು ಎಂದರೆ ಮಧ್ಯವರ್ತಿಯಾಯಿತು. ಗಾಳಿಯನ್ನು ಯಾವ ವೇಗದಲ್ಲಿ ಧ್ವನಿ ತಳ್ಳಿತು ಎಂಬುದು ಧ್ವನಿಯ ತೀವ್ರತೆಯನ್ನು ಅವಲಂಬಿಸಿದೆ. ವಸ್ತುಗಳ ಕಂಪನ ಅಥವಾ ಅಲುಗಾಟದಿಂದ ಧ್ವನಿ ಉತ್ಪತ್ತಿಯಾಗುತ್ತದೆ. ಯಾವ ಕಂಪನವಾಗಲಿ ಆಗ ಸುತ್ತಲಿನ ಹಾಗೂ ಶಬ್ದ ಉಂಟಾಗಲು ಕಾರಣವಾಗುವ ವಸ್ತುಗಳ ನಡುವಿನ ಗಾಳಿ ಒತ್ತರಿಸಲ್ಪಟ್ಟು ಉಬ್ಬಿ ತನ್ನ ಪೂರ್ವ ಸ್ಥಿತಿ ಪಡೆಯುವಾಗ ಪಕ್ಕದ ಗಾಳಿಯನ್ನು ಒತ್ತರಿಸುತ್ತದೆ. ಹೀಗೆ ಮುಂದುವರಿದ ಒತ್ತಡ ನಮ್ಮ ಕಿವಿಯ ಧ್ವನಿ ಗ್ರಹಿಸುವ ಅಂಗವಾದ ಕಾಕ್ಲಿಯ ಮುಟ್ಟಿದಾಗ ಶಬ್ದವನ್ನು ಕೇಳುತ್ತೇವೆ. ನಮ್ಮ ಕಿವಿಯ ಶ್ರವಣ ಸಾಮರ್ಥ್ಯಕ್ಕೆ ಒಂದು ಮಿತಿ ಇದೆ. ಉದಾಹರಣೆಗೆ. ಒಂದು ಸಭೆ ಜರುಗುತ್ತಿದೆಯೆನ್ನಿ. ವೇದಿಕೆಯ ಮೇಲೆ ಯಾವ ಧ್ವನಿವರ್ಧಕಗಳ ಸಹಾಯ ಇಲ್ಲದೆ ಒಬ್ಬರು ಮಾತನಾಡುತ್ತಿದ್ದಾರೆ ಎನ್ನಿ. ಅವರು ಬಹಳಮೆತ್ತಗೆ ಮಾತನಾಡಿದರೆ ಐದಾರು ಮೀಟರ್ ದೂರದಲ್ಲಿರುವವರಿಗೆ ಕೇಳಿಸಬಹುದು. ಇನ್ನೂ ಸ್ವಲ್ಪ ಗಟ್ಟಿಯಾಗಿ ಮಾತನಾಡಿದರೆನ್ನಿ. ಸುಮಾರು 8 ಮೀಟರ್ ದೂರದಲ್ಲಿನವರಿಗೆ ಕೇಳಿಸಬಹುದು. ಅಷ್ಟೇ ಗಟ್ಟಿಯಾಗಿ ಮಾತನಾಡುತ್ತಿದ್ದರೂ 10 ಮೀಟರಿಂದ ಮುಂದೆ ಇರುವವರಿಗೆ ಯಾರಿಗೂ ಕೇಳಿಸುವುದಿಲ್ಲ ಎಂದಾಗ ಅಲ್ಲಿ ಶಬ್ದದಿಂದ ಜನಿತವಾದ ಗಾಳಿಯ ಕಂಪನಗಳಿಲ್ಲ ಎಂದಲ್ಲ. ಶಬ್ದದ ತೀಕ್ಷ್ಣತೆ (Loudness) ಕಡಮೆಯಾಯಿತಷ್ಟೆ. ಇದರಿಂದ ನಮಗೆ ತಿಳಿಯುವ ಅಂಶವೆಂದರೆ ಶಬ್ದವು ಅತಿ ಕ್ಷೀಣವಾದರೆ. ಶ್ರವಣಾತೀತವಾಗಿ ಪರಿಣಮಿಸುತ್ತದೆ. ಹಾಗೆಯೇ ಶಬ್ದದ ತೀಕ್ಷ್ಣತೆ ಹೆಚ್ಚಾದರೂ ನಾವು ಕೇಳಲಾರೆವು. ಏಕೆಂದರೆ ಇಲ್ಲಿ ಕಂಪನಾವರ್ತಗಳು ಅತಿ ತೀವ್ರ. ಅವು ಅತಿತಾರ ಸ್ವರಗಳಿಂದ ಕೂಡಿದ ಶಬ್ದವಾಗಿರುತ್ತದೆ. ಅಂದರೆ ಮನುಷ್ಯನ ಶ್ರವಣ ಸಾಮರ್ಥ್ಯದ ವ್ಯಾಪ್ತಿ ಅತಿ ಮಂದ್ರ ಹಾಗೂ ಅತಿತಾರ ಸ್ವರಗಳಿಂದ ಕೂಡಿದ ಶಬ್ದಗಳ ಕಂಪನಾಂಕಗಳ ನಡುವಿನದು ಎಂದಾಯಿತು. ಇದು ಮನುಷ್ಯನ ವಯಸ್ಸಿಗನುಗುಣವಾಗಿ ವ್ಯತ್ಯಾಸವಾದರೂ ಧ್ವನಿಯನ್ನುಂಟುಮಾಡುವ ವಸ್ತುವಿನ ಕಂಪನಾಂಕ (Frequency) 20.000ಕ್ಕಿಂತ ಹೆಚ್ಚಾಗಿದ್ದು ಇಲ್ಲವೇ 20ಕ್ಕಿಂತ ಕಡಮೆ ಇದ್ದಾಗ ಆ ಧ್ವನಿಯನ್ನು ಕೇಳಲು ನಾವು

ಅಸಮರ್ಥರಾಗುತ್ತೇವೆ ಎಂಬುದು ಗೊತ್ತಾಗಿದೆ. ಕೆಲ ಧ್ವನಿಯನ್ನು ಕೇಳಿದಾಗಂತೂ ಕಿವಿಗೆ ಯಾತನೆಯಾಗುತ್ತದೆ. ಅಲ್ಲಿಂದ ಮುಂದಿನ ಧ್ವನಿ ಕಿವಿಯನ್ನು ಕಿವುಡಾಗಿಸುವಷ್ಟು ಎಂದರೆ ಕೇಳಿಸಲಾರದಂತಾಗಿ ಶ್ರವಣಾತೀತಧ್ವನಿ ಎಂದು ಕರೆಸಿಕೊಳ್ಳುತ್ತದೆ. ಈ ಶ್ರವಣಾತೀತ ಧ್ವನಿ (ultrasonics) ಅಥವಾ ನಿಶ್ಶಬ್ದಧ್ವನಿ (Silent Sound) ಈಚಿನ ವರ್ಷಗಳಲ್ಲಿ ರಸಾಯನ ಶಾಸ್ತ್ರ, ಜೀವ ಶಾಸ್ತ್ರ, ಲೋಹ ಹಾಗೂ ಎಂಜನಿಯರಿಂಗ್ ಶಾಸ್ತ್ರಗಳಲ್ಲಿ ಬಹು ಪ್ರಯೋಜನಕಾರಿಯಾಗಿವೆ.

ಈ ಧ್ವನಿಶಾಸ್ತ್ರದ ಹುಟ್ಟು 1917 ರಲ್ಲೇ ಆಯಿತು. ಪಿಯರಿಲಾಂಗೆವಿನ್ ಎಂಬಾತ ಜಲಾಂತರ್ಗಾಮಿ ದೋಣಿಗಳನ್ನು (Submarines) ಪತ್ತೆಹಚ್ಚುವುದರಲ್ಲಿ ಶ್ರವಣಾತೀತ ಶಬ್ದದ ಪ್ರತಿಧ್ವನಿಯ ಪ್ರತಿಫಲನದ ಸಹಾಯ ಪಡೆದ. ಇದನ್ನು ಹೀಗೆ ಅರ್ಥಮಾಡಬಹುದು. ಕತ್ತಲೆಯ ಕೋಣೆಯಲ್ಲಿ ಗೋಡೆಯ ಹತ್ತಿರ ಗೋಡೆಗೆ ಅಭಿಮುಖವಾಗಿ ನಿಲ್ಲಿ. ಆ ಗೋಡೆಯ ಎದುರು ಗೋಡೆ ಎಂದರೆ ನಿಮ್ಮ ಬೆನ್ನಿನ ಹಿಂದಿನ ಗೋಡೆಯಮೇಲೆ ಟಾರ್ಚ್ ಬೆಳಕನ್ನು ಬಿಡಿ. ನಿಮ್ಮ ಮುಂದಿನ ಗೋಡೆಯ ಮೇಲೆ ಬೆಳಕು ಪ್ರತಿಫಲನವಾಗಿದ್ದರೆ ಬೆಳಕಿನ ಹಾದಿಯಲ್ಲಿ ಯಾವುದಾದರೂ ಪ್ರತಿಫಲಕ ಇದೆ ಎಂದಾಯಿತು. ಪ್ರತಿಫಲನವಾಗದಿದ್ದರೆ ಹಿಂದಿರುಗಿ ನೋಡಿ. ಗೋಡೆಯ ಮೇಲೆ ನೆರಳಿರುತ್ತದೆ. ಅಂದರೆ ಬೆಳಕಿನ ಹಾದಿಯಲ್ಲಿ ಪ್ರತಿಫಲನ ಉಂಟುಮಾಡುವ ವಸ್ತುವಿಲ್ಲ ಎಂದಾಯಿತು. ಹೆಚ್ಚುಕಡಮೆ ಶ್ರವಣಾತೀತ ಧ್ವನಿ ಕೆಲಸ ಮಾಡುವುದು ಹೀಗೆಯೇ. ಅದು ನಮಗೆ ಕಾಣಿಸುವುದಿಲ್ಲ. ಆದರೆ ಶಬ್ದಶಕ್ತಿಯು ಯಾಂತ್ರಿಕಶಕ್ತಿಯಾಗಿ ಮಾರ್ಪಡುವುದು ಮಾಪನಗಳಿಂದ ನಮಗೆ ಗೊತ್ತಾಗುವುದು. ಆ ಧ್ವನಿ ಚಲಿಸುವ ಭಾಗದಲ್ಲಿ ಒತ್ತಡವನ್ನುಂಟುಮಾಡುತ್ತದೆ. ಒತ್ತಡದ ಫಲ ಶಾಖ; ಇದರಿಂದ ಧ್ವನಿ ಸಾಮರ್ಥ್ಯವನ್ನು ಅಂದಾಜುಮಾಡಬಹುದಾಗಿದೆ.

ಶ್ರವಣಾತೀತ ಧ್ವನಿ ಉತ್ಪಾದನೆ

1899 ರಲ್ಲಿ ಕನಿಗ್ ಎಂಬ ಜರ್ಮನ್ ವಿಜ್ಞಾನಿಯು ಸುಮಾರು 70.000ವರೆಗಿನ ಕಂಪನಾವರ್ತಗಳ ಶ್ರುತಿಕವಲು (Tuning fork) ಗಳನ್ನು ತಯಾರಿಸಿದ್ದನು. ಬಳಿಕ ಗಾಲ್ಟನ್ ಎಂಬುವನ್ನು ಒಂದು ಪೀಪಿಯನ್ನು ರಚಿಸಿದ್ದನು. ಆದರೆ ಇವು ತಾತ್ಕಾಲಿಕ ಬಳಕೆಗೆ ಮಾತ್ರ ಸಹಕಾರಿಯಾದುವು. ಇವುಗಳಿಂದ ಧ್ವನಿ ಉತ್ಪಾದನೆ ಸ್ವಲ್ಪ ಕಾಲ ಮಾತ್ರ ಸಾಧ್ಯವಾಗುತ್ತಿತ್ತು. ರೇಡಿಯೋವಾಲ್ವ್ ಮತ್ತು ವಿದ್ಯುದುಪಕರಣಗಳ ಬಳಕೆ ಹೆಚ್ಚಾದ ಮೇಲೆ ಶ್ರವಣಾತೀತ ಸ್ವರಗಳ ಉತ್ಪಾದನೆ ಸರಾಗವಾಯಿತು. ಮುಖ್ಯವಾಗಿ ಎರಡು ವಿಧಾನಗಳಿಂದ ಸ್ವರೋತ್ಪಾದನೆ ಸಾಧ್ಯವಾಗಿದೆ.

1. ಅಯಸ್ಕಾಂತ ವಿಕೃತಿ ಪರಿಣಾಮ (magnetostrictive)
2. ಸಂಮರ್ದ ವಿದ್ಯುತ್ ಪರಿಣಾಮ (Piezoelectric)

ಮೊದಲನೆಯ ವಿಧಾನದಲ್ಲಿ ಕಬ್ಬಿಣ. ನಿಕ್ಕಲ್ ಮುಂತಾದ ಕಾಂತವಸ್ತುಗಳನ್ನು ಅಯಸ್ಕಾಂತ ಕ್ಷೇತ್ರದಲ್ಲಿರಿಸಿ ವಸ್ತುಗಳ ಉದ್ದದಲ್ಲಿ ಬದಲಾವಣೆ ಉಂಟುಮಾಡಲಾಗುತ್ತದೆ. ತಾಮ್ರದ ತಂತಿಯ ಸುರುಳಿಯ ನಡುವೆ ಕಾಂತ ವಸ್ತುವಿನ ಕೊಳವೆಯನ್ನು ತೂರಿಸಿ ಸುರುಳಿಯಲ್ಲಿ ವಿದ್ಯುತ್ಪ್ರವಾಹ ಹರಿಯುವಂತೆ ಮಾಡಿದರೆ ಕಾಂತೀಯ ವಿದ್ಯುತ್ ಪರಿಣಾಮವಾಗಿ ಕೊಳವೆಯ ಉದ್ದ ಹೆಚ್ಚುತ್ತದೆ. ಕಂಪನ ಉಂಟಾಗುತ್ತದೆ. ವಿದ್ಯುತ್ಪ್ರವಾಹ ಆವರ್ತಕ ಪ್ರವಾಹವಾದರೆ (A. C Current) ಕೊಳವೆಯ ಉದ್ದದಲ್ಲೂ ಹೆಚ್ಚು ಕಡಿಮೆಯಾಗುತ್ತದೆ. ಈ ವಿಧಾನದಿಂದ ಅವಿಚ್ಛಿನ್ನವಾಗಿ ಶ್ರವಣಾತೀತ ಸ್ವರಗಳನ್ನು ಉತ್ಪಾದಿಸಬಹುದು. ಎರಡನೆಯ ವಿಧಾನದಲ್ಲಿ ಕಾಚಶಿಲೆ, ಬೇರಿಯಮ್ ಟೈಟಾನೇಟ್ ಅಮೋನಿಯಂ ಡೈಫಾಸ್ಫೇಟ್ ಮುಂತಾದ ಪಟಿಕಗಳನ್ನು ಬದಲಾಗುವ ವಿದ್ಯುತ್ (ಆವರ್ತಕ) ಕ್ಷೇತ್ರದ ಪ್ರಭಾವಗಳಿಗೊಳಗುಮಾಡಿ ಶ್ರವಣಾತೀತ ಸ್ವರಗಳನ್ನು ಉತ್ಪಾದಿಸುತ್ತಾರೆ. ಈ ವಿಧಾನದಿಂದ ಅತಿತಾರಸ್ವರ (High pitch) ಗಳನ್ನು ಉಂಟುಮಾಡಬಹುದಾಗಿದೆ.

ಶ್ರವಣಾತೀತ ಧ್ವನಿಯ ಪ್ರಯೋಜನಗಳು

ಅತಿ ಶೀಘ್ರವಾಗಿ ಮುಂದುವರಿಯುತ್ತಿರುವ ಹಾಗೂ ಬಹು ವ್ಯಾಪ್ತಿಯುಳ್ಳ ಶ್ರವಣಾತೀತ ಧ್ವನಿಯ ಕ್ಷೇತ್ರದ ಪ್ರಯೋಜನ ಅಲ್ಪವಲ್ಲ. ಯುದ್ಧಕಾಲದಲ್ಲಿ ಶತ್ರು ಸಬ್‌ಮೆರೀನ್‌ಗಳು ಅಡಗಿಕೊಂಡಿರುವ ಸ್ಥಳಗಳನ್ನು ಪತ್ತೆ ಹಚ್ಚುವುದರಿಂದ ಹಿಡಿದು ಮೂತ್ರಪಿಂಡದಲ್ಲಿರಬಹುದಾದ ಕಲ್ಲನ್ನು (ಹರಳನ್ನು) ಗುರ್ತಿಸುವವರೆಗೂ ಅದರ ವ್ಯಾಪ್ತಿ ಇದ್ದು ಇಂದು ಆ ಧ್ವನಿಯ ಸಹಾಯದಿಂದ ಹಲವಾರು ವಿಜ್ಞಾನಗಳು ಮುಂದೆ ಹೋಗುತ್ತಿವೆ. ಲೋಹಗಳಲ್ಲಿ ದೋಷವಿರುವೆಡೆ ಕಂಡು ಹಿಡಿಯಲು. ಸೂಕ್ಷ್ಮವಾದ ಕೈಗಾರಿಕಾ ಉಪಕರಣವನ್ನು ಶುದ್ಧಿಮಾಡಲು. ವಿದ್ಯುಲ್ಲೇಪನಕಾರ್ಯದಲ್ಲಿ ಸಹಕರಿಸುವ ಪ್ಲಾಸ್ಟಿಕ್ ಹಾಗೂ ಇತರ ಘನಲೋಹಗಳನ್ನು ಅಂಟುಹಾಕುವ (welding) ಕಾರ್ಯಕ್ಕೂ. ಮಿಶ್ರಣಗಳನ್ನು ಅದರಲ್ಲಿನ ಬಿಡಿವಸ್ತುಗಳಿಂದ ಬೇರ್ಪಡಿಸಲು, ಪೆಯಿಂಟುಗಳ ತೈಯಾರಿಕೆಯಲ್ಲೂ. ಬೆಳಕಿನ ಸಮನವನ್ನು ಅಧ್ಯಯನ ಮಾಡುವುದರಲ್ಲೂ, ದೂರದೃಶ್ಯ ಯೋಜನೆಗಳಲ್ಲಿಯೂ (Televisions). ಹೆಚ್ಚು ಉಷ್ಣತೆಗಳಲ್ಲಿ ಪ್ಲಾಸ್ಟಿಕ್ ಮತ್ತಿತರ ಘನವಸ್ತುಗಳ ಸ್ಥಿತಿಸ್ಥಾಪಕಾಂಕವನ್ನಳೆಯಲು. ಕಣ್ಣುಗಳಲ್ಲಿ ಹೊರ ವಸ್ತುವನ್ನು ತೆಗೆಯಲು, ಅಂಧರಿಗೆ ದೃಷ್ಟಿದಾನ ಮಾಡುವಂತೆ ಮಾಡಲು ಶ್ರವಣಾತೀತ ಸ್ವರಗಳ ಪ್ರಯೋಜನವಾಗುತ್ತಿದೆ. ಇನ್ನೂ ಇದರ ಉಪಯೋಗಗಳು ಎಷ್ಟೋ ಇವೆ. ಜೀವನರಂಗದ ಎಲ್ಲ ಪಾತ್ರಗಳಲ್ಲಿಯೂ ಈ ಧ್ವನಿಯ ಸಹಕಾರವಿದ್ದು ಹಲವಾರು ವಿಜ್ಞಾನ ಪ್ರಯೋಗಗಳಿಂದ ಈ ಧ್ವನಿಯ ತರಂಗಗಳನ್ನು ಹೆಚ್ಚು ಬಳಸುತ್ತ ಹೋದಲ್ಲಿ ಮಾನವನಿಗೆ ಇನ್ನೂ ಹೆಚ್ಚಿನ ಸೇವೆಸಲ್ಲಿಸುವುವು ಎಂಬುದು ದೃಢಪಟ್ಟಿದೆ.

ಈ ಕೆಲವು ಕ್ಷೇತ್ರಗಳಲ್ಲಿ ನಿಶ್ಯಬ್ದ ಧ್ವನಿ ಹೇಗೆ ಕೆಲಸಮಾಡುತ್ತದೆಂಬುದನ್ನು ಮೂರು ನಾಲ್ಕು ಉದಾಹರಣೆಗಳಿಂದ ಗಮನಿಸೋಣ.

ಜೀವಶಾಸ್ತ್ರ ಮತ್ತು ವೈದ್ಯ ವಿಜ್ಞಾನ

ರಸಾಯನ ವಸ್ತುಗಳನ್ನು ಶಕ್ತಿ ಮತ್ತು ಕೋಶೀಯ ಉಪವಸ್ತುಗಳಾಗಿ ಪರಿವರ್ತಿಸುವ ಕೋಶಗಳ ಜೀವ ವಸ್ತು (metabolic) ಪಥದ ಅಧ್ಯಯನದಲ್ಲಿ ನಿಶ್ಯಬ್ದ ಧ್ವನಿಯ ಬಳಕೆ ಇದೆ. ಜರುಗುವ ಮುಖ್ಯ ಕ್ರಿಯೆಗಳೆಂದರೆ ಶಾಖೋತ್ಪತ್ತಿ, ಕಲಕುವಿಕೆ. ಸೂಕ್ಷ್ಮವಾಗಿ ಬಿರುಕಾಗುವುದು ಇತ್ಯಾದಿ. ಪ್ರಾಣಿಗಳನ್ನು ಸುಮಾರು 25 ಸೆಕೆಂಡುಗಳ ಕಾಲ ಶ್ರವಣಾತೀತಧ್ವನಿ ತರಂಗಗಳಿಗೊಡ್ಡಿದಾಗ ಅವುಗಳ ಮಿದುಳಿನ ಅಂಗಸತ್ವ (Tissues) ಗಳ ಉಷ್ಣತೆಯು 9° ಸೆ. ನಷ್ಟು ಹಾಗೂ ಮೇದಸ್ಸಿನ ಅಂಶ 25° ಸೆ. ನಷ್ಟು ಹೆಚ್ಚಿದ್ದು ಕಂಡುಬಂದಿದೆ. ಶ್ರವಣಾತೀತ ಧ್ವನಿಯ ಅತ್ಯಧಿಕ ಕಂಪನಗಳ ಮೂಲಕವಾಗಿ ಉದ್ಭವಿಸುವ ಶಾಖವೇ ಇದಕ್ಕೆ ಕಾರಣ. ಪಳೆಯುಳಿಕೆಗಳನ್ನು ಅದರಲ್ಲಿರುವ ಧೂಳು. ಮಣ್ಣು ಮುಂತಾದುವುಗಳಿಂದ ಬೇರ್ಪಡಿಸಿ ಸ್ವಚ್ಛಗೊಳಿಸಲು ನಿಶ್ಯಬ್ದ ಧ್ವನಿತರಂಗಗಳನ್ನು ಉಪಯೋಗಿಸಲಾಗಿ ಅತ್ಯಲ್ಪಕಾಲದಲ್ಲಿ ಅಶುದ್ಧತೆಯನ್ನು ತೊಡೆದುಹಾಕಲು ಯಶಸ್ವಿಯಾಗಿದ್ದಾರೆ. ಇದರಿಂದ ಪ್ರಾಣಿಶಾಸ್ತ್ರಜ್ಞರಿಗೆ ಬಹಳ ಅನುಕೂಲವಾಗಿದೆ.

ವೈದ್ಯಕೀಯ ರಂಗದಲ್ಲಿ ಇಂದು ಶ್ರವಣಾತೀತ ಧ್ವನಿ ತರಂಗಗಳ ಬಳಕೆ ಹೆಚ್ಚುತ್ತಿದೆ. ಹಲವಾರು ರೋಗಗಳ ಚಿಕಿತ್ಸೆಗೆ ಅದು ಸಹಕಾರಿಯಾಗಿದೆ. ಶಸ್ತ್ರಚಿಕಿತ್ಸೆ (Surgery) ಎಂದರೆ ಯಾರಾದರೂ ಹೆದರುವುದು ಸಾಮಾನ್ಯ. ಶಸ್ತ್ರಕ್ರಿಯೆಯಲ್ಲಿ ರಕ್ತಸ್ರಾವ ಅತಿಯಾಗಿ ಅನೇಕರು ಸಾವಿಗೀಡಾದ್ದನ್ನು ನಾವು ಕೇಳಿದ್ದೇವೆ. ಆದರೆ ಹಲವಾರು ವೈದ್ಯಕೀಯ ಸಂಶೋಧನೆಗಳ ಫಲವಾಗಿ ಈಚೆಗೆ ಅಂತಹ ಅಪಾಯಗಳು ಆಗುತ್ತಿಲ್ಲ. ಅದರಲ್ಲೂ ಶ್ರವಣಾತೀತ ಧ್ವನಿತರಂಗಗಳನ್ನು ಶಸ್ತ್ರಕ್ರಿಯೆಗೆ ಬಳಸಿದಮೇಲೆ ಒಂದು ಹನಿ ರಕ್ತ ಕೂಡ ಹೊರಚೆಲ್ಲುವ ಅವಶ್ಯಕತೆ ಇಲ್ಲ. ಮೊಟ್ಟಮೊದಲಿಗೆ 1952ರಲ್ಲಿ ಇಟಲಿಯ ಪ್ರೊ॥ ಅರ್‌ಸ್ಲಾನ್ ಎಂಬುವರು ಕಿವಿಯ ವ್ಯಾಧಿಗೆ ಶಸ್ತ್ರಕ್ರಿಯೆ ನಡೆಸಲು ಈ ಧ್ವನಿಯನ್ನು ಬಳಸಿದರು. ಮಿದುಳಿನ ಶಸ್ತ್ರಚಿಕಿತ್ಸೆ ಸುಲಭವಾಗಿ ಆಗಲು ಈ ಧ್ವನಿಯನ್ನುಪಯೋಗಿಸಬಹುದಾಗಿದೆ. ಇಲ್ಲಿ ತಲೆಬುರುಡೆ (Skull) ಯನ್ನು ಪೂರ್ಣವಾಗಿ ಬಿಚ್ಚುವ ಅಗತ್ಯವಿಲ್ಲ. ಶ್ರವಣಾತೀತ ಧ್ವನಿ ಶಕ್ತಿಗೆ ಅವಕಾಶಮಾಡಿಕೊಡಲು ಒಂದು ಸಣ್ಣ ದಾರಿಯಾದರೆ ಸಾಕು. ಶಸ್ತ್ರಕ್ರಿಯೆಗೆ ಬೇಕಾದ ಉಪಕರಣಗಳು ಪ್ರತ್ಯೇಕ. ಧ್ವನಿ ತರಂಗಗಳನ್ನು ಹಾಯಿಸಿ ಆಯ್ಕೆಮಾಡಿಕೊಂಡ ಅಂಗಸತ್ವವನ್ನು ಇತರ ಯಾವ ಭಾಗಗಳಿಗೂ ಅಪಾಯವಾಗದಂತೆ ತೆಗೆಯುತ್ತಾರೆ. ಶಸ್ತ್ರಕ್ರಿಯೆಯಲ್ಲಿ ಕತ್ತರಿಸಿದ ಚರ್ಮವನ್ನು ಕಾರ್ಯವಾದ ಬಳಿಕ ಸೂಜಿಯಿಂದ ಹೊಲಿಯುತ್ತಾರೆ. ಇದಕ್ಕೂ ಶ್ರವಣಾ

ತೀತ ಧ್ವನಿತರಂಗ ಶಲಾಕೆಯನ್ನು ಉಪಯೋಗಿಸುವರು. ಶಲಾಕೆಯನ್ನು ಚರ್ಮದ ಎರಡೂ ತುಂಡುಗಳನ್ನು ಕೂಡಿಸಿದ ಭಾಗದ ಮೇಲೆ ಕೇಂದ್ರೀಕರಿಸಿದಾಗ ಆ ಭಾಗದ ಜೀವಕೋಶಗಳು ಕರಗಿ ಒಂದು ಬಗೆಯ ಅಂಟು ಉತ್ಪತ್ತಿಯಾಗಿ ಆ ಚರ್ಮದ ತುಂಡುಗಳನ್ನು ಜೋಡಿಸುತ್ತದೆ. ಶಲಾಕೆಯನ್ನು ಲೆನ್ಸಿನ ಮೂಲಕ ನಿರ್ದೇಶಿತ ಭಾಗದ ಮೇಲೆ ಕೇಂದ್ರೀಕರಿಸಬೇಕು. ಈ ದಿಶೆಯಲ್ಲಿ ಇನ್ನೂ ಹೊಸ ಪ್ರಯೋಗಗಳು ನಡೆಯುತ್ತಿವೆ. ಅಂಗಮರ್ದನ (Massage) ನಮ್ಮಲ್ಲಿ ಬಹಳಕಾಲದಿಂದಲೂ ಚಿಕಿತ್ಸೆ ದೃಷ್ಟಿಯಿಂದ ಜರುಗುತ್ತಿದೆ. ಮೈ ಕೈ ನೋವಿಗೆ, ಕೈಕಾಲು ಉಳುಕಿಗೆ, ಸ್ನಾಯುಗಳ ನೋವಿಗೆ ಈ ಮೂಲಕ ಚಿಕಿತ್ಸೆ ಸಾಧ್ಯ. ಆದರೆ ಇದಕ್ಕಾಗಿ ಒಬ್ಬ ಮತ್ತೊಬ್ಬನನ್ನು ಆಶ್ರಯಿಸುವ ಅಗತ್ಯವಿಲ್ಲ. ನಿಶ್ಶಬ್ದಧ್ವನಿ ತರಂಗಗಳನ್ನು ಉಳುಕಿದ. ನೋವಾಗುವ ಭಾಗಗಳ ಮೇಲೆ ಹಾಯಿಸಿದಾಗ ಮೃದುವಾಗಿ ತಿಕ್ಕಿದ ಅನುಭವ ಉಂಟಾಗಿ ಉಳುಕು ಬಿಟ್ಟು ಹೋಗುತ್ತದೆ. ಇದೇ ರೀತಿ ನರಗಳ ದೌರ್ಬಲ್ಯ ಮತ್ತು ಸಂಧಿವಾತ (Rhuematism) ರೋಗಗಳನ್ನು ಗುಣಪಡಿಸಬಹುದು. ರಕ್ತ ಹೆಪ್ಪುಗಟ್ಟು ರೋಗ (Thrombosis) ದಲ್ಲಿ ಧ್ವನಿ ತರಂಗಗಳನ್ನು ರಕ್ತಚಲನೆ ಸ್ಥಗಿತಗೊಂಡ ಭಾಗವನ್ನು ಕಂಡುಹಿಡಿಯಲು ಬಳಸಬಹುದು. ದೇಹದಲ್ಲಿ ಕೊಬ್ಬಿನ ಅಂಶ ರಕ್ತನಾಳಗಳ ಒಳಬದಿಗೆ ಅಂಟಿಕೊಂಡಾಗ ಆ ಭಾಗದಲ್ಲಿ ರಕ್ತ ಹೆಪ್ಪುಗಟ್ಟುತ್ತದೆ. ಅಂದರೆ ಈ ಭಾಗದಲ್ಲಿ ರಕ್ತದ ಚಲನೆ ನಿಧಾನ. ಶ್ರವಣಾತೀತಧ್ವನಿ ಉತ್ಪಾದಕ ಯಂತ್ರವನ್ನು ಪರೀಕ್ಷೆಮಾಡುವ ಉದ್ದೇಶದಿಂದ ರಕ್ತನಾಳದ ಸುತ್ತ ಚರ್ಮದ ಬಳಿ ಇಡುತ್ತ ಹೋದಂತೆ ಯಂತ್ರವು ಧ್ವನಿಯ ಪ್ರತಿಫಲನ ಗುಣವನ್ನುಪಯೋಗಿಸಿ ರಕ್ತದವೇಗ ಕಮ್ಮಿ ಇರುವ ಸ್ಥಳವನ್ನು ನಿರ್ದೇಶಿಸುತ್ತದೆ. ವೈದ್ಯವಿಜ್ಞಾನಿಗಳು ಮೊದಲು ಥ್ರೊಂಬೋಸಿಸ್ ಉಂಟಾಗಿರುವ ಭಾಗವನ್ನು ಪತ್ತೆ ಹಚ್ಚಲು ಶಸ್ತ್ರಚಿಕಿತ್ಸೆಮಾಡಬೇಕಾಗಿತ್ತು. ಈಗ ಆ ಕೆಲಸ ನಿಶ್ಶಬ್ದ ಧ್ವನಿತರಂಗಗಳ ಮೂಲಕ ಸುಲಭ. ಮೂತ್ರಪಿಂಡದಲ್ಲಿ ಹರಳುಗಳು ಸೇರುವುದು ಕೆಲವೊಮ್ಮೆ ಅನಿವಾರ್ಯ. ಈ ಹರಳುಗಳು ಪಚನವಾಗಲು ಅವು ಚೂರ್ಣವಾಗಿ ಮೂತ್ರದೊಡನೆ ಶರೀರದಿಂದ ಹೊರಗೆ ಹೋಗುವಂತಾಗಬೇಕು. ಇಲ್ಲಿ ನಮ್ಮ ಕೆಲಸ ಹರಳುಗಳನ್ನು ಪುಡಿ ಮಾಡುವುದು. ಧ್ವನಿ ತರಂಗಗಳನ್ನು ಶರೀರದ ಮಟ್ಟಸವಾದ ಚರ್ಮದಮೇಲೆ ಹಾಯಬಿಟ್ಟಾಗ ಅವು ಚರ್ಮದ ಮೂಲಕ ಮೂತ್ರಪಿಂಡವನ್ನು ಪ್ರವೇಶಿಸಿ ಹರಳುಗಳನ್ನು ಪುಡಿಮಾಡುತ್ತವೆ. ಇಲ್ಲಿ ಧ್ವನಿ ತರಂಗಗಳ ಪರಿಣಾಮವಾಗಿ ಉಂಟಾದ ಒತ್ತಡವೇ ಕಾರಣ. ಈ ಧ್ವನಿ ತಾಕಿದ ಕಲ್ಲಿನಿಂದ ಪ್ರತಿಫಲಿತಗೊಂಡ ಧ್ವನಿಯನ್ನು ಕ್ಯಾಥೋಡ್ ಕಿರಣನಳಿಗೆಯ ಸಹಾಯದಿಂದ ಗುರ್ತಿಸಬಹುದು. ಶ್ರವಣಾತೀತ ತರಂಗಗಳನ್ನು ಕ್ಯಾನ್ಸರಿನ (ಅರ್ಬುದರೋಗ) ಕೀಟಾಣುಗಳನ್ನು ನಾಶ ಮಾಡಲು, ತಲೆನೋವಿಗೆ ಚಿಕಿತ್ಸೆ ಮಾಡಲು, ಕಣ್ಣಿನಲ್ಲಿ ಬೆಳೆದ ದುರ್ಮಾಂಸದ ಜಾಗ ಪತ್ತೆಹಚ್ಚಲು, ಹೀಗೆ ಅನೇಕ ಚಿಕಿತ್ಸೆಗಳಲ್ಲಿ ಬಳಸಬಹುದಾಗಿದೆ. ಕುರುಡರಿಗೆ ಊರುಗೋಲಿದ್ದರೆ ಸಾಲದು. ಅವರು ನಡೆಯುವಾಗ ಅಡೆತಡೆಗಳು

ಸಹಜ. ಇವನ್ನು ಪತ್ತೆ ಹಚ್ಚಲು ಶ್ರವಣಾತೀತ ಧ್ವನಿಯನ್ನು ಉತ್ಪಾದಿಸುವ ಒಂದು ಸಣ್ಣ ಯಂತ್ರವನ್ನು ಊರುಗೋಲಿನಲ್ಲಿಟ್ಟು ಕುರುಡರ ಉಪಯೋಗಕ್ಕೆ ಕೊಡುತ್ತಾರೆ. ಆತ ನಡೆಯುವಾಗ ಕೋಲಿನಿಂದ ಬರುವ ಧ್ವನಿತರಂಗಗಳು ಮುಂದೆ ಅಡೆತಡೆಗಳು ಇದ್ದರೆ ಅವುಗಳಿಂದ ಪ್ರತಿಫಲಿಸಿ ಪುನಃ ಕೋಲನ್ನು ತಲುಪುತ್ತವೆ. ಹೀಗೆ ಬಂದ ಧ್ವನಿ ತರಂಗಗಳು ಕುರುಡನ ಕಿವಿಗೆ ಕೇಳಲು ಆಗುವಂತೆ ಅವು ಸಾಮಾನ್ಯ ಧ್ವನಿಯಾಗಿ ಪರಿವರ್ತಿಸುವ ವ್ಯವಸ್ಥೆ ಕೋಲಿನಲ್ಲಿರುವ ಯಂತ್ರದೊಡನೆ ಇರುತ್ತದೆ. ಇದರಿಂದ



ಚಿತ್ರ 1. ಅಂಧರಿಗೆ ದೃಷ್ಟಿದಾನ–ಊರುಗೋಲು ಅಥವಾ ಶ್ರವಣಾತೀತ ಧ್ವನಿ ತರಂಗಗಳೆಬ್ಬಿಸುವ ಕನ್ನಡಕಗಳು

ಆ ಕುರುಡನಿಗೆ ಮುಂದೆ ಇರಬಹುದಾದ ಅಪಾಯದ ಸ್ಥಾನ ತಿಳಿದು ಆತ ಜಾಗ್ರತನಾಗಲು ಸಹಾಯವಾಗುವುದು. ಈ ಬಗೆಯ ಊರುಗೋಲುಗಳು ಪಾಶ್ಚಾತ್ಯದೇಶದಲ್ಲಿ ಬಳಕೆಯಲ್ಲಿದೆ. ಇದೇ ತತ್ವ ಬಳಸಿಕೊಂಡು ಶ್ರವಣಾತೀತ ಧ್ವನಿ ತರಂಗಗಳೆಬ್ಬಿಸುವ ಕನ್ನಡಕಗಳು ಬಳಕೆಯಲ್ಲಿವೆ. (ನೋಡಿ ಚಿತ್ರ 1)


ಕೈಗಾರಿಕಾ ಕ್ಷೇತ್ರದಲ್ಲಿ

ದೇಶದ ಪ್ರಗತಿಯಲ್ಲಿ ಕೈಗಾರಿಕಾ ಕ್ಷೇತ್ರದ ಪಾತ್ರ ಅಪಾರ. ಅವು ಎಷ್ಟು ವೇಗವಾಗಿ ಕೆಲಸಮಾಡಿದರೆ ಪ್ರಗತಿ ಅಷ್ಟು ವೇಗವಾಗುವುದು. ಈ ದಿಶೆಯಲ್ಲಿ ಶ್ರವಣಾತೀತ ಧ್ವನಿತರಂಗಗಳ ಸೇವೆ ಅಪಾರ. ಕೈಗಾರಿಕೆಗಳಲ್ಲಿ ಒಂದು ವಸ್ತು

ತಯಾರಾಗುವಲ್ಲಿ ಅದು ಹಲವಾರು ಹಂತಗಳನ್ನು ದಾಟಿಬರುತ್ತದೆ. ಉದಾಹರಣೆಗೆ ಘೈರಿಗೆ ಹಾಕುವುದೇ ಒಂದು ಹಂತ. ಅಂಟು ಹಾಕುವುದೇ ಒಂದು ಹಂತ. ಇಂತಹ ಕಾರ್ಯಗಳನ್ನು ಇಂದು ಶ್ರವಣಾತೀತ ಧ್ವನಿಯ ಸಹಾಯದಿಂದ ಕೆಲವೇ ನಿಮಿಷಗಳಲ್ಲಿ ಮಾಡಿ ಮುಗಿಸಬಹುದಾಗಿದೆ.

1. ಬೆಸುಗೆ ಹಾಕುವುದು

ಒಂದು ದ್ರವದ ಮೂಲಕ ಶ್ರವಣಾತೀತ ಧ್ವನಿ ತರಂಗಗಳನ್ನು ಹಾಯಿಸಿದಾಗ ಅವು ತೀವ್ರವಾಗಿ ಓಲಾಡುವ ಒತ್ತಡಗಳನ್ನುಂಟುಮಾಡುತ್ತವೆ. ಇದರ ಫಲವಾಗಿ ಅಲ್ಲಲ್ಲಿ ಸಣ್ಣ ಸಣ್ಣ ಗುಳ್ಳೆಗಳು ಏಳುತ್ತವೆ. ಈ ಗುಳ್ಳೆಗಳ ಸುತ್ತ ಉಂಟಾದ ತತ್‌ಕ್ಷಣದ ಒತ್ತಡವು ಗುಳ್ಳೆಗಳೊಡನಿರುವ ಲೋಹದ ಸಹನಾ ಸಾಮರ್ಥ್ಯಕ್ಕಿಂತಲೂ ಹೆಚ್ಚಿಗೆ ಇರುತ್ತವೆ. ಅದುದರಿಂದ ಲೋಹದ ಮೇಲ್ಮೈಯಿಂದ ಸಣ್ಣ ಸಣ್ಣ ಚೂರುಗಳು ಸಿಡಿದು ದ್ರವದೊಡನೆ ಬೆರೆಯುವುದು. ಇದೊಂದು ರೀತಿಯ ಶುದ್ಧೀಕರಣಕ್ರಿಯೆ ಯಂತೆ. ಇದನ್ನು ಬೆಸುಗೆ ಹಾಕುವ ಲೋಹದ ಮೇಲ್ಮೈಗೆ ಹಚ್ಚಿದಾಗ ತೀವವಾಗುವ ಕ್ರಿಯೆ ಜರಗುತ್ತದೆ. ಇಲ್ಲಿನ ಮುಖ್ಯ ತತ್ವವೆಂದರೆ ಒಂದು ಲೋಹದ ಮೇಲ್ಮೈಯಲ್ಲಿರುವ ಆಕ್ಸೈಡ್ ಲೇಪನಗಳನ್ನು ತೆಗೆದುಹಾಕಲು ಧ್ವನಿತರಂಗಗಳನ್ನು ಬಳಸಬೇಕಾಯಿತು ಎಂದು. ಹೀಗೆ ಆಗುವಾಗ ಬೆಸುಗೆ ಹಾಕಲ್ಪಡುತ್ತದೆ. ಇಲ್ಲಿ ಯಾವ ಉಪವಸ್ತು (Flux)ಗಳ ಅಗತ್ಯವಿಲ್ಲ. ಅಲ್ಯೂಮಿನಿಯಂ. ಬೆರಿಲಿಯಮ್ ಮತ್ತು ಮ್ಯಾಗ್ನೀಸಿಯಂ ಮಿಶ್ರಲೋಹಗಳನ್ನು ಈ ವಿಧಾನದಿಂದ ಬೆಸುಗೆ ಹಾಕಬಹುದು. ಚಿತ್ರ 2 ರಲ್ಲಿ, ಈ ರೀತಿಯ ಬೆಸುಗೆ ಹಾಕುವ ಉಪಕರಣವನ್ನು ತೋರಿಸಲಾಗಿದೆ.



ಚಿತ್ರ 2
ಬೆಸುಗೆ ಹಾಕಲು ಉಪಯೋಗಿಸುವ ಉಪಕರಣ


ಇಲ್ಲಿ ಕಾಂತವಿಕೃತಿ ಪರಿಣಾಮ ವಿಧಾನದಿಂದ ಶ್ರವಣಾತೀತ ಧ್ವನಿತರಂಗಗಳನ್ನು ಉತ್ಪಾದಿಸಲಾಗುವುದು. ಒಂದು ದಂಡದ (Rod) ಸುತ್ತ ತಂತಿಯ ಸುರುಳಿಗಳನ್ನು (Coils) ಸುತ್ತಲಾಗುವುದು. ಈ ಸುರುಳಿಯ ಎರಡು ತುದಿಗಳನ್ನು 50 ವಾಟ್‌ಗಳಷ್ಟು ಶಕ್ತಿ ಹೊರಹಾಕುವ ಅತಿತಾರ ಸ್ವರೋತ್ಪಾದಕ (High Frequency Generator)ಕ್ಕೆ ಬಂಧಿಸಲಾಗುವುದು. ಬೆಸುಗೆ ಮೂಲ ವಸ್ತುವನ್ನು 100 ವಾಟ್ ಶಕ್ತಿ ಉಳ್ಳ ಮೂಲದಿಂದ ಸುಮಾರು 20 ವೋಲ್ಟ್ ಉಪಯೋಗಿಸಿ ಕಾಯಿಸಲಾಗುವುದು. ಬೆಸುಗೆ ಮೂಲವನ್ನು ಲೋಹದ ಮೇಲ್ಮೈ ಮೇಲೆ ಒತ್ತಲ್ಪಟ್ಟಾಗ ಬೆಸುಗೆ ಮೂಲದ ಅದುರುವಿಕೆಯಿಂದ ಲೋಹದ ಮೇಲಣ ಆಕ್ಸೈಡ್‌ಲೇಪನ ತೆಗೆಯಹಾಕಲ್ಪಟ್ಟು ಬೆಸುಗೆ ಎಲ್ಲಿ ಹಚ್ಚಿಕೊಳ್ಳಬೇಕೋ ಅಲ್ಲಿ ಹಚ್ಚಿಕೊಳ್ಳಲಾಗುತ್ತದೆ.

2. ಇದೇ ರೀತಿ ಶ್ರವಣಾತೀತ ಸ್ವರಗಳನ್ನು ಪ್ಲಾಸ್ಟಿಕ್ ಹಾಗೂ ಇತರ ಲೋಹಗಳನ್ನು ಅಂಟುಹಾಕಲು (weld) ಉಪಯೋಗಿಸಬಹುದು. ಇಲ್ಲಿ ಯಾವ ಉಪವಸ್ತುಗಳ ಅಥವಾ ತುಂಬು ವಸ್ತು (Fillers) ಗಳ ಅಗತ್ಯವಿಲ್ಲ. ಅನಿಲಗಳ ಸಹಾಯದಿಂದ ಅಥವಾ ವಿದ್ಯುತ್ತಿನ ಸಹಾಯದಿಂದ ವೆಲ್ಡ್ ಮಾಡುವಾಗ ಕಿಡಿಗಳು ಹಾರುವ ಹಾಗೂ ದೈಹಿಕ ಯಾತನೆಯ ಅನಾನುಕೂಲತೆ ಇರುತ್ತದೆ. ಶ್ರವಣಾತೀತ ಧ್ವನಿ ಮೂಲಕ ಆಗುವ ಈ ಕಾರ್ಯದಲ್ಲಿ ಯಾವ ಅಪಾಯದ ಸಾಧ್ಯತೆಯೂ ಇರುವುದಿಲ್ಲ. ಶ್ರವಣಾತೀತ ಕಂಪನದಲ್ಲಿ ಲೋಹದಲ್ಲಿ ಅಣು ಚಲನೆಯನ್ನು ತ್ವರಿತಗೊಳಿಸಬಹುದು. ಇದಕ್ಕೆ ಶಾಖದ ಅವಶ್ಯಕತೆಯೂ ಇಲ್ಲ.

3. ಶ್ರವಣಾತೀತಧ್ವನಿ ವಿಧಾನದಿಂದ ಛೈರಿಗೆ ಹಾಕಬಹುದು (Drilling) ಛೈರಿಗೆ ಹಾಕುವ ಉಪಕರಣವನ್ನು ಸುಮಾರು 20 ರಿಂದ 30,000 ಕಂಪನಾಂಕಗಳಲ್ಲಿ ಅದುರುವಂತೆಮಾಡುವರು. ಛೈರಿಗೆ ಹಾಕಬೇಕಾದ ಲೋಹದ ಮೇಲ್ಮೈ ಮೇಲೆ ಒತ್ತುವಾಗ ಜತೆಗೆ ಬೋರಾನ್ ಕಾರ್ಬೈಡ್ ಅಥವಾ ಸಿಲಿಕಾನ್ ಕಾರ್ಬೈಡ್ ಮುಂತಾದ ಅಬ್ರೆಸೀವ್ (Abrasives) ಗಳನ್ನು ಉಪಯೋಗಿಸುವರು. ಈ ಛೈರಿಗೆ ಉಪಕರಣ (Drilling Tool) ಉದ್ದನೆಯ ಆಕಾರದಲ್ಲಿರುತ್ತದೆ. ಉಪಕರಣವನ್ನು ಲೋಹದ ಸಂಪರ್ಕದಲ್ಲಿ ತಂದಾಗ ಅಬ್ರೆಸೀವ್ ಕಣಗಳು ಲೋಹದ ಒಳಕ್ಕೆ ಒಯ್ಯಲ್ಪಟ್ಟು ಛೈರಿಗೆ ಕ್ರಿಯೆ ಮುಂದುವರಿಯುತ್ತದೆ. ಗಾಜು, ಸೆರಾಮಿಕ್ ಮುಂತಾದುವಕ್ಕೆ ಛೈರಿಗೆ ಹಾಕಲು ಹಾಗೂ ಟ್ರಾನ್ಸಿಸ್ಟರುಗಳಲ್ಲಿ ಜರ್ಮೇನಿಯಮ್ ಲೋಹದ ಅಂಟುಬಿಲ್ಲೆ ತಯಾರಿಸಲು ಈ ವಿಧಾನ ಬಹು ಸಹಕಾರಿ.

4. ಶುದ್ಧೀಕರಣ ಕೈಗಾರಿಕೆಗಳಲ್ಲಿ ಬಹುಮುಖ್ಯ. ಹೆಚ್ಚು ಬೆಲೆ ಬಾಳುವ ಹಾಗೂ ನಿಖರ ಉಪಕರಣಗಳ ಬಿಡಿ ಭಾಗಗಳನ್ನು ತಯಾರುಮಾಡುವ ಕಾರ್ಖಾನೆಗಳಲ್ಲಿ ಶುದ್ಧೀಕರಣ ಅಗತ್ಯ.

ಇಲ್ಲಿ ಮತ್ತೆ ಶ್ರವಣಾತೀತ ಧ್ವನಿಶಾಸ್ತ್ರವನ್ನು ಯಶಸ್ವಿಯಾಗಿ ಬಳಸಿಕೊಳ್ಳಲಾಗಿದೆ. ಬೆಸುಗೆ ಹಾಕುವ ವಿಧಾನ ತಿಳಿಸುವಾಗ ಶುದ್ಧೀಕರಣ ತತ್ವವನ್ನು ಹೇಳಿಯಾಗಿದೆ. ದ್ರವಗಳಲ್ಲಿ ಧ್ವನಿತರಂಗಗಳನ್ನು ಹಾಯಿಸಿದಾಗ ಏರ್ಪಡುವ ಗುಳ್ಳೆಗಳು ಅದುರುವುವು. ದ್ರವಮಾಧ್ಯಮದಲ್ಲಿ ಉಂಟಾಗುವ ಈ ಕ್ರಿಯೆಯಿಂದ ಧೂಳು, ಅಂಟುಪದಾರ್ಥಗಳು ಶುಭ್ರಮಾಡಬೇಕಾದ ವಸ್ತುವಿನಿಂದ ಹೊರದೂಡಲ್ಪಟ್ಟು ದ್ರವದ ವಿಕ್ಷೋಭೆಯಿಂದ ಅವರೊಡನೆ ತೂಗಾಡುತ್ತಿರುತ್ತವೆ. ವಸ್ತು ಶುಭ್ರವಾಗುತ್ತದೆ. ನೀರು, ಸೀಮೆ ಎಣ್ಣೆ ಮತ್ತು ಟ್ರೈಕ್ಲೋರೋ ಇಥಿಲೀನ್ ಇವುಗಳನ್ನು ಶುಭ್ರಕಗಳನ್ನಾಗಿ (Detergents) ಬಳಸುತ್ತಾರೆ. (ನೋಡಿ ಚಿತ್ರ 3).



ಚಿತ್ರ 3. ಶ್ರವಣಾತೀತ ಧ್ವನಿ ತರಂಗಗಳನ್ನು ಹಾಯಿಸಿ ಶುದ್ಧಿಮಾಡುವಿಕೆ

5. ಲೋಹಗಳ ಚೌಕಗಳಲ್ಲಿಯ ದೋಷವನ್ನು ಕಂಡುಹಿಡಿಯಲು ಶ್ರವಣಾತೀತ ಧ್ವನಿತರಂಗಗಳನ್ನು ಹಾಯಿಸುತ್ತಾರೆ. ಪ್ರತಿಫಲನಗುಣಧರ್ಮದಿಂದ ಈ ದೋಷವನ್ನು ನಿರ್ಣಯಿಸಬಹುದು. ಈ ಮೊದಲು ಕ್ಷ-ಕಿರಣಗಳ ಅಥವಾ ಕಾಂತೀಯ ಉಪಕರಣಗಳ ಸಹಾಯದಿಂದ ಲೋಹದಲ್ಲಿ ಕುಳಿಗಳನ್ನು ಪತ್ತೆಹಚ್ಚಬೇಕಾಗಿತ್ತು. ಇಲ್ಲಿ ಹೆಚ್ಚು ವೋಲ್ಟೇಜ್ ಬಳಸಬೇಕಾಗಿತ್ತಲ್ಲದೆ ಕ್ಷಕಿರಣಗಳು ಲೋಹದಲ್ಲಿ ಅಷ್ಟಾಗಿ ಒಳಹೋಗುತ್ತಿರಲಿಲ್ಲ. ಶ್ರವಣಾತೀತ ಧ್ವನಿ ತರಂಗಗಳು ಆ ಕೆಲಸವನ್ನು ಸರಾಗವಾಗಿ ಮಾಡುತ್ತವೆ.

ಇದೇ ರೀತಿ ಕೈಗಾರಿಕೆಗಳಲ್ಲಿ ಹಲವಾರು ಕಾರ್ಯಗಳಿಗೆ ಈ ಧ್ವನಿ ಸಹಾಯವಾಗುತ್ತದೆ. ವಸ್ತುಗಳ ದಪ್ಪ ಅಳೆಯಲು. ಗಟ್ಟಿವಸ್ತುಗಳಿಂದ ಸೂಕ್ಷ್ಮ ತಂತಿಗಳನ್ನೆಳೆಯಲು, ಮುಂತಾದ ಕಾರ್ಯಗಳಿಗೆ ಈ ಶಾಸ್ತ್ರ ಸಹಾಯಕ. ದೆಹಲಿ, ಅಲಹಬಾದ್, ಬೊಂಬಾಯಿ ಮುಂತಾದೆಡೆಗಳಲ್ಲಿ ಶ್ರವಣಾತೀತ ಧ್ವನಿಯ ಸಹಾಯ ಪಡೆಯಲಾಗುತ್ತಿದೆ.

ಸಂಪರ್ಕ, ವಾರ್ತಾಪ್ರಸಾರ ಕ್ಷೇತ್ರದಲ್ಲಿ ಶ್ರವಣಾತೀತ ಧ್ವನಿಯ ಕೆಲಸ ಗಮನೀಯ

ಹಲವಾರು ಮಿಲಿಸೆಕೆಂಡುಗಳಲ್ಲಿ ತಡವಾಗುವ ವಿದ್ಯುತ್ ಸಂಜ್ಞೆಗಳು ರಾಡಾರ್, ಕಂಪ್ಯೂಟರ್, ದೂರದೃಶ್ಯಯಂತ್ರಗಳು ಹಾಗೂ ಸಂಪರ್ಕ ಉಂಟು ಮಾಡುವ ಪದ್ಧತಿಗಳಲ್ಲಿ ಸಹಾಯಮಾಡುತ್ತವೆ. ಇಲ್ಲಿ ಶಕ್ತಿಯ ಅಪವ್ಯಯವೂ ಆಗುವುದಿಲ್ಲ. ಎಲ್ಲಾ ಧ್ವನಿಗತಿ ತಡಪದ್ಧತಿಗಳಲ್ಲೂ (Delay Systems) ವಿದ್ಯುತ್‌ಯಾಂತ್ರಿಕ ಪರಿವರ್ತಕವನ್ನು ಸೇರಿಸಲಾಗುತ್ತದೆ. ಮೊದಲು ಇಲ್ಲಿ ವಿದ್ಯುತ್‌ಸಂಜ್ಞೆಯು ಧ್ವನಿತರಂಗವಾಗಿ ಪರಿವರ್ತಿಸಲ್ಪಟ್ಟು ನಂತರ ಧ್ವನಿಮಾಧ್ಯಮದಲ್ಲಿ ಸ್ವಲ್ಪ ದೂರ ಪ್ರವಹಿಸಿದ ಬಳಿಕ ಮತ್ತೆ ವಿದ್ಯುತ್ ಸಂಜ್ಞೆಯಾಗುತ್ತದೆ. ಈ ಧ್ವನಿ ಒಯ್ಯಲ್ಪಟ್ಟ ಕಾಲವೇ ತಡವಾದ ಕಾಲ. ಘನವಸ್ತು ಹಾಗೂ ದ್ರವ ವಸ್ತುಗಳಲ್ಲಿ ಧ್ವನಿಯವೇಗ ಬಹು ಕಮ್ಮಿ ಇರುವುದರಿಂದ ತಡ ಉಂಟುಮಾಡುವ ಕ್ರಿಯೆಯನ್ನು ಧ್ವನಿಮಾಧ್ಯಮದಲ್ಲಿ ಜರುಗಿಸಲು ಸುಲಭವಾಗುತ್ತದೆ. ಯಾವ ವಿರೂಪವೂ ಆಗದೆ ಪುನಃ ವಿದ್ಯುತ್ ಸಂಜ್ಞೆಯಾಗುವುದನ್ನು ಗಮನಿಸಬೇಕಷ್ಟೆ. ದ್ರವವಸ್ತು ಮಾಧ್ಯಮಕ್ಕೆ ನೀರನ್ನು ಘನವಸ್ತು ಮಾಧ್ಯಮಕ್ಕೆ ಪಾದರಸವನ್ನು ಬಳಸಲಾಗುವುದು. ರಾಡರ್‌ಗಳಲ್ಲಿ ಸ್ಪಂದನ ಹೊರಹೊಮ್ಮಿ ಚಲಿಸುವ ವಸ್ತು ಉದಾ: ಏರ್‌ಕ್ರಾಫ್ಟ್‌ಗಳಿಗೆ ಬಡಿದಾಗ ಅವು ಪ್ರತಿಫಲಿಸುತ್ತವೆ. ಇವನ್ನು ರಾಡರ್ ಪ್ರತಿಧ್ವನಿಗಳೆನ್ನುತ್ತಾರೆ. ಇವನ್ನು ಗ್ರಾಹಕ ನಿರೀಕ್ಷಿಸುವ ವ್ಯವಸ್ಥೆ ಇರುತ್ತದೆ. ಪ್ರತಿಧ್ವನಿಗಳ ಸಂಜ್ಞೆಗಳನ್ನು ಶಬ್ದ ಪ್ರಮಾಣಕ್ಕೆ ಪರಿವರ್ತಿಸಿ ತಡವಾಹಿಗಳಲ್ಲಿ ಹರಿಯಗೊಟ್ಟು ಮುಂದಿನ ಅಧ್ಯಯನ ಮಾಡಲಾಗುತ್ತದೆ. ಇದೇ ಉಪಯೋಗಗಳ ಅರಿವಿನಿಂದ ವಿಜ್ಞಾನಿಗಳು ಸೋನಾರ್ ಎಂಬ ಅಧ್ಯಾಯವನ್ನು ತೆಗೆದಿದ್ದಾರೆ. ಇದು (Sound navigation and ranging) ಎಂಬುದರ ಹ್ರಸ್ವರೂಪ.

ಸಾಮಾನ್ಯ ಧ್ವನಿಯ ಶಕ್ತಿಗಿಂತ ಶ್ರವಣಾತೀತ ಧ್ವನಿಯ ಶಕ್ತಿಸಾಮರ್ಥ್ಯಗಳು ಅಪಾರ. ಅವನ್ನು ಅರಿಯಲು ಪ್ರಯೋಗಗಳು ನಡೆಯುತ್ತಿವೆ. ಹೊಸ ಹೊಸ ಸಂಶೋಧನೆಗಳು ಜರುಗುತ್ತಿವೆ. ಸರಿಯಾದ ರೀತಿಯಲ್ಲಿ ಅವನ್ನು ಬಳಸಿದರೆ ಬಹುಶಃ ಮಾನವನ ಜೀವನರಂಗದಲ್ಲಿ ಒಂದು ಹೊಸ ಅಧ್ಯಾಯವನ್ನೇ ತೆರೆಯಬಹುದೇನೋ!

ಚಂದ್ರಾವಳಿ : ಒಂದು ಪೌರಾಣಿಕ ಜಾನಪದ ಕಥನ

ಅನಂತಪದ್ಮನಾಭರಾವ್

ಇದನ್ನು ಸಂಗ್ರಹಿಸಿದ್ದು ಗೌರೀಬಿದನೂರು ತಾಲ್ಲೂಕು ಜರಬಂಡಹಳ್ಳಿಯಲ್ಲಿ. ಬ್ರಾಹ್ಮಣ ಸಂಪ್ರದಾಯಸ್ಥರ ಮನೆಗಳಲ್ಲಿ ಸಂಪ್ರದಾಯದ ಹಾಡಿನ ಧಾಟಿಯಲ್ಲಿ ಇದನ್ನು ಹಾಡುತ್ತಾರೆ. ಪ್ರಸ್ತುತ ಸಂಗ್ರಹವಾಗಿರುವ ಈ ಕೃತಿ ಅಸಮಗ್ರ ಎನಿಸುತ್ತದೆ. ಈ ಪ್ರತಿಯ 71 ಮತ್ತು 72ನೇ ಪದ್ಯಗಳ ನಡುವೆ ಕೆಲವಾದರೂ ಪದ್ಯಗಳು ಬಿಟ್ಟುಹೋಗಿರುವ ಸಾಧ್ಯತೆ ಇದೆ. ಕತೆಯು ಇದ್ದಕ್ಕಿದ್ದಂತೆಯೇ ಮುಕ್ತಾಯದ ಹಂತವನ್ನು ತಲುಪುವುದರಿಂದ ಈ ಸಂದೇಹ ಬರುತ್ತದೆ.[1]

ಕನ್ನಡದಲ್ಲಿ ಚಂದ್ರಾವಳಿಯ ಕತೆಗೆ ಸಂಬಂಧಿಸಿದಂತೆ ಈ ರೀತಿಯಲ್ಲಿ ಕೃತಿಗಳು ದೊರೆಯುತ್ತವೆ

1)	ಚಂದ್ರಾವಳೀ ಕತೆ	ಅಳಿಯ ಲಿಂಗರಾಜ (1823–74)
2)	ಚಂದ್ರಾವಳೀ ಜೋಗಿಯ ಹಾಡು	ಅಳಿಯ ಲಿಂಗರಾಜ (1823–74)
3)	ಚಂದ್ರಾವಳೀ ಚರಿತ್ರೆ (ನಾಟಕ)	ಶಾಂತಕವಿ
4)	ಚಂದ್ರಾವಳೀ ಕತೆ	ಭಾಸ್ಕರಕವಿ
5)	ಚಂದ್ರಾವಳಿ	ವಿದ್ವಾನ್ ವೆಂಕಟಾಚಾರ್ಯ
6)	ಚಂದ್ರಾವಳಿ	ಬೊಮ್ಮಲಾಟಂ ವೀರಭಟ್ಟರ ಶಾಮಣ್ಣ
7)	ಚಂದ್ರಾವಳೀ ವಿಲಾಸ ನಾಟಕ	ಸಿ. ಎಸ್. ಕಾಮಾಕ್ಷಿಅಮ್ಮಾ
8)	ಚಂದ್ರಾವಳಿ (ಯಕ್ಷಗಾನ)	ಧ್ವಜಪುರದ ನಾಗಪ್ಪಯ್ಯ
9)	ಚಂದ್ರಾವಳೀ ಕತೆ (ಯಕ್ಷಗಾನ)	ನಿತ್ಯಾತ್ಮ
10)	ಚಂದ್ರಾವಳೀ ಪ್ರಸಂಗ (ಯಕ್ಷಗಾನ)	ಕಾರ್ಕಳ ರಂಗದಾಸ

ಚಂದ್ರಾವಳಿಯ ಕತೆಯ ಪ್ರಕಾರ ಆಕೆ ಮದುವೆಯಾದ ಹೆಣ್ಣು. ಚೆಲುವೆ. ಯಮುನಾ ತೀರಕ್ಕೆ ಮೈತೊಳೆಯಲೆಂದು ಆಕೆ ಸಖಿಯರೊಡನೆ ಬಂದಿರುವ ಸುದ್ದಿ

---

1 ಈ ವಿವರಗಳನ್ನು ಒದಗಿಸಿದ ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ವಿಭಾಗದ ಶ್ರೀ ಎಸ್. ಶಿವಣ್ಣ ಎಂ. ಎ. ಅವರಿಗೆ ಋಣಿಯಾಗಿದ್ದೇನೆ.

ನಾರದನಿಂದ ಕೃಷ್ಣನಿಗೆ ತಿಳಿದು ಆತ ಪರಿವಾರ ಸಮೇತ ಬರುತ್ತಾನೆ. ಹೆಂಗಳೆಯರು ಹೆದರುತ್ತಾರೆ. ತಾವು ಗಂಡನುಳ್ಳ ಬಾಲೆಯರೆಂದೂ ತಮ್ಮನ್ನು ಹಿಂಸಿಸಕೂಡದೆಂದೂ ಬೇಡುತ್ತಾರೆ. ಕೃಷ್ಣ ಹಿಂತಿರುಗುತ್ತಾನೆ. ಚಂದ್ರಾವಳಿ ಆತನ ರೂಪಲಾವಣ್ಯಗಳಿಗೆಮಾರು ಹೋಗಿ ಆತನ ಅಗಲಿಕೆಯಿಂದ ಮರುಗುತ್ತಾಳೆ. ಊರಿಗೆ ಬರುವ ಹೊತ್ತಿಗೆ ಆಕೆಯ ಅಂಗಾಲಮೇಲೆ ಶಂಕುಚಕ್ರಗಳು ಮೂಡಿರುತ್ತವೆ. ಇದು ಇಂದಿರರಮಣನ ಸಹವಾಸ ಮಾಡಿದವರಿಗೆ ಮಾತ್ರ ಲಭಿಸುವ ಚಿಹ್ನೆಯೆಂದು ಚಂದ್ರಾವಳಿಯ ತಂಗಿಯ ನಂಬಿಕೆ. ಸ್ವಲ್ಪಕಾಲದ ನಂತರ ಚಂದ್ರಾವಳಿಯು ತಂಗಿಯ ಬಳಿ ತನ್ನ ವಿರಹವನ್ನು ತೋಡಿಕೊಳ್ಳುತ್ತಾಳೆ. ಮರುದಿನ ರಾತ್ರಿ ಕೃಷ್ಣ ತಂಗಿಯ ವೇಷ ಧರಿಸಿ ಬರುತ್ತಾನೆ. ತಂಗಿಯೆಂದೇ ತಿಳಿದ ಚಂದ್ರಾವಳಿ ಆಕೆಯ ಹತ್ತಿರ ಕೃಷ್ಣನ ಗುಣಗಾನಮಾಡಿದಾಗ ತನ್ನ ನಿಜಸ್ವರೂಪ ತೋರುತ್ತಾನೆ. ಒಂದು ವಾರದ ಕಾಲ ಬೆಳಕೇ ಆಗುವುದಿಲ್ಲ. ನಾಡ ತುಂಬ ಕತ್ತಲು ಮುಸುಕುತ್ತದೆ. ಊರಿನವರು ಮತ್ತು ಮನೆಯವರು ಇದು ಕೃಷ್ಣಮಾಯೆ ಎಂದು ತಿಳಿದು ಚಂದ್ರಾವಳಿಯನ್ನು ಕೃಷ್ಣನಿಗೆ ಅರ್ಪಿಸುತ್ತಾರೆ.

ಈ ಕೃತಿಯಲ್ಲಿ ಕೃಷ್ಣನು ತಂಗಿಯ (ರಾಧಾ) ವೇಷದಲ್ಲಿ ಬರುವ ಪ್ರಸಂಗವೇ ಇಲ್ಲ. ಚಂದ್ರಾವಳಿಯು ತಾನೇ ತನ್ನನ್ನು ಕೃಷ್ಣನಿಗೆ ಅರ್ಪಿಸಿಕೊಳ್ಳುತ್ತಾಳೆ. ಇಡೀ ಪ್ರಸಂಗವೇ ಸಮರ್ಪಣಾಭಾವದ ಸಾಂಕೇತಿಕತೆಯನ್ನು ಧ್ವನಿಸುತ್ತದೆ[2] ಎನ್ನುವುದಾದರೆ ಇರಬಹುದೆನಿಸಿದರೂ ಈ ಭಾಗ ಬಾಯಿಂದ ಬಾಯಿಗೆ ಬರುವಾಗ ಬಿಟ್ಟುಹೋಗಿರುವ ಸಾಧ್ಯತೆಯೇ ಹೆಚ್ಚು.

ಹೆಣ್ಣು ಹೃದಯದ ಅಭಿವ್ಯಕ್ತಿ ಕಾವ್ಯದಲ್ಲಿ ಸುಂದರವಾಗಿ ಕಂಡುಬರುವುದರಿಂದ ಇದರ ಕರ್ತೃ ಹೆಣ್ಣೇ ಆಗಿರಬೇಕು. ಕಾವ್ಯದಲ್ಲಿ 'ಯದುಗಿರಿಯರಸನ (ಮೇಲುಕೋಟೆ ಚೆಲುವರಾಯ) ಪ್ರಸ್ತಾಪ ಬಂದಿರುವುದರಿಂದ ಈಕೆ ಶ್ರೀ ವೈಷ್ಣವಳಿದ್ದರೂ ಇರಬಹುದು. ಆದರೆ ಉಡುಪಿಯ ಕೃಷ್ಣನ ಸ್ತುತಿಯೂ ಬಂದಿರುವುದರಿಂದ ಹೀಗೆಯೇ ಎಂದು ಹೇಳಲಾಗುವುದಿಲ್ಲ.

ಸಾಂಗತ್ಯದಲ್ಲಿ ಇದು ರಚಿತವಾಗಿದ್ದರೂ ಕವಿಯತ್ರಿಗೆ ಛಂದಸ್ಸಿನಮೇಲೆ ಅಂಥ ಹಿಡಿತವಿದ್ದಂತೆ ತೋರುವುದಿಲ್ಲ. ಆದಿಪ್ರಾಸ ಅನೇಕ ಕಡೆ ಲೋಪವಾಗಿದೆ. ವಿಷ್ಣು ಗಣಗಳಿಗೆ ಬದಲಾಗಿ ಕೆಲವೆಡೆ ರುದ್ರಗಣಗಳೂ ಬಂದಿವೆ. ಅತ್ತೆಸೊಸೆಯರ ಸಂಭಾಷಣೆಯಲ್ಲಿ ಬೇರೆಯ ಛಂದಸ್ಸು ಸುಳಿದಿದೆ. ಹಾಡುವವರು ಈ ಭಾಗವನ್ನು 'ವಚನ' ಎಂದು ನಿರ್ದೇಶಿಸಿ ಹಾಡುತ್ತಾರೆ. 'ವಚನ' ಎಂದರೆ ಬಹುಶಃ ಮಾತು – ಸಂಭಾಷಣೆ ಎಂಬ ಅರ್ಥವಿರಬಹುದು. ಒಟ್ಟಿನಲ್ಲಿ ಇದೊಂದು ಕುತೂಹಲವಾದ ಕಥನ.

---

2 ಈ ವಿಷಯವನ್ನು ತಿಳಿಸಿದವರು ಪ್ರೊ॥ ಜಿ. ವೆಂಕಟಸುಬ್ಬಯ್ಯ ಅವರು

ದೇವಕಿ ನಂದನನೆ ದೇವಸಂಜೀವನನೆ
ಕಾಯೊ ಕರುಣಾಕರನೆ ಕಮಲ ಲೋಚನನೆ ।
ನೀಡೆನ್ನ ಬೇಡಿದಿಷ್ಟಾರ್ಥಗಳ ವರ್ಣಿಸುವೆ
ಶ್ರೀಮುದ್ದು ಕೃಷ್ಣರ ಪಾದಪದ್ಮವನು ॥
ಶರಣು ಶರಣು
ದೇವ ಶರಣು ಶರಣು
ಕಾಯೋ ಶರಣು ಶರಣು. ॥1॥

ಪುಂಡರೀಕಾಕ್ಷನೆ ಪಾಂಡವರ ಪಕ್ಷನೆ
ಅಂಡಜೋವಾಹನನೆ ಅಖಿಲಾಂಡ ಧರನೆ ।
ಖಂಡವಾಗ್ನಿಯ ಶಿರವ ಖಂಡ್ರಿಸಿ ತಂದವನೆ
ಕೊಂಡಾಡಲಳವೇ ಗೋಪಿಗೋಧರನೇ ॥ ॥2॥

ಧರೆಯೊಳಧಿಕಾಪುರದ ಉಡಪಿಮಧ್ಯದಿನಿಂತು
ಪರಮ ಭಕ್ತರನೆಲ್ಲ ಪಾಲಿಸುತಲಿಹನೆ !
ಸ್ಥಿರವಾಗಿ ಬಂದೆನ್ನ ಹೃದಯ ಮದ್ಯದಿ ನಿಂತು
ವರವಿತ್ತು ಪಾಲಿಸು ನೀಡು ಸನ್ಮತಿಯಾ ॥ ॥3॥

ಪಾಲಿಸೊ ಗಣನಾಥ ಪರಮ ಪುರೂಷ
ಲೀಲಾಮೃತದ ಕಥೇಯ ।
ನಾರಿ ರುಕ್ಮಿಣಿ ಸತ್ಯಭಾಮೆಯುರರಸನ
ಬಾಲವಿನೋದ ಕಥೇಯ ॥ ॥4॥

ಕರಿಕೊರಳಿನ ಗಣಪನೆ । ಕಾಮಿತಾರ್ಥವ
ಪ್ರೇಮದಿ ಕೊಡುವವನೇ
ನೇಮದಿ ಬಂದೆನ್ನ ಹೃದಯ ಮಧ್ಯದಿನಿಂತು
ವರವಿತ್ತು ಪಾಲಿಪೊನೆ । ಸಜ್ಜನಪಾಲ
ವರವಿತ್ತುಪಾಲಿಪೊನೆ ॥5॥

ಗಣಪತಿಗೆ ಬಲಗೊಂಡು ಪಾರ್ವತಿಯಡಿಗೆರಗಿ
ಅಜನರಸಿ ಶಾರದೆ ಯಂಗುಲಿಗೆರಗಿ ।
ಧರೆಯೊಳಗೆ ಚಂದ್ರಾವಳಿಗೆ ಹರಿವೊಲಿದುದ
ಮಹಿಮೆಯ ಕೇಳ್ಬುದು ಸಾಧು ಸಜ್ಜನರು ॥ ॥6॥

ದ್ವಾರಕಾಪುರದ ಪಟ್ಟಣದ ವಿಸ್ತಾರವ
ನೆಷ್ಟುವರ್ಣಿಸಲಾನಳವಲ್ಲ ।
ನೀಲಮಾಣಿಕ್ಯದ ಹೊಂಗೆಲಸದುಪ್ಪರಿಗೆ
ಚೆಂದುಳ್ಳರಾಜ ಬೀದಿಗಳು ॥ ॥7॥

ಕನ್ನಡಿಮಾಳಿಗೆ ಕನಕದುಃಪ್ಪರಿಗೆಸು
ವರ್ಣಮಯವಾಗಿ ಶೋಭಿಸಲು ।
ಗಂಧದುಪ್ಪರಿಗೆಯು ಗರಡಿ ವಾಟಕ ಶಾಲೆ
ಚಂದುಳ್ಳರಾಜ ಬೀದಿಗಳು ॥ ॥8॥

ಉಪ್ಪರಿಗೆಯ ಮೇಲೆ ಗೆಳತಿಯರೊಡಗೊಂಡು
ಲೆತ್ತವನಾಡುತ್ತಲಿರಲು ।
ಮತ್ತೊಂದುಯೋಚನೆ ಮಡದಿಮನಸಿಗೆ ಬರ
ಅತ್ತೆಯಿದ್ದೆಡೆಗೆ ನಡೆದಾಳು ॥ ॥9॥

ಅತ್ತೆವ್ವ ಕೇಳಿರಿ ಯಮುನಾ ತೀರದಲ್ಲಿ
ತಟ್ಟನೆ ಮೈ ತೊಳೆದಾವು ।
ಬರುವೇವೆ ನಾವೆಂದುವಾರಿಗೆಗೆಳತೀರ
ಒಡಗೊಂಡು ಬಂದು ಕೈಮುಗಿಯೆ ॥ ॥10॥

ಬ್ಯಾಡವೇ ದುರುಳ ಬುದ್ಧಿ ಬ್ಯಾಡವೆ
ಬ್ಯಾಡ ಚಂದ್ರಾವಳಿ ಹೇಳುವೆ ನಿನಗೊಬ್ಬ ।
ಮೀರಿದಗೊಲ್ಲನು ಬರನಲ್ಲದೆ ಬಿಡ
ಬ್ಯಾಡವೇ ದುರುಳ ಬುದ್ಧಿ ಬ್ಯಾಡವೇ ॥ ॥11॥

ಚಿಕ್ಕವರೂ ನೀವು ರಕ್ಕಸಾಂತಕ ಕೃಷ್ಣ
ಕಣ್ಣಿಟ್ಟ ಮ್ಯಾಲೆ ನಿಮ್ಮಸುಮ್ಮನೆ ಬಿಡುವನಲ್ಲ ।
ಅರಿಯದವರು ನೀವು, ದುರುಳರಾಂತಕಕೃಷ್ಣ
ಕಣ್ಣಿಟ್ಟ ಮ್ಯಾಲೆ ನಿಮ್ಮ ಸುಮ್ಮನೆ ಬಿಡುವನಲ್ಲ ॥ ॥12॥

ಗಂಡರ ಗಂಡ ಪ್ರಚಂಡ ಪರಾಕ್ರಮಿ
ಕಂಡಮ್ಯಾಲೆ ನಿಮ್ಮ ಸುಮ್ಮನೆ ಬಿಡುವನಲ್ಲ ।
ಹದಿನಾರು ಸಾವಿರ ಸುದತಿಯರನೆಲ್ಲ
ಮದನಸಯ್ಯನುಕೂಡಿ ಮುದದೊಳಿರುತಿಹನಲ್ಲೆ ॥13॥

ಬೇಡ ಚಂದ್ರಾವಳಿ ಹೇಳುವೆ ನಿನಗೊಬ್ಬ
ಮೀರಿದ ಗೊಲ್ಲನು ಬರನಲ್ಲದೆ ಬಿಡ

ಕಳ್ಳ ಕೃಷ್ಣನ ದಾರವನ ತಳ್ಳೆವೇನೆ
ನಾವು ತಳ್ಳೆವೇನೆ? ।
ನಲ್ಲೆಯರನು ಕೆಣಕಲಿಕ್ಕೆ
ಧೈರ್ಯಗಳೇನೆ? ॥14॥

ಚೋರಕೃಷ್ಣನ ದಾರವನ ದಾರಿಯೇನೆ
ಅವನ ದಾರಿಯೇನೆ? ।
ನಾರಿಯರನು ಕೆಣಕಲಿಕ್ಕೆ
ಧೈರ್ಯಗಳೇನೆ ? ॥ ॥15॥

ಗಂಡನಬಿಟ್ಟನ್ಯರನ್ನು ನೋಡುವರಲ್ಲ
ನಾವು ನೋಡುವರಲ್ಲ ।
ನಿಮ್ಮ ಬಾಯೊಳಿಂಥ ಮಾತ
ಕೇಳಿದೆವಲ್ಲ ॥ ॥16॥

ಬ್ರಹ್ಮನ ಪಿತನ ಮಾಯಕವದೆಂದು ತಾನು
ದುಮ್ಮಾನದೊಳು ಮನಮರುಗಿ ।
ಸುಮ್ಮನೆ ಹೋಗೆಂದು ಅಪ್ಪಣೆಯಕೊಡುತಿರ್ದ
ಳುಮ್ಮಳಿಸಾಕ್ಷಣದಿ ತಾಯಿ ॥ ॥17॥

ಪಲ್ಲಕ್ಕಿಯೇರಿದಳು ಪರಮ ಸಂಭ್ರಮದಿಂದ
ನಲ್ಲೆ ಚಂದ್ರಾವಳಿ ನಗುತ ।
ಹಲವು ಸತಿಯರು ತೇಜಿಯೇರಿ ಸಂಭ್ರಮದಿಂದ
ಘಲಿರನೆ ಬಂದುರು ಒಡನೆ ॥ ॥18॥

ಹತ್ತುಬಗೆಯ ಶಾಖ ಬುತ್ತಿಯಕಲಸನ್ನ
ಹೊತ್ತು ನಡೆದರು ಚಿತ್ರದಿಂದ ।
ಹಾಲು ತುಪ್ಪದ ಕೊಡಬಟ್ಟಲಪಾಯಸ
ಹೊತ್ತು ನಡೆದರು ಸರೋವರಕೆ ॥ ॥19॥

ಮಾವು ಮಾದಳ ಹಲಸು ಮಾಗದಿಯ ಬೇರು
ಕಾರೆಗೇಣಸು ಚಳ್ಳೆನಿಂಬೆ ।
ಹೇರುಳೆ ಯಾಲಕ್ಕಿ ಕರಿಯಮೆಣಸಿನ ಸಾರೆ
ನಡೆದರು ಸರೋವರದೆಡೆಗೆ ॥ ॥20॥

ಬಂದರು ಸರೋವರಕೆ ಆನಂದದರುಷದಲಿ
ಬಂದರು ಕೋಮಲಾಂಗಿಯರು ।
ಮೆಲ್ಲಮೆಲ್ಲನೆಬಂದು ಸರೋವರದಲ್ಲಿ
ಉಲ್ಲಾಸದಿಂದಿಳಿದರು ॥ ॥21॥

ಗಿಳಿಯು ಕೋಗಿಲೆ ನವಿಲು ಕಳಹಂಸೆಪಾರ್‍ವಾಳ
ಮರಿಗಳನೆತ್ತಿ ಮಾರ್‍ಗದಿ ।
ಎಳೆ ಬಾಳೆಯ ಚಂದ ತಳಿತಳಿಪುದ ಕಂಡು
ಇಳಿದರು ಸರೋವರದಲ್ಲಿ ॥ ॥22॥

ಉದಕ ಚೆಲ್ಲಾಡುತ್ತ ಮೆಲ್ಲನೆ ಮೈ ತೊಳೆದು
ಮಡಿಗಳುಟ್ಟರು ನಾರಿಯೇರು ।
ಯಶವೊಗಂಟನು ಹಾಕಿ ಕಾಂತೇರು ಕುಂಕುಮ
ಕಸ್ತುರಿ ಪಣೆಯೊಳಗಿಟ್ಟು ॥ ॥23॥

ಮಿಂದು ಮಡಿಯನುಟ್ಟು ಸಕಲಾಭರಣವನಿಟ್ಟು
ಇಂದ್ರಮಾಣಿಕ್ಯದ ಬೊಟ್ಟಳವಟ್ಟು ।
ಕಾನಬಾವುಲಿ ಬುಗುಡಿ ಮೀನ ಬಾವುಲಿಯಿಟ್ಟು
ಜೋಡಮುತ್ತಳವಡಿಸಿ ತೊಟ್ಟು ॥ ॥24॥

ಕರಿಯ ಸೊಂಡಿಲಪೋಲ್ವ ಚೆಲುನಲ್ವ ತೋಳಿಗೆ
ಕಡಗ ಕಂಕಣ ವಂಕಿತೊಟ್ಟು ।
ಬೆರಳಿಗುಂಗುರವಿಟ್ಟು ಬಡನಡುವಿಗೆ ತಕ್ಕ
ಪಟ್ಟಿಮೇಖಲೆಯನ್ನೆ ತೊಟ್ಟು ॥ ॥25॥

ಉಡುದಾರವಡ್ಡಣ್ಯ ಒಲಿದುರಾಜಿಸುತ
ಕಣ್ಣಿಗೆ ಕಾಡಿಗೆ ಹಚ್ಚಿ ।
ಬಣ್ಣದರಿಶಿನ ತಿವುರಿಸನ್ನುತದಿಂದಲಿ
ಸರುವಶೃಂಗರ ಮಾಡಿಕೊಂಡ್ರು ॥ ॥26॥

ಇಂದು ವದನೇರೆಲ್ಲರತಿ ಹರುಷದಿಂದಲಿ
ಗಂಧಾಕ್ಷತೆ ಪುಷ್ಪದೊಡನೆ ।
ತಂದಮೃಷ್ಟಾನ್ನವ ನೇವೇದ್ಯವನೆಮಾಡಿ
ಉಂಡು ಕೈ ತೊಳೆದರು ಬೇಗ ॥ ॥27॥

ಅಕ್ಕ ಚಂದ್ರಾವಳಿಯು ಬುತ್ತೀಯ ತಿನಿಸುಂಡು
ಅತ್ಯಂತ ಸಂತಸದಿರಲು ।
ಇತ್ತಚಿತ್ತಜನೆಡೆಗೆ ತ್ರೈಲೋಕ್ಯಸಂಚಾರಿ
ಚಿತ್ತವಿಸಿದ ನಿಮಿಷದಲ್ಲಿ ॥ ॥28॥

ಯೋಗಿನಾರದನನ್ನು ಭೋಗಶಯನ ಕಂಡು
ವಂದಿಸಿ ಪಾದಕ್ಕೆ ಎರಗಿ ।
ಯಾವಲೋಕದಿಂದ ಬಳಲಿ ಬಂದೆಯೊ ಬಂಧು
ಬಂದೇನು ನನ್ನ ಬಳಿಗೆ? ॥29॥

ಮೂರು ಲೋಕವ ತಿರುಗಿ ಬಳಲಿಬಂದೆನೊ ಬಂಧು
ಬಂದೇನೊ ನಿನ ಬಳಿಗೆಂದ ।
ಚಂದ್ರಾವಳಿಯು ಮುನ್ನ ಚಂದ್ರಮಗೆ ಮಿಗಿಲಾಗಿ
ತುಂಬಿತ್ತು ವನದ ಮಧ್ಯದಲಿ ॥ ॥30॥

ಮಂದರೋದ್ಧರ ನಿಮಗರುಹಬೇಕೆನುತಲಿ
ಬಂದೆನೋ ನಿಮ್ಮ ಬಳೀಗೆ ।
ಮೂರುಲೋಕವ ತಿರುಗಿ ಬಳಲಿ ಬಂದೆನೊ ಬಂಧು
ಬಂದೆನೊ ನಿಮ್ಮ ಬಳೀಗೆ ॥ ॥31॥

ಅಂಥ ಚಲುವೆಯೇನೊ ನೀರೆ ಚಂದ್ರಾವಳಿ
ಅಷ್ಟ ಮಹಿಷಿಯೇರಿಗಿಂತ ।
ಲಕ್ಷ್ಮೀ ದೇವಿಗಿಂತ ಮಿತ್ರೆಯೊಬ್ಬಳೆ ಮಿಗಿ
ಲೇನೊ ನಾರದ ಮುನಿಹೇಳೊ ॥ ॥32॥

ಕ್ಯಾದಿಗೆ ಸಂಪಿಗೆ ಸುರಗಿ ಶಾವಂತಿಕೆ
ಯಾವುದು ಸಮನಲ್ಲವೇನೊ ।
ನುಡಿದರೆ ಫಲವಿಲ್ಲ ನೋಡೆಕಾಂಬುಲು ಬೇಕು
ನೀರೆ ಚಂದ್ರಾವಳಿ ರೂಪ ॥33॥

ಸುರಮುನಿ ವಾಕ್ಯವ ನರಹರಿಯು ಕೇಳಿ
ಮನದಲ್ಲಿ ಸಂತೋಷತಾಳಿ ।
ನಗುನಗುತ ಭರದಿಂದ ಬಂದು ಪೇಳಿದನು
ನೆರೆದೆ ಗೋಪಾಲಕರೊಡನೆ ॥ ॥34॥

ಏಳಿರೊ ಮುದದಿಂದಲೆಲ್ಲ ಗೋಪಾಲರೆ
ಆಲಸ್ಯ ಮಾಡದೆ ಇನ್ನು ।
ಏಳಿರೊ ಮುದದಿಂದ ಮುನಿಯು ಆಡಿದ ಮಾತು
ಕೈಗೂಡುವುದೆಂದಿಗೆಂದ ॥35॥

ಕೋಟಿಭಾಸ್ಕರ ತೇಜನಂದದ ಕಿರೀಟ
ಜಾತಿ ಮಾಣಿಕಮುತ್ತು ತೊಟ್ಟು ।
ಜಗವಮೋಹಿಸುವಂತೆ ಜಗದೋದ್ಧಾರನು
ಜಗನ್ನಾಥ ಶೃಂಗರನಾದ ॥ ॥36॥

ಸರ್ವಜಾಣೆರ ಕೂಡಲೆಂದು ಶ್ರೀಹರಿತಾನು
ಸರ್ವಜನರಿದ್ದೆಡೆ ಪೋಗಿ ।
ಭರದಿಂದ ಕೊಳಲನ್ನು ಸ್ವರಗೈವೊ ಸಮಯದಿ
ಬೆದರಿದಿರು ಮಾನಿನೆರೆಲ್ಲ ॥ ॥37॥

ನೀಲವರ್ಣನು ಬಂದನೆಂಬೋರು ಭೌಮೇರು
ಚಂದ್ರಾವಳೀಗೆ ಹೇಳೋರು ।
ಅಕ್ಕ ಕೇಳೆ ನಿಮ್ಮ ಅಪ್ಪಣೆಯು ದೊರೆತರೆ
ನಿಮಿಷದಲಿ ಗುದ್ದಿ ದಬ್ಬುವೆವು ॥ ॥38॥

ಹಿಂದಕ್ಕೆ ಕಳುಹುವೆವು ಸೃಷ್ಟಿಗೊಡೆಯನೆಂದು
ನೆಟ್ಟನೆ ಬಿರುದಾಂತ ನನ್ನ ।
ಎನಲು ಚಂದ್ರಾವಳಿ ಆತನಕೂಡೆ ನೀವ್
ನಿಷ್ಠೂರ ಮಾಡದಿರೆಂದು ॥ ॥39॥

ಹೊಮ್ಮುಗಾರಿಕೆ ಮಾಡದೆಲ್ಲರೊಂದಾಗಿರಿ
ಸುಮ್ಮನೆ ಹಿಡಿದ್ಹೋಗೆ ದಾರಿ ।
ಬ್ರಹ್ಮನ ಪಿತನಂತೆ ಅವಗೆಣೆ ಇಲ್ಲಂತೆ
ಸುಮ್ಮನೆ ಹಿಡಿದ್ಹೋಗೆ ದಾರಿ ॥40॥

ಕೂಗಿ ಮಾಡುವುದೇನು ಹಿರಿಯರ ವಾಕ್ಯವ
ಮೀರಿಬಂದೆವು ನಾವು ಇಲ್ಲಿ ।
ಮೀರಿನಡೆದರೆ ಇಲ್ಲು ಛಲಹಿಡಿವ ಮುಂದಕ್ಕೆ
ಮುರಾರಿ ಮುಂದೇನು ದಾರಿ ? ॥41॥

ಸುಂಕವ ಕೊಟ್ಟು ಸುಮ್ಮನೆ ಹೋಗಿ ಎಂದು
ಬಿಂಕದ ಮಾತೇಕೆ ಎಂದು ॥
ಪಂಕಜನಾಭನ ಅಪ್ಪಣೆಯಾಗದೆ
ಸುಂಕಕೊಟ್ಟಲ್ಲದೆ ಬಿಡೆವು ॥ ॥42॥

ಕಣ್ಣು ಸನ್ನೆಯಮಾಡಿ ಕರೆದು ಮುಂದ್ಹೋಗುವ
ಹೆಣ್ಣುಗಳನೆ ತೋರಿಸಿದ ।
ಕಣ್ಣಿಗೆ ಬೇಕಾದ ಸತಿಯಳ ಕೊಡುವೆನು
ಚಿನ್ನಾರೆ ಹೋಗಿ ತನ್ನೆಂದ ॥ ॥43॥

ಯಾತರ ಸುಂಕವೊ ಎಲೆರಂಗ ಜಗನ್ನಾಥ
ನಿನಗೇನು ಸುಂಕ ಕೊಡಬೇಕೊ ।
ಹಾಲು ಮೊಸರು ಬೆಣ್ಣೆ ತುಪ್ಪವೊ ಶ್ರೀಕೃಷ್ಣ
ನಿನಗೇನು ಸುಂಕ ಕೊಡಬೇಕೊ ॥ ॥44॥

ಮೆಲ್ಲನೆ ಶ್ರೀ ಹರಿ ಬಂದು ಪಲ್ಲಕಿಗೊಂಡು
ಪಿಡಿಯಲು ತಲ್ಲಣಿಸೆ ಭೂಮಿ ।
ಸಡುಗಿತು ಸ್ವಾಮಿ ಎಲ್ಲಿಗೆ ಪೋಗಲಿ ಎಂದು
ಮೊರೆಯಿಡುವ ಭಾಮೆಯ ಕಂಠ ॥ ॥45॥

ತುಪ್ಪದ ದೀವಿಗೆಯು ಮನೆಯ ದೇವರಿಗೆ
ತಪ್ಪದೆ ಮುಡಿಸುತ್ತಿದ್ದೇನು ।
ಇಂದಿನ ಮಾನವ ಕಾಯೊ ನರಹರಿಯೆಂದು
ಕರಗಳನೆತ್ತಿ ಮುಗಿದಾಳು ॥ ॥46॥

ಶನಿವಾರ ಒಂದ್ಹೊತ್ತು ಮಾಡಿ ಮನೆದೇವರಿಗೆ
ದೃಢದಿಂದ ಭಜಿಸುತಲಿದ್ದೆ ॥
ಇಂದಿನ ಮಾನವ ಕಾಯೊ ನರಹರಿಯೆಂದು
ಶಿರಬಾಗಿ ಕೈ ಮುಗಿದಾಳು ॥ ॥47॥

ಬೆದರ ಬೇಡವೆ ಕಾಂತೆ ಬೇಡಿದೊರಗಳ ಕೊಡುವೆ
ನುಡಿಯೆ ನಿನ್ನ ಮನದ ಚಿಂತೆ ।
ನಂಬಿಕೆವಾಕ್ಯವನಂಬುಜ ಮುಖಿಕೇಳಿ
ಮಂಗಳ ಹರಿಪಾದಕ್ಕೆರಗಿ ॥ ॥48॥

ಗಂಡನುಳ್ಳ ಬಾಲೆಯರು ನಾವೆಲ್ಲರು
ನಂಬಿ ಬಂದವರನ್ನು ದಯದಿ ।
ಇಂದಿನವಮಾನವ ಕಾಯಬೇಕೆನುತಲಿ
ಚಂದ್ರಮುಖಿ ಹರಿಗೆರಗಿದಳು ॥ ॥49॥

ನಡುಗುತ್ತ ನುಡಿವ ಅಂಗನೆಯನ್ನು ಕೇಳುತ್ತ
ನುಡಿದ ಹರಿ ಕಟಾಕ್ಷ ವಿತ್ತು ।
ನಡೆಯಿರಿ ಯೆಂದಪ್ಪಣೆಯನ್ನೆ ಕೊಡುತಿರ್ದ
ನಡೆದರು ಪುರಾಕಾಕ್ಷಣದಿ ॥ ॥50॥

ನೀಲ ವರ್ಣನಪ್ಪಣೆಯ ಕೊಟ್ಟನೆಂದು
ಪರಮ ಸಂತೋಷದಿ ನಲಿದು ।
ದ್ವಾರ್ಯಾಕಂಕಣದಿ ಪಲ್ಲಕ್ಕಿಯೊಳುತಾ
ಸರಾಗಿದಿ ಬಂದರು ಎಲ್ಲ ॥ ॥51॥

ಮಲ್ಲಮರ್ಧನ ಬಂದಿದ್ದನು ಎಂಬುದ
ನೆಲ್ಲಿಯಾದರು ಉಸುರಬೇಡಿ ।
ಚಲ್ಲ ಕಂಗಳ ಚೆಲುವೆ ಸುದತಿಯರಿಗೆಲ್ಲ
ಬಂದೀತು ಅಪಕೀರುತಿಗಳು ॥52॥

ಇಂತಂದು ಸತಿಯರು ಪುರದೆಡೆ ಹೊರಟರು
ತಲೆಯೂರಿ ಋಷಿಗಳಿಗೆ ನಮಿಸಿ ।
ಮುನಿಗಳ ಚರಣವೆ ಕರುಣದಿ ಕಾಯೆಂದ
ನಂಬಿ ಸತಿಯರು ಬಂದರಾಗ ॥ ॥53॥

ಅಕ್ಕಕೇಳೆ ರಕ್ಕಸಾಂತಕಸಿಕ್ಕಿದ್ದು
ಅತಿ ಚೋದ್ಯವೇ ನಮ್ಮ ಪುಣ್ಯ ।
ಸೊಕ್ಕಿ ಸುಮ್ಮನೆ ಕುಂದಿ ನಡೆದೆವೆ ನಾವೆಲ್ಲ
ಹ್ಯಾಂಗೆ ಕಾಂಬುವೆ ಮುಂದೆ ಅವನ ॥ ॥54॥

ಯಾದವರರಸನೆ ಎನ್ನೊಡೆಯನೆ ಕೃಷ್ಣ
ಎಂದು ಹಂಬಲಿಸುತ್ತಲೆಲ್ಲ ।
ಲಲನೆಯರೆಲ್ಲರು ಹಲವು ಪರಿಯಲಿ ಮರುಗಿ
ಮನದಲ್ಲೆ ನೆನೆವ್ರೋರು ರೂಪ ॥ ॥55॥

ಕಾಲಲಂದಿಗೆ ಕಿರುಗೆಜ್ಜೆಯುವೊಳ್ಳೆಮೇ
ಲಾಡುವೊಸರಪಳಿ ಪದಕ ।
ನೀಲ ಮಾಣಿಕ್ಯದ ಪಾವನ ಮೂರುತಿಯ
ನೆನೆದರು ನಿಮಿಷ ಮಾತ್ರದಲಿ ॥ ॥56॥

ಯೇನನೆಂಬೆನು ಶ್ರೀ ಹರಿಯ ಕಪಟದ ರೂಪ
ನಿಗಿನಿಗಿಸುವ ರನ್ನದೋಲೆ ।
ಮೂಜಗವ ಮೋಹಿಸುವ ಮೋಹಕರೂಪದಿ
ಮರುಳು ಮಾಡಿದನಲ್ಲೆ ನಮ್ಮ ॥ ॥57॥

ನೀಲ ಮಾಣಿಕ್ಯದ ಬಾವುಲಿ ಧರಿಸಿದ
ಪಾವನ ಮೂರುತಿ ನಮ್ಮ ।
ಮುದ್ದು ಮೂಗುತಿ ವೊಳ್ಳೆ ತಿದ್ದಿದ ಕಸ್ತೂರಿ
ಮರುಳು ಮಾಡಿದನಲ್ಲೆ ನಮ್ಮ ॥ ॥58॥

ರಾಜ ಬೀದಿಗಳಲ್ಲಿ ರಾಜಿಪಂದಣವೇರಿ
ಬಂದಳು ರಾಧೆ ಎಂತೆಂಬೊ ।
ಒಂದು ವಾರ್ತೆಯನ್ನು ತಂದಂಥ ದೂತರು
ಬಂದು ಬಿನ್ನಪವನ್ನು ಮಾಡೆ ॥ ॥59॥

ಅಕ್ಕ ಬಂದಳು ಎಂದು ಅತಿ ಹರುಷದಿಂದ
ಚಿಕ್ಕ ಚಂದ್ರಾವಳಿ ಬಂದು ।
ಪನ್ನೀರ ಗಿಂಡೀಲಿ ಪಾದವ ತೊಳೆಯಲು
ಬಿನ್ನಾಣದಿ ನಡೆದು ಬಂದು ॥ ॥60॥

ಅಂಗಾಲಮೇಲಿನ ಶಂಕು ಚಕ್ರಗಳೇನು
ಮುಂಗೈಯಿ ಇಂತೇಕೆ ಒರಟು ? ।
ಇಂದಿರ ರಮಣನ ಸಹವಾಸಮಾಡಿದರೆ
ಬಂದೀತು ಶಂಕುಚಕ್ರಗಳು ॥ ॥61॥

ಶಂಕುಚಕ್ರದ ರೇಖೆ ನಿನಗೀಗ ಬಂತೇಕೆ
ಅಕ್ಕ ಚಂದ್ರಾವಳಿ ಹೇಳೆ ।
ಚಿಕ್ಕ ಚಂದ್ರಾವಳಿ ಕೇಳಿದ ಮಾತಿಗೆ
ಅಕ್ಕ ಸುಮ್ಮನೆ ನಸುನಕ್ಕು ॥ ॥62॥

ನಾನಾಪರಿಯಲ್ಲಿ ಏಡಿಸಿರೋಡಿಸಿ
ಏಕಮ್ಮ ನಮ್ಮ ಬಳಲಿಪ್ಪೆ ।
ಎಂದು ಮಾತುಗಳಿಂದ ತಂಗಿಯು ಸಂತವಿಸಿ
ಬಂದಳು ಅಡಿಗೆ ಮಾಡಲಿಕೆ ॥ ॥63॥

ಚಂದ್ರಾವಳಿಯು ಮುನ್ನ ಮಿಂದುಮಡಿಗಳುಟ್ಟು
ಒಂದೇ ಮನಸಿನ ನಿಲುವಿನಿಂದ ।
ಕುಂದೇನು ಆಗದೆ ಶಾಕ ಷಡುರಸದಿಂದ
ಹೊಂದಿಸಲಡಿಗಾದವಾಗ ॥64॥

ಸಾಲು ಎಲೆಗಳ ಹಾಕಿ ದೀವಿಗೆಗಳನಿಟ್ಟು
ಶ್ರೀಲೋಲಗರ್ಪಿತವಾಗಲೆಂದು ।
ಮಾನುನಿಮಣಿಯೇ ವುಂಡು ಕೈಗಳ ತೊಳೆದು
ವಿನೋದಪಡುತಿರ್ದರಾಗ ॥ ॥65॥

ಅತ್ತುಲವಿಚಾರವನು ಪಟ್ಟೆಮಂಚದ ಮೇಲೆ
ಕರ್ಪೂರವೀಳ್ಯವ ಸವಿದು ।
ಅಕ್ಕ ತಂಗಿಯಕೂಡೆ ಉಸುರಬೇಕೆನುತಲಿ
ವರ್ತಮಾನವ ಪೇಳ್ದಳಾಗ ॥ ॥66॥

ಬೇಡವೆಂದತ್ತೆಯು ಮಾತನ್ನು ಕೇಳದೆ
ಮೂಢ ತನಗಳಿಂದ ನಾವು ।
ಜೋಡಾಗಿ ಗೆಳತೇರ ವೊಡಗೊಂಡು ಪೋದೆವು
ಕಾಡುಮಧ್ಯದ ಸರೋವರಕೆ ॥ ॥67॥

ಬಂದು ಸರೋವರದಲ್ಲಿ ಕಡು ಹರುಷದಿಂದಲಿ
ಮಿಂದು ಮಡಿಗಳನುಟ್ಟು ಇರಲು ।
ಬಂದನು ಶ್ರೀಕೃಷ್ಣ ಎಂತೆಂಬೊ ವಾರ್ತೆಯು
ಬಂದಿತು ನಿಮಿಷ ಮಾತ್ರದಲಿ ॥ ॥68॥

ಕಣ್ಣಮುಂದೆಯೆ ಇದ್ದ ಮೂರುತಿಯನೆ ಬಿಟ್ಟ
ಪುಣ್ಯ ಹೀನರು ತಂಗಿನಾವು ।
ಇನ್ನೆಂತು ಕಾಂಬೆನೆ ಯದುಗಿರಿಯರಸನ
ಸುಮ್ಮನೆ ಮರುಗಲಿನ್ನೇನು? ॥ ॥69॥

ಎಂದಿಗೆ ಕಾಂಬೆನೆ ಯದುಗಿರಿಯರಸನ
ಕಂಗಳೆಂದಿಗೆ ಧಣಿದಾವೆನುತ ।
ಮಂಗಳಕಾರನ್ನ ಮುದ್ದು ಶ್ರೀಕೃಷ್ಣನ
ಕಾಣದ ಹತ ಭಾಗ್ಯರೆನುತ ॥ ॥70॥

ಸೃಷ್ಟಿಯೊಳಗೆ ಹದಿನಾರು ಸಾವಿರ ಮಂದಿ
ಪಟ್ಟದರಸಿಯರಂತೆ ಅವಗೆ ।
ಕೊಟ್ಟವರಗಳನ್ನು ಸಲಿಸಿ ಕೊಡುವನಂತೆ
ಬಿಟ್ಟುಬಂದೆವಲ್ಲಿನ್ನೇನು ? ॥ ॥71॥

ಹಗಲು ಇರಳು ಏಳು ದಿನಪರಿಯಂತದಿ
ರವಿಕಿರಣ ಕಾಣದೆ ತಪಿಸೆ ।
ಲಲನೆ ಮಾಡಿದಂಥ ಸುಕೃತ ಫಲಗಳಿಂದ
ಒಲಿದನೆ ಶ್ರೀರೂಪ ಕೃಷ್ಣ ॥ ॥72॥

ಅಲ್ಲಿನ ಜನರೆಲ್ಲ ಅತಿ ಹರುಷದಿಂದಲಿ
ಗೊಲ್ಲಗೆ ವಿವಾಹ ಮಾಡಿ !
ಬಿಲ್ಲ ಹಬ್ಬದ ವೀರ ಹರಿಗೆ ಲಲನೆಯನಿತ್ತು
ಮಲ್ಲಿಗೆ ಮಳೆಕರೆದಾರು ॥ ॥73॥

ಶ್ರೀಕೃಷ್ಣ ಶರಣೆಂದು ಶ್ರೀಕೃಷ್ಣ ಶರಣೆಂದು
ಶ್ರೀಕೃಷ್ಣ ಶರಣೆಂದು ಜನರು ।
ಬಿಲ್ಲ ಹಬ್ಬದ ವೀರ ಹರಿಗೆ ಲಲನೆಯನಿತ್ತು
ಮಲ್ಲಿಗೆ ಮಳೆ ಕರೆದಾರು ॥ ॥74॥

ಗ್ರಾಮಾಂತರ ಬ್ಯಾಂಕುಗಳು: ಒಂದು ವಿಶ್ಲೇಷಣೆ

ಸದಾಶಿವಯ್ಯ

1931 ರ ಭಾರತದ ಕೇಂದ್ರ ಬ್ಯಾಂಕಿಂಗ್ ವಿಚಾರಣಾ ಸಮಿತಿಯ ವರದಿಯ ನಂತರ ನಮ್ಮ ದೇಶದ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಅಪಾರವಾದ ಬದಲಾವಣೆಗಳುಂಟಾಗಿವೆ. ಅದರಲ್ಲೂ ನಮ್ಮ ದೇಶದ ಬ್ಯಾಂಕು ವ್ಯವಸ್ಥೆಯಲ್ಲಿ ಉಂಟಾಗಿರುವ ಬದಲಾವಣೆಗಳಂತೂ ಮಹತ್ತರವಾದವುಗಳು. 1935 ರಲ್ಲಿ ಭಾರತದ ರಿಸರ್ವ್ ಬ್ಯಾಂಕಿನ ಸ್ಥಾಪನೆ, 1949 ರ ಬ್ಯಾಂಕಿಂಗ್ ನಿಯಂತ್ರಣಾ ಕಾನೂನಿನ ರಚನೆ, ರಿಸರ್ವ್ ಬ್ಯಾಂಕು ಮತ್ತು ಇಂಪೀರಿಯಲ್ ಬ್ಯಾಂಕುಗಳ ರಾಷ್ಟ್ರೀಕರಣ, ಬ್ಯಾಂಕುಗಳ ಮೇಲೆ ಸಾಮಾಜಿಕ ಹತೋಟಿ, 14 ಪ್ರಮುಖ ಬ್ಯಾಂಕುಗಳ ರಾಷ್ಟ್ರೀಕರಣ – ಇವೇ ಮುಂತಾದುವುಗಳನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದು. ಭಾರತ ಸರ್ಕಾರದ ಆದೇಶದ ಮೇರೆಗೆ 1969 ರಲ್ಲಿ ರಚಿಸಲಾದ ಬ್ಯಾಂಕಿಂಗ್ ಸಮಿತಿಯು ದೇಶದ ಬ್ಯಾಂಕು ವ್ಯವಸ್ಥೆಯಲ್ಲಿ ಉಂಟಾಗಿರುವ ಬದಲಾವಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ತನ್ನ ವರದಿಯನ್ನು ಸಿದ್ಧಗೊಳಿಸಿದೆ. ಬ್ಯಾಂಕುಗಳು ದೇಶದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಸಾಧನೆಗೆ ನೆರವು ನೀಡುವಂತೆ ಮಾಡಲು ಈ ಸಮಿತಿಯು ಹಲವಾರು ಶಿಫಾರಸುಗಳನ್ನು ತನ್ನ ವರದಿಯಲ್ಲಿ ಸೂಚಿಸಿದೆ. ಅವುಗಳಲ್ಲಿ ಗ್ರಾಮಾಂತರ ಬ್ಯಾಂಕುಗಳ ಸ್ಥಾಪನೆಯು ಅತಿ ಮುಖ್ಯವಾದುದು. ಗ್ರಾಮಾಂತರ ಬ್ಯಾಂಕುಗಳ ಸಾಧಕ ಬಾಧಕಗಳನ್ನು ವಿಶ್ಲೇಷಿಸುವುದೇ ಪ್ರಸ್ತುತ ಲೇಖನದ ಉದ್ದೇಶ.

ಗ್ರಾಮಾಂತರ ಬ್ಯಾಂಕುಗಳ ಸ್ಥಾಪನೆ: ಗ್ರಾಮಾಂತರ ಬ್ಯಾಂಕುಗಳನ್ನು ಪ್ರಾಥಮಿಕ ಬ್ಯಾಂಕು ಸಂಸ್ಥೆಗಳೆಂದು ಕರೆಯಬಹುದೆಂದು ಬ್ಯಾಂಕಿಂಗ್ ಸಮಿತಿಯು ಅಭಿಪ್ರಾಯಪಡುತ್ತದೆ. ಪ್ರತಿಯೊಂದು ಗ್ರಾಮಾಂತರ ಬ್ಯಾಂಕು 5.000 ದಿಂದ 20.000 ಜನಸಂಖ್ಯೆಯುಳ್ಳ ಹಳ್ಳಿಗಳನ್ನು ಒಳಗೊಂಡಿರುತ್ತದೆ. ಜನಸಾಂದ್ರತೆ ಕಡಿಮೆಯಿರುವ ಪ್ರದೇಶಗಳಲ್ಲಿ ಪ್ರತಿ ಗ್ರಾಮಾಂತರ ಬ್ಯಾಂಕಿನ ಕಾರ್ಯ ವ್ಯಾಪ್ತಿಯನ್ನು ಇಡೀ ಅಭಿವೃದ್ಧಿ ಬ್ಲಾಕಿಗೆ ವಿಸ್ತರಿಸಲಾಗುವುದು. ಬ್ಯಾಂಕಿಂಗ್ ಸಮಿತಿಯು ಶಿಫಾರಸು ಮಾಡಿರುವ ಗ್ರಾಮಾಂತರ ಬ್ಯಾಂಕು ಯೋಜನೆಯ ಪ್ರಕಾರ ದಕ್ಷವಾಗಿ ಕಾರ್ಯನಿರ್ವಹಿಸುತ್ತಿರುವ ಪ್ರಾಥಮಿಕ ಪತ್ತು ಸಹಕಾರ ಸಂಘಗಳನ್ನು ಗ್ರಾಮಾಂತರ ಬ್ಯಾಂಕುಗಳನ್ನಾಗಿ ಮಾರ್ಪಡಿಸಲಾಗುವುದು. ಈ ರೀತಿ ಸ್ಥಾಪಿಸಲಾಗುವ ಗ್ರಾಮಾಂತರ ಬ್ಯಾಂಕುಗಳನ್ನು 'ಗ್ರಾಮಾಂತರ ಸಹಕಾರ ಬ್ಯಾಂಕು' ಗಳೆಂದು ಕರೆಯ

ಲಾಗುವುದು. ಗ್ರಾಮಾಂತರ ಸಹಕಾರ ಬ್ಯಾಂಕುಗಳು ಸಹಕಾರ ವ್ಯವಸ್ಥೆಯ ಚೌಕಟ್ಟಿನೊಳಗೆ ಕಾರ್ಯ ನಿರ್ವಹಿಸುತ್ತವೆ ಮತ್ತು ತಮಗೆ ಬೇಕಾದ ಸಂಪನ್ಮೂಲಗಳನ್ನು ಆಯಾ ಕೇಂದ್ರ ಸಹಕಾರ ಮತ್ತು ಅಪೆಕ್ಸ್ ಬ್ಯಾಂಕುಗಳ ಮೂಲಕ ಪಡೆಯುತ್ತವೆ. ಕೇಂದ್ರ ಸಹಕಾರ ಮತ್ತು ಅಪೆಕ್ಸ್ ಬ್ಯಾಂಕುಗಳು ಅಶಕ್ತವಾಗಿರುವ ಅಥವಾ ಇನ್ನೂ ಹಿಂದುಳಿದಿರುವ ಪ್ರದೇಶಗಳಲ್ಲಿ ದಕ್ಷವಾದ ಪ್ರಾಥಮಿಕ ಮತ್ತು ಸಹಕಾರ ಸಂಘಗಳನ್ನು ವಾಣಿಜ್ಯ ಬ್ಯಾಂಕುಗಳ ಉಪಸಂಸ್ಥೆಗಳನ್ನಾಗಿ ಪರಿವರ್ತಿಸಲಾಗುವುದು ಅಥವಾ ವಾಣಿಜ್ಯ ಬ್ಯಾಂಕುಗಳಿಗೆ ತಮ್ಮವೇ ಆದ ಉಪಸಂಸ್ಥೆಗಳನ್ನು ಸ್ಥಾಪಿಸಲು ಅನುಮತಿ ನೀಡಲಾಗುವುದು. ಈ ರೀತಿ ಸ್ಥಾಪಿಸಲ್ಪಡುವ ಗ್ರಾಮಾಂತರ ಬ್ಯಾಂಕುಗಳನ್ನು 'ಗ್ರಾಮಾಂತರ ಉಪಬ್ಯಾಂಕು'ಗಳೆಂದು (Rural Subsidiary Banks) ಕರೆಯಲಾಗುವುದು.

ಕಾರ್ಯಚಟುವಟಿಕೆಗಳು

ಗ್ರಾಮಾಂತರ ಬ್ಯಾಂಕುಗಳು ಕೈಗೊಳ್ಳುವ ಮುಖ್ಯ ಕಾರ್ಯ ಚಟುವಟಿಕೆಗಳು ಈ ರೀತಿ ಇವೆ: (1) ಗ್ರಾಮಾಂತರ ಬ್ಯಾಂಕುಗಳು ಸ್ಥಳೀಯ ಜನರಿಂದ ವಿವಿಧ ರೀತಿಯ ಠೇವಣಿಗಳನ್ನು ಸ್ವೀಕರಿಸುತ್ತವೆ. (2) ಸ್ವೀಕರಿಸಲಾದ ಠೇವಣಿಗಳನ್ನು ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳ ರೂಪದಲ್ಲಿ ರೈತರಿಗೆ ಕೊಡುತ್ತವೆ. (3) ನೀಡಲಾದ ಸಾಲ ದುರುಪಯೋಗವಾಗದಂತೆ ನೋಡಿಕೊಳ್ಳುತ್ತವೆ. ಈ ಉದ್ದೇಶ ಸಾಧನೆಗಾಗಿ ಗ್ರಾಮಾಂತರ ಬ್ಯಾಂಕುಗಳು ಮೇಲ್ವಿಚಾರಣಾ ಪತ್ತು ಕಾರ್ಯಕ್ರಮಗಳನ್ನು (Supervised Credit Programmes) ಅನುಷ್ಠಾನಕ್ಕೆ ತರುತ್ತವೆ. (4) ವಿವಿಧ ರೀತಿಯ ಬ್ಯಾಂಕು ಸೌಲಭ್ಯಗಳನ್ನು ಸ್ಥಳೀಯ ಜನರಿಗೆ ಒದಗಿಸುತ್ತವೆ. (5) ಕೃಷಿ ಉತ್ಪಾದನೆಗೆ ಆವಶ್ಯಕವಾಗಿರುವ ಬೀಜ, ಗೊಬ್ಬರ, ಟ್ರಾಕ್ಟರ್ ಹಾಗೂ ಇನ್ನಿತರ ಯಂತ್ರೋಪಕರಣಗಳನ್ನು ರೈತವರ್ಗಕ್ಕೆ ಒದಗಿಸುತ್ತವೆ, (6) ಕೃಷಿ ಉತ್ಪನ್ನಗಳನ್ನು ಸಂಗ್ರಹಣೆ ಮಾಡುವ ಸಲುವಾಗಿ ಉಗ್ರಾಣಗಳನ್ನು ಸ್ಥಾಪಿಸಿ ಅವುಗಳನ್ನು ನಡೆಸಿಕೊಂಡು ಹೋಗುತ್ತವೆ. (7) ಕೃಷಿ ಉತ್ಪನ್ನಗಳು ಮಾರಾಟ ಸಂಘಗಳ ಮೂಲಕ ಮಾರಾಟವಾಗುವಲ್ಲಿ ನೆರವಾಗುತ್ತವೆ.

ಗ್ರಾಮಾಂತರ ಬ್ಯಾಂಕುಗಳ ಸ್ಥಾಪನೆಯನ್ನು ಸುಲಲಿತಗೊಳಿಸುವ ದೃಷ್ಟಿಯಿಂದಲೂ, ಸಹಕಾರ ಬ್ಯಾಂಕು ಹಾಗೂ ವಾಣಿಜ್ಯ ಬ್ಯಾಂಕುಗಳನ್ನು ಅನವಶ್ಯಕ ತೊಂದರೆಗೀಡು ಮಾಡಬಾರದೆಂಬ ದೃಷ್ಟಿಯಿಂದಲೂ ಬ್ಯಾಂಕಿಂಗ್ ಸಮಿತಿಯು ವಿಶೇಷ ಶಾಸನ ವೊಂದನ್ನು ಜಾರಿಗೆ ತರುವಂತೆ ಶಿಫಾರಸು ಮಾಡಿದೆ.

ಆಕ್ಷೇಪಣೆಗಳು: ಗ್ರಾಮಾಂತರ ಬ್ಯಾಂಕು ಯೋಜನೆಯು ಇಂದು ಅತ್ಯಂತ ಚರ್ಚಾತ್ಮಕ ಹಾಗೂ ವಿವಾದಾತ್ಮಕ ವಿಷಯವಾಗಿ ಪರಿಣಮಿಸಿದೆ. ಈ ಯೋಜನೆಯ ಬಗ್ಗೆ

ಮಿಶ್ರ ಪ್ರತಿಕ್ರಿಯೆಗಳು ವ್ಯಕ್ತವಾಗಿರುವುದನ್ನು ನಾವು ನೋಡಬಹುದು. ಗ್ರಾಮಾಂತರ ಬ್ಯಾಂಕುಗಳ ಸ್ಥಾಪನೆಯನ್ನು ವಿರೋಧಿಸುವ ವ್ಯಕ್ತಿಗಳು ಹಲವಾರು ಆಕ್ಷೇಪಣೆಗಳನ್ನು ಜನತೆಯ ಮುಂದಿಟ್ಟಿದ್ದಾರೆ. ಈ ಆಕ್ಷೇಪಣೆಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಿ ವಿಶ್ಲೇಷಿಸಬಹುದು. ಮೊದಲನೆಯದಾಗಿ. ಗ್ರಾಮಾಂತರ ಬ್ಯಾಂಕುಗಳು ನಿರ್ವಹಿಸಬೇಕಾದ ಕಾರ್ಯಚಟುವಟಿಕೆಗಳು ಪ್ರಾಥಮಿಕ ಪತ್ತು ಸಹಕಾರ ಸಂಘಗಳ (ಮುಂದೆ ಗ್ರಾಮಾಂತರ ಬ್ಯಾಂಕುಗಳಾಗಿ ಪರಿವರ್ತನ ಹೊಂದುವ ಸಂಘಗಳು) ಸಾಮರ್ಥ್ಯಕ್ಕೆ ಮೀರಿದ್ದೆಂದು ಗ್ರಾಮಾಂತರ ಬ್ಯಾಂಕು ಯೋಜನೆ ವಿರೋಧಿಗಳು ಆಕ್ಷೇಪಿಸಿದ್ದಾರೆ. ಪ್ರಾಥಮಿಕ ಸಂಘಗಳು ಬ್ಯಾಂಕು ಮತ್ತು ಬ್ಯಾಂಕೇತರ ಕಾರ್ಯಕಲಾಪಗಳನ್ನು ನಿರ್ವಹಿಸಲು ಅಸಾಧ್ಯ ಎಂಬುದು ಅವರ ಅಭಿಪ್ರಾಯ.. ಎರಡನೆಯದಾಗಿ, ಗ್ರಾಮಾಂತರ ಬ್ಯಾಂಕುಗಳು ಸಹಕಾರ ವ್ಯವಸ್ಥೆಯ ಕಾರ್ಯ ಕ್ಷೇತ್ರವನ್ನು ಕ್ಷೀಣಿಸುತ್ತವೆಯಲ್ಲದೆ ಇರುವ ಅಲ್ಪಸ್ವಲ್ಪ ಸಹಕಾರ ವ್ಯವಸ್ಥೆಯ ವಿಶಿಷ್ಟ ಲಕ್ಷಣಗಳು ನಶಿಸಿ ಹೋಗುವಂತೆ ಮಾಡುತ್ತವೆಂದೂ ವಿರೋಧಿಗಳು ಆಕ್ಷೇಪಿಸಿದ್ದಾರೆ. ಇವೆರಡು ಆಕ್ಷೇಪಣೆಗಳ ಸತ್ಯಾಸತ್ಯತೆಯನ್ನು ಅರಿಯುವುದು ದೇಶದ ಹಾಗೂ ಸಹಕಾರ ವ್ಯವಸ್ಥೆಯ ಹಿತದೃಷ್ಟಿಯಿಂದ ತೀರಾ ಆವಶ್ಯಕ.

ಆಕ್ಷೇಪಣೆಗಳು ಸತ್ಯವಾದುವುಗಳೇ? ಗ್ರಾಮಾಂತರ ಬ್ಯಾಂಕುಗಳಾಗಿ ಪರಿವರ್ತಿತವಾಗುವ ಪ್ರಾಥಮಿಕ ಪತ್ತು ಸಹಕಾರ ಸಂಘಗಳು ಬ್ಯಾಂಕು ಮತ್ತು ಬ್ಯಾಂಕೇತರ ಕಾರ್ಯಕಲಾಪಗಳನ್ನು ನೆರವೇರಿಸುವುದು ಅಸಾಧ್ಯವೆಂಬ ವಾದ ಹುರುಳಿಲ್ಲದ್ದೆಂದು ಹೇಳಬೇಕಾಗುತ್ತದೆ. ಏಕೆಂದರೆ ಬ್ಯಾಂಕಿಂಗ್ ಸಮಿತಿಯೇ ಶಿಫಾರಸು ಮಾಡಿರುವಂತೆ ಕೇವಲ ದಕ್ಷ ಹಾಗೂ ಸುಪುಷ್ಟ ಪ್ರಾಥಮಿಕ ಪತ್ತು ಸಂಘಗಳನ್ನು ಮಾತ್ರ ಗ್ರಾಮಾಂತರ ಬ್ಯಾಂಕುಗಳನ್ನಾಗಿ ಪರಿವರ್ತಿಸಲಾಗುವುದು. ಇಂತಹ ಪ್ರಾಥಮಿಕ ಪತ್ತು ಸಂಘಗಳಿಗೆ ಗ್ರಾಮಾಂತರ ಬ್ಯಾಂಕುಗಳ ಕಾರ್ಯಗಳನ್ನು ನಿರ್ವಹಿಸುವುದು ಅಸಾಧ್ಯವೇನಲ್ಲ. ಈ ಅಂಶವನ್ನು ಪ್ರಸ್ತುತ ವಿದ್ಯಮಾನಗಳಿಂದಲೇ ಪುಷ್ಟೀಕರಿಸಬಹುದು. ಇಂದಿನ ಪರಿಸ್ಥಿತಿಯಲ್ಲಿಯೇ ಹಲವಾರು ಪ್ರಾಥಮಿಕ ಪತ್ತು ಸಹಕಾರ ಸಂಘಗಳು ಪತ್ತು ನೀಡುವುದರ ಜೊತೆಗೇ ಅನೇಕ ಬ್ಯಾಂಕೇತರ ಚಟುವಟಿಕೆಗಳನ್ನು (ಅಂದರೆ ಕೃಷಿ ಉತ್ಪಾದನೆಗೆ ಬೇಕಾಗುವ ಬೀಜ. ಗೊಬ್ಬರ. ಔಷಧಿ. ಯಂತ್ರೋಪಕರಣ ಮುಂತಾದುವುಗಳನ್ನು ಒದಗಿಸುವುದು. ಕೃಷಿ ಉತ್ಪನ್ನ ಹಾಗೂ ಅನುಭೋಗ ಸರಕುಗಳನ್ನು ಮಾರಾಟಮಾಡುವುದು) ಯಶಸ್ವಿಯಾಗಿ ನಿರ್ವಹಿಸುತ್ತಿವೆ. ಮತ್ತು ಈಗ ನೀಡಲಾಗುತ್ತಿರುವ ಬ್ಯಾಂಕು ಸೌಲಭ್ಯಗಳನ್ನು ಮತ್ತಷ್ಟು ವಿಸ್ತರಿಸುವುದು ಪ್ರಾಥಮಿಕ ಪತ್ತು ಸಹಕಾರ ಸಂಘಗಳಿಗೆ ಕಷ್ಟವೇನೂ ಆಗಲಾರದು. ಈ ಕ್ರಮದಿಂದ ಪ್ರಾಥಮಿಕ ಪತ್ತು ಸಹಕಾರ ಸಂಘಗಳು ಅರ್ಥಾತ್ ಗ್ರಾಮಾಂತರ ಬ್ಯಾಂಕುಗಳು ಹೆಚ್ಚು ಆಕರ್ಷಣೀಯವಾಗುವುವಲ್ಲದೆ ಅವುಗಳ ಸದಸ್ಯತ್ವವೂ ಹೆಚ್ಚಾಗುತದೆ.

ಗ್ರಾಮಾಂತರ ಬ್ಯಾಂಕುಗಳು ಸಹಕಾರ ಕ್ಷೇತ್ರದ ವ್ಯಾಪ್ತಿಯನ್ನು ಕ್ಷೀಣಿಸುತ್ತವೆ ಯೆಂಬುದೂ ಸರಿಯಲ್ಲ. ಹಿಂದೆಯೇ ತಿಳಿಸಿರುವಂತೆ ಗ್ರಾಮಾಂತರ ಸಹಕಾರ ಬ್ಯಾಂಕುಗಳು ಸಹಕಾರ ವ್ಯವಸ್ಥೆಯ ಚೌಕಟ್ಟಿನೊಳಗೆ ಕಾರ್ಯ ನಿರ್ವಹಿಸುತ್ತವೆ ಮತ್ತು ತಮಗೆ ಬೇಕಾದ ಹಣಕಾಸನ್ನು ಆಯಾ ಕೇಂದ್ರ ಸಹಕಾರ ಹಾಗೂ ಅಪೆಕ್ಸ್ ಬ್ಯಾಂಕುಗಳ ಮೂಲಕ ಪಡೆಯುತ್ತವೆ. ಗ್ರಾಮಾಂತರ ಉಪಬ್ಯಾಂಕುಗಳು ವಾಣಿಜ್ಯ ಬ್ಯಾಂಕುಗಳ ಅಧೀನಕ್ಕೊಳಪಟ್ಟರೂ ಅವುಗಳಿಂದ ಸಹಕಾರ ಕ್ಷೇತ್ರಕ್ಕೆ ಧಕ್ಕೆಯುಂಟಾಗುವುದಿಲ್ಲ ಏಕೆಂದರೆ ಗ್ರಾಮಾಂತರ ಉಪಬ್ಯಾಂಕುಗಳ ಸ್ಥಾಪನೆಯು ಕೇವಲ ತಾತ್ಕಾಲಿಕವಾದುದು ಗ್ರಾಮಾಂತರ ಉಪಬ್ಯಾಂಕುಗಳು ತಮಗೆ ಇಷ್ಟಬಂದಾಗ ಸಹಕಾರ ಕ್ಷೇತ್ರಕ್ಕೆ ಮರಳಿ ಗ್ರಾಮಾಂತರ ಸಹಕಾರ ಬ್ಯಾಂಕುಗಳಾಗಿ ಪರಿವರ್ತಿತವಾಗಬಹುದು. ಈ ಪರಿವರ್ತನವನ್ನು ಸುಲಲಿತಗೊಳಿಸುವ ದೃಷ್ಟಿಯಿಂದ ಬ್ಯಾಂಕಿಂಗ್ ಸಮಿತಿಯು ತಾನು ಸಿದ್ಧಪಡಿಸಿರುವ ವಿಶೇಷ ಶಾಸನದಲ್ಲಿ ವಿಧಿಯೊಂದನ್ನು ಸೇರಿಸಿದೆ.

ಗ್ರಾಮಾಂತರ ಬ್ಯಾಂಕುಗಳು ಸಹಕಾರ ವ್ಯವಸ್ಥೆಯ ವಿಶಿಷ್ಟ ಲಕ್ಷಣಗಳನ್ನು ತೊಡೆದು ಹಾಕುವುದಿಲ್ಲ. ಸಂಸ್ಥೆಯ ವ್ಯವಹಾರದಲ್ಲಿ ಸ್ಥಳೀಯ ಜನರು ಪಾಲ್ಗೊಳ್ಳ ಬೇಕೆಂದು ಸಹಕಾರ ವ್ಯವಸ್ಥೆಯು ಪ್ರತಿಪಾದಿಸುತ್ತದೆ. ಇದು ಸಹಕಾರ ವ್ಯವಸ್ಥೆಯ ಮುಖ್ಯ ಲಕ್ಷಣ. ಗ್ರಾಮಾಂತರ ಬ್ಯಾಂಕುಗಳೂ ಸಹ ಸ್ಥಳೀಯ ಜನರು ಬ್ಯಾಂಕಿನ ವ್ಯವಹಾರದಲ್ಲಿ ಪಾಲ್ಗೊಳ್ಳುವುದನ್ನು ಎತ್ತಿ ಹಿಡಿಯುತ್ತವೆ. ಗ್ರಾಮಾಂತರ ಬ್ಯಾಂಕು ಗಳಿಗೆ ಜನ್ಮವಿತ್ತ ಬ್ಯಾಂಕಿಂಗ್ ಸಮಿತಿಯೇ ಈ ನೀತಿಯನ್ನು ಪ್ರತಿಪಾದಿಸಿದೆ. ಈ ಸಮಿತಿಯ ಪ್ರಕಾರ ಪ್ರತಿ ಗ್ರಾಮಾಂತರ ಉಪಬ್ಯಾಂಕಿನ ಸಂದಾಯವಾದ ಬಂಡವಾಳ ದಲ್ಲಿ ಶೇಕಡಾ 51 ರಷ್ಟನ್ನು ಸಂಬಂಧಪಟ್ಟ ವಾಣಿಜ್ಯ ಬ್ಯಾಂಕು ಹೊಂದಿರುತ್ತದೆ ಇನ್ನುಳಿದ ಭಾಗವನ್ನು ಸ್ಥಳೀಯ ಜನರಿಗೆ ಬಿಟ್ಟುಕೊಡಲಾಗುವುದು. ಒಂದು ವೇಳೆ ಸ್ಥಳೀಯ ಜನರು ಷೇರು ಬಂಡವಾಳದಲ್ಲಿ ಪಾಲ್ಗೊಳ್ಳಲು ಆಸಕ್ತಿ ತೋರದಿದ್ದಲ್ಲಿ ಆಗ ಸಂಬಂಧಪಟ್ಟ ವಾಣಿಜ್ಯ ಬ್ಯಾಂಕುಗಳೇ ಪೂರ್ತಿ ಷೇರು ಬಂಡವಾಳವನ್ನು ಹೊಂದ ಬೇಕಾಗುತ್ತದೆ. ಆದರೆ ಸ್ಥಳೀಯ ಜನರು ಷೇರು ಬಂಡವಾಳದಲ್ಲಿ ಪಾಲ್ಗೊಳ್ಳುವ ಆಸಕ್ತಿಯನ್ನು ವ್ಯಕ್ತಪಡಿಸಿದ ತಕ್ಷಣ ವಾಣಿಜ್ಯ ಬ್ಯಾಂಕುಗಳು ಅವರಿಗೆ ಸ್ಥಾನವನ್ನು ಕಲ್ಪಿಸಬೇಕಾಗುವುದು. ಹೀಗೆ ಗ್ರಾಮಾಂತರ ಬ್ಯಾಂಕು ಯೋಜನೆಯೂ ಸಹ ಸ್ಥಳೀಯ ಜನರ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸುತ್ತದೆ.

ಸದಸ್ಯರಲ್ಲದವರೊಡನೆಯೂ ಗ್ರಾಮಾಂತರ ಬ್ಯಾಂಕುಗಳು ವ್ಯವಹಾರವನ್ನು ಇಟ್ಟುಕೊಳ್ಳುವುವು. ಇದು ಸಹಕಾರ ತತ್ವಕ್ಕೆ ವಿರೋಧವಾದುದೆಂದು ಕೆಲವರು ಅಭಿಪ್ರಾಯಪಡಬಹುದು. ಈ ಅಭಿಪ್ರಾಯ ಸರಿಯಲ್ಲ. ಏಕೆಂದರೆ ಇತ್ತೀಚಿನ ವರ್ಷ ಗಳಲ್ಲಿ ಬದಲಾಗಿರುವ ಸನ್ನಿವೇಶಗಳಿಗೆ ತಕ್ಕಂತೆ ಸಹಕಾರ ತತ್ವಗಳನ್ನು ಸ್ವಲ್ಪ ಮಟ್ಟಿಗೆ

ಮಾರ್ಪಡಿಸಲಾಗಿದೆ. ಅವುಗಳಲ್ಲಿ ಸದಸ್ಯರಲ್ಲದವರೊಡನೆಯೂ ವ್ಯವಹರಿಸುವುದು ಒಂದು. ಅಂತರರಾಷ್ಟ್ರೀಯ ಸಹಕಾರ ಕೂಟದ (International Cooperative Alliance) ಆಶ್ರಯದಲ್ಲಿ ರಚಿಸಲಾದ ಸಮಿತಿಗಳೇ ಈ ಮಾರ್ಪಾಡುಗಳನ್ನು ಮಾಡಿವೆ. ಸದಸ್ಯರಲ್ಲದವರೊಡನೆ ವ್ಯವಹರಿಸುವುದು ಸಹಕಾರ ತತ್ವಕ್ಕೆ ವಿರೋಧ ವಾದುದಲ್ಲವಾದರೂ ಸದಸ್ಯರಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡಬೇಕೆಂದು ಗ್ರಾಮಾಂತರ ಬ್ಯಾಂಕು ಯೋಜನೆಯು ಸೂಚಿಸುತ್ತದೆ.

ಸಹಕಾರ ಸಂಸ್ಥೆಗಳಂತೆಯೇ ಗ್ರಾಮಾಂತರ ಬ್ಯಾಂಕುಗಳೂ ಪ್ರಜಾಪ್ರಭುತ್ವ ನಿಯಮಗಳಿಗೆ ಅನುಗುಣವಾಗಿ ಕೆಲಸಮಾಡುತ್ತವೆ. ಸದಸ್ಯರು ಬ್ಯಾಂಕಿನಲ್ಲಿ ಹೂಡಿರುವ ಬಂಡವಾಳದ ಪ್ರಮಾಣದಲ್ಲಿ ಏನೇ ವ್ಯತ್ಯಾಸಗಳಿದ್ದರೂ ಒಬ್ಬರಿಗೆ ಒಂದು ಮತ ಚಲಾಯಿಸುವ ಹಕ್ಕು ಮಾತ್ರ ಇರುತ್ತದೆ. ಹೀಗೆ ಎಲ್ಲರಿಗೂ ಸಮಾನ ಅವಕಾಶವನ್ನು ಕಲ್ಪಿಸಲಾಗುವುದು. ಇದಲ್ಲದೆ, ಸದಸ್ಯರಿಗೆ ಡಿವಿಡೆಂಡನ್ನು ಹಂಚು ವಾಗಲೂ ಗ್ರಾಮಾಂತರ ಬ್ಯಾಂಕುಗಳು ಸಹಕಾರ ತತ್ವವನ್ನು ಪಾಲನೆ ಮಾಡುತ್ತವೆ.

ಮೇಲಿನ ವಿಶ್ಲೇಷಣೆಯಿಂದ ಎರಡು ಅಂಶಗಳು ಸ್ಪಷ್ಟವಾಗುತ್ತವೆ. ಮೊದಲನೆ ಯದಾಗಿ, ಗ್ರಾಮಾಂತರ ಬ್ಯಾಂಕುಗಳ ಮೇಲೆ ಹೊರಿಸಲಾಗಿರುವ ಆಪಾದನೆಗಳಲ್ಲಿ ಹುರುಳಿಲ್ಲವೆಂದು ತಿಳಿದು ಬರುತ್ತದೆ. ಎರಡನೆಯದಾಗಿ, ರೈತರಿಗೆ ನ್ಯಾಯ ಸಮ್ಮತ ವಾದ ಸಾಲ ಒದಗಿಸಿ ತನ್ಮೂಲಕ ಕೃಷಿ ಅಭಿವೃದ್ಧಿಯನ್ನು ಸಾಧಿಸಲು ಗ್ರಾಮಾಂತರ ಬ್ಯಾಂಕುಗಳು ಉತ್ತಮ ಸಾಧನವೆಂದು ಸ್ಪಷ್ಟವಾಗುತ್ತದೆ. ಗ್ರಾಮಾಂತರ ಬ್ಯಾಂಕುಗಳು ಸಹಕಾರ ಪದ್ಧತಿಯ ಲಕ್ಷಣಗಳನ್ನಲ್ಲದೆ ಆಧುನಿಕ ಬ್ಯಾಂಕು ಪದ್ಧತಿಯ ಲಕ್ಷಣಗಳನ್ನೂ ಒಳಗೊಳ್ಳುವುವು. ತತ್ಪರಿಣಾಮವಾಗಿ, ಗ್ರಾಮಾಂತರ ಬ್ಯಾಂಕುಗಳು ಉಪಯುಕ್ತ ಸೇವೆಯನ್ನು ಸಲ್ಲಿಸುವುದರಲ್ಲಿ ಸಂಶಯವಿಲ್ಲ. ಸರ್ಕಾರವು ಇದನ್ನು ಗಮನಿಸಿ ಗ್ರಾಮಾಂತರ ಬ್ಯಾಂಕು ಯೋಜನೆಗೆ ಸೂಕ್ತ ಪ್ರೋತ್ಸಾಹ ನೀಡುವುದು ಅತ್ಯಗತ್ಯ.

ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟ

ಸೂರ್ಯನಾಥ ಕಾಮತ್

ಟಿಪ್ಪು ಮತ್ತು ಪೇಶ್ವೆ ಬಾಜಿರಾಯ II ರ ಪತನಾನಂತರ ಇಡೀ ಕರ್ನಾಟಕವು ಬ್ರಿಟಿಷರ ಕೈ ಸೇರಿತಾದರೂ ಇಲ್ಲಿನ ಜನ ಬ್ರಿಟಿಷರ ಆಳ್ವಿಕೆಯನ್ನು ಶಾಂತಿಯಿಂದ ಸ್ವೀಕರಿಸಲಿಲ್ಲ. ಹತ್ತೊಂಬತ್ತನೆಯ ಶತಮಾನದ ಮೊದಲ ಆರು ದಶಕಗಳು ಪರಕೀಯರ ಆಳ್ವಿಕೆಯ ವಿರುದ್ಧ ಸತತವಾಗಿ ನಡೆದ ಹಿಂಸಾತ್ಮಕ ಬಂಡಾಯಗಳಿಂದ ತುಂಬಿರುವುದು ಕಾಣುತ್ತದೆ. ಇಂಥ ಬಂಡಾಯಗಳು ಬಿಡಿಬಿಡಿಯಾದ ಮತ್ತು ಚದರಿದ ಯತ್ನಗಳಾಗಿದ್ದವೆಂಬುದು ಮಾತ್ರ ನಿಜ.

ಧೊಂಡ್ಯಾ ವಾಘ್ (ಪವಾರ) ನೆಂಬ ಚನ್ನಗಿರಿಯ ವ್ಯಕ್ತಿಯು ಐಗೂರು (ಬಲಂ) ವೆಂಕಟಾದ್ರಿ ನಾಯಕನ ಜೊತೆ ಸೇರಿ ನಡೆಸಿದ ಪ್ರಥಮ ಬಂಡಾಯದಿಂದ ಆರಂಭಿಸಿ (1800–01) ಕರ್ನಾಟಕದಲ್ಲಿ ಕೊಪ್ಪಳ (1819), ಬೀದರ್ (1820–21). ಸಿಂದಗಿ (1824). ಕಿತ್ತೂರು (1824; 1829; 1833; 1836). ಬಿದನೂರು [ಇದು ಭೂಕಂದಾಯದ ಭಾರವು ಅತಿಯೆಂದು ಭಾವಿಸಿದ ಸ್ಥಾನೀಯ ರೈತರ ನೆರವಿನಿಂದ ಬೂದಿಬಸಪ್ಪ ಎಂಬಾತನು ನಡೆಸಿದ ಬಂಡಾಯ (1831). ಕನ್ನಡ ಜಿಲ್ಲೆಗಳು (1831) ಕೊಡಗು (1834–37). ಬಾದಾಮಿ (1841) ಮತ್ತು ಬೀದರ್ (1852ರಲ್ಲಿ ಎರಡನೆ ಬಾರಿ] ಮುಂತಾದ ಕಡೆ ಬ್ರಿಟಿಷರ ವಿರುದ್ಧ ಸಶಸ್ತ್ರ ಉತ್ಥಾನಗಳಾದುವು. 1857–58ರ ಸ್ಫೋಟವು ಮಾತ್ರ ಸ್ವಲ್ಪ ಬೃಹತ್ ಪ್ರಮಾಣದ್ದೇ ಆಗಿದ್ದು ಆಗ ಕರ್ನಾಟಕದ ಅನೇಕ ಸಂಸ್ಥಾನಿಕರೂ ಜಾಗೀರುದಾರರೂ ಪೇಶ್ವೆ ನಾನಾಸಾಹೇಬ ಮತ್ತು ಬ್ರಿಟಿಷ್ ಸೇನೆಯ ಸಿಪಾಯಿಗಳು ಹೂಡಿದ ಬಂಡಾಯದಿಂದ ಪ್ರೇರಣೆ ಪಡೆದು ತಾವೂ ಮೇಲೆದ್ದರು. 1857ರ ಬಂಡಾಯವು ಇಂದಿನ ಬೆಳಗಾವಿ. ಧಾರವಾಡ. ಬಿಜಾಪುರ. ಕಲ್ಬುರ್ಗಿ ಮತ್ತು ರಾಯಚೂರು ಜಿಲ್ಲೆಗಳ ಪ್ರದೇಶದಲ್ಲಿ ಕಾಣಿಸಿಕೊಂಡಿತು. ನರಗುಂದದ ಬಾಬಾಸಾಹೇಬ (ಭಾಸ್ಕರರಾವ್ ಭಾವೆ) ಮತ್ತು ಸುರಪುರದ ವೆಂಕಟಪ್ಪನಾಯಕ. ಈ ಎರಡು ಸಂಸ್ಥಾನಿಕರು. ಬ್ರಿಟಿಷ್ ಸರಕಾರದ ಮಾಜಿ ಅಧಿಕಾರಿಯಾಗಿದ್ದ ಮುಂಡರಗಿ ಭೀಮರಾಯ ಮತ್ತು ಮುಧೋಳ ಬಳಿಯ ಹಲಗಲಿಯ ಬೇಡರು 1857–58 ಹಿಂಸಾತ್ಮಕ ಉತ್ಥಾನದ ನಾಯಕರಾಗಿದ್ದರು.

ಆದರೆ ಬ್ರಿಟಿಷ್ ರಾಜಸತ್ತೆಯ ಆಳ್ವಿಕೆಯ ಕಾಲವು (1858 ರಿಂದ) ಕರ್ನಾಟಕದಲ್ಲಿ ಶಾಂತಿಯನ್ನೇ ಕಂಡಿತು. ಮುಂಬೈನಲ್ಲಿ 1885ರಲ್ಲಿ ನಡೆದ ಕಾಂಗ್ರೆಸ್‌ನ ಪ್ರಥಮ

ಅಧಿವೇಶನಕ್ಕೆ ಕರ್ನಾಟಕದಿಂದ ಇಬ್ಬರು ವ್ಯಕ್ತಿಗಳು – ಬಳ್ಳಾರಿಯ ಕೋಲಾಚಲಂ ವೆಂಕಟ ರಾವ್ ಮತ್ತು ಬೆಳಗಾವಿಯ ಭಾಟೆ ಎಂಬವರು – ತೆರಳಿದ್ದರೂ ಅಹಿಂಸಾತ್ಮಕ ಸ್ವಾತಂತ್ರ್ಯ ಹೋರಾಟವು ಕರ್ನಾಟಕದಲ್ಲಿ 1900 ರ ನಂತರವೇ ಆರಂಭವಾದುದು.

ಪಾಶ್ಚಾತ್ಯ ಮತ್ತು ಇಂಗ್ಲಿಷ್ ಶಿಕ್ಷಣದ ಹರಡುವಿಕೆಯು ಪಾಶ್ಚಾತ್ಯ ಉದಾರವಾದ ಮತ್ತು ಜನತಂತ್ರದ ಕಲ್ಪನೆಗಳನ್ನು ಜನಪ್ರಿಯಗೊಳಿಸಲು ಕಾರಣವಾಯಿತು. ಇದರ ಜೊತೆ ಆಧುನಿಕ ರಾಷ್ಟ್ರೀಯತೆಯ ಕಲ್ಪನೆಯೂ ಹರಡಿತು.

ಫ್ಲೀಟ್, ರೈಸ್, ಆಲೂರು ವೆಂಕಟರಾವ್ ಮುಂತಾದವರ ಯತ್ನದಿಂದ ಕರ್ನಾಟಕದ ಇತಿಹಾಸವು ಬರೆಯಲ್ಪಟ್ಟುದು ಕನ್ನಡಿಗರಲ್ಲಿ ತಮ್ಮ ಪ್ರಾಚೀನ ವೈಭವ ಮತ್ತು ಘನತೆಗಳ ಬಗ್ಗೆ ತಿಳುವಳಿಕೆಯನ್ನು ಹುಟ್ಟಿಸಿ ಅಂಥ ಸಂಗತಿಗಳ ಪುನರ್‌ರಚನೆಗೆ ಒಂದು ಒತ್ತಾಸೆಯನ್ನು ಅವರಲ್ಲಿ ಉಂಟುಮಾಡಿತು.

ಇದಲ್ಲದೆ ಆಲೂರರು, ಗಳಗನಾಥ, ಶಾಂತಕವಿ, ಕೆ. ವಾಸುದೇವಾಚಾರ್ಯ, ಸುಬೋಧ ರಾಮರಾವ್, ಬಿ. ವೆಂಕಟಾಚಾರ್ಯ ಮತ್ತು ನಾಗೇಶ ಮುಂತಾದವರ ಬರಹಗಳು (ನವ ಸಾಹಿತ್ಯ) ದೇಶಭಕ್ತಿಯ ಜಾಗರಣಕ್ಕೆ ಕಾರಣವಾದುವು. ಪತ್ರಿಕೆಗಳು ನವವಿಚಾರಗಳನ್ನು ಜನಪ್ರಿಯಗೊಳಿಸಿದುವು.

ಆರ್ಯಸಮಾಜ, ಬ್ರಹ್ಮ ಸಮಾಜ, ಥಿಯೋಸಫಿಕಲ್ ಸೊಸೈಟಿ, ರಾಮಕೃಷ್ಣ ಮಿಷನ್ ಮತ್ತು ಪ್ರಾಣಿದಯಾ ಸಂಘದಂಥ ಸಂಸ್ಥೆಗಳ ಚಟುವಟಿಕೆಗಳೂ ತಮ್ಮದೇ ಆದ ಪ್ರಭಾವವನ್ನು ಬೀರಿದ್ದುವು.

ಲೋಕಮಾನ್ಯ ಟಿಳಕರ ಪ್ರಭಾವವೂ ಅವರ 'ಕೇಸರಿ' ಪತ್ರಿಕೆಯೂ ಆಧುನಿಕ ರಾಷ್ಟ್ರೀಯತೆಯನ್ನು ತರುವಲ್ಲಿ, ವಿಶೇಷತಃ ಮುಂಬೈ ರಾಜ್ಯದಲ್ಲಿದ್ದ ಪ್ರದೇಶಗಳಲ್ಲಿ, ಭಾರಿ ಮಹತ್ವದ ಪಾತ್ರ ವಹಿಸಿದವು.

ಧಾರವಾಡದಲ್ಲಿ 1903ರಲ್ಲಿ ನಡೆದ ಮುಂಬೈ ರಾಜ್ಯ ರಾಜಕೀಯ ಸಮ್ಮೇಳನವು ಕರ್ನಾಟಕದಲ್ಲಿ ನಡೆದ ಒಂದು ಮೊದಲ ಪ್ರಮುಖ ಘಟನೆಯಾಗಿದ್ದು ಆ ಕಾಲಕ್ಕೆ ಟಿಳಕರೂ ಫಿರೋಜ್ ಷಾ ಮೆಹತಾ ಅವರೂ ಅಲ್ಲಿಗೆ ಬಂದಿದ್ದರು. ವಂಗಭಂಗದ ನಂತರ ಕಾಣಿಸಿದ ಅಶಾಂತಿಯು ಕರ್ನಾಟಕವನ್ನು ಕೆರಳಿಸದೆ ಇರಲಿಲ್ಲ. ಆ ಕಾಲದಲ್ಲಿ ಧಾರವಾಡ, ಬೆಳಗಾವಿ, ಅಳ್ನಾವರ, ಗದಗ, ಬಾಗಲಕೋಟೆ, ಕಿತ್ತೂರು ಮುಂತಾದ ಕಡೆಗಳಲ್ಲಿ ಸಾರ್ವಜನಿಕ ಸಭೆಗಳು ನಡೆದವು. ಬೆಳಗಾವಿಯಲ್ಲಿ ಮದ್ಯದ ಅಂಗಡಿಯ ಮುಂದೆ ಪ್ರದರ್ಶನ ನಡೆಸಿ ಪಾಚ್ಚಾಪುರದ ಡಾ॥ ಜೋಶಿ ಎಂಬುವರು 15 ದಿನ ಜೈಲು ಕಂಡರು. ಬೆಳಗಾವಿಯಲ್ಲಿ ಗಂಗಾಧರರಾವ್ ದೇಶಪಾಂಡೆಯವರು ರಾಷ್ಟ್ರೀಯ

ಶಾಲೆಯೊಂದನ್ನು ತೆರೆದರು. ಧಾರವಾಡ ಜಿಲ್ಲೆಯಲ್ಲೂ ಅಂಥದೇ ಕೆಲವು ಶಾಲೆಗಳನ್ನು ತೆರೆಯಲಾಯಿತು.

1907 ರಲ್ಲಿ ನಡೆದ ಸೂರತ್ ಕಾಂಗ್ರೆಸ್ಸಿಗೆ ಕರ್ನಾಟಕದಿಂದ ಆಲೂರು ವೆಂಕಟರಾವ್ ಮತ್ತು ಅಣ್ಣಾಚಾರ್ಯ ಹೊಸಕೇರಿ (ಧಾರವಾಡ), ಶ್ರೀನಿವಾಸರಾವ್ ಕೌಜಲಗಿ (ಬಿಜಾಪುರ) ಮತ್ತು ಗಂಗಾಧರ ರಾವ್ ದೇಶಪಾಂಡೆ (ಬೆಳಗಾವಿ) ಇವರುಗಳು ಹೋಗಿದ್ದರು. ಅಲ್ಲಿ ಕಾಂಗ್ರೆಸ್ಸಿನಲ್ಲಿ ಕಾಣಿಸಿಕೊಂಡ ಒಡಕಿನ ಪ್ರಸಂಗದಲ್ಲಿ ಈ ನಾಯಕರು ಟಿಳಕರ ಮತ್ತು ಉಗ್ರಗಾಮಿಗಳ ಪಕ್ಷ ವಹಿಸಿದ್ದರು.

'ಸ್ವದೇಶಾಭಿಮಾನಿ' (ಮಂಗಳೂರು. 1907). 'ಕರ್ನಾಟಕ ವೃತ್ತ' (1890), 'ರಾಜಹಂಸ' (1881) ಮತ್ತು 'ವಿಜಯ' (ಎಲ್ಲವೂ ಧಾರವಾಡದವು). 'ಕರ್ನಾಟಕ ಪ್ರಕಾಶಿಕೆ' (ಮೈಸೂರು. 1865) ಮತ್ತು ವಿಜಯ ಧ್ವಜ (ಬಳ್ಳಾರಿ. 1880) ಮುಂತಾದ ಕನ್ನಡ ಪತ್ರಿಕೆಗಳು ಹೊಸ ತತ್ವಗಳನ್ನು ಪ್ರಚಾರಮಾಡಲು ಟಿಳಕರ 'ಕೇಸರಿ' ಮತ್ತು 'ಮರಾಠಾ'ಗಳ ಜೊತೆ ಜೊತೆಯಾಗಿಯೇ ಆರಂಭಿಸಿದುವು. ಟಿಳಕರು 1905 ರಲ್ಲಿ ಬಳ್ಳಾರಿಗೂ 1906ರಲ್ಲಿ ಬೆಳಗಾವಿ. ಗುರ್ಲಹೊಸೂರುಗಳಿಗೂ ಭೇಟಿ ನೀಡಿದ್ದರು. 1916ರಲ್ಲಿ ಅವರು ಹೋಂ ರೂಲ್ ಲೀಗನ್ನು ಆರಂಭಿಸಿದಾಗ ಬೆಳಗಾವಿ ಮತ್ತು ಸಂಕೇಶ್ವರಗಳಿಗೆ ಬಂದು ಲೀಗಿನ ಶಾಖೆಗಳನ್ನು ತೆರೆದಿದ್ದರು. ಧಾರವಾಡ. ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರಗಳಲ್ಲಿ ಲೀಗಿನ ಶಾಖೆಗಳು ಇದ್ದುವು. ಮಂಗಳೂರಿಗೆ ಬರಲು ಆಮಂತ್ರಿಸಿ 1917 ರಲ್ಲಿ ಕಾರ್ನಾಡು ಸದಾಶಿವರಾಯರು ಗಾಂಧೀಜಿಗೆ ಪತ್ರ ಬರೆದಿದ್ದರು.

1916 ರಲ್ಲಿ ಮುಂಬೈ ರಾಜ್ಯದ 16 ನೆಯ ರಾಜಕೀಯ ಸಮ್ಮೇಳನವು ಬೆಳಗಾವಿಯಲ್ಲಿ ನಡೆಯಿತು. 1918ರಲ್ಲಿ ಬಿಜಾಪುರದಲ್ಲಿ ಇಂಥ 18ನೆಯ ಸಮ್ಮೇಳನ ಆಯಿತು. ಈ ಎರಡೂ ಕಾರ್ಯಕ್ರಮಗಳಿಗೆ ಗಾಂಧೀಜಿ ಬಂದಿದ್ದರು. 1920 ರಲ್ಲಿ ಅವರು ಮಂಗಳೂರು, ಬೆಂಗಳೂರು, ಬೆಳಗಾವಿ, ನಿಪ್ಪಾಣಿಗಳನ್ನು ಸಂದರ್ಶಿಸಿ ಭಾಷಣಮಾಡಿದರು.

ಮೈಸೂರಿನ ಮಾಜಿ ದಿವಾನರಾದ ಶ್ರೀ ವಿ. ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ, 1920ರಲ್ಲಿ ಧಾರವಾಡದಲ್ಲಿ ಅಖಿಲ ಕರ್ನಾಟಕ ರಾಜಕೀಯ ಪರಿಷತ್ತು ಸೇರಿತ್ತು. ನಾಗಪುರದಲ್ಲಿ ನಡೆಯುವ ಅ. ಭಾ. ಕಾಂಗ್ರೆಸ್ಸಿಗೆ ಅತ್ಯಧಿಕ ಸಂಖ್ಯೆಯಲ್ಲಿ ಪ್ರತಿನಿಧಿಗಳನ್ನು ಕಳುಹಿಸಬೇಕೆಂದು ಈ ಪರಿಷತ್ತಿನಲ್ಲಿ ನಿರ್ಣಯವಾಯಿತು. ಸ್ವಾತಂತ್ರ್ಯ ಸಂಗ್ರಾಮ ಮತ್ತು ಕರ್ನಾಟಕ ಏಕೀಕರಣ ಚಳವಳಿಯ ಇತಿಹಾಸದಲ್ಲಿ ಈ ಪರಿಷತ್ತು ಒಂದು ಮೈಲಿಗಲ್ಲು. ಇಲ್ಲಿನ ನಿರ್ಣಯದಂತೆ 1920 ರಲ್ಲಿ ನಾಗಪುರದಲ್ಲಿ ನಡೆದ ಕಾಂಗ್ರೆಸ್ಸಿಗೆ ಕರ್ನಾಟಕದಿಂದ 800 ಪ್ರತಿನಿಧಿಗಳು ತೆರಳಿದ್ದರು. ಕರ್ನಾಟಕಕ್ಕೆ ಒಂದು ಪ್ರತ್ಯೇಕ ಪಿ. ಸಿ. ಸಿ ಯನ್ನು ರಚಿಸಿಕೊಳ್ಳಲು ನಾಗಪುರ ಕಾಂಗ್ರೆಸ್ಸಿನ ಕಾಲಕ್ಕೆ ಅನುಮತಿ ನೀಡ

ಲಾಯಿತು. "ಕರ್ನಾಟಕ ಕೇಸರಿ" ಶ್ರೀ ಗಂಗಾಧರರಾವ್ ದೇಶಪಾಂಡೆ ಪಿ. ಸಿ. ಸಿ.ಯ ಮೊದಲ ಅಧ್ಯಕ್ಷರಾದರು. ಹಳೆಯ ಮೈಸೂರಿನ ತುಮಕೂರು. ಬೆಂಗಳೂರು ಮತ್ತು ಮೈಸೂರುಗಳಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಗಳನ್ನು 1921ರಲ್ಲಿ ಸ್ಥಾಪಿಸಲಾಯಿತು.

ಸ್ವಾತಂತ್ರ್ಯದ ಬೇಡಿಕೆಯು ಕರ್ನಾಟಕದಲ್ಲಿ ತೀರ ಬಲವಾಗಿದೆಯೆಂಬುದು ಅಸಹಕಾರ ಚಳವಳಿಯ ಕಾಲಕ್ಕೆ ಸ್ಪಷ್ಟವಾಯಿತು. ಕೋರ್ಟುಗಳನ್ನು ತ್ಯಜಿಸಬೇಕೆಂಬ ಗಾಂಧೀಜಿಯವರ ಕರೆಗನುಗುಣವಾಗಿ ಬೆಳಗಾವಿಯಲ್ಲಿ ದತ್ತೋಪಂತ ಮಜಲಿ. ಕೃಷ್ಣರಾವ್. ಕರಗುಪ್ಪಿ. ನಾರಾಯಣರಾವ್ ಜೋಶಿ ಮತ್ತು ಅಜರೇಕರ್ ತಮ್ಮ ವಕೀಲಿ ವ್ಯವಸಾಯವನ್ನು ಬಿಟ್ಟರು. ಬಿಜಾಪುರದಲ್ಲಿ ಶ್ರೀನಿವಾಸರಾವ್ ಕೌಜಲಗಿ, ಜಯರಾವ್ ದೇಶಪಾಂಡೆ ಮತ್ತು ಹನುಮಂತರಾವ್ ಕೌಜಲಗಿ. ಗದಗಿನಲ್ಲಿ ಅನಂತರಾವ್ ಜಾಲಿಹಾಳ ಮತ್ತು ವೆಂಕಟೇಶ ಕುಲಕರ್ಣಿ. ಮಂಗಳೂರಿನಲ್ಲಿ ಕಾರ್ನಾಡ್ ಸದಾಶಿವರಾವ್ ಮತ್ತು ಕೋ. ರಾ. ಕಾರಂತ. ಹೊನ್ನಾವರದ ಎಸ್. ಎಸ್. ಶಾಸ್ತ್ರಿ. ಶಿರಸಿಯ ವಾಸುದೇವರಾವ್ ಕೊಲ್ಲಾಳಿ, ಧಾರವಾಡದ ಮಧ್ವರಾವ್ ಕಬ್ಬೂರ್ ಮತ್ತು ವೆಂಕಟರಾವ್ ಮುದವೀಡ್ಕರ್ ವಕೀಲಿ ತ್ಯಜಿಸಿದವರಲ್ಲಿ ಪ್ರಮುಖರು.

1920–22ರ ಅವಧಿಯಲ್ಲಿ ಕರ್ನಾಟಕದಲ್ಲಿ ಅನೇಕ ಸಭೆಗಳು. ಮೆರವಣಿಗೆಗಳು ವಿದೇಶೀ ವಸ್ತ್ರಗಳ ಹೋಳಿ ಮುಂತಾದ ಕಾರ್ಯಕ್ರಮಗಳು ಆದುವು. 200ಕ್ಕೂ ಹೆಚ್ಚು ಜನ ಬಂಧನಕ್ಕೆ ಒಳಗಾದರು. ಸರಕಾರದ ದಬ್ಬಾಳಿಕೆಯೂ ಬಲವಾಗಿತ್ತು. ಧಾರವಾಡದಲ್ಲಿ 1921ರ ಜುಲೈ 1 ರಂದು ಪೋಲೀಸರು ಹೆಂಡದಂಗಡಿಯ ಮುಂದೆ ಪಿಕೆಟಿಂಗ್ ನಡೆಸಿದ ಜನರ ಮೇಲೆ ಗೋಳಿಬಾರುಮಾಡಲು ಮೂರು ಜನ ಸತ್ತರು. ಇದರ ಹಿಂದೆಯೇ ದಿವಾಕರ್. ವಾಮನರಾವ್ ಜತಾರ್, ಘಿಸೆ ಮುಂತಾದ 29 ಜನರ ಬಂಧನವಾಯಿತು. ಇವರಲ್ಲಿ ಕೆಲವರಿಗೆ ಶಿಕ್ಷೆಯೂ ಆಯಿತು. ಸವಲಗುಂದದಲ್ಲಿ ಮಾಡಿದ ಒಂದು ಭಾಷಣಕ್ಕಾಗಿ ಗಂಗಾಧರರಾವ್ ದೇಶಪಾಂಡೆಯವರನ್ನು ಬಂಧಿಸಿ ಶಿಕ್ಷೆಗೆ ಒಳಪಡಿಸಲಾಯಿತು. ಜಯರಾವ್ ದೇಶಪಾಂಡೆ. ಹನುಮಂತರಾವ್ ಕೌಜಲಗಿ, ಹನುಮಂತರಾವ್ ಮೊಹರೆ ಮುಂತಾದವರು ತಾವು ಮಾಡಿದ "ರಾಜದ್ರೋಹಿ" ಭಾಷಣ ಇಲ್ಲವೇ ಬರೆದ ಲೇಖನಗಳಿಗಾಗಿ ಜೈಲು ಕಂಡರು. ಉತ್ತರ ಕನ್ನಡ ಜಿಲ್ಲೆಯ ಬೇಲೆಕೇರಿಯ ಚೌಡ ನಾಯ್ಕ ಎಂಬ ರೈತರು ಮೊದಲ ರಾಜಕೀಯ ಕೈದಿಯಾಗಿದ್ದು ಅವರ ನಂತರ ತಿಮ್ಮಪ್ಪನಾಯಕ್ ಎಂಬವರೂ ಬಂಧಿತರಾದರು. ತಿಮ್ಮಪ್ಪ ನಾಯಕರು ಶಿರಸಿಯ ಶಾಲೆಯೊಂದರ ಮುಖ್ಯೋಪಾಧ್ಯಾಯರಾಗಿ ಇದ್ದು ಮುಂದೆ ಆ ನೌಕರಿಯನ್ನು ತ್ಯಜಿಸಿ ವಾಮನ ಹೊಡಿಕೆಯವರು ಆರಂಭಿಸಿದ್ದ ರಾಷ್ಟ್ರೀಯ ಶಾಲೆಯಲ್ಲಿ ದುಡಿಯುತ್ತಿದ್ದರು. ಮಂಗಳೂರಿನಲ್ಲಿ ಕಾರ್ನಾಡರು ರಾಷ್ಟ್ರೀಯ ಶಾಲೆಯೊಂದನ್ನು ಸ್ಥಾಪಿಸಿದ್ದು ಅಂಥ ಸುಮಾರು 50 ಶಾಲೆಗಳು ಆಗ ಇಡೀ ರಾಜ್ಯದಲ್ಲಿ

ಇದ್ದುವು. ಧಾರವಾಡದಲ್ಲಿ ಆಲೂರರು ಒಂದು ಶಾಲೆಯನ್ನು ನಡೆಸುತ್ತಿದ್ದು ಅಲ್ಲಿ ಬೇಂದ್ರೆ, ದಿವಾಕರ್ ಮುಂತಾದವರು ಕೆಲಸ ಮಾಡುತ್ತಿದ್ದರು. ಬಳ್ಳಾರಿಯಲ್ಲಿ ಟೇಕೂರು ನಾರಾಯಣ ಶಾಸ್ತ್ರಿ, ಕಲ್ಲೂರು ಸುಬ್ಬರಾವ್, ತ್ಯಾಂಗ್ಲಿ ಭೀಮಸೇನರಾವ್ ಮುಂತಾದವರು ಪ್ರತಿಬಂಧಕ ಆಜ್ಞೆಯನ್ನು ಭಂಗಿಸಿ ಈ ಅವಧಿಯಲ್ಲಿ ಜೈಲು ಕಂಡರು.

ಉತ್ತರ ಪ್ರದೇಶದ ಚೌರಿಚೌರ ಪ್ರಕರಣದ ನಂತರ ಗಾಂಧೀಜಿ ಚಳವಳಿಯನ್ನು ಹಿಂದೆಗೆದುಕೊಂಡರೂ ಕೂಡ, ಕರ್ನಾಟಕದಲ್ಲಿ ಚಟುವಟಿಕೆಗಳು ಸಾಗಿಯೇ ಇದ್ದುವು. ಕಾರ್ನಾಡರು ಮಂಗಳೂರಿನಲ್ಲಿ ಎರಡನೆಯ ಕರ್ನಾಟಕ ರಾಜಕೀಯ ಪರಿಷತ್ತನ್ನು ಸರೋಜಿನಿ ನಾಯ್ಡು ಅವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದರು. ಇಂಥದೇ ಮೂರನೆಯ ಪರಿಷತ್ತು 1923 ರಲ್ಲಿ ಗೋಕರ್ಣದಲ್ಲಿ ದ್ವಾರಕಾ ಪೀಠದ ಶ್ರೀ ಶಂಕರಾಚಾರ್ಯ (ಡಾ|| ಕುರ್ತಕೋಟಿ) ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಕರ್ನಾಟಕದ ಅನೇಕ ಸ್ವಯಂಸೇವಕರು 1923 ರಲ್ಲಿ ನಾಗಪುರದಲ್ಲಿ ನಡೆದ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಲು ತೆರಳಿದರು. ಈ ಕಾಲದಲ್ಲಿ ನಾಗಪುರ ಜೈಲಿನಲ್ಲಿದ್ದ ಡಾ|| ಹರ್ಡೀಕರರು (ಅವರು ಅಮೆರಿಕದಿಂದ ತಮ್ಮ ಉಚ್ಚ ಶಿಕ್ಷಣ ಮುಗಿಸಿ ಅದೇ ಆಗ ಮರಳಿದ್ದರು) ಹಿಂದುಸ್ತಾನೀ ಸೇವಾದಳವೆಂಬ ಸಂಸ್ಥೆಯನ್ನು ಆರಂಭಿಸಲು ನಿರ್ಧರಿಸಿದರು. ಸೇವಾದಳದ ಅ. ಭಾ. ಕೇಂದ್ರವು ಹುಬ್ಬಳ್ಳಿಯಲ್ಲೇ ಇದ್ದು ದೇಶದ ಮೂಲೆ ಮೂಲೆ ಗಳಿಂದಲೂ ಸ್ವಯಂಸೇವಕರು ಡಾ|| ಹರ್ಡೀಕರರಲ್ಲಿ ತರಬೇತಿ ಪಡೆಯಲು ಹುಬ್ಬಳ್ಳಿಗೆ ಬರುತ್ತಿದ್ದರು. ಹರ್ಡೀಕರರು ಕರ್ನಾಟಕವು ನೀಡಿದ ಅಖಿಲ ಭಾರತ ಮಟ್ಟದ ಒಬ್ಬ ನಾಯಕರಾಗಿದ್ದಾರೆ. 1924 ರಲ್ಲಿ ನಡೆದ ಬೆಳಗಾವಿ ಕಾಂಗ್ರೆಸ್ಸಿನ ಕಾಲದಲ್ಲಿ ಡಾ||ಹರ್ಡೀಕರರು 1700 ಸ್ವಯಂಸೇವಕ ಸೇವಕಿಯರನ್ನು ತರಬೇತಿಗೊಳಿಸಿ, ದೇಶದ ಎಲ್ಲ ನಾಯಕರಿಂದ ಈ ಸ್ವಯಂಸೇವಕರ ಶಿಸ್ತು, ಕಾರ್ಯ ಶೀಲತೆಗಳ ಬಗ್ಗೆ ಮೆಚ್ಚುಗೆ ಪಡೆದರು.

ಸ್ವಾತಂತ್ರ್ಯಪೂರ್ವದಲ್ಲಿ ಅ. ಭಾ. ಕಾಂಗ್ರೆಸ್ಸಿನ ಅಧಿವೇಶನವು ಕರ್ನಾಟಕದಲ್ಲಿ ನಡೆದುದು ಒಮ್ಮೆ ಮಾತ್ರ. ಆದರೆ ಈ ಅಧಿವೇಶನವು ಗಾಂಧೀಜೀಯವರನ್ನು ಅಧ್ಯಕ್ಷರನ್ನಾಗಿ ಹೊಂದಿತ್ತು. 1924ರ ಈ ಬೆಳಗಾವಿ ಕಾಂಗ್ರೆಸ್ಸು ಕರ್ನಾಟಕದ ಕಾರ್ಯಕರ್ತರ ಮತ್ತು ಚಳವಳಿಯ ಮೇಲೆ ಅಪಾರ ಪ್ರಭಾವ ಬೀರಿದ ಘಟನೆ. ಕಾಂಗ್ರೆಸ್ ನಡೆದ ಸ್ಥಳದಲ್ಲೇ ಕರ್ನಾಟಕದ ಏಕೀಕರಣ ಸಮ್ಮೇಳನವು ನಡೆಯಿತು. "ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು" ಹಾಡನ್ನು ಕವಿ ಹುಯಿಲಗೋಳ ನಾರಾಯಣರಾಯರು ಇದೇ ಕಾಲಕ್ಕೆ ಹಾಡಿದರು.

1927 ರಲ್ಲಿ ಗಾಂಧೀಜಿ ಕೆಲಕಾಲ ನಂದಿಬೆಟ್ಟದಲ್ಲಿ ವಿಶ್ರಾಂತಿಗೆಂದು ಬಂದಿದ್ದು ಅದೇಕಾಲಕ್ಕೆ ಮೈಸೂರು ಸಂಸ್ಥಾನದಲ್ಲೇ ಸಂಚಾರ ಕೈಕೊಂಡಿದ್ದರು. 1928ರ

ಸುಲ್ತಾನಪೇಟೆ ಗಣಪತಿ ಪ್ರಕರಣದ ಕಾಲಕ್ಕೆ ಸರಕಾರವು ಅನುಸರಿಸಿದ ದಬ್ಬಾಳಿಕೆಯ ಧೋರಣೆಯು ಸಂಸ್ಥಾನದಲ್ಲಿ ಕಾಂಗ್ರೆಸ್ ಬಲವಾಗಲು ಹಾದಿಮಾಡಿತು. 1917ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿತವಾದ ರಾಷ್ಟ್ರೀಯ ಶಾಲೆ ಒಂದು ಹೈಸ್ಕೂಲಾಗಿ ಬೆಳೆದು, ಪ್ರೊ॥ ಸಂಪದ್ಗಿರಿರಾಯರ ನೇತೃತ್ವದಲ್ಲಿ ಅನೇಕ ದೇಶಭಕ್ತರನ್ನು ಸೃಷ್ಟಿಸಿತು.

ಆರಂಭದಲ್ಲಿ ಕಾಂಗ್ರೆಸ್ ಬ್ರಾಹ್ಮಣರದೇ ಒಂದು ಸಂಸ್ಥೆಯೆಂಬ ನಂಬುಗೆಯಿತ್ತು. ಆದರೆ 1930ರಲ್ಲಿ ಬೆಳಗಾವಿಯಲ್ಲಿ ನಡೆದ ಬ್ರಾಹ್ಮಣೇತರ ಪರಿಷತ್ತು ತನ್ನ ಅನುಯಾಯಿಗಳೆಲ್ಲ ಕಾಂಗ್ರೆಸ್ಸನ್ನು ಸೇರಬೇಕೆಂದು ಕರೆನೀಡಿತು. ಅದೇ ರೀತಿ ಹಾವೇರಿಯಲ್ಲಿ ವೀರಶೈವ ಪರಿಷತ್ತು ಆಗಸ್ಟ್ 1930ರಲ್ಲಿ ನಡೆದಾಗಲೂ ವೀರಶೈವರು ಕಾಂಗ್ರೆಸ್ ಸೇರಬೇಕೆಂದು ಕರೆ ನೀಡಲಾಯಿತು. ಹೀಗೆ ಕಾಂಗ್ರೆಸ್ ಜನಸಾಮಾನ್ಯರನ್ನು ತನ್ನೆಡೆಗೆ ಆಕರ್ಷಿಸಿ ಒಂದು ಜನಪ್ರಿಯ ಸಂಸ್ಥೆಯಾಗಿ ಬೆಳೆಯಿತು.

ಗಾಂಧೀಜಿ 1930ರಲ್ಲಿ ಉಪ್ಪಿನ ಸತ್ಯಾಗ್ರಹವನ್ನು ಆರಂಭಿಸಿ ಕಾನೂನು ಭಂಗ ಚಳವಳಿಯನ್ನು ಶುರುಮಾಡಿದಾಗ ಕರ್ನಾಟಕದ ಅಂಕೋಲಾದಲ್ಲಿ ಭಾರಿಪ್ರಮಾಣದಲ್ಲಿ ಉಪ್ಪಿನ ಸತ್ಯಾಗ್ರಹ ನಡೆಯಿತು. ಏಪ್ರಿಲ್ 13 ರಂದು ಸುಮಾರು 40.000 ಜನರ ಎದುರಿಗೆ ಉಪ್ಪನ್ನು ತಯಾರಿಸಿ ಎಂ. ಪಿ. ನಾಡಕರ್ಣಿ ಮತ್ತು ಕೆಲವರು ಬಂಧನಕ್ಕೆ ಒಳಗಾದರು. ಮಂಗಳೂರು. ಮಲ್ಪೆ. ಬಿಜಾಪುರ ಜಿಲ್ಲೆಯ ಬಸನಾಳ, ಧಾರವಾಡ ಜಿಲ್ಲೆಯ ಕಿರೆಸೂರು. ಯಾವಗಲ್ ಮುಂತಾದ ಕಡೆ ಉಪ್ಪಿನ ಸತ್ಯಾಗ್ರಹವಾಯಿತು. ಉಪ್ಪಿನ ಕಾನೂನೇ ಇಲ್ಲವೇನೋ ಎಂಬಂತೆ ಕಾರವಾರ ಜಿಲ್ಲೆಯ ಅನೇಕ ಕಡೆ ಉಪ್ಪಿನ ಸಂತೆಗಳನ್ನು ನಡೆಸಿ ಸಾರ್ವಜನಿಕರು ನೂರಾರು ಚೀಲ ಉಪ್ಪನ್ನು ಮಾರಿದರು.

ಉಪ್ಪಿನ ಸತ್ಯಾಗ್ರಹದ ಹಿಂದೆಯೇ ಕಾದಿಟ್ಟ ಅಡವಿಗಳನ್ನು ಕಡಿದು ಜಂಗಲ್ ಸತ್ಯಾಗ್ರಹಮಾಡಲಾಯಿತು. ಇದಲ್ಲದೆ ಮದ್ಯ ಮಾರುವುದರ ವಿರುದ್ಧ ಪಿಕೆಟಿಂಗ್, ಸೇಂದಿ ಗಿಡಗಳನ್ನು ಕಡಿಯುವುದು ಹಾಗೂ ವಿದೇಶ ವಸ್ತ್ರಗಳ ಅಂಗಡಿಗಳ ಮುಂದೆ ಪಿಕೆಟಿಂಗ್. ಹೀಗೆ ಕಾನೂನು ಭಂಗ ಚಳವಳಿ ವಿವಿಧರೂಪ ತಾಳಿತು. ಇದೆಲ್ಲಕ್ಕೂ ಗಂಭೀರವಾದುದು ಕರನಿರಾಕರಣ ಚಳವಳಿ. ಕರ್ನಾಟಕದಲ್ಲಿ ಧಾರವಾಡ ಜಿಲ್ಲೆಯ ಹಿರೆಕೆರೂರು ಮತ್ತು ಉತ್ತರ ಕನ್ನಡದ ಸಿರಸಿ. ಸಿದ್ದಾಪುರ ಮತ್ತು ಅಂಕೋಲಾ ತಾಲ್ಲೋಕುಗಳನ್ನು ಕರನಿರಾಕರಣ ಚಳವಳಿಗಾಗಿ ಆಯ್ಕೆಮಾಡಲಾಗಿತ್ತು. ಹಿರೆಕೆರೂರಲ್ಲಿ ಸರ್ದಾರ್ ವೀರನಗೌಡ ಪಾಟೀಲ, ತಿ. ರು. ನೆಸ್ವಿ. ಕೆ. ಎಫ್. ಪಾಟೀಲ್ ಮತ್ತು ಹಳ್ಳಿಕೇರಿ ಇವರುಗಳ ನಾಯಕತ್ವದಲ್ಲಿ ಚಳವಳಿ ತೀರ ಯಶಸ್ವಿಯಾಯಿತು. ಸಿರಸಿ ತಾಲೂಕಿನಲ್ಲಿ ಅದು ಭಾಗಶಃ ಯಶಸ್ವಿಯಾಯಿತು. ಆದರೆ ಸಿದ್ದಾಪುರ ಮತ್ತು ಅಂಕೋಲ ತಾಲೂಕಿನಲ್ಲಿ ಸರಕಾರದ ಭಾರಿ ದಬ್ಬಾಳಿಕೆಯನ್ನು ಎದುರಿಸಿಯೂ ಚಳವಳಿ ಯಶಸ್ವಿಯಾಯಿತು. ಅಂಕೋಲೆಯ ಅಶಿಕ್ಷಿತರಾದ ನಾಡವರೂ

ಸಿದ್ದಾಪುರದ ಸಂಪ್ರದಾಯನಿಷ್ಠ ಬ್ರಾಹ್ಮಣರೂ (ಅವರಲ್ಲಿ ಹೆಚ್ಚಿನವರು ಹವಿಕರು) ಕರನಿರಾಕರಣದಲ್ಲಿ ಭಾಗವಹಿಸಿ ತಮ್ಮ ಮನೆಯ ಪಾತ್ರೆ ಪರಡಿ. ದನಕರುಗಳು ಜಫ್ತಾದರೂ ಹಿಂದೆಗೆಯದೆ ದೃಢವಾಗಿ ನಿಂತರು. ಇಡೀ ಕುಟುಂಬಗಳನ್ನೇ ಕಂದಾಯ ಕೊಡದ ಕಾರಣಕ್ಕಾಗಿ ಬಂಧಿಸಿದ ಉದಾಹರಣೆಗಳೂ ಸಾಕಷ್ಟು ಇವೆ.

ಬೆಳಗಾವಿ ಜಿಲ್ಲೆಯಲ್ಲಿ 664. ಉತ್ತರ ಕನ್ನಡದಲ್ಲಿ 442. ಧಾರವಾಡದಲ್ಲಿ 202. ದಕ್ಷಿಣ ಕನ್ನಡದಲ್ಲಿ 159, ಬಿಜಾಪುರದಲ್ಲಿ 158 ಮತ್ತು ಕೊಡಗಿನಲ್ಲಿ 20 ಜನ 1930–31 ರ ಅವಧಿಯಲ್ಲಿ ಬಂಧನಕ್ಕೆ ಒಳಗಾದರು.

ಗಾಂಧಿ – ಇರ್ವಿನ್ ಒಪ್ಪಂದದನಂತರ (ಮಾರ್ಚ್ 1931) ಚಳವಳಿಯನ್ನು ಹಿಂದೆಗೆದುಕೊಂಡರೂ ಗಾಂಧೀಜಿ ಲಂಡನ್‌ಗೆ ತೆರಳಿ ಚಕ್ರಗೋಷ್ಠಿಯಲ್ಲಿ ಭಾಗವಹಿಸಿ ಮರಳಿದಾಗ ಮತ್ತೆ ಕಾನೂನುಭಂಗ ಚಳವಳಿ ಆರಂಭಿಸಲಾಯಿತು. ಮದ್ಯದ ಅಂಗಡಿ. ವಿದೇಶೀವಸ್ತ್ರದ ಅಂಗಡಿಗಳ ಪಿಕೆಟಿಂಗ್ ಜೊತೆ ಅರಣ್ಯ ಸತ್ಯಾಗ್ರಹ. ಹುಲ್ಲುಬನ್ನಿ ಸತ್ಯಾಗ್ರಹ ಮತ್ತು ಕರನಿರಾಕರಣ ಚಳವಳಿಯನ್ನು ಹೂಡಲಾಯಿತು.

ಅಂಕೋಲ. ಸಿದ್ದಾಪುರಗಳ ರೈತರು ಈ ಕಾಲದಲ್ಲಿ ಸುವರ್ಣಾಕ್ಷರದಲ್ಲಿ ಬರೆಯಲು ಯೋಗ್ಯವಾದ ತ್ಯಾಗ, ಬಲಿದಾನ ಮಾಡಿದರು. ಕಂದಾಯವನ್ನು ತೆರದ ಅವರ ಪಾತ್ರೆ ಪರಡಿ, ದನಕರು ಜಫ್ತಾದುವು. ಜಫ್ತಾದ ವಸ್ತುಗಳನ್ನು ಹರಾಜು ಮಾಡಿದಾಗ ಕೊಳ್ಳುವವರೇ ಇಲ್ಲವಾದರು. ಅಪ್ಪಿತಪ್ಪಿ ಯಾರಾದರೂ ಕೊಂಡಲ್ಲಿ ಅಂಥ ಕೊಂಡ ವ್ಯಕ್ತಿಗಳ ಮನೆಗಳ ಮುಂದೆ ಸ್ತ್ರೀಯರು ಉಪವಾಸ ಸತ್ಯಾಗ್ರಹಮಾಡಿದರು. ಇಂಥ ಸತ್ಯಾಗ್ರಹಿಗಳ ಮೇಲೆ ಕೊಳೆ ನೀರು ಎರಚಿ. ಅವರನ್ನು ಹೀನಾಯವಾಗಿ ಬೈದು. ಪುಂಡರಿಂದ ಅವಮಾನ ನಡೆಸಲು ಯತ್ನಿಸಿದರೂ ಈ ಧೀರ ಸ್ತ್ರೀಯರು ಜಗ್ಗಲಿಲ್ಲ. ಪೋಲೀಸರು ಅವರನ್ನು ಬಂಧಿಸಿದಾಗ ಇನ್ನೊಂದು ಸತ್ಯಾಗ್ರಹಿಗಳ ಗುಂಪು ಸಿದ್ಧವಾಗಿರುತ್ತಿತ್ತು. ಗೌರಮ್ಮ ವೆಂಕಟರಾಮಯ್ಯ. ಸುಬ್ಬಮ್ಮ ಎಂ. ಎಸ್. ಜೋಯಿಸ್. ಕಲ್ಲಾಳ ಕಾವೇರಮ್ಮ. ಮಹಾದೇವಿ ತಾಯಿ ಮುಂತಾದ ಸ್ತ್ರೀಯರು ಈ ಸತ್ಯಾಗ್ರಹವನ್ನು ನಡೆಸಿದವರಲ್ಲಿ ಕೆಲವರು. ಸೊತ್ತುಗಳನ್ನು ಕೊಂಡವರು ಕೊಂಡ ಮಾಲನ್ನು ಅದರ ಮಾಲಿಕನಿಗೆ ಮರಳಿಸುವವರೆಗೂ ಅವರು ಧೈರ್ಯದಿಂದ ಸತ್ಯಾಗ್ರಹ ನಡೆಸಿದರು.

ಕಂದಾಯ ತೆರದ ಎಷ್ಟೋ ಮನೆಗಳ ಹಿರಿಯ ಸದಸ್ಯರೆಲ್ಲರದೂ ಬಂಧನವಾಯಿತು. ಆಸ್ತಿಪಾಸ್ತಿ ಜಫ್ತಾಯಿತು. ಮನೆಯಲ್ಲಿನ ಹಿರಿಯರು ಜೇಲು ಸೇರಿದ್ದರಿಂದ ಮಕ್ಕಳು ಬೀದಿ ಪಾಲಾಗುವಂತಾಯಿತು. ಇಂಥ ಮಕ್ಕಳಿಗಾಗಿಯೇ ಶಿವಮೊಗ್ಗ ಮತ್ತು ಕಾರವಾರಗಳಲ್ಲಿ ಬಾಲಕಾಶ್ರಮಗಳನ್ನು ತೆರೆಯಬೇಕಾಗಿ ಬಂತು. ಈ ಎರಡೂ ಆಶ್ರಮಗಳಲ್ಲೀ ಒಟ್ಟು 300 ಮಕ್ಕಳು ಆಶ್ರಯಪಡೆದವರೆಂದರೆ ಜೇಲಿಗೆ ಹೋದವರ

ನಂಟ್ರೆ ಎಷ್ಟೆಂದು ತಿಳಿಯುವುದು. ಜೇಲುಕಂಡವರ ಮನೆಗಳನ್ನು ಸರಕಾರ ಬೀಗ ಮುದ್ರೆ ಹಾಕಿಟ್ಟಿತು. ತಮ್ಮ ಮನೆಗಳ ಹೊದಿಕೆಯನ್ನು ಮಳೆಗಾಲದಲ್ಲಿ ಸರಿಪಡಿಸದೇ ಇದ್ದ ಕಾರಣದಿಂದಾಗಿ ಮಳೆಗೆ ಜರಿದು ಬಿದ್ದ ಮನೆಗಳನ್ನು ಜೇಲಿನಿಂದ ಮರಳಿದ ಜನ ಕಾಣಬೇಕಾಯಿತು! ಅನೇಕ ಮನೆಗಳನ್ನು ಹೊಕ್ಕಿಟ್ಟು ಹಣಕ್ಕಾಗಿಯೋ ಆಭರಣಗಳಿಗಾಗಿಯೋ ಪೋಲೀಸರು ಅಗೆದು ಬಗೆದು ಧ್ವಂಸಗೊಳಿಸಿದ್ದರು. ಮನೆಯನ್ನು ಕಳೆದುಕೊಂಡು ತಮ್ಮ ಜೀವನಾಧಾರವಾಗಿದ್ದ ಹೊಲಗದ್ದೆಗೂ ಎರವಲಾಗಿ 4–5 ವರ್ಷ ಕಾಲ ಅನೇಕ ಮನೆತನಗಳು ಅಪಾರ ಕಷ್ಟನಷ್ಟಗಳಿಗೆ ಒಳಗಾಗಬೇಕಾಯಿತು. ಸರ್ವಸ್ವವನ್ನು ಕಳೆದುಕೊಂಡು ಸಿದ್ದಾಪುರ ತಾಲೂಕಿನ ಸುಮಾರು 30 ಕುಟುಂಬಗಳನ್ನು ಸಾಗರ ತಾಲೂಕಿನಲ್ಲಿ ನೆಲಸುವಂತೆ ಮಾಡಬೇಕಾಯಿತು. 1937–38ರಲ್ಲಿ ಇವರ ಭೂಮಿ ಮತ್ತೆ ಮರಳಿ ಸಿಕ್ಕಿತು.

ಬಾಗಲಕೋಟೆಯಲ್ಲಿ ಅಖಿಲ ಕರ್ನಾಟಕ ರಾಜಕೀಯ ಪರಿಷತ್ತನ್ನು ನೆರವೇರಿಸಿ 1932ರಲ್ಲಿ ಹ. ರಾ. ಪುರೋಹಿತರು ಅನೇಕ ಜೊತೆಗಾರರೊಡನೆ ಬಂಧನಕ್ಕೆ ಒಳಗಾದರು. ಜೂನ್‌ನಲ್ಲಿ ಮಂಗಳೂರಲ್ಲಿ ಖಂಡಿಗೆ ಕೃಷ್ಣಭಟ್ಟರು ಇದೇ ರೀತಿ ಜಿಲ್ಲಾ ರಾಜಕೀಯ ಪರಿಷತ್ತು ನಡೆಸಿ 500 ಜೊತೆಗಾರರೊಡನೆ ಬಂಧನಕ್ಕೆ ಒಳಗಾದರು. 1934ರ ವರೆಗೆ ಚಳವಳಿ ತೀವ್ರವಾಗಿ ಸಾಗಿತು. ಈ ಕಾಲದಲ್ಲಿ ಉಡುಪಿಯ 'ಸತ್ಯಾಗ್ರಹಿ'. ಧಾರವಾಡದ 'ಕರ್ಮವೀರ'. ಮಡಕೇರಿಯ 'ಕೊಡಗು'. ಬಳ್ಳಾರಿಯ 'ಕರ್ನಾಟಕ ಕೇಸರಿ', ಕುಮಟಾದ 'ಕಾನಡವೃತ್ತ' ಮತ್ತು 'ಕಾನಡಾ ಧುರೀಣ', ಹುಬ್ಬಳ್ಳಿಯ 'ತರುಣ ಕರ್ನಾಟಕ'. ಬಾಗಲಕೋಟೆಯ 'ಕನ್ನಡಿಗ', ಬಿಜಾಪುರದ 'ಕರ್ನಾಟಕ ವೈಭವ' ಮುಂತಾದ ಪತ್ರಿಕೆಗಳು ರಾಷ್ಟ್ರೀಯ ಚಳವಳಿಯಲ್ಲಿ ಅಪಾರ ಸೇವೆ ಸಲ್ಲಿಸಿದುವು. ಈ ಪೈಕಿ ಕೆಲಪತ್ರಿಕೆಗಳು ಸರಕಾರದ ದಬ್ಬಾಳಿಕೆಯಿಂದ ಪೂರ್ತಿ ನಿಂತವು (ಉದಾ: 'ಕರ್ನಾಟಕ ಕೇಸರಿ'); ಕೆಲವು ಅಲ್ಪಕಾಲ ಪ್ರಕಟನೆ ನಿಲ್ಲಿಸಿದುವು (ಉದಾ: 'ಕಾನಡಾವೃತ್ತ').

1935ರ ಕಾನೂನಿನಂತೆ 1937ರಲ್ಲಿ ಪ್ರೆಸಿಡೆನ್ಸಿ ಪ್ರದೇಶಗಳಲ್ಲಿ ರಾಜ್ಯವಿಧಾನ ಸಭೆಗಳಿಗೆ ನಡೆದ ಚುನಾವಣೆಯಲ್ಲಿ ಬಿಜಾಪುರ ಜಿಲ್ಲೆಯ ಒಂದು ಸ್ಥಾನದ ವಿನಾ ಎಲ್ಲ ಸ್ಥಾನಗಳೂ ಕಾಂಗ್ರೆಸ್ಸಿಗೆ ಸಿಕ್ಕವು. ಮದ್ರಾಸ್ ಮತ್ತು ಮುಂಬೈ ರಾಜ್ಯಗಳಲ್ಲಿ ಕಾಂಗ್ರೆಸ್ ಸಂಪುಟಗಳು ಅಸ್ತಿತ್ವಕ್ಕೆ ಬಂದುವು. ಜಿಲ್ಲಾಬೋರ್ಡುಗಳಲ್ಲೂ ಕಾಂಗ್ರೆಸ್ಸಿಗೇ ಬಹುಮತ ಬಂತು.

ಮುಂದೆ ಭಾರತ ಸರಕಾರವು ಭಾರತವನ್ನು ಮಹಾಯುದ್ಧದಲ್ಲಿ ಭಾಗವಹಿಸುವಂತೆ ಮಾಡಿದ್ದರ ಪ್ರತಿಭಟನಾರ್ಥ ರಾಜ್ಯ ಸಂಪುಟಗಳು ರಾಜೀನಾಮೆ ನೀಡಿದುವು. ಯುದ್ಧ ಕಾಲದಲ್ಲಿ ಗಾಂಧೀಜಿ ಯುದ್ಧ ವಿರೋಧಿ ವೈಯಕ್ತಿಕ ಸತ್ಯಾಗ್ರಹಕ್ಕೆ ಕರೆ ಕೊಟ್ಟಾಗ

ನೂರಾರು ಜನ ಕರ್ನಾಟಕದಲ್ಲಿ ಸತ್ಯಾಗ್ರಹದಲ್ಲಿ ಭಾಗವಹಿಸಿ ಮೂರು ತಿಂಗಳಿಂದ ಒಂದು ವರ್ಷಗಳ ಅವಧಿಯ ಜೈಲುವಾಸ ಅನುಭವಿಸಿದರು.

ಹಳೆಯ ಮೈಸೂರು ರಾಜ್ಯದಲ್ಲಿ ಪ್ರಮುಖ ಪಟ್ಟಣಗಳಲ್ಲಿ ಕಾಂಗ್ರೆಸ್ ಕೆಲಸ ಮಾಡುತ್ತಿತ್ತು. ಆದರೆ ಸಂಸ್ಥಾನಿಕರ ಆಡಳಿತವಿರುವ ಪ್ರದೇಶಗಳಲ್ಲಿ ಚಳವಳಿ ನಡೆಸಲು ಕಾಂಗ್ರೆಸ್ ಅನುಮತಿ ನೀಡಿರಲಿಲ್ಲ. "ಪ್ರಜಾ ಸಂಯುಕ್ತ ಪಕ್ಷ" ವೆಂಬ ಬ್ರಾಹ್ಮಣೇತರ ಹಿತಾಸಕ್ತಿಗಳ ಸಂಘಟನೆಯು ಕಾಂಗ್ರೆಸ್ಸನ್ನು ಬ್ರಾಹ್ಮಣರ ಪಕ್ಷವೆಂದು ಆಪಾದಿಸುತ್ತಿತ್ತು. ಆದರೆ 1937ರಲ್ಲಿ ಕಾಂಗ್ರೆಸ್ ಮುಂಬೈ ಮತ್ತು ಮದ್ರಾಸ್‌ಗಳಲ್ಲಿ ಅಧಿಕಾರಕ್ಕೆ ಬಂದುದರಿಂದ ಈ ಪಕ್ಷದ ನಾಯಕರು ತಮ್ಮ ಧೋರಣೆಯನ್ನು ಬದಲಾಯಿಸಿದರು. 1937 ರಲ್ಲಿ ಪ್ರಜಾ ಸಂಯುಕ್ತ ಪಕ್ಷವು ಕಾಂಗ್ರೆಸ್ಸಿನ ಜೊತೆ ಐಕ್ಯಹೊಂದಲು ನಿರ್ಧರಿಸಿತು. "ಮೈಸೂರು ಕಾಂಗ್ರೆಸ್" ಎಂಬ ಹೆಸರಿಂದ ಕರೆದುಕೊಂಡು ಕಾಂಗ್ರೆಸ್ಸಿನ ಧ್ಯೇಯ ಧೋರಣೆಗಳಂತೆ ಕೆಲಸಮಾಡಲು ನಿರ್ಧರಿಸಿತು. ಅದರ ಪ್ರಥಮ ಸಮ್ಮೇಳನ 1938ರ ಮಾರ್ಚ್‌ನಲ್ಲಿ ಶಿವಪುರದಲ್ಲಿ ನಡೆಯಿತು. ಆಗ ಅಧ್ಯಕ್ಷರಾದ ಟಿ. ಸಿದ್ದಲಿಂಗಯ್ಯ. ಸ್ವಯಂಸೇವಕದಳದ ಪ್ರಮುಖರಾದ ಎಂ. ಎನ್. ಜೋಯಿಸ್ ಹಾಗೂ ಅನೇಕರು ರಾಷ್ಟ್ರಧ್ವಜವನ್ನು ಹಾರಿಸಿ ಬಂಧನಕ್ಕೆ ಒಳಗಾದರು. ಇದೇ ವರ್ಷ ಏಪ್ರಿಲ್‌ನಲ್ಲಿ ವಿಧುರಾಶ್ವತ್ಥದಲ್ಲಿ ಜಾತ್ರೆಯ ಕಾಲಕ್ಕೆ ಅಲ್ಲಿನ ದೇವಾಲಯದ ಪರಿಸರದಲ್ಲಿ ರಾಷ್ಟ್ರ ಧ್ವಜವೊಂದನ್ನು ಹಾರಿಸಲಾಗಿತ್ತೆಂಬ ಕಾರಣಕ್ಕಾಗಿ ಪೋಲೀಸರು ಯಾತ್ರಿಕರ ಮೇಲೆ ವಿನಾ ಕಾರಣ ಗೋಳಿ ಬಾರು ಮಾಡಿದರು. ಅನೇಕರ ಸಾವು ಸಂಭವಿಸಿತು. ಜಲಿಯನ್ ವಾಲಾ ಬಾಗ್ ಹತ್ಯಾಕಾಂಡ ಭಾರತವನ್ನು ಎಚ್ಚರಿಸಿದ್ದಂತೆ ಈ ಪ್ರಕರಣವು ಇಡೀ ಮೈಸೂರು ಸಂಸ್ಥಾನದ ಪ್ರಜೆಗಳನ್ನು ಬಡಿದೆಬ್ಬಿಸಿ ಭಾರೀ ಜಾಗೃತಿಗೆ ಕಾರಣವಾಯಿತು. 1939ರಲ್ಲಿ ಅರಸೀಕೆರೆಯಲ್ಲಿ ನಡೆದ ರಾಜ್ಯಕಾಂಗ್ರೆಸ್ಸಿನ ಅಧಿವೇಶನದ ಕಾಲಕ್ಕೆ ಜವಾಬ್ದಾರಿ ಸರಕಾರಕ್ಕೆ ಚಳವಳಿ ನಡೆಸಲು ನಿರ್ಣಯವಾಯಿತು. ಕೆ. ಟಿ. ಭಾಷ್ಯಂ. ತಾಳಕೆರೆ ಸುಬ್ರಮಣ್ಯಂ. ಎಚ್. ಸಿ. ದಾಸಪ್ಪ. ಸಾಹುಕಾರ ಚೆನ್ನಯ್ಯ. ಬಿ. ಎನ್. ಗುಪ್ತ. ಎಚ್. ಕೆ. ವೀರಣ್ಣಗೌಡ, ಕೆ. ಹನುಮಂತಯ್ಯ. ಕೆ. ಸಿ. ರೆಡ್ಡಿ ಮುಂತಾದವರು ಆ ಕಾಲದ ಮೈಸೂರು ರಾಜ್ಯದ ಕೆಲವು ಪ್ರಮುಖ ನಾಯಕರಾಗಿದ್ದರು. ಈ ವರ್ಷ ಅರಣ್ಯ ಸತ್ಯಾಗ್ರಹವನ್ನು ಕೈಕೊಂಡು. ತುರುವನೂರಲ್ಲಿ ಎಸ್. ನಿಜಲಿಂಗಪ್ಪ ಮುಂತಾದವರು ಮೊದಲಬಾರಿ ಬಂಧನಕ್ಕೆ ಒಳಗಾದರು. ರಾಜ್ಯದಲ್ಲಿ ಈ ಚಳವಳಿಯಿಂದ 1200 ಜನರ ಬಂಧನವಾಯಿತು. ಜವಾಬ್ದಾರಿ ಸರಕಾರಕ್ಕಾಗಿ ನಡೆದ ಚಳವಳಿಯನ್ನು ಪ್ರತಿಬಂಧಕಾಜ್ಞೆಯಿಂದ ಸರಕಾರವು ಎದುರಿಸ ಬಯಸಿದರೆ. ಸೆಪ್ಟೆಂಬರ್ 1 ರಂದು ಟಿ. ಸಿದ್ದಲಿಂಗಯ್ಯನವರು ಆ ಆಜ್ಞೆಯನ್ನು ಮುರಿದು ಬೆಂಗಳೂರಲ್ಲಿ ಬಂಧಿತರಾದರು. 1940ರವರೆಗೆ ಈ ಚಳವಳಿ ಸಾಗಿತು. ಆಗ ಕಾಂಗ್ರೆಸ್ ಚಳವಳಿಯನ್ನು ಹಿಂದೆಗೆದುಕೊಂಡು ಚುನಾವಣೆಗಳಲ್ಲಿ ಪಾಲ್ಗೊಂಡು ರಾಜ್ಯದಲ್ಲಿ ಎಲ್ಲೆಡೆ ಜಯಭೇರಿ ಹೊಡೆದು. ಎಲ್ಲ ಪ್ರಾತಿನಿಧಿಕ ಸಂಸ್ಥೆಗಳಲ್ಲಿ ಬಹುಮತ

ಗಳಿಸಿತು. ಇದೇ ಕಾಲಕ್ಕೆ ಸಂಸ್ಥಾನದ ಎಲ್ಲೆಡೆ ಕಾರ್ಮಿಕರು ಕಾಂಗ್ರೆಸ್ಸಿನ ನೇತೃತ್ವದಲ್ಲಿ ಸಂಘಟಿತರಾದರು. 1941 ರಲ್ಲಿ ನಡೆದ ಜಿನ್ನಿ ಮಿಲ್ ಮುಷ್ಕರ 25 ದಿನಗಳವರೆಗೆ ಯಶಸ್ವಿಯಾಗಿ ನಡೆಯಿತು.

ಹೈದರಾಬಾದ್ ಕರ್ನಾಟಕದ ಪ್ರದೇಶದಲ್ಲಿ 1934ರಲ್ಲಿ ರಾಷ್ಟ್ರೀಯ ಚಟುವಟಿಕೆಗಳನ್ನು ನಡೆಸಲೆಂದೇ ಹೈದರಾಬಾದ್ ಕರ್ನಾಟಕ ಪರಿಷತ್‌ಅನ್ನು ಸಂಘಟಿಸಲಾಯಿತು. 1938ರಲ್ಲಿ ಹೈದರಾಬಾದ್ ಕಾಂಗ್ರೆಸ್ ಸ್ಥಾಪನೆಯಾಯಿತು. ಜಿ. ರಾಮಾಚಾರ್ಯ, ರಮಾನಂದ ತೀರ್ಥ, ಡಾ॥ಮೇಲುಕೋಟೆ, ಶರಣಗೌಡ ಇನಾಂದಾರ್, ವೀರಭದ್ರಪ್ಪ ಶಿರೂರ್ ಮತ್ತು ಅಳವಂಡಿ ಶಿವಮೂರ್ತಿ ಶಾಸ್ತ್ರಿ ಅಲ್ಲಿನ ಕೆಲವು ಪ್ರಮುಖ ಕಾಂಗ್ರೆಸ್ ನಾಯಕರು.

1942ರ 'ಕ್ವಿಟ್ ಇಂಡಿಯಾ' ಚಳವಳಿಯ ಕಾಲಕ್ಕೆ ಕರ್ನಾಟಕವು ಅಭೂತಪೂರ್ವ ಜಾಗೃತಿಯನ್ನು ಕಂಡಿತು. ಈ ಚಳವಳಿಯು ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಹಾಗೂ ಬೆಂಗಳೂರಲ್ಲಿ ತೀರ ಬಲವಾಗಿತ್ತು.

ಈ ಚಳವಳಿಯನ್ನು ಮುಂಬೈಯಲ್ಲಿ ಘೋಷಿಸಿದ ಕೂಡಲೇ ಆಗಸ್ಟ್ 9ರ ಮುಂಜಾವಿನಲ್ಲಿ ಗಾಂಧೀಜಿ ಮತ್ತು ಅನ್ಯ ರಾಷ್ಟ್ರೀಯ ನಾಯಕರನ್ನು ಬಂಧಿಸಿದ್ದರಿಂದ ಚಳವಳಿ ಅನಾಯಕವಾಗುವ ಪರಿಸ್ಥಿತಿ ಉಂಟಾಗಿತ್ತು. ಆಗ 'ಹರಿಜನ' ಪತ್ರಿಕೆಯಲ್ಲಿ ಗಾಂಧೀಜಿಯವರ ಶಿಷ್ಯರಾದ ಶ್ರೀ ಮಶ್ರುವಾಲಾ ಮತ್ತು ಶ್ರೀ ಕಾಲೇಲ್ಕರ್ ಇವರುಗಳು ಎರಡು ಲೇಖನಗಳನ್ನು ಬರೆದರು. ಸರಕಾರವು ಕೆಲಸ ನಿರ್ವಹಿಸದಂತೆ ಮಾಡಲು ವಿಧ್ವಂಸಕ ಕೃತ್ಯಗಳನ್ನು ನಡೆಸುವ ಸೂಚನೆ ಈ ಲೇಖನಗಳಲ್ಲಿ ಇತ್ತು. ಸರಕಾರೀ ಯಂತ್ರದ ವಿನಾಶಕ್ಕೆ ಕಾರ್ಯಕ್ರಮಗಳನ್ನು ರೂಪಿಸಲಾಯಿತು. ಶ್ರೀ ಚ. ಜ. ಅಂಬಲಿಯವರ ಅಧ್ಯಕ್ಷತೆಯಲ್ಲಿ ಕೆ. ಪಿ. ಸಿ. ಸಿ ಯು ಒಂದು ಕ್ರಿಯಾ ಸಮಿತಿಯನ್ನು ನೇಮಿಸಿತು. ಇದಕ್ಕೆ ರಂ. ರಾ. ದಿವಾಕರರು ಕಾರ್ಯದರ್ಶಿಗಳೂ ರಾ. ಶ್ರೀ. ಹುಕ್ಕೇರಿಕರ್, ದ. ಪ. ಕರಮರಕರ್ ಮತ್ತು ಉ. ಶ್ರೀ ಮಲ್ಯ ಸದಸ್ಯರೂ ಆಗಿದ್ದರು.

ಕರ್ನಾಟಕದಲ್ಲಿ ಎಲ್ಲೆಡೆ ಭಾರೀ ಪ್ರಮಾಣದಲ್ಲಿ ವಿಧ್ವಂಸಕ ಕೃತ್ಯಗಳನ್ನು ನಡೆಸಲಾಯಿತು. ರಾಜ್ಯದಲ್ಲಿ 25 ರೈಲ್ವೆ ಸ್ಟೇಷನ್‌ಗಳನ್ನು ಜಖಂ ಮಾಡಲಾಯಿತು. ಅನೇಕ ಕಡೆ ಅಂಚೆ. ತಂತಿ ಸಂಪರ್ಕ ನಾಶಮಾಡಲಾಯಿತು. ಧಾರವಾಡ. ಬೆಳಗಾವಿ ಜಿಲ್ಲೆಗಳಲ್ಲಿ ಚಳವಳಿ ತೀರ ಪ್ರಬಲವಾಗಿದ್ದು ಅಲ್ಲಿ ಅನೇಕ ಗ್ರಾಮ ಚಾವಡಿಗಳನ್ನು ಡಾಕ್ ಬಂಗಲೆ ಹಾಗೂ ಅನ್ಯ ಸರಕಾರೀ ಕಟ್ಟಡಗಳನ್ನು ಸುಡಲಾಯಿತು. ನಿಪ್ಪಾಣಿಯಲ್ಲಿ ಅಂಚೆಕಚೇರಿ. ಸಬ್ ರಿಜಿಸ್ಟ್ರಾರ್‌ರ ಕಚೇರಿ ಸುಟ್ಟುದಕ್ಕಾಗಿ ಆ ಊರಿನ ಮೇಲೆ ಎರಡು ಲಕ್ಷ ರೂ. ಗೂ ಹೆಚ್ಚು ಪುಂಡುಗಂದಾಯ ಹೇರಲಾಯಿತು. ಗಂಗಾವಳಿ ಬಳಿಯ

ಸರಕಾರೀ ಸೌದೆ ಸಂಗ್ರಹವನ್ನು ಸುಟ್ಟುದಕ್ಕಾಗಿ ಗೋಕರ್ಣ ಊರಿನ ಮೇಲೆ 56.000 ರೂ. ಪುಂಡುಗಂದಾಯ ಹೇರಿದರು. ಬೆಂಗಳೂರು ನಗರದಲ್ಲಿ ಚಳವಳಿಕಾರರ ಮೇಲೆ ನಡೆದ ಗೋಳೀಬಾರಿನಿಂದಾಗಿ 150 ಜನ ಸತ್ತರು. ಬೈಲಹೊಂಗಲದಲ್ಲಿ 7, ದಾವಣಗೆರೆಯಲ್ಲಿ 6, ನಿಪ್ಪಾಣಿಯಲ್ಲಿ 1, ಹುಬ್ಬಳ್ಳಿಯಲ್ಲಿ 1. ಹೀಗೆ ಗೋಳೀಬಾರಿನಿಂದ ಮರಣಗಳು ಸಂಭವಿಸಿದುವು. ಮೈಲಾರ ಮಹಾದೇವಪ್ಪ ಹಾಗೂ ಅವರ ಇಬ್ಬರು ಜೊತೆಗಾರರು ಹೊಸರೀತಿಯಲ್ಲಿ ಸರಕಾರೀ ಖಜಾನೆ ಲೂಟಿಮಾಡಲು ಯತ್ನಿಸಿ ಹುತಾತ್ಮರಾದರು. ಮಣಕಿನಹಾಳ ತಿಮ್ಮಣಗೌಡ ಎಂಬ ಧಾರವಾಡ ಜಿಲ್ಲೆಯ ಒಬ್ಬ ಹೋರಾಟಗಾರರ ಕೈಯಲ್ಲಿ ಬಾಂಬುಸಿಡಿದು ಅವರು ತೀರಿಕೊಂಡರು. ಇಡೀ ರಾಜ್ಯದಲ್ಲಿ ಒಂದು ವರ್ಷದವರೆಗೆ ತೀವ್ರವಾಗಿ ನಡೆದ ಚಳವಳಿಯಿಂದ 7.000 ಜನ ಬಂಧಿತರಾದರು. 1944ರಲ್ಲಿ ದಿವಾಕರ ಮತ್ತು ಅನ್ಯ ಭೂಗತ ಕಾರ್ಯಕರ್ತರು ಸರಕಾರಕ್ಕೆ ಶರಣಾದಾಗ ಚಳವಳಿ ನಿಂತಿತು.

1947ರಲ್ಲಿ ದೇಶ ಸ್ವತಂತ್ರವಾದಾಗ ಮೈಸೂರು ಕಾಂಗ್ರೆಸ್ "ಮೈಸೂರು ಚಲೋ" ಚಳವಳಿ ಹೂಡಬೇಕಾಯಿತು. ಮಹಾರಾಜರು ಭಾರತ ಒಕ್ಕೂಟವನ್ನು ಸೇರಲು ಒಪ್ಪದ್ದರಿಂದ ಮೈಸೂರು ಅರಮನೆಯ ಮುಂದೆ ಸತ್ಯಾಗ್ರಹ ನಡೆಸಲು ಮಾಡಿದ ನಿರ್ಣಯವೇ ಈ ಚಳವಳಿಗೆ ಕಾರಣ. ರಾಜ್ಯದಲ್ಲಿ ಈ ಕಾಲದಲ್ಲಿ 13 ಜನ ಗೋಳೀಬಾರಿನಿಂದ ತೀರಿಕೊಂಡರು. 4000 ಜನರ ಬಂಧನವಾಯಿತು. ರೈಲು ಕಾರ್ಮಿಕರು. ಸರಕಾರೀ ಕಾರ್ಖಾನೆಗಳ ಕಾರ್ಮಿಕರು, ಕೊನೆಗೆ ಪೋಲೀಸರೂ ಈ ಹೋರಾಟದಲ್ಲಿ ಸೇರಿಕೊಂಡರು. ಕೊನೆಗೆ 24–10–1947 ರಂದು ಒಕ್ಕೂಟಕ್ಕೆ ಸೇರಲು ಮಹಾರಾಜರು ಒಪ್ಪಿಕೊಂಡಾಗ ಚಳವಳಿ ನಿಂತಿತು. ರಾಜ್ಯದಲ್ಲಿ ಕೆ. ಸಿ. ರೆಡ್ಡಿಯವರ ನೇತೃತ್ವದಲ್ಲಿ ಜವಾಬ್ದಾರಿ ಸರಕಾರದ ಸ್ಥಾಪನೆಯಾಯಿತು.

1948ರ ಸೆಪ್ಟೆಂಬರ್‌ನಲ್ಲಿ ನಡೆದ ಪೋಲೀಸು ಕಾರ್ಯಾಚರಣೆಯಿಂದಷ್ಟೇ ಹೈದರಾಬಾದ್ ಕರ್ನಾಟಕದ ಭಾಗವು ಸ್ವತಂತ್ರವಾಗುವುದು ಸಾಧ್ಯವಾಯಿತು. ಕನ್ನಡಿಗರಾದ ರಮಾನಂದ ತೀರ್ಥರು ಹೈದರಾಬಾದ್ ರಾಜ್ಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದು ಅಲ್ಲಿನ ಜನತೆಗೆ ಅವರ ಹೋರಾಟದಲ್ಲಿ ಒಳ್ಳೆಯ ನಾಯಕತ್ವವನ್ನು ನೀಡಿದರು.

ರಾಷ್ಟ್ರೀಯ ಚಳವಳಿಯು ಭಾರತೀಯ ಸಮಾಜವನ್ನು ಒಂದಾಗಿ ಬೆಸೆದು ಐಕ್ಯವನ್ನು ಸಾಧಿಸಿತ್ತು. ಜಾತಿಭೇದ ಅಸ್ಪೃಶ್ಯತೆಗಳು ದೂರಾದುವು. ಕರ್ನಾಟಕದ ಮಟ್ಟಿಗೂ ಈ ಮಾತು ಸತ್ಯ. ಗಾಂಧೀಜಿ ಅಸ್ಪೃಶ್ಯರ ನೆರವಿಗಾಗಿ ರಾಜ್ಯದಲ್ಲಿ 1927 ಮತ್ತು 1934 ರಲ್ಲಿ ಪ್ರವಾಸ ಕೈಕೊಂಡರು. ಸ್ತ್ರೀಯರು ಸ್ವಾತಂತ್ರ್ಯ ಚಳವಳಿಯಲ್ಲಿ ಬೃಹತ್ ಪ್ರಮಾಣದಲ್ಲಿ ಭಾಗವಹಿಸಿದ್ದರಿಂದ ಸ್ತ್ರೀಯರ ಪುರೋಗಮನವೂ ಸಾಧ್ಯ

ವಾಯಿತು. ಕೃಷ್ಣಾಬಾಯಿ ಪಂಜೀಕರ್, ಕಮಲಾದೇವಿ ಚಟ್ಟೋಪಾಧ್ಯಾಯ, ಯಶೋಧರಮ್ಮ ದಾಸಪ್ಪ. ಬಳ್ಳಾರಿ ಸಿದ್ದಮ್ಮ, ಉಮಾಬಾಯಿ ಕುಂದಾಪುರ, ತಿರುಮಲೆ ರಾಜಮ್ಮ ಮುಂತಾದ ಅನೇಕ ಸ್ತ್ರೀಯರು ಚಳವಳಿಯಲ್ಲಿ ಮುಂದಿದ್ದರು. ಉತ್ತರ ಕನ್ನಡ ಜಿಲ್ಲೆಯಲ್ಲಿ ಕರನಿರಾಕರಣ ಚಳವಳಿಯ ಕಾಲದಲ್ಲಿ ಹಳ್ಳಿಯ ಅಶಿಕ್ಷಿತ ಸ್ತ್ರೀಯರೂ ಅಪಾರ ಧೈರ್ಯ, ಸಾಹಸ ತೋರಿದರು.

ಭಾರತ ಸ್ವತಂತ್ರವಾದರೂ ಸ್ವಾತಂತ್ರ್ಯ ಚಳವಳಿಯ ಜೊತೆಜೊತೆಯಾಗಿ ಕನ್ನಡಿಗರು ಆಶಿಸಿದ್ದ ಕರ್ನಾಟಕ ಏಕೀಕರಣವು 1956 ರಲ್ಲಷ್ಟೇ ಕೈಗೂಡಿತು.

ಮೈಥಿಲಿ ಶರಣಗುಪ್ತರವರ "ಊರ್ಮಿಳೆ"

ಸೋಮಶೇಖರ್ (ಸೋಮ್)

ರಾಷ್ಟ್ರಕವಿ ಮೈಥಿಲಿ ಶರಣಗುಪ್ತರವರ ಕೃತಿ "ಸಾಕೇತ" ಮಹಾಕಾವ್ಯವು ಹಿಂದಿ ಸಾಹಿತ್ಯದ ಮೇರುಕೃತಿ. ಅದೊಂದು ಆಧುನಿಕ ಯುಗದ ಮಹಾನ್ ಕೃತಿ. ಗೋಸ್ವಾಮಿ ತುಲಸೀದಾಸರವರು ತಮ್ಮ ರಾಮಚರಿತ ಮಾನಸದಲ್ಲಿ ಸ್ವೀಕೃತ ಅವತಾರವಾದದ ಸಿದ್ಧಾಂತವನ್ನು ತ್ಯಜಿಸಿ ಮಾನವನ ಮಹತ್ವವನ್ನು ಸ್ವೀಕರಿಸಿದ ಗುಪ್ತಜಿಯವರ "ಸಾಕೇತ"ದ ಪಾತ್ರ ನಿರೂಪಣೆಯಲ್ಲಿಯೂ ನವೀನತೆಯು ಕಂಡುಬರುತ್ತದೆ. 'ಸಾಕೇತ'ವು "ಹಿಂದಿಭಾಷೆಯಲ್ಲಿ ಬರೆದ ಪ್ರಪ್ರಥಮ ಮಾನವತಾವಾದಿ ಅಥವಾ ಆದರ್ಶ ಮಾನವತಾವಾದಿ ಮಹಾಕಾವ್ಯ" ವಾಗಿದೆ.

ರಾಮಾಯಣದಲ್ಲಿ ಸೃಷ್ಟಿಸಿದ ಪ್ರಮುಖ ಪಾತ್ರ ಹಾಗು ಕ್ರಮಾಗತ ಕಥಾವಸ್ತು ಇವುಗಳನ್ನು ಬಿಟ್ಟು ಕವಿಯು ಊರ್ಮಿಳೆ ಹಾಗೂ ಭರತರ ಪಾತ್ರ ನಿರ್ಮಾಣದಲ್ಲಿ ನವೀನತೆಯನ್ನು ಬಳಸಿಕೊಂಡದ್ದು ಹಿಂದೀ ಸಾಹಿತ್ಯಕ್ಕೆ ಒಂದು ಹೊಸ ಕೊಡುಗೆ ಆಗಿದೆ. ಭಾರತೀಯ ರಾಮಕಾವ್ಯ ಜಗತ್ತಿಗೆ ಇದೊಂದು ನೂತನ ಕಾಣಿಕೆಯಾಗಿದೆ. ಗುಪ್ತಜಿಯವರ ಊರ್ಮಿಳೆಯು ರಾಮಾಯಣಗಳಲ್ಲಿ ಚಿತ್ರಿಸಿದಂತೆ ದೇವೀಸ್ವರೂಪಳಾಗಿಲ್ಲ. ಅವಳೊಬ್ಬ ಭಾರತದ ಸಾಮಾನ್ಯ ನಾರಿಯಾಗಿದ್ದಾಳೆ. "ಗುಪ್ತಜಿಯವರು ವಾಲ್ಮೀಕಿ, ಭವಭೂತಿ, ತುಲಸೀದಾಸರು ನಿರ್ಮಿಸಿದ ರಾಜಭವನದ ಸ್ತ್ರೀಯರಂತೆ ಊರ್ಮಿಳೆಯ ಜೀವನವನ್ನು ಸಾಕೇತದಲ್ಲಿ ನಿರ್ಮಿಸದೆ, ಅವಳ ತ್ಯಾಗ, ತಪಸ್ಯೆ, ಹಾಗೂ ಕರ್ತವ್ಯದ ಪರಿಚಯವನ್ನು ಮಾಡಿಕೊಡುವುದರಲ್ಲಿ ಯಶಸ್ವಿಯಾಗಿದ್ದಾರೆ. ನಿಜವಾಗಿ ಹೇಳಬೇಕಾದರೆ ಸಾಕೇತ ಮಹಾಕಾವ್ಯದ ಸೃಷ್ಟಿಯ ಪ್ರೇರಣೆ ಪ್ರೇಮಮಯಿ ಹಾಗು ಭಕ್ತಿಮಯಿ ಊರ್ಮಿಳೆ ಆಗಿದ್ದಾಳೆ. ಅವಳ ಪವಿತ್ರ ಹಾಗೂ ಉಜ್ವಲವಾದ ಜೀವನವನ್ನು ಸಮಾಜದ ಮುಂದೆ ಇಡುವುದೇ ಕವಿಯ ಮೂಲ ಉದ್ದೇಶವಾಗಿದೆಯೆಂದರೆ ಅತಿಶಯೋಕ್ತಿಯಾಗಲಾರದು.

ಕಾವ್ಯದ ಪ್ರಥಮ ಅಧ್ಯಾಯದಲ್ಲಿಯೇ ಊರ್ಮಿಳೆಯ ಪರಿಚಯ ನಮಗಾಗುತ್ತದೆ. ಇಲ್ಲಿ ಲಕ್ಷ್ಮಣ ಊರ್ಮಿಳೆಯರ ಮಧುರ ಮಿಲನದ ಅಪೂರ್ವ ಸಂದರ್ಭವನ್ನು ನಿರ್ಮಿಸಿ ಕವಿಯು ಅವರ ಆದರ್ಶ ದಾಂಪತ್ಯ ಜೀವನದ ಸುಖಪರಿಚಯ ಮಾಡಿಕೊಟ್ಟಿದ್ದಾರೆ. ಊರ್ಮಿಳೆಯು ಸೌಂದರ್ಯ ಪ್ರತಿಮೆಯಾಗಿದ್ದಾಳೆ. ರಾಮಾಯಣ ಹಾಗು

ರಾಮಚರಿತ ಮಾನಸದಲ್ಲಿ ಸೃಷ್ಟಿಸಲ್ಪಟ್ಟ ಊರ್ಮಿಳೆಗಿಂತ ಮೈಥಿಲಿ ಶರಣರವರ ಊರ್ಮಿಳೆಯು ತನ್ನದೇ ಆದ ಒಂದು ಹೆಚ್ಚಿನ ಸ್ಥಾನವನ್ನು ಪಡೆದಿದ್ದಾಳೆ. ಅವಳೊಬ್ಬ ಆದರ್ಶ ಧರ್ಮಪತ್ನಿಯಾಗಿ ಕಾವ್ಯದುದ್ದಕ್ಕೂ ಕಾಣಿಸಿಕೊಂಡಿದ್ದಾಳೆ. ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡ ಊರ್ಮಿಳೆಯು ತನ್ನ ಸಾಮಾಜಿಕ ಜೀವನದ ಎಲ್ಲ ರೂಪಗಳಲ್ಲಿಯೂ ಸಜೀವಳಾಗಿ ನಮ್ಮೆದುರಿಗೆ ನಿಂತಿದ್ದಾಳೆ. ಗುಪ್ತಜಿಯವರು ತಮ್ಮ ಮಹಾಕಾವ್ಯ ಸಾಕೇತದಲ್ಲಿ ಊರ್ಮಿಳೆಯ ಹೊಸ ಅಸ್ತಿತ್ವವನ್ನು ಪ್ರತಿಷ್ಠಾಪಿಸಿ ಪೂರ್ವಪರಂಪರೆಯನ್ನೇ ಮುರಿದಿದ್ದಾರೆ. ಸಾಕೇತದ ಊರ್ಮಿಳೆಯು ಒಂದು ಹೊಚ್ಚ-ಹೊಸ ಪಾತ್ರ. ಲಕ್ಷ್ಮಣ ಹಾಗು ಊರ್ಮಿಳೆಯರ ಸಂಭಾಷಣೆಯಲ್ಲಿ ಕಾವ್ಯಧಾರೆಯು ಅಪಾರ ಸ್ರೋತವೇ ಹರಿದಿದೆ. ರಸರಾಜ ಶೃಂಗಾರದ ಪರಿಪಾಕವು ಪ್ರಥಮ ಅಧ್ಯಾಯದಲ್ಲಿ ಕಂಡುಕೊಂಡಿದೆ. ಸೂಕ್ಷ್ಮ ಹಾಗೂ ಮನೋವೈಜ್ಞಾನಿಕ ವಸ್ತು ಚಿತ್ರಣವು ಗುಪ್ತಜಿಯವರ ಊರ್ಮಿಳೆಯಲ್ಲಿ ಕಂಡು ಬಂದಂತೆ ಪ್ರಾಚೀನ ರಾಮಕಾವ್ಯಗಳಲ್ಲಿ ಚಿತ್ರಿಸಲ್ಪಟ್ಟ ಊರ್ಮಿಳೆಯ ಚಿತ್ರಣದಲ್ಲಿ ಕಾಣಲಾರೆವು.

ಹಾಥ ಲಕ್ಷ್ಮಣ್ ನೆ ತುರಂತ ಬಢಾದಿಯೆ.
ಚೌರ ಬೋಲೆ ಏಕಪರಿರಂಭಣ ಪ್ರಿಯು!
ಸಿಮಿಟ – ಸೀ ಸಹಮುಗಯಿ ಪ್ರಿಯಕಿ ಪ್ರಿಯಾ
ಏಕ ತೀಕ್ಷ್ಣ ಅಪಾಂಗಹೀ ಉಸನೇ ದಿಯಾ!
ಕಿಂತು ಘಾತೆಮೆ ಉಸೆ ಪ್ರಿಯನೆ ಕಿಯಾ
ಆಪಹೀ ಫಿರ್‌ಪ್ರಾಪ್ಯ ಅಪನಾ ಲೇಲಿಯಾ!

ಕವಿಯು ಸೃಷ್ಟಿಸಿದ ಪಾತ್ರಸೃಷ್ಟಿಯಲ್ಲಿ ಭಾವನಾತ್ಮಕ ದೃಷ್ಟಿಕೋನವಿದೆ. ಊರ್ಮಿಳೆ ಪಾತ್ರಸೃಷ್ಟಿಯು ಅತ್ಯುನ್ನಶಿಖರವನ್ನು ಮುಟ್ಟುವುದು 'ಸಾಕೇತ'ದ ನವಮ ಸರ್ಗದಲ್ಲಿ. ರಾಮ ವನಗಮನದ ಸುದ್ದಿಯನ್ನು ಕೇಳಿದಾಗ ಊರ್ಮಿಳೆಗೆ ವಜ್ರಾಘಾತವಾದಂತಾಗುತ್ತದೆ. ಸೀತೆಗಂತೂ ರಾಮನೊಂದಿಗೆ ವನಕ್ಕೆ ಹೋಗಲು ಅಪ್ಪಣೆ ಸಿಕ್ಕಿದೆ. ಲಕ್ಷ್ಮಣನೂ ಹೊರಟು ನಿಂತಿದ್ದಾನೆ. ಆದರೆ ಊರ್ಮಿಳೆಯ ಸ್ಥಿತಿಯೇನು? ಅವಳೊಬ್ಬ ದೌರ್ಭಾಗ್ಯಶಾಲಿನಿಯೇ ಸರಿ. ಪತಿ ಲಕ್ಷ್ಮಣನೊಂದಿಗೆ ವನಕ್ಕೆ ಹೋಗಲು ಒಮ್ಮೆಯಾದರೂ ಅಗ್ರಹಮಾಡಲು ಅವಳಿಗೆ ಎಳ್ಳಷ್ಟೂ ಮನಸ್ಸಿಲ್ಲ. ಪತಿಯೊಂದಿಗೆ ಹೋದರೆ ಅಲ್ಲಿ ಬರುವಂತಹ ಕಷ್ಟ–ನಷ್ಟಗಳಿಗೆ ಅವಳು ಅಂಜಿದವಳಲ್ಲ. ಆದರೆ ಪತಿಯ ಜೀವನ ಸಿದ್ಧಿಯಲ್ಲಿ ಸ್ವಲ್ಪಾದರೂ ಅಡ್ಡಿ–ಆತಂಕಗಳು ತನ್ನಿಂದ ಉಂಟಾಗಬಾರದೆಂಬ ಸದಿಚ್ಛೆ ಅವಳಿಗಿದೆ. ಹೃದಯದಲ್ಲಿ ಆಘಾತವಾಗಿದೆ. ವಿಚಾರಗಳ ದ್ವಂದ್ವವನ್ನು ಸಹರ್ಷ ಸ್ವೀಕರಿಸಿ. ಅಯೋಧ್ಯೆಯಲ್ಲಿಯೇ ಇರಲು ಅವಳು ದೃಢ ಸಂಕಲ್ಪಮಾಡಿದ್ದಾಳೆ. ಇಂತಹ ವಿಚಾರಪೂರ್ಣ ಪಾತ್ರವನ್ನು ಸೃಷ್ಟಿಸಬೇಕಾದರೆ, ಕವಿ ಹೃದಯದಲ್ಲಿ ಭಾರತದ ಆದರ್ಶ ನಾರಿಯ ನಿರ್ಮಾಣವೇ ಊರ್ಮಿಳೆಯ ರೂಪ

ವಲ್ಲಿ ಇತ್ತೆಂದು ಭಾಸವಾಗುತ್ತದೆ. ಸಹನಶೀಲಳಾದ ಊರ್ಮಿಳೆಯು ಬುದ್ಧಿವಂತಳು. ಆವಳಿಗೆ ನಿಜವಾದ ಸ್ಥಿತಿಯು ಮನವರಿಕೆಯಾಗಿದೆ. ಆದುದರಿಂದ ಆವಳು ತನ್ನ ಪತಿಯನ್ನು ಸಹರ್ಷ ಬೀಳ್ಕೊಡುತ್ತಾಳೆ.

ಕರ್ತವ್ಯಪಾಲನೆಯ ದೃಢಸಂಕಲ್ಪಮಾಡಿದ ಗುಪ್ತಜಿಯವರ ಊರ್ಮಿಳೆಯು ಭಾರತ ಸ್ತ್ರೀ ಸಮಾಜಕ್ಕೆ ಕರ್ತವ್ಯ ನಿರ್ವಹಣೆಯ ಪರಿಚಯ ಮಾಡಿಕೊಡಲು ಸಾರ್ಥಕಳಾಗಿದ್ದಾಳೆ.

"ವಹಭೀ ಸಬ ಕುಛ ಜಾನ ಗಯೀ, ವಿವಶ ಭಾವಸೆ ಮಾನ ಗಯೀ"

ಎಂದು ಹೇಳಿ ಕವಿಯು ಒಂದೇ ವಾಕ್ಯದಲ್ಲಿ ಊರ್ಮಿಳೆಯ ಉದಾತ್ತ ಜೀವನದ ಪರಿಚಯ ಮಾಡಿಕೊಟ್ಟಿದ್ದಾರೆ. ಇಂತಹ ಉನ್ನತ ಮಟ್ಟದ ವಿಚಾರಗಳುಳ್ಳ ಊರ್ಮಿಳೆಯ ದರ್ಶನವು ನಮಗೆ ರಾಮಾಯಣ, ರಾಮಚರಿತಮಾನಸ ಮುಂತಾದ ರಾಮಕಾವ್ಯಗಳಲ್ಲಿ ಸಿಗುವುದು ದುರ್ಲಭ. ಪೂರ್ವರಚಿತ ರಾಮಕಾವ್ಯಗಳಲ್ಲಿ ಉಪೇಕ್ಷಿಸಲ್ಪಟ್ಟ ಊರ್ಮಿಳೆಯು ಗುಪ್ತಜಿಯವರ ಸಾಕೇತದಲ್ಲಿ ತನ್ನದೇ ಆದ ಒಂದು ವಿಶಿಷ್ಟ ಜೀವದಾನವನ್ನು ಪಡಿದಿದ್ದಾಳೆ.

ಊರ್ಮಿಳೆಯು ತನ್ನ ಹದಿನಾಲ್ಕು ವರ್ಷದ ಗೃಹವಾಸದ ಪ್ರತಿಯೊಂದು ಕ್ಷಣದಲ್ಲಿಯೂ ಧೈರ್ಯ, ತಾಳ್ಮೆ, ಔದಾರ್ಯ ಪಡೆದಂಥ ಸತಿ ಸಾಧ್ವಿಯಾಗಿದ್ದಾಳೆ. ಆವಳ ಪ್ರತಿಯೊಂದು ಕ್ಷಣವೂ ವಿಯೋಗಾಗ್ನಿಯಲ್ಲಿ ಬೆಂದು ಬೆಂಡಾಗಿದೆ. ಆದರೆ ಆ ಸಹಿಸಲಸಾಧ್ಯ ಕ್ಷಣಗಳನ್ನು ಗೆದ್ದು ಕ್ಷತ್ರಿಯ ಧರ್ಮಕ್ಕೆ ಆದರ್ಶಕ್ಕೆ ಕುಂದು ಬಾರದಂತೆ ಹದಿನಾಲ್ಕು ವರ್ಷ ಜೀವನ ಕಳೆದಿದ್ದಾಳೆ. ಅದೊಂದು ಆವಳಿಗೆ ತಪಸ್ಸಿದ್ಧಿಯ ಮಹಾಯೋಗವೇ ಆಗಿತ್ತು.

ಪುರುಷ ವೇಷಮೆ ಸಾಥ ಚಲೂಂಗಿ ಮೈ ಭೀ ಪ್ಯಾರೇ
ರಾಮಜಾನಕೀ ಸಂಗ ಗಯೆ ಹಮ ಕೆಯ್ಯು ಹೋನ್ಯಾರೇ ॥

ಎಂದು ಉದ್ಗಾರಿಸಿದ ಊರ್ಮಿಳೆ ನಿಜವಾಗಿಯೂ ವೀರಾಂಗಿಣಿಯಾಗಿದ್ದಾಳೆ. ಆವಳಿಗೆ ತನ್ನ ಸ್ತ್ರೀತ್ವದಲ್ಲಿ ಪೂರ್ಣ ಅಭಿಮಾನ ಇದೆ, ವಿಶ್ವಾಸವಿದೆ. ಮೂಕವೇದನೆಯನ್ನು ಸಹಿಸುತ್ತ ಕಾಲಹರಣ ಮಾಡಿದ ಊರ್ಮಿಳೆಯು ಸೀತಾದೇವಿಗಿಂತಲೂ ಹೆಚ್ಚಿನ ತ್ಯಾಗಮಾಡಿದ್ದಾಳೆಂದರೆ ಅತ್ಯೋಕ್ತಿಯಾಗಲಾರದು. ತನ್ನ ಮನಸ್ಸನ್ನು ತನ್ನ ವಶದಲ್ಲಿ ಇಟ್ಟುಕೊಳ್ಳಲು ಹಗಲಿರುಳೂ ಅವಳು ಜಾಗೃತಳಾಗಿದ್ದಾಳೆ.

ಹೆ ಮನ ತೂ ಪ್ರಿಯ ಪಥಕಾ ವಿಘ್ನನ ಬನ
ಆಜ ಸ್ವಾರ್ಥ ಹೈ ತ್ಯಾಗ ಭರಾ. ಹೈ ಅನುರಾಗ–ವಿರಾಗಭರಾ.
ತೂ ವಿಕಾರಸೆ ಪೂರ್ಣ ನ ಹೊ ಶೋಕ ಭಾರಸೆ ಪೂರ್ಣ ನಹೊ
ಮಾತ್ರ ಸ್ನೇಹ ಸುಧಾ ಭರಸೆ. ಭೂ ಪರ ಸ್ವರ್ಗಭಾವ ಸರಸೆ.

ಎಂದು ಹೇಳಿ ತನ್ನ ಪತಿಪರಾಯಣತೆ, ತನ್ನ ಸಾತ್ವಿಕ ಜೀವನದ ಯೋಗ್ಯತೆಯನ್ನು ತೋರಿಸಿಕೊಟ್ಟಿದ್ದಾಳೆ. ಊರ್ಮಿಳೆ ಒಂದೆಡೆ 'ತುಮ್ ವ್ಯತಿರಹೊ ಮೈಸತೀ ರಹೂ' ಎಂದೂ ಹೇಳಿದ್ದಾಳೆ.

ಸೀತಾದೇವಿಯು ತನ್ನ ಪತಿ ಹಾಗು ಮೈದುನನೊಂದಿಗೆ ಇದ್ದು ತನ್ನ ಧರ್ಮ ಪಾಲನೆ ಮಾಡಿದರೆ, ಊರ್ಮಿಳೆಯು ಮನೆಯಲ್ಲಿಯೇ ಇದ್ದು ಸ್ವರ್ಗ ಸೃಷ್ಟಿಯ ಸ್ವಪ್ನದಲ್ಲಿ ಇದ್ದಾಳೆ. ಊರ್ಮಿಳೆ ಸ್ವತಃ ಇಚ್ಛೆಪಟ್ಟಿದ್ದರೆ ಬೇಕಾದಷ್ಟು ಭೋಗ – ವಿಲಾಸದಲ್ಲಿ ಜೀವನವನ್ನು ಕಳೆಯಬಹುದಾಗಿತ್ತು. ಅರಮನೆಯ ಎಲ್ಲ ಸುಖ – ಸಂಪತ್ತುಗಳ ಮಹಾರಾಣಿಯಾಗಿ ಅಧಿಕಾರ ನಡೆಸಬಹುದಾಗಿತ್ತು. ಆದರೆ ಗೃಹಸ್ಥಾಶ್ರಮದಲ್ಲಿದ್ದರೂ ಮಹಾತಪಸ್ವಿನಿಯಾಗಿ ಜೀವನದ ಸುಖ – ಆನಂದ ಪಡೆಯುವ ಹದಿನಾಲ್ಕು ವರ್ಷದ ಅವಧಿಯನ್ನು ಯೋಗಿನಿಯಾಗಿ ಕಳೆದಳು. "ಸೀತಾನೆ ಅಪನಾ ಭಾಗ ಲಿಯಾ ಪರ ಇಸನೆ ವಹ ಭೀ ತ್ಯಾಗ ದಿಯಾ"—

—ಎಂದು ವರ್ಣಿಸಿದ ಕವಿ ಹೃದಯದಲ್ಲಿ ಊರ್ಮಿಳೆಯ ಬಗ್ಗೆ ಸಹಾನುಭೂತಿಯಿದೆ. ಸಂವೇದನೆಯಿದೆ. ಅವಳ ಅನಿರ್ವಚನೀಯ ದುಃಖವು ಅವಳನ್ನು ಮೌನಳನ್ನಾಗಿ ಮಾಡಿತ್ತು. ಈ ಮೂಕ ವೇದನೆಯೇ ಅವಳ ಗೌರವವನ್ನು ದ್ವಿಗುಣಗೊಳಿಸಿ ಅವಳ ಪಾತ್ರವನ್ನು ಕಲ್ಪಾಂತ ಚಿರಸ್ಥಾಯಿಯಾಗುವಂತೆ ಮಾಡಿದೆ. ಊರ್ಮಿಳೆಯ ದುಃಖದ ಪರಿಸ್ಥಿತಿಯನ್ನು ನೋಡಿ, ಯಾರ ಹೃದಯತಾನೇ ದ್ರವಿತವಾಗಲಾರದು? ಊರ್ಮಿಳಾ ದೇವಿಯು ಎಷ್ಟೊಂದು ದುಃಖಿತಳಾಗಿದ್ದಾಳೆಂಬುದನ್ನು ಸೀತಾದೇವಿಯಿಂದಲೇ ಕೇಳಬೇಕು—"ಅಜ ಭಾಗ್ಯ ಜೋ ಹೈ ಮೇರಾ ವಹಭೀ ಹುಆ ನ ಹಾ ತೇರಾ",

ಸ್ತ್ರೀಯು ತನ್ನ ಜೀವನದಲ್ಲಿ ಎಂತಹ ಕಷ್ಟವನ್ನಾದರೂ ಸಹಿಸಬಲ್ಲಳು. ಆದರೆ ಅವಳಿಗೆ ತನ್ನ ಪತಿಯ ವಿರಹವೇದನೆ ಅಸಹನೀಯ. ಈಗ ತಾನೇ ನವವಧು ಊರ್ಮಿಳೆ, ಲಕ್ಷ್ಮಣನನ್ನು ಹೇಗೆ ತಾನೇ ಅಗಲಿ ಇರಲು ಸಾಧ್ಯ? ಅವಳಿಗೆ ಒಮ್ಮೊಮ್ಮೆ ಸ್ತ್ರೀಜನ್ಮದ ಬಗ್ಗೆ ಒಂದು ತರಹದ ಜುಗುಪ್ಸೆ ಬರಹತ್ತಿದೆ.

" ನಿಕಲಿ ಅಭಾಗಿನೀ ಮೈ ಐಸಿ
ತ್ರೈಲೋಕ್ಯಮೆ ನ ಹೋಗೀ ಜೈಸಿ
ದೇಸಕೀ ನ ಸಾಥ ಸಾಥ ಕಾ ಭೀ
ಲೇ ಸಕೀ ನ ಹಾಯ್ ! ಹಾಥ ಕಾ ಭೀ.

ಆದರೆ ಇಂತಹ ಭಾವನೆಗಳ ಮೇಲೆ ಪೂರ್ಣ ಅಧಿಕಾರವಿಟ್ಟಿದ್ದಾಳೆ ಊರ್ಮಿಳೆ. ಅವಳ ಜಯ ಖಂಡಿತ. ಅವಳು ತನ್ನ ಇಂದ್ರಿಯ ನಿಗ್ರಹದಲ್ಲಿ ಪ್ರವೀಣಳು. ಕರ್ತವ್ಯದ ಕೂಗು ಅವಳ ತನುಮನದಲ್ಲಿ ಹಗಲಿರುಳೂ ಕೂಗುತ್ತಲಿದೆ. ಚಿತ್ರಕೂಟದ ಪರ್ಣ

ಕುಟಿಯಲ್ಲಿ ಕೆಲಕಾಲ ಲಕ್ಷ್ಮಣ ಹಾಗೂ ಊರ್ಮಿಳೆಯರ ಭೆಟ್ಟಿಯಾಗುವ ಪ್ರಸಂಗ ಒಂದು. ಆದರೆ ಅಲ್ಲಿ ಅನುರಾಗ– ವಿರಾಗ, ಪ್ರವೃತ್ತಿ – ನಿವೃತ್ತಿ, ಅಥವಾ ಭೋಗ—ತ್ಯಾಗದ ಹಾಗೆ ಕ್ಷಣಿಕ ಭೆಟ್ಟಿಯಾಗುತ್ತದೆ. ಈ ಸಂದರ್ಶನಕ್ಕೆ ದುಃಖದ ಅಂಚಿದೆ· ನಿಸ್ಸೀಮಕರುಣೆ, ಅಗಾಧಸ್ನೇಹ ಹಾಗು ಅದ್ಭುತ ಅನುರಾಗವಿದೆ. ಲಕ್ಷ್ಮಣ –ಊರ್ಮಿಳೆಯರ ಕಂಗಳಲ್ಲಿ ಪ್ರೇಮಾಶ್ರುಗಳ ಅವಿರಳಧಾರೆ ಹರಿಯಲಾರಂಭಿಸಿದೆ. ಊರ್ಮಿಳೆ ತನ್ನ ಸರ್ವಸ್ವವನ್ನೂ ಪತಿಯ ಪಾದಾರವಿಂದಗಳಲ್ಲಿ ಅರ್ಪಿಸಿ, ಅನನ್ಯಭಾವಗಳಿಂದ ನತಮಸ್ತಕಳಾಗುತ್ತಾಳೆ. ಲಕ್ಷ್ಮಣನ ಹೃದಯದಲ್ಲಿ ಬಿರುಗಾಳಿ ಬೀಸುತ್ತಲಿದೆ. ಎರಡು ಹೃದಯಗಳ ಮಿಲನ ಪ್ರಸಂಗವಿದು. ಎರಡು ಹೃದಯಸಾಗರಗಳ ಸಮಾಗಮವಾದ ಸಂದರ್ಭವಿದು. ಲಕ್ಷ್ಮಣನು ತನ್ನ ದೃಷ್ಟಿಯಲ್ಲಿ ತಾನೇ ಇಳಿದು ಬಿಟ್ಟಿದ್ದಾನೆ. ಆಗ ಅವನು ಊರ್ಮಿಳೆಗೆ–

ವನಮೆ ತನಿಕ ತಪಸ್ಯಾ ಕರಕೆ ಬನನೆ ದೊ ಮುಝಕೊ ನಿಜ ಯೋಗ್ಯ
ಭಾಭೀ ಕಿ ಭಗಿನೀ ತುಮ್ ಮೇರೆ ಅರ್ಥ ನಹೀ ಕೇವಲ ಉಪಭೋಗ್ಯ.

ಎಂದು ಹೇಳಿ ಊರ್ಮಿಳೆಗೆ ನಮಸ್ಕರಿಸಿ ತನ್ನ ಹೃದಯಭಾರವನ್ನು ಕಡಿಮೆ ಮಾಡಿಕೊಳ್ಳುತ್ತಾನೆ. ಊರ್ಮಿಳೆ ತನ್ನ ಪತಿಗೆ ಏನೇನೋ ಹೇಳ ಬಯಸುತ್ತಾಳೆ. ಹೃದಯದಲ್ಲಿ ಭಾವನೆಗಳ ಒತ್ತಡ ಹೆಚ್ಚಾಗಿದೆ. ಆದರೆ ಅವಳು.—

ಹಾ ಸ್ವಾಮೀ, ಕಹನಾ ಥಾ ಕ್ಯಾ ಕ್ಯಾ ಕಹ ನ ಸಕೀ ಕರ್ಮೋಂಕಾ ದೋಷ
ಪರ ಜಿಸಮೆ ಸಂತೋಷ ತುಮ್ಹೆ ಹೊ. ಮುಝೆ ಉಸೀಮೆ ಹೈ ಸಂತೋಷ.

ಎಂದು ಹೇಳಿ ಸುಮ್ಮನಾಗುತ್ತಾಳೆ.

ಊರ್ಮಿಳೆಯ ವಿರಹ ವರ್ಣನೆಯಲ್ಲಿಯೇ ಕವಿಯು ಷಟ್ ಋತುಗಳನ್ನು ವರ್ಣಿಸಿದ್ದಾನೆ.

ಈ ಋತುವರ್ಣನೆಗಳಲ್ಲಿಯೂ ಊರ್ಮಿಳೆಯ ಮಾನಸಿಕ ಘಾತ – ಪ್ರತಿಘಾತಗಳ ಸಜೀವ ಚಿತ್ರಗಳನ್ನು ಚಿತ್ರಿಸುವುದರಲ್ಲಿ ಡಾ॥ ಮೈಥಿಲಿಶರಣಗುಪ್ತಜಿಯವರು ಪೂರ್ಣ ಸಫಲತೆಯನ್ನು ಪಡೆದಿದ್ದಾರೆ. ಇಂಥ ವಿಸ್ಕೃತ ವರ್ಣನೆಯು ಬೇರಾವ ರಾಮಕಾವ್ಯದಲ್ಲಿಯೂ ಬಹುಶಃ ಸಿಗಲಾರದು.

ಊರ್ಮಿಳೆಯು ಪ್ರತಿಯೊಂದು ಪಶು – ಪಕ್ಷಿಗಳಿಗೆ ಸ್ವಾತಂತ್ರ್ಯ ನೀಡಲು ಬಯಸುತ್ತಾಳೆ. ಯಾವ ಪಕ್ಷಿಯನ್ನೂ ಪಾರತಂತ್ರ್ಯದಲ್ಲಿಡಲು ಅವಳಿಗೆ ಎಳ್ಳಷ್ಟು ಮನಸ್ಸಿಲ್ಲ.

"ಸಖೀ ವಿಹಗ ಉಡಾದೆ, ಹೊ ಸಭೀ ಮುಕ್ತಿ ಮಾನೀ:
ಸುನ ಶತ ಶುಕ ವಾಣೀ—ಹಾಯ್! ರೂಠೊ ನ ರಾನೀ"

ಅವಳಿಗೆ ಊಟದಲ್ಲಿಯೂ ಕೂಡಾ ರುಚಿ – ಶುಚಿ ಇಲ್ಲದಂತಾಗಿದೆ. ಅವಳ ಸಖಿಯು ಅವಳಿಗಾಗಿ ಖೀರು ಮಾಡಿತಂದರೂ ಅದನ್ನು ನಿಸ್ಸಂಕೋಚವಾಗಿ ತಿರಸ್ಕರಿಸುತ್ತಾಳೆ, ಸಖಿಯ ಒತ್ತಾಯದಿಂದ ಅತೀ ವಿವಶಳಾಗಿ ಆ ಖೀರನ್ನು ಕುಡಿಯುತ್ತಾಳೆ. ಆದರೆ

ಕಹ್ವೆ ಜೋ ಮಾನೂ ಸೊ, ಕಿಸ್ ವಿಧಿ ಬತಾ ಧೀರಜ ಧರೂಂ
ಅರೀ ಕೈಸೆ ಭೀ ತೋ ಪಕಡ ಪ್ರಿಯ ಕೆ ವೆ ಪದ ಮರೂಂ

ಎಂದ ವಿಲಾಪಿಸುತ್ತಾಳೆ. ಪ್ರಿಯ ಪತಿಯಚರಣ ಹಿಡಿದಲ್ಲಿ ಮರಣ ಹೊಂದಿದರೂ ಸರಿ ಎನ್ನುತ್ತಾಳೆ ಊರ್ಮಿಳೆ.

ದುಃಖಿಪಟ್ಟವರಿಗೆ ಗೊತ್ತು ದುಃಖದ ಬೆಲೆ. ಹೀಗಾಗಿ ಊರ್ಮಿಳೆ ತನ್ನಂತೆ ದುಃಖಪಟ್ಟ ಜೀವಗಳೊಂದಿಗೆ ಸಮಭಾಗಿಯಾಗಬೇಕೆಂದು ಅಪೇಕ್ಷಿಸುತ್ತಾಳೆ.

ಪ್ರೋಷಿತ ಪತಿಕಾಯೆಂ ಹೊಂ
ಜಿತನೀ ಭೀ ಸಖೀ,ಉನ್ಹೆ ನಿಮಂತ್ರಣ ದೆ ಆ!

ಅವಳಿಗೆ ವೇದನೆಯಿಂದ ಬೇಸರವಿಲ್ಲ. ತನ್ನ ಅಳಲನ್ನು ಅನ್ಯರಲ್ಲಿ ನಿವೇದಿಸಲು ಇಷ್ಟಪಟ್ಟಿರುವುದಿಲ್ಲ. ತನ್ನ ಘನವಾದ ಇಚ್ಛೆಯನ್ನು ವಿರಹವೇದನೆಯಲ್ಲಿಯೇ ಪಡೆಯುತ್ತಾಳೆ. ವೇದನೆಯೇ ಅವಳ ಜೀವದ ಜೀವಾಳವಾಗಿದೆ.

ವೇದನೆ ತೂ ಭೀ ಭಲೀ ಬನೀ !
ಪಾಯಿ ಮೈನೆ ಆಜ ತುಝಿಮೆ ಅಪನೀ ಚಾಹ ಘನೀ॥
ನಯಿ ಕಿರಣ ಛೋಡೀ ಹೈ ತೂನೆ, ತೂ ವಹ ಹೀರಕನೀ ॥

* * *

ಮನ–ಸಾ ಮಾನಿಕ ಮುಝೆ ಮಿಲಾ ಹೈ ತುಝಮೆ ಉಪಲಖನೀ
ತುಝೆ ತಭೀ ಛೋಡೂಂ, ಜಬ ಸಜನೀ ಪಾಂವೂ ಪ್ರಾಣ ಧನೀ

ಎಂದು ಹೇಳುತ್ತ ತನ್ನ ಜೀವನದಲ್ಲಿದ್ದ ವೇದನೆಯ ಮಹತ್ವವನ್ನು ನಿರ್ಬಂಧವಾಗಿ ವ್ಯಕ್ತಪಡಿಸುತ್ತಾಳೆ. ವೇದನೆಯಿಂದ ಅವಳ ಗೌರವ ಯೋಗಿನಿಯ ಮಟ್ಟಕ್ಕೆ ಹೋಗಿದೆ. ಈ ಜೀವನದಲ್ಲಿ ಕೇವಲ ದುಃಖವಿಲ್ಲ. ದುಃಖದೊಂದಿಗೆ ಸುಖವೂ ಇದೆ ಎಂಬ ವಿಚಾರ ಅವಳಿಗೆ ಇದೆ. ವಿಯೋಗವಿದ್ದಲ್ಲಿ ಮಿಲನವೂ ಇದೆ ಎಂಬ ಕಲ್ಪನೆ ಅವಳಲ್ಲಿ ಒಡಮೂಡಿದೆ.

ವಿರಹಸಂಗ ಅಭಿಸಾರ ಭೀ
ಭಾರ ಜಹಾಂ ಆಭಾರ ಭೀ

ಅವಳ ವಿರಹವು ಕೇವಲ ವ್ಯಕ್ತಿಗತವಾಗಿಲ್ಲ. ಅದು ಸಮಸ್ತ ಸಾಮಾನ್ಯರನ್ನೇ ವ್ಯಾಪಿಸಿದೆ. ಪತಂಗಗಳು ದೀಪದ ಮೇಲೆ ಬಿದ್ದು ಸತ್ತರೆ ಅವಳ ಮನಸ್ಸಿಗೆ ಅತೀವ ನೋವು ಆಗುತ್ತದೆ. ದೀಪಕ್ಕೂ ಪತಂಗಗಳಿಗೂ ಎಷ್ಟೊಂದು ಪ್ರೇಮ! ಪತಂಗಗಳಲ್ಲಿರುವ ಆತ್ಮಾರ್ಪಣೆಯು ಪವಿತ್ರಭಾವವಿದೆ. ದೀಪಕ್ಕೂ ಪತಂಗಗಳನ್ನು ಕಂಡರೆ ಅಷ್ಟೇ ಪ್ರೇಮ.

ದೋನೋಂ ಚಿರ ಪ್ರೇಮ ಪಲತಾ ಹೈ
ಸಖಿ, ಪತಂಗ ಭೀ ಜಲತಾ ಹೈ, ಹಾ! ದೀಪಕ ಭೀ ಜಲತಾ ಹೈ

ಕವಿ ಮೈಥಿಲೀಶರಣ ಗುಪ್ತರವರು ಊರ್ಮಿಳೆಯ ಮಾನಸಿಕ ವೇದನೆಯ ಸೂಕ್ಷ್ಮಾತಿಸೂಕ್ಷ್ಮ ಚಿತ್ರವನ್ನು ಚಿತ್ರಿಸಿದ್ದಾರೆ. ಪ್ರತಿಯೊಂದು ಭಾವ ಪ್ರಧಾನ ಸಂದರ್ಭಗಳಲ್ಲಿ ಕವಿ ತನ್ನ ಸೂಕ್ಷ್ಮ ದೃಷ್ಟಿಯ ಪರಿಚಯ ಮಾಡಿಕೊಟ್ಟಿದ್ದಾರೆ. ಊರ್ಮಿಳೆಯ ವಿರಹದಲ್ಲಿ ದ್ವೇಷ – ಈರ್ಷೆಗಳಿಗೆ ಯಾವ ಸ್ಥಾನವೂ ಇಲ್ಲ. ಅವಳ ವಿರಹದಲ್ಲಿ ಮಾನವತೆಗಾಗಿ ಕರೆಯಿದೆ. ವಿಶ್ವ ವ್ಯಾಪ್ತ ವಿರಹ ಅವಳ ವಿರಹದಲ್ಲಿ ಲೀನವಾಗಿದೆ. ಅದರಲ್ಲಿ ಒಂದು ಗರಿಮೆಯಿದೆ. ಒಂದು ಲಯವಿದೆ.

ಲೇಕರ ಮಾನೋ ವಿಶ್ವ ವಿರಹ ಉಸ ಅಂತಸ್ತಲಮೆ
ಸಮಾರಹೇ ಥೆ ಏಕ ದೂಸರೆ ಕೆ ವೆ ಉರ ಮೆ!

ಈ ರೀತಿಯಾಗಿ ಕವಿಕುಲ ಶ್ರೇಷ್ಠ ಮೈಥಿಲಿ ಶರಣಗುಪ್ತರವರು ಊರ್ಮಿಳೆಯ ಸಜೀವ ಚಿತ್ರಣವನ್ನು ಮಾಡಿ ರಾಮಕಾವ್ಯದಲ್ಲಿ ತಮ್ಮದೇ ಆದ ಒಂದು ವಿಶಿಷ್ಟವಾದ ದಾಖಲೆಯನ್ನು ಸ್ಥಾಪಿಸಿದ್ದಾರೆ.

—ಆಕಾಶವಾಣಿಯವರ ಕೃಪೆಯಿಂದ

ಹೆಚ್ಚಿಗೆ ದೊರೆತ ಚೆನ್ನಬಸವೇಶ್ವರರ ವಚನಗಳು

ಸಂ : ಎಸ್. ಉಮಾಪತಿ

ಅರ್ಥ ಪ್ರಾಣ ಅಭಿಮಾನವ ಕೊಟ್ಟು ಕರ್ತ ಭೃತ್ಯನ ಮನೆಯ ಬಾಗಿಲಿಗೆ ಹೋಗಿ ಮಾಡಿಸಿಕೊಡೂ ಎಂದು ಉಪಾಧಿಕೆಯ ನುಡಿದರೆ ಕರ್ತತನ ಅಂದೆ ಹಾಳು. ಅದೇನು ಕಾರಣವೆಂದರೆ ಕರ್ತನಿದ್ದೆಡೆಗೆ ಭೃತ್ಯನೆ ಬಂದು ದೀರ್ಘದಂಡ ನಮಸ್ಕಾರವ ಮಾಡಿ ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡಬಲ್ಲಾತನೇ ಭಕ್ತ. ಮಾಡಿಸಿಕೊಂಬಾತನೇ ಜಂಗಮ. ಕೂಡಲ ಚೆನ್ನಸಂಗಮ ದೇವರಲ್ಲಿ ಮೀರಿದ ಸ್ವಯಸ್ಥಲಿ ಅಪೂರ್ವ. ॥1॥

ಅರಿವನರಿಯದ ಅಜ್ಞಾನ ದೀಕ್ಷೆಯರು. ಗುರುದೀಕ್ಷೆಯರು ಗುರುಶಿಷ್ಯರೆಲ್ಲ ಭವಕ್ಕೆ ಬಂದರಲ್ಲಾ ! ಅದೇನು ಕಾರಣವೆಂದರೆ ಅರಿವಿಲ್ಲದವರಿಗೆ ಆಚಾರವಿಲ್ಲ. ಆಚಾರವಿಲ್ಲದವರಿಗೆ ಗುರುವಿಲ್ಲ. ಗುರುವಿಲ್ಲದವರಿಗೆ ಲಿಂಗವಿಲ್ಲ. ಲಿಂಗವಿಲ್ಲದವರಿಗೆ ಜಂಗಮವಿಲ್ಲ. ಜಂಗಮವಿಲ್ಲದವರಿಗೆ ಪ್ರಸಾದವಿಲ್ಲ. ಪ್ರಸಾದವಿಲ್ಲದವರಿಗೆ ಗಣತ್ವವಿಲ್ಲ. ಅರುಹುಸಾಹಿತ್ಯರಿಗೆ ಆಚಾರ ಸಾಹಿತ್ಯ. ಆಚಾರಸಾಹಿತ್ಯರಿಗೆ ಗುರು ಸಾಹಿತ್ಯ, ಗುರುಸಾಹಿತ್ಯರಿಗೆ ಲಿಂಗ ಸಾಹಿತ್ಯ. ಲಿಂಗಸಾಹಿತ್ಯರಿಗೆ ಜಂಗಮ ಸಾಹಿತ್ಯ. ಜಂಗಮ ಸಾಹಿತ್ಯರಿಗೆ ಪ್ರಸಾದ ಸಾಹಿತ್ಯ. ಪ್ರಸಾದಸಾಹಿತ್ಯರಿಗೆ ಗಣ ಸಾಹಿತ್ಯ, ಅರು–ಹೊಂದು ಉಳ್ಳವರಿಗೆ ಈ ಅರುಹುಂಟು. ಅರಿವಿಲ್ಲದವರಿಗೆ ಇವೇನು ಇಲ್ಲ. ಕೂಡಲ ಚೆನ್ನ ಸಂಗಮ ದೇವರಲ್ಲಿ ಕಳಶಕಾರಣದಿಕ್ಕೆ ಜಂಗಮಸ್ಥಳ ಅಪೂರ್ವ ॥2॥

ಆದಿಯಲ್ಲಿ ಪಿಂಡ, ಅನಾದಿಯಲ್ಲಿ ಪ್ರಾಣ. ಎರಡನು ಸದ್ಗುರು ಸ್ವಾಮಿ ಏಕಾರ್ಥವ ಮಾಡಿದಲ್ಲಿ: ಪಿಂಡದಲ್ಲಿ ಲಿಂಗ ಸಾಹಿತ್ಯ. ಪ್ರಾಣದಲ್ಲಿ ಜಂಗಮ ಸಾಹಿತ್ಯ. ಎರಡರ ಏಕಾರ್ಥದ ಕೊನೆಯ ಮೊನೆಯ ಮೇಲೆ ಪ್ರಸಾದ ಸಾಹಿತ್ಯ. ಪ್ರಾಣಲಿಂಗ ಪ್ರಸಾದ ಪರಿಹಿತವಾಗಿ. ಓಗರ ಪ್ರಸಾದವೆಂದುಕೊಂಡರೆ ಕಿಲ್ಬಿಷ ಕೂಡಲ ಚೆನ್ನ ಸಂಗಮ ದೇವಯ್ಯ ಹುಳುಗೊಂಡದಲ್ಲಿಕ್ಕುವಾ ॥3॥

ಇವನು ಕೇಳಿದರೇನು ಆಸೆ ದುರಾಸೆ ಬಿಡದು. ಮಜ್ಜನಕ್ಕೆ ನೀಡಿ ಫಲವೇನು. ಲಾಂಛನ ಕಾಂಚನಕ್ಕೆ ಕಯ್ಯ ನೀಡುವ ಲಾಂಛನದ ಭಂಡರ ಮೆಚ್ಚುವನೆ ಕೂಡಲ ಚೆನ್ನ ಸಂಗಮದೇವಾ. ॥4॥

ಎಲ್ಲವಕ್ಕಿಂದ ಪಾಪಿ ಕಷ್ಟ. ಪಾಪಿಗಿಂದ ದರಿದ್ರ ಕಷ್ಟ. ದರಿದ್ರಗಿಂದ ಭಂಗಿ ಭಕ್ಷಕ ಕಷ್ಟ. ಭಂಗಿಭಕ್ಷಕಗಿಂದ ಅಪುನಿ ಭಕ್ಷಕ ಕಷ್ಟ. ಅಪುನಿ ಭಕ್ಷಕಗಿಂದ ಸುರಾಪಾನಿ ಕಷ್ಟ, ಸುರಾಪಾನಿ ಭಕ್ಷಕನಿಂದ ಅಮಲು ಕಷ್ಟ, ಅಮಲಕಿಂದ ಭವಿ ಕಷ್ಟ. ಅದೇನು ಕಾರಣವೆಂದರೆ ಭವಿ ಎಂಭತ್ತುನಾಲ್ಕು ಜೀವರಾಶಿಯೊಳು ಬರುತ್ತಿಪ್ಪನು. ಆ ಭವಿ ಬಾರದ ಯೋನಿಯಿಲ್ಲ. ಭವಿ ಕೇಳದ ಆಹಾರವಿಲ್ಲ. ಭವಿ ಮೆಟ್ಟದ ಭೂಮಿಯಿಲ್ಲ. ಇಂತೀ ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ ಮರಳಿ ಭವಿಯ ಬೆರಸಿದ ಬಳಿಕ ನಾಯಕನರಕ ತಪ್ಪದು ಕೂಡಲಚೆನ್ನಸಂಗಮದೇವಾ ॥5॥

ಗುರುವಾದರೂ ಕೇಳಲುಬೇಕು, ಲಿಂಗವಾದರೂ ಕೇಳಲು ಬೇಕು. ಜಂಗಮ ವಾದರೂ ಕೇಳಲು ಬೇಕು. ಪಾದೋದಕವಾದರೂ ಕೇಳಲು ಬೇಕು. ಪ್ರಸಾದವಾದರೂ ಕೇಳಲು ಬೇಕು, ಕೇಳದೆ ಹುಸಿ ಕೊಲೆ ಕಳುವು ಪರದಾರ ಪರಧನ, ಪರಸತಿಗಳುಪುವ ಭಕ್ತ ಜಂಗಮ ಒಂದೆ ಎಂದು ಏಕೀಕರಿಸಿ ನುಡಿದರೆ ಆ ಭಕ್ತ ಭಕ್ತಿ ಸ್ಥಳಕ್ಕೆ ಸಲ್ಲನು. ಆ ಜಂಗಮ ಮುಕ್ತಿ ಸ್ಥಳಕ್ಕೆ ಸಲ್ಲನು. ಕೂಡಲ ಚೆನ್ನ ಸಂಗಮದೇವಾ ನೀ ಸಾಕ್ಷಿ ಇವರ ಕಾಗೆಯು ಬಳಗವೆಂದಾ ॥6॥

ಆಚಾರವಿಲ್ಲದ ಗುರು ನರ. ಆಚಾರವಿಲ್ಲದ ಲಿಂಗ ಕಲ್ಲು. ಆಚಾರವಿಲ್ಲದ ಜಂಗಮ ಮನುಷ್ಯ. ಆಚಾರವಿಲ್ಲದ ತೀರ್ಥ ಉದಕ. ಆಚಾರವಿಲ್ಲದ ಪ್ರಸಾದ ಓಗರ. ಆಚಾರವಿಲ್ಲದ ಭಕ್ತ ನಾಯಿ. ಸತ್ಯಸದಾಚಾರವುಳ್ಳ ಭಕ್ತನ ಮನೆಯ ಹೊಕ್ಕು ಲಿಂಗಾರ್ಚನೆಯ ಮಾಡುವುದು, ಸತ್ಯಸದಾಚಾರವುಳ್ಳ ಜಂಗಮದಲ್ಲಿ ಪಾದೋದಕ ಪ್ರಸಾದವ ಕೊಂಡು ಅನುಭಾವವ ಕೇಳುವುದು ಕೂಡಲ ಚೆನ್ನಸಂಗಮದೇವಾ ನೀ ಸಾಕ್ಷಿಯಾಗಿ ॥7॥

ನೆಲ ಶುದ್ಧವೆಂಬೆನೆ ನೆಲ ಶುದ್ಧವಲ್ಲಾ. ಅದೇನು ಕಾರಣವೆಂದರೆ ನೆಲದೊಳಗೆ ನಾಲ್ವತ್ತೆರಡು ಲಕ್ಷ ಜೀವರಾಶಿಗಳು ಉತ್ಪತ್ಯ ಸ್ಥಿತಿ ಲಯವಾದ ಕಾರಣ ನೆಲಶುದ್ಧವಲ್ಲ ನಿಲ್ಲು. ಜಲ ಶುದ್ಧವೆಂಬೆನೆ ಜಲ ಶುದ್ಧವಲ್ಲ. ಅದೇನು ಕಾರಣವೆಂದರೆ ಜಲದೊಳಗೆ ನಾಲ್ವತ್ತೆರಡು ಲಕ್ಷ ಜೀವರಾಸಿಗಳು ಉತ್ಪತ್ಯ ಸ್ಥಿತಿ ಲಯವಾದ ಕಾರಣ ಜಲಶುದ್ಧವಲ್ಲ ನಿಲ್ಲು. ಮನ ಶುದ್ಧವೆಂಬೆನೆ ಮನ ಶುದ್ಧವಲ್ಲ. ಅದೇನು ಕಾರಣವೆಂದರೆ, ಅಷ್ಟದಳ ಕಮಲದ ಹಂಸನ ನಿಲವನರಿಯದು ಕಾರಣ ಮನ ಶುದ್ಧವಲ್ಲ ನಿಲ್ಲು. ನಯನ ಶುದ್ಧ ವೆಂಬೆನೆ ನಯನ ಶುದ್ಧವಲ್ಲ. ಅದೇನು ಕಾರಣವೆಂದರೆ ನೋಟದಲ್ಲಿ ನೋಡಿ ಭಾವದಲ್ಲಿ ಕಾಡುವನ್ನಕ್ಕ ನಯನ ಶುದ್ಧವಲ್ಲ ನಿಲ್ಲು. ಹಸ್ತ ಶುದ್ಧವೆಂಬನೆ ಹಸ್ತ ಶುದ್ಧವಲ್ಲ. ಅದೇನು ಕಾರಣವೆಂದರೆ ಒಂದು ಹಸ್ತಜಿಹ್ವೆಯುಲಾಡುವುದು ಒಂದು ಹಸ್ತ ಗುಹ್ಯವಲ್ಲಾ ಡುವುದು. ಕಾರಣ ಹಸ್ತ ಶುದ್ಧವಲ್ಲ ನಿಲ್ಲು. ಇಂತೀ ಶುದ್ಧವಿಲ್ಲ ಎಂದು ಅರಿತು ಸಕಲ ಪದಾರ್ಥವನೆಲ್ಲ ಜಂಗಮಕ್ಕೆ ಕೊಟ್ಟು ಕೊಂಬಾತನೇ ಶುದ್ಧಶೀಲವಂತ. ಅದೇನು

ಕಾರಣವೆಂದರೆ ಭಕ್ತನು ಹೊನ್ನು ಹೆಣ್ಣು ಮಣ್ಣು ತ್ರಿವಿಧ ಮಲವ ಹಿಡಿದು ಆತ[ಅ]ಶುದ್ಧ! ಜಂಗಮ ತ್ರಿವಿಧ ಮಲವ ಬಿಟ್ಟು ಆತ ಶುದ್ಧ. ಭಕ್ತ ಅಹಂಕಾರಿ ಜಂಗಮ ನಿರಹಂಕಾರಿ. ಭಕ್ತ ದೇಹಿಕ. ಜಂಗಮ ನಿರ್ದೇಹಿಕ. ಭಕ್ತಂಗೆ ಭಯ, ಜಂಗಮಕ್ಕೆ ನಿರ್ಭಯ. ಭಕ್ತ ಆಶಕ, ಜಂಗಮ ನಿರಾಶಕ, ಭಕ್ತಂಗೆ ನಾನಾ ಚಿಂತೆ. ಜಂಗಮಕ್ಕೆ ನಿಶ್ಚಿಂತೆ, ಇಂತೀ ನಿಶ್ಚಿಂತ ಜಂಗಮ ದೇವರಲ್ಲಿ ಸಕಲ ಪದಾರ್ಥವ ಕೊಟ್ಟು ಕೊಂಡರೆ ಆ ಭಕ್ತನ ತನು ಶುದ್ಧ. ಮನ ಶುದ್ಧ, ಧನ ಶುದ್ಧ, ಸಿದ್ಧ ಪ್ರಸಿದ್ಧ ಕೂಡಲ ಚೆನ್ನಸಂಗಮ ದೇವಾ ॥8॥

ಒಂದಕ್ಕೆ ಒಂಭತ್ತು ನುಡಿದು ಕಣ್ಣು ಕೆಚ್ಚನೆ ಮಾಡಿಕೊಂಡು ಕುಣಿದು ಕೂಗುವರಿಗೆ ನಾನಂಜುವೆ! ನಾನಂಜುವೆ! ನಾನೋಸರಿಸುವೆನಯ್ಯಾ! ನಾನೋಡಿದೆನೆಂಬ ಭಂಗ ನನಗಾದರೂ ಆಗಲಿ, ನಿಮ್ಮ ಜ್ಞಾನಿಗಳಿಲ್ಲದ ಅಜ್ಞಾನಿಗಳಿದ್ದ ಊರ ಹೊಲ ಮೇರೆಯ ಬಿಟ್ಟು ಓಡುವೆನಯ್ಯಾ ! ಕೂಡಲ ಚೆನ್ನಸಂಗಮದೇವಾ ! ॥9॥

ಗೆದ್ದಲು ಮನೆಯ ಮಾಡಿದರೆ ಹಾವು ಇಂಬುಗೊಂಡಿತ್ತು. ವೇಶಿ ಮನೆಯ ಮಾಡಿದರೆ ಎಂಜಲಿಂಬುಗೊಂಡಿತ್ತು. ಬಸವಣ್ಣ ಮನೆಯ ಮಾಡಿದರೆ ಪ್ರಸಾದ ಇಂಬುಗೊಂಡಿತ್ತು ಕೂಡಲ ಚೆನ್ನಸಂಗಮದೇವಾ ॥10॥

ಗುರುವೆಂಬುದು ತಪ್ಪು. ಲಿಂಗವೆಂಬುದು ತಪ್ಪು, ಜಂಗಮವೆಂಬುದು ತಪ್ಪು. ಈ ತ್ರಿವಿಧ ಭೇದದ ಸಕೀಲದ ಸಂಬಂಧವ ಬಲ್ಲರೆ ಈ ಲೋಕವೇನು? ಆ ಲೋಕವೇನು? ಇಲ್ಲಿದ್ದು ಅಲ್ಲಿಗೆ ಹೋದರೇನು? ಅಲ್ಲಿದ್ದು ಇಲ್ಲಿಗೆ ಬಂದರೇನು? ಈರೇಳುಭುವನ ಹದಿನಾಲ್ಕು ಲೋಕದ ಹದಿನೆಂಟು ಧಾನ್ಯದ ನಿರಾಯುವ ಬಿಟ್ಟು ಲಿಂಗಸಾರಾಯದ ಯೋಗಿಯಾದರೆ ಆತನೆ ಲಿಂಗ, ಆತನಿದ್ದುದೇ ಕೈಲಾಸ. ಕೂಡಲ ಚೆನ್ನಸಂಗಮದೇವಾ ॥11॥

ಎಲೆಯಯ್ಯ ಸಜ್ಜನ ಸದ್ಭಾವಿಗಳ ಸಂಭಾಷಣೆಯಿಂದ ಮಹಾನುಭಾವಿಗಳ ಕಾಣಬಹುದು, ಮಹಾನುಭಾವಿಗಳ ಸಂಭಾಷಣೆಯಿಂದ ಶ್ರೀಗುರುವ ಕಾಣಬಹುದು. ಶ್ರೀಗುರುವಿನ ಸಂಭಾಷಣೆಯಿಂದ ಲಿಂಗವ ಕಾಣಬಹುದು. ಲಿಂಗದ ಸಂಭಾಷಣೆಯಿಂದ ಜಂಗಮವ ಕಾಣಬಹುದು. ಜಂಗಮದ ಸಂಭಾಷಣೆಯಿಂದ ಆಚಾರವ ಕಾಣಬಹುದು. ಆಚಾರದ ಸಂಭಾಷಣೆಯಿಂದ ತನ್ನ ಕಾಣಬಹುದು. ಇದು ಕಾರಣ ಕೂಡಲ ಚೆನ್ನಸಂಗಮದೇವಾ ನಿಮ್ಮ ಸಜ್ಜನ ಸದ್ಭಾವಿಗಳ ಸಂಭಾಷಣೆಯನೆ ಕರುಣಿಸುವುದು, ॥12॥

ಕಾಡಸೊಪ್ಪ ನಾಡ ಮೇಕೆ ತಿಂದಿರದೆ? ಉಡು ಏಕಾಂತವಾಸದಲ್ಲಿ ಇರದೆ? ಮಂಡೂಕ ಮೌನಿಯದೆ? ತುರಗ ಬ್ರಹ್ಮಚಾರಿಯೆ? ತೋಳ ದಿಗಂಬರನೆ? ಬಾವಲಿ

ತಲೆಕೆಳಗಾಗಿರೆ ತಪಸ್ವಿಯೆ? ಕೇಳಯ್ಯ ಕೂಡಲ ಚೆನ್ನಸಂಗಮದೇವಯ್ಯ, ನಿಮ್ಮ–ನರಿಯ(ದ) ವಿರಕ್ತಿಕೆ ಹೊರಗೆ ಲಂಪಟಿ ಒಳಗೆಲ್ಲ ಸಟಿಪಟಿ ॥13॥

ತನುಕಾಮಿಯಾಗದೆ ಮನಕಾಮಿಯಾಗದೆ ಧನಕಾಮಿಯಾಗದೆ ಅಶನ ವ್ಯಸನ ಕಾಮಿಯಾಗದೆ ಲಿಂಗಕಾಮಿಯಾದರೆ ಕೂಡಲ ಚನ್ನಸಂಗಯ್ಯನೆಂಬೆ. ॥14॥

ಹೊನ್ನಕಾಮಿಯಾಗದೆ ಹೆಣ್ಣಕಾಮಿಯಾಗದೆ ಮಣ್ಣಕಾಮಿಯಾಗದೆ. ಅಶನ–ಕಾಮಿಯಾಗದೆ ವ್ಯಸನಕಾಮಿಯಾಗದೆ, ಲಿಂಗಕಾಮಿಯಾದರೆ ಕೂಡಲ ಚೆನ್ನಸಂಗಯ್ಯ–ನೆಂಬೆ. ॥15॥

ಸತ್ಯವೆ ಗುರು, ಸದಾಚಾರವೇ ಶಿಷ್ಯ. ಅರುಹೆ ಲಿಂಗ–ಕೂಡಲ ಚೆನ್ನಸಂಗಮ ದೇವಾ ನೀ ಸಾಕ್ಷಿಯಾಗಿ ॥16॥

ನಡೆಯಿಲ್ಲದವರ ನುಡಿಯೆಲ್ಲ ಹಯನು ಬರಡಾದಂತೆ. ನಡೆಯುಳ್ಳವರ ನುಡಿಯೆಲ್ಲ ಬರಡು ಹಯನಾದಂತೆ, ಅವರು ಗಡಣಿಸಿ ನುಡಿವ ವಚನ ಎನ್ನ ಶ್ರೋತ್ರಕ್ಕೆ ಸೊಗಸದಯ್ಯ! ಅವರ ನೋಡುವರೆ ಎನ್ನ ಕಣ್ಣು ಮನದಿಚ್ಛೆಯಾಗದಯ್ಯ! ಮಂಡೆ ಬೋಳಿಸಿ ಕುಂಡೆ ಬೆಳಸಿರೆ, ಖಂಡ ಮೈಯೊಳಗೆ ಬೆಳೆದಿರೆ, ಕಂಡು, ಕಂಡು ವಂದಿಸುವರೆ ಎನ್ನ ಮನ ನಾಚಿತ್ತು ನಾಚಿತ್ತಯ್ಯ! ಜಡೆಯ ತೋರಿ ಮುಡಿಯ ತೋರಿ ಅಡಿಗಡಿಗೊಮ್ಮೆ ಎಡೆ ಮಾಡಿದರೆ ಇಲ್ಲವೆನ್ನೆ. ಕಡು ಕೋಪವ ತಾಳುವ ಮಡಿಯ ಹೊಲೆಯರ ಗುರುವಾದರೂ ಗುರುವೆನ್ನೆ. ಲಿಂಗವಾದರೂ. ಲಿಂಗವೆನ್ನೆ! ಜಂಗಮ ವಾದರೂ ಜಂಗಮವೆನ್ನೆ! ಎನ್ನ ಮನದೊಡೆಯ ಕೂಡಲ ಚೆನ್ನಸಂಗಮದೇವಾ॥17॥

ನಾನು ಜಂಗಮ ತಾನು ಜಂಗಮವೆಂಬರು. ಜಂಗಮ ಜಂಗಮವೆಂದೇನೊ? ಕಾರ್ಯ ಕಾರಣನೆ ಜಂಗಮ. ಜಂಗಮವೆಂದೇನೋ? ಸ್ತ್ರೀಯರ ಲಂಪಟನೆ ಜಂಗಮ? ಈ ಸದ್ಗುಣದಿಚ್ಛಕರ ಗುರುವಾದರೂ ಗುರುವನ್ನ! ಲಿಂಗವಾದರೂ ಲಿಂಗವೆನ್ನೆ. ಜಂಗಮವಾದರೂ ಜಂಗಮವನ್ನೆ. ಗುರುಲಿಂಗ ಜಂಗಮವೊಂದೆನಾದರೆ ನಾಯಕ ನರಕ ತಪ್ಪದು.

ಜಂಗಮವೆಂತೆಂದರೆ ನಿರ್ಲೇಪಕ ಜಂಗಮ. ನಿರುಪಾಧಿಕ ಜಂಗಮ. ನಿರ್ಲೋಭಕ ಜಂಗಮ. ನಿರಾಶ್ರಿತ ಜಂಗಮ. ನಿಷ್ಕರುಣ ಜಂಗಮ–ಇಂತೀ ಸದ್ಗುಣ ಭರಿತ ನಿರಾಶ್ರಿತ ಜಂಗಮ. ಇಂತಪ್ಪ ಜಂಗಮ ಪ್ರಭುದೇವರಿಗೆ ಶರಣೆಂದು ಬದುಕಿದ ಬಸವಣ್ಣ. ಅವರಿಬ್ಬರು ಒಕ್ಕು ಮಿಕ್ಕುದನುಂಡು ಬದುಕಿದೆ ಕೂಡಲ ಚೆನ್ನಸಂಗಮದೇವಾ.॥18॥

ಜ್ಞಾನದ ಬಲದಿಂದ ಅಜ್ಞಾನ ಕೆಟ್ಟು ಕೇಡ ನೋಡಯ್ಯಾ! ಜ್ಯೋತಿಯ ಬಲದಿಂದ ಕತ್ತಲೆ ಕೆಟ್ಟು ಕೇಡ ನೋಡಯ್ಯಾ! ಸತ್ಯದ ಬಲದಿಂದ ಅಸತ್ಯ ಕೆಟ್ಟು

ಕೇಡ ನೋಡಯ್ಯಾ! ಪರುಷದ ಬಲದಿಂದ ಲೋಹ ಕೆಟ್ಟು ಕೇಡ ನೋಡಯ್ಯಾ! ನಿಮ್ಮ ಶರಣರ ಜ್ಞಾನದ ಬಲದಿಂದ ನನ್ನ ಭವ ಭವಂಗಳೆಲ್ಲ ಕೆಟ್ಟುಕೇಡ ನೋಡಯ್ಯಾ! ಕೂಡಲ ಚೆನ್ನಸಂಗಮದೇವಾ ॥19॥

ಶೀಲ ಶೀಲವೆಂಬರು: ಶೀಲ ಭಕ್ತಿಯೊಳಗಲ್ಲ. ಅದೇನು ಕಾರಣವೆಂದರೆ ಧಾನ್ಯ ಧರೆಗೆ ಎಂಜಲು. ಅಪ್ಪುವಣ ಮೇಘದೆಂಜಲು. ಪರಿಮಳ ವಾಯುವಿನೆಂಜಲು. ಪಾಕ ಅಗ್ನಿ ಎಂಜಲು. ಕಯ್ಯೊಳಗೆ ಸೊಡರ ಪಿಡಿದು ಕಣ್ಣುಕಾಣದೆ ಎಡಹಿ ಬೀಳುವ ಕುಟಿಲ ಶೀಲರ ಮೆಚ್ಚುವನೆ ಕೂಡಲ ಚೆನ್ನಸಂಗಮದೇವಾ ॥20॥

ಸತ್ಯವುಳ್ಳವರಿಗೆ ತತ್ವದ ಹಂಗೇಕೆ, ಅರಿವುಳ್ಳವರಿಗೆ ಅಪ್ಪುವಣೆಯ ಹಂಗೇಕೆ, ಮನಶುದ್ಧವುಳ್ಳವರಿಗೆ ಮಂತ್ರದ ಹಂಗೇಕೆ. ಭಾವಶುದ್ಧವುಳ್ಳವರಿಗೆ ಪತ್ರೆ ಪುಷ್ಪದ ಹಂಗೇಕೆ. ನಿಮ್ಮ ನರಿದ ಶರಣಂಗೆ ನಿಮ್ಮ ಹಂಗೇಕೆ? ಕೂಡಲ ಚೆನ್ನ ಸಂಗಮದೇವಾ॥21॥

ಸಗಣೆಯ ಬೆನಕನಮಾಡಿ ಸಂಪಗೆಯರಳಿನಲ್ಲಿ ಪೂಜಿಸಿದರೆ ಗಂಜಳ ನಾರುವುದಲ್ಲದೆ ರಂಜನೆಯಿಲ್ಲವಯ್ಯಾ! ಮಣ್ಣ ಪುತ್ಥಳಿಯ ಮಾಡಿ ಮಜ್ಜನಕ್ಕೆರೆದರೆ ನಿಚ್ಚ ನಿಚ್ಚಕೆ ತಾ ಕೆಸರಾಗುವುದಲ್ಲದೆ ನಿಶ್ಚಳ ವಿಲ್ಲವಯ್ಯಾ. ಸೃಷ್ಟಿಯ ಮೇಲಣ ಕಣೆಯ ತಂದು. ಲೋಕದ ಮಾನವರನೆಲ್ಲ ಭಕ್ತರ ಮಾಡಿದರೆ ಕೆಟ್ಟವರು ಭಕ್ತರಪ್ಪರೆ? ಕೂಡಲ ಚೆನ್ನಸಂಗಮದೇವಾ ॥ 22॥

ಶೀಲವಂತನಲ್ಲದೆ ಶಿವಪ್ರಸಾದ ಸಾಧ್ಯವಾಗದೆಂಬುದಿಲ್ಲ ಕಂಡಯ್ಯಾ! ಸತ್ತ ಕರುವ ಹೊತ್ತುಕೊಂಡು ದೃಷ್ಟವ ತೋರಿದುದಾವ ಶೀಲದೊಳಗು. ಆ ಮಾಟ ಕೋಟಿ ಮಾತುಗಳನ್ನೆಲ್ಲ ಸಲ್ಲದ ಸಲಿಸಿದ ಉದ್ಭಟಯ್ಯ ಅದಾವ ಶೀಲದೊಳಗೆ. ಡೊಂಬರ ಬಿಂದು (?) ಕಂಚಿಪುರವ ಕೈಲಾಸಕ್ಕೆ ಕೊಂಡೊಯ್ದುದು ಆವ ಶೀಲದೊಳಗು. ಅರುವತ್ತು ಸಾವಿರ ರುದ್ರಾಕ್ಷಿ ಹಕ್ಕಂಕೆ ಚೇರಮದೇವ ಲೋಕಕ್ಕೆ ದಾಳಿವರಿದುದಾವ ಶೀಲದೊಳಗು. ಗಾಣದಕನ್ನಪ್ಪಯ್ಯಗಳು ಗಾಣವ ಹಾಕಿ ಮೀನ ತಂದು ಮಾರಿ ಜಂಗಮಾರ್ಚನೆಯ ಮಾಡಿದುದಾವ ಶೀಲದೊಳಗು. ಹೆಂಡವ ಮಾರಯ್ಯಗಳು ಹೆಂಡವ ಮಾರಿ ಜಂಗಮಾರ್ಚನೆಯ ಮಾಡಿದುದಾವ ಶೀಲದೊಳಗು. ಕನ್ನದ ಬ್ರಹ್ಮಯ್ಯಗಳು ಕನ್ನವನಿಕ್ಕಿ ತಂದು ಜಂಗಮಾರ್ಚನೆಯ ಮಾಡಿದುದಾವ ಶೀಲದೊಳಗು. ಹಾದರದ ಬ್ರಹ್ಮಯ್ಯಗಳು ಹಾದರವನಾಡಿ ತಂದು ಜಂಗಮಾರ್ಚನೆಯ ಮಾಡಿದುದಾವ ಶೀಲದೊಳಗು. ಕಡುಕರ ಮಾರಿತಂದೆಗಳು ಮಾಂಸವ ಮಾರಿ ತಂದು ಜಂಗಮಾರ್ಚನೆಯ ಮಾಡಿದುದಾವ ಶೀಲದೊಳಗು. ಅಂಕದ ಮಾರಯ್ಯಗಳು ಅಂಕವನಾಡಿ ತಂದು ಜಂಗಮಾರ್ಚನೆಯ ಮಾಡಿದುದಾವ ಶೀಲದೊಳಗು. ಹರಳಯ್ಯಗಳು ಪಾದರಕ್ಷೆ ಮಾರಿ ಜಂಗಮಾರ್ಚನೆಯ ಮಾಡಿದುದಾವ ಶೀಲದೊಳಗು. ಓಗರ ಕುಲದ ಕಕ್ಕಯ್ಯಗಳು

ಜಂಗಮವಾದಲ್ಲಿ ಚರ್ಮದ ಕಡು ಸೂತ್ರದ ದಾರ. ಚರ್ಮದ ಯೋಗವಟ್ಟಿಗೆ. ಚರ್ಮದ ವಿಭೂತಿಯಾಧಾರ, ಚರ್ಮದ ಕಟ್ವಾಂಗ. ಸಂಗನ ಬಸವಣ್ಣ ಹನ್ನೆರಡು ವರ್ಷ ಪ್ರಸಾದಕ್ಕೆ ಕಾದಿದ್ದು ಪ್ರಸಾದದಿಂದ ಚೆನ್ನಬಸವಣ್ಣ ಹುಟ್ಟಿದುದಾವ ಶೀಲದೊಳಗು. ತಾವು ಭಕ್ತರಾಗಿ ತಮ್ಮ ನಿಷ್ಠೆಯಿಲ್ಲದೆ ಸದ್ಭಕ್ತರನು ದೃಷ್ಟ ಜಂಗಮವನತಿಗಳವ ಭ್ರಷ್ಟ ಹೊಲೆಯರ ಮಾತ ಕೇಳಲಾಗದು. ಕೂಡಲ ಚೆನ್ನಸಂಗಮದೇವಾ ॥23॥

ರವಿ ದೀಕ್ಷೆಯುಂ ಮೋಕ್ಷವಂ ಪಡದೆನೆಂದು ರವಿ ಹಾವಿನಾಶ್ರಯಕೊಳಗಾದ. ಹರಿ ದೀಕ್ಷೆ ಮೋಕ್ಷವಂ ಪಡದೆನೆಂದು ಹರಿ ಹಲವು ಪ್ರಳಯಕ್ಕೊಳಗಾದ. ಮೈಲಾರ ದೀಕ್ಷೆಯುಂ ಮೋಕ್ಷವಂ ಪಡದೆನೆಂದು ಮೈಲಾರ ನರ ನಾಯಾದ. ಜಿನ ದೀಕ್ಷೆಯುಂ ಮೋಕ್ಷವಂ ಪಡೆದೆನೆಂದು ಜೈನ ಮಾಡಿದ ಕರ್ಮವಾಗಿ ತಾಗಿ? ಭೈರವ ದೀಕ್ಷೆಮೋಕ್ಷವಂ ಪಡೆದೆನೆಂದು ಭೈರವ ಭಂಗಹೀನನಾದ. ಬ್ರಹ್ಮ ದೀಕ್ಷೆ ಮೋಕ್ಷವಂ ಪಡೆದೆನೆಂದು ಆ ಬ್ರಹ್ಮ ಭೂತವಾದ. ಇಂತೀ ಚತುರ್ವಿಧ ಸಾರುತ್ತಿರಲು ಮುಂದೆ ಜಂಗಮವೆ ಲಿಂಗ ವೆಂಡವರು ಇಹಪರಕ್ಕೆ ಸಾಧನವ ಮಾಡಿಕೊಂಡರು ಕೂಡಲ ಚೆನ್ನಸಂಗಮದೇವಾ॥24॥

ಶಾಖೆಯಿಲ್ಲದೆ ಕಪಿ ಹಿಡಿಯದು. ಗಮನವಿಲ್ಲದೆ ಶಿಕ ನುಡಿಯದು. ಪ್ರಭ್ಯಸಿ (ಭಾತ?) ದಲ್ಲದೆ ಉಲಿಯದು ಕುಕ್ಕುಟ. ಭಕ್ತರಪ್ಪರೆ ಹೂಮಿಡಿಯಲ್ಲಿ ಹರಿದು ಹಣ್ಣನರಸಲುಂಟೆ? ತಮ್ಮ ಮರೆಯದೆ ಲಿಂಗವ ಮರೆವರೆಲ್ಲ ಅಜ್ಞಾನಿಗಳು ಅನಾಚಾರಿಗಳು ಆಚಾರಭ್ರಷ್ಟರು ಗುರುಲಿಂಗ ಜಂಗಮ ದ್ರೋಹಿಗಳು. ಅನವರತ ವ್ಯಸನ ನಿಂತು ತನುಕರಗಿ ಮನವೆ-ರಗಿ, ನಿಮಗೆ ಮಾಡದ ಅಜ್ಞಾನಿಗಳನೇನೆಂಬೆ ಕೂಡಲ ಚೆನ್ನ ಸಂಗಮದೇವಾ ॥25॥

ಸಿರಿವಂತನಾಳಾಗಿ ತಿರಿದುಣ್ಣಲೇಕೆ? ಕಾಲಕರ್ಮಕ್ಕೊಳಗಾದ ಬಳಿಕ. ಶ್ರೀಗುರು-ವಿನ ಪಾದವ ಸೆರೆ ನಂಬಲೇಕೆ? ಕೂಡಲ ಚೆನ್ನ ಸಂಗಮದೇವಾ. ನಿಮ್ಮ ಪಾದವ ಪೂಜಿಸಿ ನಾನು ಬರು ಸೂ[ರ]* ಹೊಗಲೇಕೆ? ॥26॥

ಶಿವಯೋಗಿ ಭ್ರಾಂತರಾಗಿ ಕಲ್ಪಿತ ಕಾಲಕಲ್ಪಿತನಲ್ಲ ಕರ್ಮರಹಿತನಲ್ಲ. ಪುಣ್ಯ ಪಾಪ ವಿಧಿವಶನಲ್ಲ. ಶರಣ ಲೋಕ ಲೌಕಿಕದ ಪ್ರಪಂಚಿಗಳ ಪರಿಸಿಪ್ಪ ತನ್ನ ಪರಿ ಬೇರೆ ಕೂಡಲ ಚೆನ್ನಸಂಗಮದೇವಾ. ॥27॥

ಅಗ್ನಿಯ ಕೂಡಾಡಿ ಕಾಷ್ಠಗಳೆಲ್ಲ ಕೆಟ್ಟು ಕೇಡ ನೋಡಯ್ಯಾ! ಜಲಧಿಯ ಕೂಡಾಡಿ ಘಟ್ಟ ಬೆಟ್ಟಂಗಳೆಲ್ಲ ಕೆಟ್ಟು ಕೇಡ ನೋಡಯ್ಯಾ! ಜ್ಯೋತಿಯ ಕೂಡಾಡಿ ಕತ್ತಲೆ ಕೆಟ್ಟು ಕೇಡ ನೋಡಯ್ಯಾ! ನಿಮ್ಮ ಶರಣರ ಕೂಡಾಡಿ ನನ್ನ ಭವ ಭವಂಗಳು ಕೆಟ್ಟು ಕೇಡ ನೋಡಯ್ಯಾ! ಕೂಡಲ ಚೆನ್ನಸಂಗಮದೇವಾ. ॥28॥

---

*ಮೂಲ - ಸೂಲೆ

ಪರಪಾಕ ವರ್ಜಿತ, ಸ್ವಯ ಪ್ರಸಾದವೆಂದು ತಮ್ಮ ತನುವಿನ ಹವಣಿಗೆ ಗಡಣಿಸಿ-ಕೊಂಬರು. ತನುಮನಮುಟ್ಟಿ ಓಗರ ಲಿಂಗಾರ್ಪಿತಕ್ಕೆ ಸಲ್ಲದು. ಅನರ್ಪಿತವನುಂಡು ನಾವು ಅಚ್ಚ ಪ್ರಸಾದಿಗಳು ನಿಚ್ಚ ಪ್ರಸಾದಿಗಳೆಂದರೆ ನಮ್ಮ ಲಿಂಗೈಕ್ಯ ಶರಣರು ಮೆಚ್ಚರು. ಬಂದ ಪದಾರ್ಥವ ಕೂಡಲ ಚೆನ್ನ ಸಂಗಮದೇವಂಗರ್ಪಿಸಿಕೊಳಬಲ್ಲರೆ ಆತನೆ ಪ್ರಸಾದಿ ॥29॥

ಪ್ರಸಾದಿಗಳು ಪ್ರಸಾದಿಗಳೆಂದು ಎನುತ್ತಿಹರೆಲ್ಲಾ. ಪ್ರಸಾದದ ಕುಳವು ಎಂತಿಪ್ಪುದು ಹೇಳಾ! ಇಕ್ಕುವಾತ ಗುರುವಲ್ಲ. ಕೊಂಬಾತ ಶಿಷ್ಯನಲ್ಲ. ಇಕ್ಕುವದು ಕೊಂಬುದು ಅಂಜಿಕೆಯಿಂದ ಎಂಜಲು ಮತ್ತೆಂತೆಂದಡೆ, ತನುವನಂಡಲದು ಮನವ ಶುದ್ಧೈಸಿ, ಈಡಪಿಂಗಳ ನಾಳವಂ ಕಟ್ಟಿ ಸುಷುಮ್ನದಿಂದ ಪವನನೆಂಬ ಪರಿಚಾರಕನಿಂದ, ಅಗ್ನಿಯೆಂಬ ಸುಲ್ವಾರ (?) ವನೇಳಿಸಿ ಮನಸ್ಥಳದೊಳಗಿಪ್ಪ ಉತ್ತಮ ಪ್ರಸಾದವ ತಾಗಲು ಥಳಥಳನೆ ಇಳಿದು ಇಳಿದು ಬಪ್ಪ ವಿಮ್ಮ ಪ್ರಸಾದ ಎಂದು ಇದಿರಾಂತು ಕೊಂಡು ಉಂಡು ಭೋಗಿಸಿ ಐಕ್ಯವಾಗಬಲ್ಲರೆ ಇದೆ ಸತ್ಪ್ರಸಾದ ಇದೆ ನಿತ್ಯ ಪ್ರಸಾದ, ಇದೆ ಮುಕ್ತಿ ಪ್ರಸಾದ ಇದ ನರಿಯದ ಪುಣ್ಯವುಳ್ಳವರ ನೋಡಿ ಕಯ್ಯಾಂತು ಕೊಂಬ ಲೆಂಕ ಪ್ರಸಾದಿಗಳ ಮೆಚ್ಚುವನೆ ಕೂಡಲ ಚೆನ್ನ ಸಂಗಮದೇವಾ ॥30॥

ದಾನವ ಮಾಡುವ ಕ್ರೂರ ಕರ್ಮರ ಮನೆಯಲ್ಲಿ ಮದ್ದುಮಾಂಸವಲ್ಲದೆ ಲಿಂಗಕ್ಕೆ ಓಗರವಿಲ್ಲ. ವರುಷಕ್ಕೆ ಒಂದು ಸ್ಥಿತಿ ಮಾಡುವ ಭಕ್ತನ ಮನೆಯಲ್ಲಿ ಕೂಟಕ್ಕೆ ಇಕ್ಕಿ ಕೀರ್ತಿಗೆ ಸಲುವನಲ್ಲದೆ ಲಿಂಗಕ್ಕೆ ಓಗರವಿಲ್ಲ. ಹರಸಿಕೊಂಡು ನೀಡುವ ಭಕ್ತನ ಮನೆಯಲ್ಲಿ ನಲ್ಲದೆ (?) ಲಿಂಗಕ್ಕೆ ಓಗರವಿಲ್ಲ. ಈ ತ್ರಿವಿಧವಿಡಿದು ಮಾಡುವಾತ ಭಕ್ತನಲ್ಲ. ಅವನ ಮನೆಯ ಹೊಕ್ಕು ಲಿಂಗಾರ್ಚನೆಯ ಮಾಡಿಸಿಕೊಂಬಾತ ಜಂಗಮಸ್ಥಳಕ್ಕೆ ಸಲ್ಲ. ಈ ತ್ರಿವಿಧ ಭಕ್ತಿ ಎಂಬುದು ನರಕಕ್ಕೆ ಭಾಜನವಾಯಿತ್ತು ಕೂಡಲ ಚೆನ್ನಸಂಗಮದೇವಾ ನೀ ಸಾಕ್ಷಿಯಾಗಿ. ॥31॥

ಭಕ್ತಗಾದರು ಆಗಲಿ ಜಂಗಮಕ್ಕಾದರೂ ಆಗಲಿ, ಅನುಭಾವವೆ ಜೀವ ಕಾಣಿರೋ. ಅನುಭಾವವೆ ಆಚಾರ ಕಾಣಿರೋ. ಅನುಭಾವವನರಿಯದವರ ಭಕ್ತಿ ಎಳತಟ ಗೊಳಿಸಿತ್ತು. ಸೈದಾನದಲ್ಲಿ ಹೋಗಿ ದೀರ್ಘದಂಡ ನಮಸ್ಕಾರವಂ ಮಾಡಿ ವಿನಯಾರ್ಥ ದಿಂದ ಅನುಭಾವವ ಮಾಡದಿದ್ದರೆ ಅಘೋರ ನರಕದಲ್ಲಿಕ್ಕುವ ಕೂಡಲ ಚೆನ್ನ ಸಂಗಮದೇವಾ. ॥32॥

ಶೀಲ ಶೀಲವೆಂಬರು. ನಾವಿದನರಿಯೆವಯ್ಯಾ! ಮಾಡಿದ ಮನೆ ಹೂಡಿದ ಒಲೆ ಅಟ್ಟುಂಬ ಮಡಕೆ ಕಟ್ಟಿದ ಕೆರೆ ಬಿತ್ತಿದ ಬೆಳೆಗೆ ಶೀಲವುಂಟೆ. ಅವಕ್ಕೆ ಶೀಲವಲ್ಲದೆ ತನ್ನ ಮನಕ್ಕೆ ಶೀಲವಿಲ್ಲ. ಮಾಡಿದ ಮನೆ ಪರಪಾಕ. ಹೂಡಿದ ಒಲೆ ಪರಪಾಕ.

ಅಟ್ಟುಂಬ ಮಡಕೆ ಪರಪಾಕ. ಕಟ್ಟಿದ ಕೆರೆ ಪರಪಾಕ. ಬಿತ್ತಿದ ಬೆಳೆ ಹದಿನೆಂಟು ಧಾನ್ಯವು ಪರಪಾಕ. ಶೀಲ ಇನ್ನಾವುದು ಎಂದರೆ ಅಸನ ವ್ಯಸನ ಹಸಿವು ನಿದ್ರೆ ನೀರಡಿಕೆಯು ಬಿಟ್ಟು ಶಿವಜ್ಞಾನದಲ್ಲಿ ನಿಂದುದು ಅದೆ ಶೀಲ. ಕೂಡಲ ಚೆನ್ನಸಂಗಮ ದೇವ ಸಾಕ್ಷಿಯಾಗಿ. ॥33॥*

---

* ದಾವಣಗೆರೆ ಹಿರೇಮಠದ ಶ್ರೀ ಸಿದ್ಧಲಿಂಗಯ್ಯ ಇವರಿಂದ ದೊರೆತ ಓಲೆಯ ಪ್ರತಿಯಿಂದ ಪ್ರತಿಮಾಡಲಾಗಿದೆ.

ಕನ್ನಡ ಚಂಪೂ ಷಟ್ಪದಿಗಳಲ್ಲಿ ಶ್ರೀಕೃಷ್ಣ ಪಾತ್ರಚಿತ್ರಣ

ಎಂ. ಆರ್. ಲಕ್ಷ್ಮೀದೇವಿ

ಭಾರತೀಯ ಸಂಸ್ಕೃತಿ ಪ್ರದೀಪ

ಶ್ರೀಕೃಷ್ಣ ಭಾರತೀಯ ಸಂಸ್ಕೃತಿಯ ಮಣಿದೀಪ. ಇತಿಹಾಸಜ್ಞರಿಗೆ 'ಚಾರಿತ್ರಿಕ ಅನ್ವೇಷಣಮೂರ್ತಿ', ಧಾರ್ಮಿಕರಿಗೆ 'ಪರಾತತ್ವಯೋಗೇಶ್ವರ', ಚಿತ್ರಕಾರರಿಗೆ 'ಗೋಪಿ ಕೃಷ್ಣ', ಗಾನಪ್ರಿಯರಿಗೆ 'ಮುರಳೀಧರ', ರಸಿಕರಿಗೆ 'ರಾಸಲೀಲಾವಿಹಾರಿ', ಪೂಜಕರಿಗೆ 'ಶ್ರೀಕೃಷ್ಣಭಗವಾನ್', ಕೃಷ್ಣಕಾವ್ಯರಚಕರಿಗೆ 'ಕಥಾನಾಯಕ – ಸ್ಫೂರ್ತಿದಾತ', ಹೀಗೆ ಭಾರತೀಯ ಸಂಸ್ಕೃತಿಯ ಅಂಗಗಳಾದ ಸಾಹಿತ್ಯ, ಕಲೆ, ಧರ್ಮಗಳಲ್ಲಿ ಅಂತರ್ಗತ ಶಕ್ತಿಯಾಗಿ, ಎಲ್ಲರಿಗೂ ಸ್ಫೂರ್ತಿದಾಯಕ ಚೈತನ್ಯಮೂರ್ತಿಯಾಗಿ ಮೂಡಿಬಂದಿದ್ದಾನೆ.

ಕನ್ನಡ ಕವಿವರ್ಗದ ಕಾಣಿಕೆ

ಕನ್ನಡಕವಿಗಳು ಶ್ರೀಕೃಷ್ಣನನ್ನು ಕಾವ್ಯಗಳಲ್ಲಿ ವೇದಪುರುಷನಿಂದ ಹಿಡಿದು ಸಾಮಾಜಿಕ ಪುರುಷನವರೆಗೆ ವಿವಿಧರೀತಿಯಲ್ಲಿ ನಿರೂಪಿಸಿದ್ದಾರೆ. ವಿಶೇಷವಾಗಿ ಜೈನಕವಿಗಳು ವೈದಿಕ ಧರ್ಮವನ್ನು ರೂಪಾಂತರಿಸಿ, ಅಳವಡಿಸಿಕೊಂಡು ಜೈನಧರ್ಮದ ಹಿನ್ನೆಲೆಯಲ್ಲಿ ಕಾವ್ಯರಚನೆಮಾಡಿದ್ದಾರೆ. ಕಥಾವಸ್ತು ಕೃಷ್ಣನದೇ ಆದರೂ ಅಲೌಕಿಕ ಕಾವ್ಯ ಆದರೆ ಪಾತ್ರಚಿತ್ರಣ ತೀರ್ಥಂಕರನದೂ. ಲೌಕಿಕ ಕಾವ್ಯ ಆದರೆ ಆಶ್ರಯದಾತನದೂ ಆಗಿರುತ್ತದೆ.

ಬ್ರಾಹ್ಮಣ ಕವಿಗಳು ವೈದಿಕಧರ್ಮದಲ್ಲಿ ಶ್ರದ್ಧಾವಂತರಾಗಿ ಪಾತ್ರಚಿತ್ರಣದ ವಿಚಾರದಲ್ಲಿ ಭಾರತ – ಭಾಗವತ ಕಥೆಗಳಿಗೆ ನಿಷ್ಠಾವಂತರಾಗಿ ಕಾವ್ಯ ನಿರ್ಮಾಣ ಮಾಡಿದ್ದಾರೆ.

ವೀರಶೈವ ಕವಿಗಳು ಒಂದು ರೀತಿಯಲ್ಲಿ ಸಂಪೂರ್ಣವಾಗಿ ಕೃಷ್ಣ ಸಾಹಿತ್ಯವನ್ನೇ ಕೈಬಿಟ್ಟಿದ್ದಾರೆ ಎನ್ನಬಹುದು. ಬಹುಶಃ ಇದಕ್ಕೆ ಹಲವಾರು ವಿಶಿಷ್ಟ ಕಾರಣಗಳಿರಬಹುದು. ಜೈನಕವಿಗಳಿಗೆ ಇದ್ದಂತೆ ರಾಜಾಶ್ರಯದ ಅನಿವಾರ್ಯತೆ ಇರಲಿಲ್ಲ, ಮತ್ತು ಭಾರತ–ಭಾಗವತಗಳನ್ನು ಅಳವಡಿಸಲು ಯೋಗ್ಯವಾಗುವಂಥ ಅವರದೇ ಸಾಹಿತ್ಯ ಪರಂಪರೆ ಇರಲಿಲ್ಲ ಎನ್ನಬಹುದು. ವೀರಶೈವಧರ್ಮ ವಚನಸಾಹಿತ್ಯ ಎರಡೂ ಹೊಸದಾಗಿ ಮೂಡಿಬಂದ ಧರ್ಮಪದ್ಧತಿ – ಕಾವ್ಯಪಂಥಗಳು. ಆದ್ದರಿಂದ ಇದಕ್ಕೆ

ವೈದಿಕ ಪರಂಪರೆಯ ಸಾಹಿತ್ಯ ಧರ್ಮದ ಅಳವಡಿಕೆ ಹೊಂದಲಿಲ್ಲವೇನೋ! ಅಥವಾ ಅಗತ್ಯ ಬೀಳಲಿಲ್ಲವೇನೋ !

ಭಾರತೀಯ ಜನಜೀವನದಲ್ಲಿ ಗಾಢಪ್ರಭಾವ ಬೀರಿದ ಸಾಹಿತ್ಯ ವ್ಯಕ್ತಿಗಳನ್ನು, ಮುಖ್ಯವಾಗಿ ರಾಮ – ಕೃಷ್ಣರನ್ನು, ರಾಮಾಯಣ – ಭಾರತ – ಭಾಗವತಗಳನ್ನು ಅನ್ಯಧರ್ಮೀಯರು ತಮ್ಮ ಧರ್ಮಕ್ಕೆ ಅಳವಡಿಸಿಕೊಂಡು ಭಾರತೀಯರ ಮೇಲೆ ಪ್ರಭಾವ ಬೀರಲು, ಮತಪ್ರಚಾರ ಮಾಡಲು ಪ್ರಬಲ ಸಾಧನವನ್ನಾಗಿ ಬಳಸಿರುವಾಗ, ವೀರಶೈವ ಕವಿಗಳು ಈ ಮಾಧ್ಯಮವನ್ನು ಏಕೆ ಕೈಬಿಟ್ಟರೋ ತಿಳಿಯದ ವಿಷಯ.

ಜೈನ ಕವಿಗಳೇ ಆಗಲಿ ವೈಷ್ಣವ ಕವಿಗಳೇ ಆಗಲಿ ಭಾರತದ ಕೃಷ್ಣ ಚಿತ್ರಣವನ್ನೊಳಗೊಂಡ ಕಾವ್ಯ ರಚನೆ ಮಾಡಲು ಕೆಲವಾರು ಪ್ರಬಲ ಪ್ರೇರಣೆಗಳಿಗೆ ಒಳಗಾಗಿದ್ದರು ಎನ್ನುವುದನ್ನು ಸಾಹಿತ್ಯ ಚರಿತ್ರೆ ಮತ್ತು ಅವರ ಕೃತಿಗಳು ಸಾರುತ್ತವೆ. ಅಂತರಂಗದ ಪ್ರೇರಣೆ ಜೊತೆಗೆ ಬಹಿರಂಗದ ಒತ್ತಾಯವೂ ಕಾವ್ಯರಚನೆಗೆ ಸೇರಿತ್ತು ಎಂಬಂಶ ವಿದಿತವಾಗುತ್ತದೆ. ಈ ಹಿನ್ನೆಲೆ ಕುಮಾರವ್ಯಾಸನಲ್ಲಿ ಅಲೌಕಿಕವಾಗಿದೆ. 'ವೀರನಾರಾಯಣನೆ ಕವಿ, ಲಿಪಿಕಾರ ಕುಮಾರವ್ಯಾಸ, ಕೇಳುವ ಸೂರಿಗಳು ಸನಕಾದಿಗಳು – ಜಂಗಮ ಜನಾರ್ದನರು, ಎನ್ನುತ್ತಾನೆ ಆತ. ಆದರೆ ಇತರರಲ್ಲಿ ಬುಧಜನ ಪ್ರೇರಣೆ – ಸ್ವಮನ ಪ್ರೇರಣೆಗಳು ಕೂಡಿಕೊಂಡು ಕೃಷ್ಣಕಾವ್ಯರಚನೆಗೆ ಹಿನ್ನೆಲೆಯಾಗಿ ಬಂದುದನ್ನು ಕೆಲವೆಡೆ ಕಾಣಬಹುದು. ಲೌಕಿಕ ಪ್ರೇರಣೆಗಳನ್ನು ಇತರ ಕವಿಗಳ ರಚನೆಯಲ್ಲಿ, ಪ್ರಮುಖವಾಗಿ ಜೈನ ಚಂಪೂ ಕವಿಗಳಲ್ಲಿ ಕಾಣಬಹುದು. ಈ ಮಾತಿಗೆ ಪಂಪನು ಸಾರಿಕೊಳ್ಳುವ 'ಪಂಡಿತರೆ ತಗುಳ್ದು ಬಿಚ್ಚಟಿಸಿ ಪೇಟಲೊಡರ್ಚಿದೆನೀ ಮಹಾ ಪ್ರಬಂಧಮಂ' ಎಂಬ ಮಾತೂ, 'ಪೊಗಟಿ ಬುಧಜನಂ' ಎಂದು ಹೇಳಿದ ನೇಮಿಚಂದ್ರನ ನುಡಿ, "ಪ್ರಮುಖ ಬುಧಜನಂ ಪೇಟಿಮೆಂದೆಂದೊಡೆ........." ರಚಿಸಿದೆನೆಂದ ಕರ್ಣಪಾರ್ಯನ ವಾಣಿ ಇವು ನಿದರ್ಶನವಾಗಿವೆ. ಲೌಕಿಕ ಪ್ರೇರಣೆಗಳಲ್ಲಿ ಕವಿಮನಪ್ರೇರಣೆ, ಬುಧಜನಪ್ರೇರಣೆಗಳ ಜೊತೆಗೆ ಆಶ್ರಯದಾತ ರಾಜರ ಪ್ರೋತ್ಸಾಹ ಅಪ್ಪಣೆಗಳೂ ಸಾಕಷ್ಟು ಗಮನಾರ್ಹ ಪ್ರೇರಣೆ ಆಗಿವೆ. ಈ ರಾಜಪ್ರೇರಣೆ ಕೃತಿಯಲ್ಲಿ ಕಾವ್ಯರಚನೆಗೆ ಕವಿಸ್ಫೂರ್ತಿಗೆ ದೊರೆಸ್ತುತಿಗೆ ಅವಕಾಶವನ್ನಿತ್ತಿದೆ. ಪಂಪನ ಭಾರತದ ಕೃತಿಯಲ್ಲಿ ಅರಿಕೇಸರಿಯನ್ನು ಕುರಿತ ಚಿತ್ರಣವೇ ಈ ಮಾತಿಗೆ ಪ್ರಬಲ ಸಮರ್ಥನೆ ಆಗಿದೆ.

ಹೀಗೆ ಕೃಷ್ಣಕಥಾ ಕಾವ್ಯಗಳನ್ನು ಬರೆದ ಕನ್ನಡ ಕವಿಗಳಲ್ಲಿ ಹಲವಾರು ಪ್ರೇರಣೆಗಳು ಹಿನ್ನೆಲೆಯಾಗಿ ನಿಂತು ಕೆಲವು ಸಮಸ್ಯೆಗಳನ್ನು ವಿಚಾರಗಳನ್ನು ಮುಂದುಮಾಡಿವೆ.

ಜೈನ ಕವಿಗಳಲ್ಲಿ ವೈದಿಕಧರ್ಮ – ಜೈನಧರ್ಮ ಪ್ರತಿಪಾದನೆಯ ರೀತಿ ನೀತಿ, ಪೌರಾಣಿಕ ಕೃತಿನಾಯಕ – ಐತಿಹಾಸಿಕ ದೊರೆಯ ಸಮನ್ವಯ, ಕವಿಯ ವೈಯಕ್ತಿಕ

ಧೋರಣೆ ಮತ್ತು ಬಾಹ್ಯ ಸನ್ನಿವೇಶಗಳು ಈ ಅಂಶಗಳು ಪರಿಶೀಲನೆಗೆ ಯೋಗ್ಯವಾಗಿವೆ.

ಈ ಸಂದರ್ಭದಲ್ಲಿ ನಾವು ನೆನಪಿಡಬೇಕಾದ ಸಂಗತಿಯೊಂದಿದೆ. ಜೈನಕವಿಗಳಲ್ಲಿ ಕಂಡುಬರುವ ಉಭಯಧರ್ಮ ಪ್ರತಿಪಾದನೆ, ಪೌರಾಣಿಕ ಹಾಗೂ ಐತಿಹಾಸಿಕ ನಾಯಕ ಸಮನ್ವಯದ ನಿರೂಪಣೆಯು ಕಷ್ಟ ಇಲ್ಲದ ಕಾರಣ ವೈದಿಕ ಕವಿಗಳಲ್ಲಿ ಸ್ವಮತ ಭಕ್ತಿನಿಷ್ಠೆಗಳ ಫಲವಾಗಿ ಕೃಷ್ಣನ ಚಿತ್ರಣದಲ್ಲಿ 'ದೈವತ್ವ' ವಿಶೇಷವಾಗಿ ಮೂಡಿದೆ. ಅನ್ಯಮತ ಕವಿಗಳಲ್ಲಿ (ಜೈನಕವಿಗಳಲ್ಲಿ) ಪಾಂಡಿತ್ಯ, ಪ್ರತಿಭೆ ಮತ್ತು ಪರಮತ ಸಹಿಷ್ಣುತಾ ಮನೋಭಾವ ಮತ್ತು ಸ್ವಮತಾಭಿಮಾನಗಳ ಫಲವಾಗಿ ಕೃಷ್ಣನ ಚಿತ್ರಣದಲ್ಲಿ 'ಭವ್ಯತ್ವ' ಚೆನ್ನಾಗಿ ಮೂಡಿದೆ. ಆದಕಾರಣ, ಪಂಪ, ಕರ್ಣಪಾರ್ಯ, ನೇಮಿಚಂದ್ರ ಮೊದಲಾದವರ ಕೃತಿಗಳಲ್ಲಿ ರುದ್ರಭಟ್ಟ, ಕುಮಾರವ್ಯಾಸ, ಲಕ್ಷ್ಮೀಶ ಮೊದಲಾದವರ ಕಾವ್ಯಗಳಲ್ಲಿ ಕಾಣುವ ರೀತಿಯ 'ದೈವತ್ವ' ಚಿತ್ರಣವನ್ನು ನಿರೀಕ್ಷಿಸುವುದು ಸಾಧುವೆನಿಸಲಾರದು.

ಆದರೂ ಕೃಷ್ಣನ ಭವ್ಯತೆಯನ್ನು ಸಾರ್ಥಕವಾಗಿ ನಿರೂಪಿಸಿದ ಜೈನಕವಿಗಳು ಪೂರ್ಣವಾಗಿ ವೈದಿಕ ಕಲ್ಪನೆಯ ದೈವತ್ವವನ್ನು ತಮ್ಮ ಕೃತಿಯಲ್ಲಿ ಕೈಬಿಟ್ಟಿದ್ದಾರೆ ಎಂದು ಹೇಳಲು ಆಗದು. ಅಲ್ಲಲ್ಲಿ ಮಿಂಚಿನಂತೆ ಕೃಷ್ಣನ ದೈವಾಂಶಗಳನ್ನು ಅರಿವಿಲ್ಲದೆಯೋ, ಅನಿವಾರ್ಯದಿಂದಲೋ, ಸಹಜ ಕವಿಭಾವದಿಂದಲೋ ಅಥವಾ ಮೂಲ ಭಾರತಕೃತಿಗೆ ಮನ ಸೋತೋ ಅಂತೂ ಪ್ರಸ್ತಾಪ ಮಾಡಿದ್ದಾರೆ. ಉದಾಹರಣೆಗೆ, ಒಂದೆರಡು ನಿದರ್ಶನಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

ಈ ಪ್ರಬಂಧದಲ್ಲಿ ಕವಿದೃಷ್ಟಿಯಿಂದ ಕನ್ನಡ ಚಂಪೂ ಕಾವ್ಯಗಳಲ್ಲಿ ಶ್ರೀಕೃಷ್ಣ ಚಿತ್ರಣ ಹೇಗೆ ಚಿತ್ರಣಗೊಂಡಿದೆ ಎಂಬುದನ್ನು ಪರಿಶೀಲಿಸುವ ಗುರಿಯನ್ನು ಹೊಂದಿದೆ. ಮತ್ತು ಪ್ರಾತಿನಿಧಿಕವಾಗಿ ಜೈನಕವಿಗಳ ಕೃಷ್ಣಕಥಾ ಕಾವ್ಯಗಳ ಪೈಕಿ ಪ್ರಸಿದ್ಧವಾದ ಪಂಪ, ಕರ್ಣಪಾರ್ಯ, ನೇಮಿಚಂದ್ರರ ಕೃತಿಗಳನ್ನೂ ವೈದಿಕ ಕವಿಗಳ ಕೃಷ್ಣಕಾವ್ಯ ಸಾಹಿತ್ಯಕ್ಕೆ ಪ್ರಾತಿನಿಧಿಕವಾಗಿ ರುದ್ರಭಟ್ಟ, ಕುಮಾರವ್ಯಾಸ, ಲಕ್ಷ್ಮೀಶರ ಕೃತಿಗಳನ್ನೂ ಆಧಾರವಾಗಿಟ್ಟುಕೊಂಡು ಕನ್ನಡ ಕಾವ್ಯಗಳಲ್ಲಿ ಶ್ರೀಕೃಷ್ಣಚಿತ್ರಣ ಹೇಗೆ ಮೂಡಿದೆ ಎನ್ನುವುದರ ಲಘು ಪರಿಚಯ ನೀಡುವುದು ಪ್ರಸ್ತುತ ಲೇಖನದ ವಸ್ತುವಾಗಿದೆ.

ಪಂಪನ ಕೃಷ್ಣ

ಪಂಪನ ಕೃತಿಯಲ್ಲಿ ಕೃಷ್ಣನ ದೈವತ್ವ ಸಂಬಂಧಿ ಅಂಶಗಳ ಪ್ರತಿಪಾದನೆಯು ನೇಮಿ, ಕರ್ಣಪಾರ್ಯರ ಕೃತಿಗಳಲ್ಲಿ ಕಂಡುಬರುವ ರೀತಿಯಲ್ಲಿ ಚಿತ್ರಿತವಾಗಿಲ್ಲ. ಕಾರಣವೇನೆಂದರೆ, ಕೃಷ್ಣಕಥೆಯನ್ನು ನೇಮಿ, ಕರ್ಣರು ಅಲೌಕಿಕ ಕೃತಿಗಳಲ್ಲಿ ಅಳವಡಿಸಿಕೊಂಡಿದ್ದರೆ ಪಂಪನು ಲೌಕಿಕ ಕೃತಿಯಲ್ಲಿ ಅಳವಡಿಸಿಕೊಂಡಿದ್ದಾನೆ. ಐತಿಹಾಸಿಕ ಅಂಶಗಳುಳ್ಳ ನರಶ್ರೇಷ್ಠ

ಅರಿಕೇಸರಿ ಪಂಪನ ಕೃತಿಯಲ್ಲಿ ಕಥಾನಾಯಕನಾದರೆ, ಉಳಿದ ಇಬ್ಬರ ಕೃತಿಗಳಲ್ಲಿ ಅತಿ ಮಾನುಷ ದೇವಶ್ರೇಷ್ಠ ತೀರ್ಥಂಕರರು ಕಥಾನಾಯಕರಾಗಿದ್ದಾರೆ. ಈ ಕಾರಣದಿಂದ ಅಲ್ಲಿನ ಹಿನ್ನೆಲೆಯಲ್ಲಿ ಮೂಡಿಬರುವ ಕೃಷ್ಣ ಸಹಜವಾಗಿ ಲೌಕಿಕ ದೃಷ್ಟಿಯಿಂದ ಭಿನ್ನನಾಗಿ ಕಾಣುತ್ತಾನೆ. ಹೀಗಿದ್ದರೂ ಸಂಪೂರ್ಣವಾಗಿ ದೈವತ್ವದ ಅಂಶವೇ ಇಲ್ಲದಂತೆ ಕೃಷ್ಣನನ್ನು ಪಂಪ ಚಿತ್ರಿಸಿದ್ದಾನೆ ಎಂದು ಹೇಳಲು ಬರುವುದಿಲ್ಲ. ಏಕೆಂದರೆ ಪಂಪನು ನಿರೂಪಿಸಿದ ಕಥಾನಾಯಕ ಲೌಕಿಕನಾದರೂ, ಅವನ ಮೂಲ ಕಥಾವಸ್ತು ಅಲೌಕಿಕ. ಅಂತೆಯೇ ಕಥಾನಾಯಕ ಕೃಷ್ಣ ಅಲೌಕಿಕ ವ್ಯಕ್ತಿ. ಅದೂ ಅಲ್ಲದೆ ವ್ಯಾಸಭಾರತವನ್ನು ಗೌರವ ಭಾವದಿಂದ ವಿನಯದಿಂದ ತಗುಳ್ಚಿ ಹೇಳಲು ಹೊರಟವನೇ ಹೊರತು ಬಂಡೆದ್ದು ಧರ್ಮಾಂಧನಾಗಿ ವಿರುದ್ಧ ಪಾತ್ರಚಿತ್ರಣಕ್ಕಾಗಿ ಕಂಠವೆಂಬ ಕತ್ತಿ ಮಸೆದು ಕಾವ್ಯದ ರಣ-ರಂಗಕ್ಕೆ ಇಳಿದವನಲ್ಲ.

ಪಂಪನ ಲೌಕಿಕ ಕೃಷ್ಣನಲ್ಲೂ ಅಲ್ಲಲ್ಲಿ ಅಲೌಕಿಕ ಅಂಶಗಳು ಮೂಡಿವೆ ಎಂಬುದಕ್ಕೆ ಒಂದೆರಡು ಸಂಗತಿಗಳನ್ನು ಇಲ್ಲಿ ಉಲ್ಲೇಖಿಸಬಹುದು. ಉದ್ಯೋಗಪರ್ವದಲ್ಲಿ (ಆ.9–ಪ 30) ಕೃಷ್ಣನು ರಾಯಭಾರಕ್ಕೆ ಬಂದಾಗ ದುರ್ಯೋಧನ ಕೃಷ್ಣನ ಬಗ್ಗೆ "ಲೋಕಗುರು ಶಂಖಚಕ್ರಗದಾಕರನತಿಶಯ ಚತುರ್ಭುಜಂ" ಎನ್ನುತ್ತಾನೆ. ಇಲ್ಲಿ ಕವಿ ಬಳಸುವ ಲೋಕಗುರು, ಚತುರ್ಭುಜ, ಶಂಖಚಕ್ರಗದಾಕರತ್ವದ ಅತಿಶಯತೆ ಇವೇ ಮೊದಲಾದ ವಿಶೇಷಣಗಳು ಮಾನುಷತ್ವಕ್ಕಿಂತ ದೈವತ್ವಕ್ಕೆ ಸಾಕ್ಷಿಯಾಗಿವೆ.

ಮತ್ತೊಂದು ಸ್ಪಷ್ಟ ನಿದರ್ಶನವೆಂದರೆ ರಾಜಸೂಯ ಪ್ರಸಂಗ. ಈ ಪ್ರಸಂಗದಲ್ಲಿ ಭೀಷ್ಮರು "ಬಲಿಯಂ ಕಟ್ಟಿದನಾವನ………" ಇತ್ಯಾದಿಯಾಗಿ ಕೃಷ್ಣನ ಅವತಾರ ಲೀಲೆಗಳನ್ನು ಹೇಳಿದಾಗ ಅದನ್ನು ಶಿಶುಪಾಲನ ಹೊರತು ಉಳಿದವರಾರೂ ವಿರೋಧಿಸುವುದಿಲ್ಲ – ಅಂದಮೇಲೆ ದುರ್ಯೋಧನಾದಿಗಳಿಗೂ ಒಪ್ಪಿಗೆಯಾದಂತೆ ಪಂಪನಿಗೂ ಒಪ್ಪಿಗೆಯಾಗಿದೆ. ಇಲ್ಲದಿದ್ದಲ್ಲಿ, ಸಂಗ್ರಹಕಾರನಾದ ಪಂಪ ಈ ಮಾತನ್ನು ಕೈಬಿಡಲು ಸುಲಭವಿತ್ತು. ಮತ್ತು ಕೃಷ್ಣನ ಚಕ್ರದಿಂದ ಶಿಶುಪಾಲನ ತಲೆ ತೆಗೆದ ರೀತಿ ವೀರನ ಸಾಹಸಕ್ಕಿಂತ ದೇವನ ಪವಾಡವಾಗಿ ಕಾಣಿಸುತ್ತದೆ ಎನ್ನುವುದನ್ನು ಅರಿತಾಗ ದೈವತ್ವ ನಿರೂಪಣೆ ಈ ಸಂದರ್ಭದಲ್ಲಿ ನಿಚ್ಚಳವಾಗಿ ಮೂಡಿದೆ ಎನ್ನಬಹುದು. ಇವೇ ಬಗೆಯ ಹಲವಾರು ನಿದರ್ಶನಗಳನ್ನು ಪಂಪಭಾರತದಲ್ಲಿ ಅಲ್ಲಲ್ಲಿ ಕಾಣಬಹುದು.

ಕರ್ಣಪಾರ್ಯನ ಕೃಷ್ಣ

ಕರ್ಣಪಾರ್ಯ ತನ್ನ ಕೃತಿಯಲ್ಲಿ ಕೃಷ್ಣನನ್ನು ಧಾರ್ಮಿಕ ಹಿನ್ನೆಲೆಯಲ್ಲೇ ಕಂಡಿದ್ದರೂ ವೈದಿಕ ಭಾರತ – ಭಾಗವತಗಳ ರೀತಿ ತದ್ವತ್ತಾಗಿ ಕಂಡಿಲ್ಲ ಅಥವಾ ಕ್ಷಚಿತ್ತಾಗಿಯೂ ಕಂಡಿಲ್ಲ; ವ್ಯತ್ಯಾಸಗಳೊಂದಿಗೆ ಮಹತ್ತರ ವ್ಯಕ್ತಿಯನ್ನಾಗಿ ಕಂಡಿದ್ದಾನೆ ಕೃಷ್ಣನನ್ನು. ಈ ಕಾರಣದಿಂದ ನೇಮಿನಾಥನಿಗೂ ಕೃಷ್ಣನಿಗೂ ಸಾಮ್ಯ ವೈಷಮ್ಯಗಳನ್ನು ಚಿತ್ರಣದ

ರೀತಿಯಲ್ಲಿ ಕಂಡರೂ ಪ್ರಾಶಸ್ತ್ಯದಲ್ಲಿ ಇವರಿಬ್ಬರೂ ಉಳಿದವರಿಗಿಂತ ಅಗ್ರಸ್ಥಾನವನ್ನು ಕೃತಿಯಲ್ಲಿ ಹೊಂದಿದ್ದಾರೆ, ಇವರಿಬ್ಬರ ಜೀವನ ಚಿತ್ರಣದಲ್ಲೂ ಪವಾಡಗಳಿಗೆ ಕರ್ಣಪಾರ್ಯನು ಸ್ಥಾನ ನೀಡಿದ್ದಾನೆ. ನೇಮಿನಾಥನ ವಿಚಾರದಲ್ಲಿ ಪೂರ್ವದ ಪುರಾಣ ಪರಂಪರೆಗೆ ಪ್ರಾಶಸ್ತ್ಯವಿತ್ತಂತೆ, ಕೃಷ್ಣನ ವಿಚಾರದಲ್ಲಿ ವೈದಿಕ ಕೃತಿಗಳಲ್ಲಿ ಕಂಡುಬರುವ ದೈವತ್ವದ ಪರಂಪರೆಗೆ ಪ್ರಾಶಸ್ತ್ಯವಿತ್ತಿದ್ದಾನೆ, ಈ ಕಾರಣದಿಂದ ನೇಮಿನಾಥನನ್ನು ಪ್ರಧಾನವಾಗಿ ಮನಸ್ಸಿನಲ್ಲಿಟ್ಟುಕೊಂಡ ಕವಿ ಕೃಷ್ಣನನ್ನು ಅಪ್ರಧಾನವಾಗಿ ಕಾಣಲು ಸಾಧ್ಯವಿಲ್ಲದೆ, ದ್ವಂದ್ವದಲ್ಲಿ ಸಿಲುಕಿ, ಕೆಲವೊಮ್ಮೆ ತನ್ನ ಮಾತುಗಳಲ್ಲಿ ಈ ದ್ವಂದ್ವ ಭಾವವನ್ನು "ತತ್ಕೃಷ್ಣನೆ ವಿಷ್ಣುವೆಯೆಂದು ನಿರ್ವಿಚಾರಂ ನುಡಿಗುಂ" ಎಂದು ಪರೋಕ್ಷವಾಗಿ ನಿರೂಪಿಸುತ್ತಾನೆ. ಉದಾಹರಣೆಗೆ "ಜನಾರ್ದನಂ ಕೃಷ್ಣನಂತಿರೆಸೆಗಲ್ ಮತ್ತೀ-ಜನವನಭಿಜ್ಞಂ" ಎಂಬ ವಿಚಾರಧಾರೆಯಲ್ಲಿ ಈ ದ್ವಂದ್ವವನ್ನು ಕಾಣಬಹುದು. ಕೃಷ್ಣನನ್ನು ಕೈಬಿಡದೆ ನೇಮಿಯನ್ನು ಅತ್ಯುನ್ನತ ರೀತಿಯಲ್ಲಿ ಚಿತ್ರಿಸಲು ಹೊರಟ ಕರ್ಣಪಾರ್ಯ, ಕೃಷ್ಣನ ಬಗ್ಗೆ ಅನೇಕ ಮಾತುಗಳನ್ನು ಮೂಲಭಾರತ – ಭಾಗವತಗಳ ಅಂಶಗಳಿಗೆ ತಕ್ಕಂತೆಯೇ ಬಳಸಿದ್ದಾನೆ. 'ವಸುದೇವ ಕೃಷ್ಣಶಿಶುವನ್ನು ಒಯ್ದುದ್ದು—ಪೂತಿನೀ ಪ್ರಸಂಗ – ಗೋವರ್ಧನಗಿರಿ ಉದ್ಧರಣ – ಧೇನುಕಾಸುರವಧೆ ಮೊದಲಾದುವು ಮೇಲಿನಮಾತಿಗೆ ನಿದರ್ಶನ. ಕೃಷ್ಣನನ್ನು ಈ ರೀತಿ ಚಿತ್ರಿಸಲು ಕಾರಣವೇದರೆ ಬಹುಶಃ ಕೃಷ್ಣನನ್ನು ಅದಷ್ಟೂ ಭವ್ಯವಾಗಿ ದಿವ್ಯತ್ವದ ಅಂಶಗಳಿಂದ ಚಿತ್ರಿಸಿ ಅವನ ಹೋಲಿಕೆಯಲ್ಲಿ ನೇಮಿಯನ್ನು ಅವನಿಗಿಂತ ಭವ್ಯತೆ – ದಿವ್ಯತೆಗಳಲ್ಲಿ ಹಿರಿಯನನ್ನಾಗಿ ಚಿತ್ರಿಸಲು ಕವಿ ಯತ್ನಿಸಿದ್ದಾನೆಂದು ಅನ್ನಿಸುತ್ತದೆ.

ಈ ಮಾತಿಗೆ ಸರಿಸಾಕ್ಷಿ ಪ್ರಸಂಗ ಎಂದರೆ 'ನೇಮಿಸಾಹಸ ಪ್ರಸಂಗ'. ಈ ಪ್ರಸಂಗದಲ್ಲಿ ಸತ್ಯಭಾಮೆ 'ಚಕ್ರಿಯ ಸತಿಯರೊಳ್ ಆನ್ ಅಗ್ಗಳದ ಅಗ್ರಮಹಿಷಿ' ಎನ್ನುವಾಗ ಕೃಷ್ಣಕಲ್ಪನೆ ಭವ್ಯವೇ. ಅದರಲ್ಲೂ ಶಾರ್ಙ್ಗಧರನ ಸಾಹಸ ಹೇಳಿ, ನೇಮಿಯನ್ನು ಜರೆದಾಗ, ಇಂಥ ಕೃಷ್ಣನ ಸಾಹಸವನ್ನು ಭವ್ಯತೆಯನ್ನು ನೇಮಿ ಮೀರಿಸಿದಾಗ ಅವನ ವ್ಯಕ್ತಿತ್ವವನ್ನು ಕೃಷ್ಣನದಕ್ಕಿಂತ ಹಿರಿದಾಗಿಸಲು ಕವಿ ಯತ್ನಿಸಿದ್ದನ್ನು ಕಾಣಬಹುದು.

ಒಟ್ಟಿನಲ್ಲಿ ಹೇಳುವುದಾದರೆ, ಕರ್ಣಪಾರ್ಯನು ಕೃಷ್ಣನ ದಿವ್ಯತ್ವ – ಭವ್ಯತ್ವಗಳನ್ನು ವೈದಿಕ ದೃಷ್ಟಿಗೆ ತಕ್ಕಂತೆ ಸಾಕಷ್ಟು ಚೆನ್ನಾಗಿ ಚಿತ್ರಿಸಿ, ತನ್ನ ಧರ್ಮ ಮತ್ತು ಕಾವ್ಯದ ಗುರಿಗೆ ತಕ್ಕಂತೆ ನೇಮಿಯನ್ನು ಕೃಷ್ಣನ ಪಾತ್ರಕ್ಕಿಂತ ಹಿರಿಮೆಯಲ್ಲಿ ಸ್ವಲ್ಪ ಎತ್ತರಿಸಲು ಪ್ರಯತ್ನಿಸಿದ್ದಾನೆ ಎನ್ನಬಹುದು.

ನೇಮಿಚಂದ್ರನ ಕೃಷ್ಣ

ನೇಮಿಚಂದ್ರನು ಕರ್ಣಪಾರ್ಯನಿಗಿಂತ ಹೆಚ್ಚಾಗಿ ಕೃಷ್ಣಚಿತ್ರಣದ ವಿಚಾರದಲ್ಲಿ ಭಾವುಕ ಕವಿಯಾಗಿದ್ದಾನೆ. ಕೃಷ್ಣಪಾತ್ರಕ್ಕೆ ಮನಸೋತ ಕವಿ ಆಗಿದ್ದಾನೆ ಎನ್ನಬಹುದು.

ಧಾರ್ಮಿಕ ಹಿನ್ನೆಲೆಯಲ್ಲಿ ಕರ್ಣಪಾರ್ಯನಿಗಿಂತ ಮಿಗಿಲಾಗಿ ಕಾವ್ಯಾಗ್ನಿಯಲ್ಲಿ ಪುಟವಿಟ್ಟ ಚಿನ್ನದಂತೆ ಕೃಷ್ಣನನ್ನು ಚಿತ್ರಿಸಿದ್ದಾನೆ. ನೇಮಿಗೆ ಸರಿದೊರೆಯಾಗಿ ಕೆಲವು ಕಡೆ ಅವನಿಗಿಂತ ಮಿಗಿಲಾಗಿ ವರ್ಣನೆಯಲ್ಲಿ ಕೃಷ್ಣ ಕಂಗೊಳಿಸುತ್ತಾನೆ. ನೇಮಿಚಂದ್ರನ ಕೃತಿಯಲ್ಲಿ ಈ ಕೃಷ್ಣಪಕ್ಷಪಾತ ಎಲ್ಲಿಯವರೆಗೆ ಕೃತಿಯಲ್ಲಿ ಸಾಗಿದೆ ಎನ್ನುವುದನ್ನು ಪೂರ್ಣವಾಗಿ ಹೇಳಲು ಸಾಧ್ಯವಿಲ್ಲವಾಗಿದೆ, ಏಕೆಂದರೆ ಇವನ ಕೃತಿ ಅರ್ಧ ನೇಮಿನಾಥ ಪುರಾಣವಾಗಿದೆ.

ನೇಮಿಚಂದ್ರನ ಕೃಷ್ಣವರ್ಣನೆಯ ಕೆಲವು ಭಾಗಗಳು ಕಾವ್ಯದ ಆನಂದರಸ ಬಿಂದುಗಳಾಗಿವೆ.

ನಂದನ ವಿಕಸಿತ ಮುಖಮುಕ
ರಾದಮನುಗುಟಿಸಿಯುಮಗಿವ ದೃಗುವೃಂದಮನಾ
ನಂದದೊಳಾನಕದುಂದುಭಿ
ದುಂದುಭಿಯುಂ ಪೊಸಯಿಸುತಂದು ಪೊಟಿಲಂ ಪೊಕ್ಕಂ
(ಅ 8 – ಪ 25, ನೇಮಿನಾಥ ಪುರಾಣಂ)

ಇದೇ ರೀತಿ ಸುಂದರ ವರ್ಣನೆಯ ಪ್ರಸಂಗಗಳು ಈ ಕವಿ ಕೃತಿಯಲ್ಲಿ ಹಲವಾರಿವೆ. (ನೇ. ಪು. 6–24, 6–25, 7–93 7–89, 7–75, 7–76)

ಈ ಭಾವಪರವಶ ವರ್ಣನೆ ಬಹುಮಟ್ಟಿಗೆ ಭಾರತ – ಭಾಗವತಗಳ ಕೃಷ್ಣನನ್ನು ನೆನಪಿಗೆ ತರುತ್ತವೆ ಹಾಗೂ ಸಾದೃಶ್ಯಗಳನ್ನು ಉಂಟುಮಾಡುತ್ತವೆ. ಇದಕ್ಕೆ ನಿದರ್ಶನವಾಗಿ ಈ ಜೋಗುಳದ ಹಾಡನ್ನು ನೋಡಬಹುದು.

ಜೋ! ನಳಿನಾಕ್ಷ ಜೋ! ಭುವನವಲ್ಲಭ ಜೋ! ನಯನಾಭಿರಾಮ ಜೋ!
ಜಾನಕಿಯಾಣ್ಮ ಜೋ! ಜನಮನೋಹರ ಜೋ! ಜಗದೀಶ ಕೃಷ್ಣ ಜೋ!
ಜೋ ನರಸಿಂಹ ಬೇಡಟದಿರಾ ಮೊಲೆಯುಂ ಓಡಿ ಹೋಯಿಯೆಂದು
ಚಂದ್ರಾನನೆ ತೊಟ್ಟಿಲ ತೊನೆದು ತೂಗುತುಮಾಡಿ ಯಶೋದೆ ಪಾಡಿದಳ್
(ಅ 7— ಪ. 59 ನೇಮಿನಾಥ ಪುರಾಣಂ)

ಈ ಜೋಗುಳದ ಹಾಡು ಯಾವ ವೈದಿಕ ಕವಿ ಚಿತ್ರಿಸಿದ ಕೃಷ್ಣಜೋಗುಳಕ್ಕೂ ಕಡಿಮೆಯಿಲ್ಲ. ನಿದರ್ಶನಕ್ಕೆ ರುದ್ರಭಟ್ಟನ ಜಗನ್ನಾಥ ವಿಜಯದಲ್ಲಿ ಮತ್ತು ದಾಸರ ಕೀರ್ತನೆಗಳಲ್ಲಿನ ಜೋಗುಳ ಪದಗಳನ್ನು ಗಮನಿಸಬಹುದು. ಇಲ್ಲಿನ ಕಾವ್ಯ ಸೌಂದರ್ಯ. ನಿರೂಪಣೆ ಚೇತೋಹಾರಿಯಾಗಿವೆ.

ನೇಮಿ– ಕೃಷ್ಣರ ಸಾದೃಶ್ಯದ ಸಾಮರಸ್ಯವನ್ನು ಈ ಪದ್ಯದಲ್ಲಿ ವಿಶೇಷವಾಗಿ ಕಾಣಬಹುದಾಗಿದೆ.

ಮಧುಮಾಯಾ ಮಥನಂ ಸಮುದ್ಧೃತ ಮಹಾಗೋತ್ರಂ ಗುಣೋದ್ದಾಮಧ
ರ್ಮಧರಾಕಂಟಕಕೈಟಭಾಪಹರಣಂ ವಾಚಾಳ ಚಾಣೂರ ವಾ
ರಿಧಿ ಸಂಶೋಷಣ ಬಾಡಬಾಗ್ನಿ ಕಲಿಕಂಸಧ್ವಂಸಕಂ ತಾಳ್ದಿದಂ
ಕದನಕ್ರೀಡೆಯನಾಡಿ ನಿತ್ಯಜಯಮಂ ಶ್ರೀ ವೀರನಾರಾಯಣಂ

(ಆ. 8—ಪ. 121, ನೇಮಿನಾಥಪುರಾಣಂ)

ಈ ಪದ್ಯದಿಂದ ನೇಮಿ – ಕೃಷ್ಣರನ್ನು ಸರಿಸರಿಯಾಗಿ ಚಿತ್ರಿಸಲು ಕವಿ ಉದ್ದೇಶಿಸಿದ್ದ ನೆಂದು ಭಾವಿಸಬಹುದಾಗಿದೆ. ಏಕೆಂದರೆ ಕರ್ಣಪಾರ್ಯನ ಕೃತಿಯಲ್ಲಿ ನೇಮಿಗೆ ಕೃಷ್ಣ ನಿಗಿಂತ ಅಧಿಕ ಪ್ರಾಶಸ್ತ್ಯವಿತ್ತುದನ್ನು ಕಂಡರೆ ಇಲ್ಲಿ ಇಬ್ಬರಿಗೂ ಸಮಾನ ಪ್ರಾಶಸ್ತ್ಯ ಕಥಾವಸ್ತುವಿನಲ್ಲಿ ಅಲ್ಲದಿದ್ದರೂ ಪಾತ್ರಚಿತ್ರಣದಲ್ಲೂ, ವರ್ಣನೆಯಲ್ಲೂ ಕಾಣಬಹುದು.

ಒಟ್ಟಿನಲ್ಲಿ ಜೈನಕವಿಗಳ (ಮೂವರು ಪ್ರಮುಖ ಕವಿಗಳ ಕೃತಿಗಳನ್ನು ಆಧಾರ ವಾಗಿಟ್ಟುಕೊಂಡು) ಕೃಷ್ಣ ಚಿತ್ರಣದ ಬಗೆಗಿನ ಅಂಶಗಳನ್ನು ಹೀಗೆ ಸಂಕ್ಷೇಪಿಸಬಹುದು.

1. ಜೈನ ಕವಿಗಳು ಕೃಷ್ಣ ಚಿತ್ರಣವನ್ನು ಲೌಕಿಕವಾಗಿ ಆಶ್ರಯದಾತನ ಚಿತ್ರ ಣಕ್ಕೂ, ಧಾರ್ಮಿಕವಾಗಿ ತೀರ್ಥಂಕರ ಚಿತ್ರಣಕ್ಕೂ ಸಾಧನ – ಮಾಧ್ಯಮವಾಗಿ ಬಳಸಿ ಕೊಂಡಿದ್ದಾರೆ.

2. ಮೂಲ ಸಂಸ್ಕೃತ ಭಾರತ, ಭಾಗವತಗಳನ್ನು ಚೆನ್ನಾಗಿ ಅಧ್ಯಯನ ಮಾಡಿ ಅಲ್ಲಿನ ರಸ ಸ್ಥಾನಗಳನ್ನು ಕಾವ್ಯದ ದೃಷ್ಟಿಯಿಂದ ಭಕ್ತಿಯ ದೃಷ್ಟಿಯಿಂದ ಸೊಗಸಾಗಿ ಗುರುತಿಸಿದ್ದಾರೆ, ಹಾಗೂ ಅವುಗಳನ್ನು ತಮ್ಮ ಕಾವ್ಯಗಳಲ್ಲಿ ತರಲು ಪ್ರಯತ್ನಿಸಿದ್ದಾರೆ.

3. ತಮ್ಮ ಧರ್ಮದ ಹಿರಿಮೆಯನ್ನು ತಮ್ಮ ಕೃತಿನಾಯಕ – ಆತ ತೀರ್ಥಂಕರನೇ ಇರಲಿ, ರಾಜನೇ ಇರಲಿ ಯಾರೇ ಇರಲಿ ಕೃತಿ ನಾಯಕನನ್ನು ಅತಿಶಯಗೊಳಿಸುವ ಸನ್ನಿವೇಶದಲ್ಲಾಗಲೀ, ಇತರ ಸಂದರ್ಭದಲ್ಲಾಗಲಿ ಕೃಷ್ಣನ ಪಾತ್ರಕ್ಕೆ ಅಗೌರವವನ್ನಾಗಲೀ ಅಪ್ರಾಧಾನ್ಯವನ್ನಾಗಲೀ ಉಂಟುಮಾಡಿಲ್ಲ.

4. ಆದರೆ ಕೃಷ್ಣನ ಬಗ್ಗೆಯ ವೈದಿಕ ಸಂಗತಿಗಳನ್ನು ಕಥಾರಚನೆಗೆ, ತಮ್ಮ ಧರ್ಮನಿಷ್ಠೆಗೆ ಹಾಗೂ ಕಾವ್ಯದ ಗುರಿಗೆ ತಕ್ಕಂತೆ ಬದಲಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಈ ಬದಲಾವಣೆ ಅನಿವಾರ್ಯವಾಗಿ ಆಗಿದೆಯೇ ಹೊರತು ದುರುದ್ದೇಶಪೂರಿತವಲ್ಲ. ಹೀಗೆ ಬದಲಾವಣೆಗಳನ್ನು ಮಾಡಿಕೊಂಡರೂ ಕನ್ನಡದಲ್ಲಿ ಶ್ರೇಷ್ಠ ಕಾವ್ಯಗಳನ್ನು ಈ ಕವಿಗಳು ರಚಿಸಿದ್ದಾರೆ ಎನ್ನುವುದನ್ನು ಅರಿಯುವುದು ಅಗತ್ಯ.

5. ವೈದಿಕ ಪಂಥದವರೂ ಜೈನ ಪಂಥದವರೂ ಉಭಯರೂ ಕಾವ್ಯವನ್ನು ಮೆಚ್ಚುವ ರೀತಿಯಲ್ಲಿ ಕಥಾವಸ್ತು, ಪಾತ್ರಚಿತ್ರಣ ವಿಚಾರದಲ್ಲಿ ಜೈನಕವಿಗಳು ಸಮನ್ವಯ

ಕಾರ್ಯವನ್ನು ನಡೆಸಿದ್ದಾರೆ ಎನ್ನಬಹುದು. ಏಕೆಂದರೆ ಜೈನಕವಿಗಳು ಕೃಷ್ಣಕಥೆಯನ್ನು ಬಳಸಿದ್ದರ ಬಗ್ಗೆ ಯಾವ ಕನ್ನಡ ಕವಿಯೂ ತೆಗಳಿಕೆಯನ್ನಾಗಲೀ, ತಿರಸ್ಕಾರವನ್ನಾಗಲೀ ಅಥವ ಪ್ರತಿಭಟನೆಯನ್ನಾಗಲೀ ತೋರಿಲ್ಲ.

6. ಕಾವ್ಯ ಮತ್ತು ಧರ್ಮ ಈ ಎರಡೂ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಕನ್ನಡ ಜೈನಕವಿಗಳು ಅನ್ಯಧರ್ಮ ಸ್ವಧರ್ಮಗಳ ಮತ್ತು ಅನ್ಯಪ್ರೇರಿತ ಸ್ವಪ್ರೇರಿತ ಕಾವ್ಯಗಳ ಅಳವಡಿಕೆ – ಸಮನ್ವಯ ಮಾಡುವ ಕೃತಿಗಳನ್ನು ರಚಿಸುವ ಕಾರ್ಯವನ್ನು ಕೈಕೊಂಡು ಕನ್ನಡದಲ್ಲಿ ಹೊಸ ಪರಂಪರೆಯನ್ನು ಪ್ರಾರಂಭಿಸಿದರು.

ಈ ರೀತಿಯ ಸ್ವಧರ್ಮ – ಅನ್ಯಧರ್ಮದ ಕಾವ್ಯವಸ್ತುಗಳ ಅಳವಡಿಕೆ. ಸಮನ್ವಯ ಪದ್ಧತಿಯ ಕಾವ್ಯ ನಿರ್ಮಾಣ ಪರಂಪರೆಯನ್ನು ವೈದಿಕ ಕವಿಗಳಲ್ಲಾಗಲೀ ವೀರಶೈವ ಕವಿಗಳಲ್ಲಾಗಲೀ ಬಹುಮಟ್ಟಿಗೆ ಕಾಣಲಾರೆವು. ಈ ದೃಷ್ಟಿಯಿಂದ ಜೈನಕವಿಗಳ ಕೃಷ್ಣಚಿತ್ರಣ ಕನ್ನಡ ಕಾವ್ಯಜಗತ್ತಿನಲ್ಲಿ ಚಿರಸ್ಮರಣೀಯವಾಗಿದೆ.

ಕನ್ನಡನಾಡಿನಲ್ಲಿ ವೈದಿಕಧರ್ಮ ಮೊದಲು ನೆಲೆಯೂರಿದ್ದರೂ ಜೈನ ಧರ್ಮ ಅನಂತರ ಬಂದರೂ ಸಾಹಿತ್ಯದಲ್ಲಿ ಮೊದಲು ಜೈನಸಾಹಿತ್ಯ – ಅನಂತರ ವೈಷ್ಣವ ಸಾಹಿತ್ಯದ ಬೆಳವಣಿಗೆ ಆಗಿರುವುದನ್ನು ಕಾಣಬಹುದು. ಪ್ರಾರಂಭದಲ್ಲಿ ವೈದಿಕ ಸಾಹಿತ್ಯ ಕನ್ನಡದಲ್ಲಿ ಇದ್ದಿರಬೇಕು – ಅಸ್ತಿತ್ವದಲ್ಲಿ ಮಾತ್ರ. ಆದರೆ ಜೈನಧರ್ಮ ಪ್ರಚಾರದಲ್ಲಿ ಪ್ರಬಲವಾಗಿ, ರಾಜಾಶ್ರಯವೂ ದೊರೆತು ಸಾಹಿತ್ಯಕ್ಷೇತ್ರದಲ್ಲಿ ಜೈನ ಕೃತಿ ಮೊದಲು ಕಾಣಿಸಿಕೊಂಡಿದೆ.

ವೈಷ್ಣವ ಕಾವ್ಯಗಳಲ್ಲಿ ಕೃಷ್ಣ

ವೈಷ್ಣವ ಕಾವ್ಯಗಳಲ್ಲಿನ ಕೃಷ್ಣಕಲ್ಪನೆ ಜೈನರಿಗಿಂತ ಭಿನ್ನವಾದುದು. ಈ ಭಿನ್ನತೆ ವೈಷ್ಣವ ಸಾಹಿತ್ಯದ ವೈಶಿಷ್ಟ್ಯವೂ ಹೌದು. ಹೇಗೆಂದರೆ, ಕೃಷ್ಣ ಆದರ್ಶ ಪುರುಷ. ಉನ್ನತ ಗುಣ ಸಂಪನ್ನ ವ್ಯಕ್ತಿಯಾಗಿ ಎರಡೂ ಧರ್ಮದ ಕವಿಗಳಿಗೆ ಕಾಣಿಸಿಕೊಂಡರೂ ವೈಷ್ಣವ ಕವಿಗಳ ಕಾವ್ಯಗಳಲ್ಲಿ ದೈವತ್ವದ ನಿರೂಪಣೆಯಲ್ಲಿ ಭಗವಂತನ ಸ್ಥಾನ ಸಿಕ್ಕಿದೆ. ಈ ಕಾರಣದಿಂದಲೇ "ಎಂಟನೆಯ ಅವತಾರವಾದ ಶ್ರೀಕೃಷ್ಣಮೂರ್ತಿಯದಾದರೂ ಸಂಪೂರ್ಣ ಮಾನುಷವಾಗಿರುವುದರ ಜೊತೆಗೆ ಅಮಾನುಷವೂ ಆಗಿದೆ". 'ಮನುಷ್ಯನಾದವನು ಏನೇನನ್ನು ಬಯಸಬಹುದೋ, ಏನೇನನ್ನು ಉತ್ತಮವೆಂದು ಭಾವಿಸಬಹುದೋ ಮನುಷ್ಯನಿಗೆ ಯಾವಯಾವುದು ಶ್ರೇಯಸ್ಸೆಂದು ಅನ್ನಿಸುತ್ತದೆಯೋ ಆ ಎಲ್ಲ ಬಗೆಯ ಭಾಗ್ಯಗಳ ಸಂಮೇಳನ ವ ೂರ್ತಿಯೇ ಶ್ರೀ ಕೃಷ್ಣ" ಎಂಬುದಾಗಿ ಶ್ರೀ ಡಿ.ವಿ.ಜಿ. ಅವರು 'ಶ್ರೀ ಕೃಷ್ಣ ಚರಿತ್ರೆ'ಯ ಮುನ್ನುಡಿಯಲ್ಲಿ ಹೇಳಿರುವಂಥ ಮಾತು ನೆನಸಿನಲ್ಲಿಡತಕ್ಕದ್ದು. ಈ ದೃಷ್ಟಿಯಿಂದ ವೈಷ್ಣವ ಕಾವ್ಯಗಳಲ್ಲಿ ಕೃಷ್ಣನನ್ನು ಭಗವಂತನಾಗಿ ಅಂತೆಯೇ ಲೀಲಾ

ಮಾನುಷವಿಹಾರಿಯಾಗಿಯೂ, ಪುರುಷೋತ್ತಮನೆಂದು ಹಾಗೆಯೇ ಆದರ್ಶಮಾನವೀ ವ್ಯಕ್ತಿಯನ್ನಾಗಿ ಚಿತ್ರಿಸಿರುವುದು ಕಂಡುಬರುತ್ತದೆ. ಮೊದಲನೆಯದಕ್ಕೆ ತಕ್ಕಂತೆ ಪವಾಡ, ದೈವಶ್ರದ್ಧೆಗಳು ಕಾವ್ಯದಲ್ಲಿ ಬಂದರೆ, ಮಾನವ ಸಹಜ ಕಲ್ಪನೆ, ಅನುಭವಗಳ ವಾಸ್ತವ ಚಿತ್ರಣವು ಎರಡನೆಯದಕ್ಕೆ ತಕ್ಕಂತೆ ಬಂದಿದೆ. ಭಗವಂತನು ಲೀಲಾಮಾನುಷವಿಹಾರಿ ಯಾದಾಗ ಆತನ ಬಗ್ಗೆ ಇರಬೇಕಾದ ದೃಷ್ಟಿಯನ್ನು ಡಿ. ವಿ. ಜಿ. ಅವರು ಹೀಗೆ ವರ್ಣಿಸಿದ್ದಾರೆ. "ಕೃಷ್ಣನನ್ನು ಮನುಷ್ಯ ಮಾತ್ರನಲ್ಲ ಅತಿಮಾನುಷನು ಆದಿಪುರುಷನು –ಎಂದು ಭಾವಿಸುವವರು ಕೃಷ್ಣನ ಪ್ರಣಯ ಕಥೆಯು ಸಾಮಾನ್ಯ ಮನುಷ್ಯರಿಗೆ ಅನ್ವಯಿಸಲಾರದ ಒಂದು ವಿಶೇಷಾಕಾರದ ಲೋಕಾನುಗ್ರಹ ವಿಧಾನವೆಂದು ಗ್ರಹಿಸತಕ್ಕದ್ದು" – ಈ ಮಾತು ವೈಷ್ಣವ ಕೃಷ್ಣನನ್ನು ಕಾಣುವಾಗ ನೆನಪಿಸಲ್ಲಿಡತಕ್ಕ ಅಂಶವಾಗಿದೆ.

ಈ ದೃಷ್ಟಿ ಕನ್ನಡ ವೈಷ್ಣವ ಕವಿಗಳ ಕಾವ್ಯಕ್ಕೆ ಸಮಂಜಸವಾಗಿ ಒಪ್ಪುತ್ತದೆ. ಇಲ್ಲದಿದ್ದಲ್ಲಿ ರುದ್ರಭಟ್ಟ, ಕುಮಾರವ್ಯಾಸ, ಲಕ್ಷ್ಮೀಶ ಮೊದಲಾದವರ ಕೃತಿಗಳಲ್ಲಿ ಕಂಡು ಬರುವ ಕೃಷ್ಣನ ಶೃಂಗಾರಲೀಲೆ ಹಾಗೂ ಪವಾಡಗಳಿಗೆ ಸಮರ್ಪಕ ಸಮರ್ಥನೆ ಕಾಣುವುದು ಕಷ್ಟವಾಗುತ್ತದೆ. ಅಸಹಜ ಅಥವಾ ಅದ್ಭುತ ಘಟನೆಗಳು ನಂಬಲು ಯೋಗ್ಯವಲ್ಲ ಎಂಬ ಭಾವನೆಗೆ ಎಡೆಗೊಟ್ಟೀತು.

ಕನ್ನಡದ ವೈಷ್ಣವ ಕವಿಗಳ ಸಂಖ್ಯೆ ಸಾಕಷ್ಟು ಅಧಿಕವಿಲ್ಲದಿದ್ದರೂ ಭಾರತ, ಭಾಗವತಗಳ ವಿವಿಧ ಘಟ್ಟಗಳನ್ನು ಕುರಿತ ಸಮಗ್ರಚಿತ್ರ ಕನ್ನಡದಲ್ಲಿ ಸಿಕುತ್ತದೆ ಎನ್ನುವುದು ಸಮಾಧಾನದ ಸಂಗತಿ.

ಉದಾಹರಣೆಗೆ ಕೃಷ್ಣನ ಬಾಲ್ಯವನ್ನು ವಿಶೇಷವಾಗಿ ರುದ್ರಭಟ್ಟನ ಕೃತಿಯಲ್ಲಿ ಕಂಡರೆ, ಕುಮಾರವ್ಯಾಸನ ಕೃತಿಯಲ್ಲಿ ಕೃಷ್ಣನ ಪ್ರಬುದ್ಧ ಅವಸ್ಥೆಯ ರೀತಿನೀತಿ, ವ್ಯವಹಾರಚಾತುರ್ಯ ಕಂಡುಬರುತ್ತದೆ. ಹಾಗೆಯೇ ಕೃಷ್ಣನ ಉತ್ತರ ಘಟ್ಟದ ಜೀವನವನ್ನು ಅಶ್ವಮೇಧಪರ್ವದ ವಸ್ತುವಿನಲ್ಲಿ ಲಕ್ಷ್ಮೀಶನ ಜೈಮಿನಿಭಾರತದಲ್ಲಿ ಕಾಣಬಹುದು.

ವೈಷ್ಣವ ಕವಿಗಳು ಕೃಷ್ಣನನ್ನು ಹಾಗೂ ಭಾರತವನ್ನು ಚಿತ್ರಿಸುವ ಸಂದರ್ಭದಲ್ಲಿ ವಿಶಿಷ್ಟ ಸನ್ನಿವೇಶದಲ್ಲಿ ಪ್ರತ್ಯೇಕವಾಗಿ ವಿವಿಧ ಪ್ರಮಾಣದಲ್ಲಿ ರಾಮಾಯಣದ ಕಥೆಯನ್ನು ಪ್ರಸ್ತಾಪಿಸಿರುವುದನ್ನು ಕಾಣಬಹುದು. ಇದು ರುದ್ರಭಟ್ಟನ ಕೃತಿಯಲ್ಲಿ ಬೀಜರೂಪದಲ್ಲಿ ಒಂದೇ ಪದ್ಯದಲ್ಲಿಯೂ ಕುಮಾರವ್ಯಾಸನಲ್ಲಿ ಸಸಿರೂಪದಲ್ಲಿ ಸಂಗ್ರಹವಾಗಿ ಆ ರಾಮಾಯಣದ ಚಿತ್ರ ಬಂದರೆ, ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ರಸ ಸನ್ನಿವೇಶದ ವಿಶೇಷ ಪ್ರಕರಣವಾಗಿ ಒಂದು ರೀತಿ ರಸಫಲವಾಗಿ ಸೀತಾವನವಾಸದ ಪ್ರಸಂಗ ಸನ್ನಿವೇಶ ಹಾಗೂ ರಾಮನ ಚರಿತ್ರೆ ಸುಂದರವಾಗಿ ಬಂದಿದೆ.

ಕೃಷ್ಣನನ್ನು ಕುರಿತ ಜೈನಕೃತಿಗಳು ಬಹುತೇಕ ಚಂಪೂ ಕೃತಿಗಳಾಗಿವೆ. ವೈಷ್ಣವ ಕೃತಿಗಳು ಚಂಪೂ ಷಟ್ಪದಿ ಕೃತಿಗಳಾಗಿದ್ದು ಛಂದೋವೈವಿಧ್ಯ ಹೆಚ್ಚಾಗಿದೆ ಎನ್ನಿಸುತ್ತದೆ. ಜೈನ ಕೃತಿಗಳಲ್ಲಿ ಸಮಗ್ರವಾಗಿ ಪಾಂಡಿತ್ಯ, ವಿಶೇಷವಾಗಿ ಬಿಗಿಶೈಲಿ ಕಂಡುಬರುತ್ತದೆ, ವೈದಿಕ ಕವಿಗಳಲ್ಲಿ ಪಂಡಿತಶೈಲಿ ಅಲ್ಲಲ್ಲಿ ಕಂಡುಬಂದರೂ, ಸರಳ ಶೈಲಿ ಅನೇಕ ಕಡೆಗಳಲ್ಲಿ ಹೆಚ್ಚು ಪ್ರಮಾಣಗಿಲ್ಲಿ ಕಾಣಿಸಿಕೊಂಡಿದೆ.

ವೈಷ್ಣವ ಕವಿಗಳು ಜೈನ ಕವಿಗಳ ಕೃತಿಗಳನ್ನು ವಿಶೇಷವಾಗಿ ಭಾಷೆಯ ದೃಷ್ಟಿಯಿಂದ ಗಮನಿಸಿದ್ದಾರೆ. ಉದಾಹರಣೆಗೆ ಜಗನ್ನಾಥವಿಜಯದಲ್ಲಿ ರುದ್ರಭಟ್ಟನು ಹೇಳುವ ಮಾತನ್ನು ಗಮನಿಸಬಹುದು.

> ಇನಿತುಮುವಿರ್ಕೆ ಮತ್ಕೃತಿಯೊಳೀ ಧರೆ ಬಣ್ಣಿಸೆ ಸಂದ ಶಂಖವ
> ರ್ಮನ **ಬಗೆ** ಶಾಂತಿವರ್ಮನ **ನಯಂ** ಗುಣವರ್ಮನ **ಬಂಧಗೌರವಂ**
> **ಮನಸಿಜನೋಜೆ** ಕರ್ಣಮನ **ಜಾಣ್ನುಡಿ** ಪಂಪನ **ರೀತಿ** ಚಂದ್ರಭ
> ಟ್ಟನ **ಜತೆ** ಪೊನ್ನಮಯ್ಯನ **ಬೆಡಂಗು** ಗಜಾಂಕುಶನೊಳ್ಪ **ಬಿನ್ನಣಂ**
>
> (ಆ. 1. ಪ. 10.)

ಹೀಗೆ ಕಥಾವಸ್ತುವಿಗೆ, ಪಾತ್ರಚಿತ್ರಣಕ್ಕೆ ಮೂಲ ಸಂಸ್ಕೃತ ಕೃತಿ ಮತ್ತು ಜೈನ ಕವಿಗಳ ಕೃತಿಗಳಿಂದ ಸಹಾಯ ಪಡೆದು ಸ್ಮರಿಸಿದ್ದಾರೆ.

ಜೈನರು ತಮ್ಮ ಕೃತಿಗಳಲ್ಲಿ ಧರ್ಮಕ್ಕೆ ಕೃಷ್ಣನನ್ನು ಸಾಧನವಾಗಿ ಬಳಸಿಕೊಂಡಿದ್ದರಿಂದ ಯಾವ ಪ್ರಭಾವ, ಪರಿಣಾಮ ವೈಷ್ಣವ ಕವಿಗಳ ಮೇಲಾಗಲಿ ಅಥವಾ ಸಾಮಾಜಿಕವಾಗಿ ಜನಜೀವನದಲ್ಲಾಗಲಿ ಅಭೂತಪೂರ್ವ ಬದಲಾವಣೆಗೆ ಕಾರಣವಾಗಲಿಲ್ಲ. ಇದಕ್ಕೆ ಕಾರಣ "ಕೃಷ್ಣನನ್ನು ಭಿನ್ನ ಭಿನ್ನ ದೃಷ್ಟಿಗಳಲ್ಲಿ ಅವರವರ ದರುಶನಕ್ಕೆ ತಕ್ಕಂತೆ ಅರ್ಥೈಸಿಕೊಳ್ಳುವುದು ತಪ್ಪಲ್ಲ" ಎಂಬ ಭಾವನೆ ಎಲ್ಲ ಕವಿಗಳಿಗೂ ಇದ್ದಿತು ಎಂಬುದೇ ಆಗಿದೆ.

ಈಗ ನಿದರ್ಶನಕ್ಕೆ ವೈಷ್ಣವ ಕವಿಗಳ ಕೃಷ್ಣ ಚಿತ್ರಣದ ವೈಖರಿಗೆ ಮೂವರು ಕವಿಗಳ ಕೃತಿಗಳನ್ನು ಸ್ಥೂಲವಾಗಿ ಪರಿಶೀಲಿಸಬಹುದಾಗಿದೆ.

ರುದ್ರಭಟ್ಟ, ಕುಮಾರವ್ಯಾಸ, ಲಕ್ಷ್ಮೀಶ ಈ ಮೂವರ ಕಾಲ ವಿಚಾರದಲ್ಲಿ ವಾದ ವಿವಾದಗಳೂ, ಭಿನ್ನಾಭಿಪ್ರಾಯಗಳೂ ಸಾಕಷ್ಟಿದ್ದರೂ, ಸ್ಥೂಲವಾಗಿ ರುದ್ರಭಟ್ಟ 12ನೇ ಶತಮಾನ, ಕುಮಾರವ್ಯಾಸ 14ನೇ ಶತಮಾನ, ಲಕ್ಷ್ಮೀಶ 16ನೇ ಶತಮಾನ ಎನ್ನಬಹುದು. ಆದ್ದರಿಂದ ಕಾಲದ ದೃಷ್ಟಿಯಿಂದ ಮೊದಲಿಗೆ ರುದ್ರಭಟ್ಟ, ಅನಂತರ ಕುಮಾರವ್ಯಾಸ, ಲಕ್ಷ್ಮೀಶರ ಕೃತಿಗಳನ್ನು ಪ್ರಸ್ತಾಪಕ್ಕೆ ತೆಗೆದುಕೊಂಡಿದೆ.

ಇದಲ್ಲದೆ ಕಥನ ನಿರೂಪಣಾ ದೃಷ್ಟಿಯಿಂದಲೂ ಪೂರ್ವೋತ್ತರ ಶಕ್ಯತೆ ನಿರೂಪಣೆಯ ಭಾಗವತದ ಆಧಾರವಾದ ಜಗನ್ನಾಥ ವಿಜಯವನ್ನು ಮೊದಲಿಗೂ, ಪ್ರೌಢ ಪ್ರಬುದ್ಧ ವ್ಯವಹಾರ ಚಿತ್ರಿಸುವ ಭಾರತ ಆಧಾರಿತ ಕುಮಾರವ್ಯಾಸ ಭಾರತವನ್ನು ಅನಂತರದಲ್ಲೂ, ಭಾರತದ ನಂತರ ಜೈಮಿನಿ ಭಾರತದ ಅಶ್ವಮೇಧ ಪರ್ವವನ್ನೂ ಲಕ್ಷ್ಮೀಶನ ಕೃತಿಯನ್ನು ಪರಿಶೀಲಿಸುವುದು ಔಚಿತ್ಯಪೂರ್ಣವಾಗಿದೆ.

ರುದ್ರಭಟ್ಟನ ಬಾಲಕೃಷ್ಣ

ಕೃಷ್ಣಲೀಲೆಗಳನ್ನು ರಾಧಾಕೃಷ್ಣರನ್ನು ಪ್ರಬುದ್ಧ ಶೃಂಗಾರದ ಹಿನ್ನೆಲೆಯಲ್ಲಿ ರಸಪೂರ್ಣವಾಗಿ ಸಂಸ್ಕೃತ ಗೀತಗೋವಿಂದದಲ್ಲಿ ಜಯದೇವನೂ, ವಾತ್ಸಲ್ಯರಸದ ಹಿನ್ನೆಲೆಯಲ್ಲಿ ಬಾಲಕೃಷ್ಣನನ್ನು ಲೀಲಾಶುಕನು 'ಕೃಷ್ಣಕರ್ಣಾಮೃತ' ದಲ್ಲೂ ಚಿತ್ರಿಸಿದ್ದಾರೆ. ರುದ್ರಭಟ್ಟನ ಕೃತಿಯಲ್ಲಿ ಈ ಎರಡೂ ಬಗೆಯ ಚಿತ್ರಣದ ಸರಸ ಸಂಮಿಲನ ಕಂಡು ಬರುತ್ತದೆ ಎನ್ನಬಹುದು.

ಹರಿದಾಸರ ಕೃತಿಗಳಲ್ಲೂ ರುದ್ರಭಟ್ಟನಂತೆಯೇ ಬಾಲಕೃಷ್ಣನ ಮತ್ತು ರಾಸ ಕೃಷ್ಣನ ಲೀಲೆಗಳನ್ನು ಕಾಣಬಹುದಾದರೂ, ಅವರ ಕೀರ್ತನೆಗಳಲ್ಲಿ ಬಿಡಿಬಿಡಿ ಚಿತ್ರಣವಾಗಿ ಬಂದಿದೆಯೇ ಹೊರತು ಸಮಗ್ರ ಕಾವ್ಯವಾಗಿ ಮೂಡಿಬಂದಿಲ್ಲ. ಆದರೆ ಇದಕ್ಕೆ ಅಪವಾದವಾಗಿ ಕಾವ್ಯ ರಚನೆ ಮಾಡಿದ ದಾಸರ ಪೈಕಿ ಪ್ರಸಿದ್ಧರಾದ ಕನಕದಾಸರ 'ಮೋಹನ ತರಂಗಿಣಿ' ಒಂದು ಇಡಿಯಾದ ರಸಘಟ್ಟಿಯಾಗಿದೆ. ರುದ್ರಭಟ್ಟನ ಜಗನ್ನಾಥ ವಿಜಯದಲ್ಲಿ ಕೃಷ್ಣನ ಜನನದಿಂದ ಪ್ರಬುದ್ಧ ಜೀವನದವರೆಗಿನ ಸಮಗ್ರ ಸಕ್ರಿಯ ಚಿತ್ರಣವನ್ನು ಕಾಣುತ್ತೇವೆ. ಆದರೆ ಭಕ್ತಿನಿರೂಪಣೆ ವಿಚಾರದಲ್ಲೂ ಸ್ವರೂಪ ವೈವಿಧ್ಯದಲ್ಲೂ ಹರಿದಾಸರಿಗೂ ರುದ್ರಭಟ್ಟನಿಗೂ ಭಿನ್ನತೆ ಸಾಕಷ್ಟಿದೆ.

ವಿಷ್ಣುಪುರಾಣದ ಕಥೆಯನ್ನು ರುದ್ರಭಟ್ಟನು ಅನುಸರಿಸಿದ್ದರೂ ಅದು ಆತನ ಪಾಲಿಗೆ ಕೇವಲ ಕಥೆಯಾಗಲಿ ಪುರಾಣವಾಗಲಿ ಆಗಿಲ್ಲ, 'ಕಥಾಪತಿ ಕೃಷ್ಣನ ಕೃತಿ' ಭೂನುತವಾದ ಜಗನ್ನಾಥ ವಿಜಯವಾಗಿರುವುದೇ ಆ ಕಾವ್ಯದ ಹಿರಿಮೆಗೆ ಎಡೆ ದೊರೆತಿದೆ.

ರುದ್ರಭಟ್ಟನ ಪಾಂಡಿತ್ಯದ ಭಾಷಾ ಪಂಜರದಲ್ಲಿ ಸಂಪ್ರದಾಯದ ಕಥನದ ಗಿಣಿಯಾಗಿ ಕೃಷ್ಣ ಸ್ವರೂಪ ಕಂಡುಬಂದರೂ, ಆತನ ಕವಿ ಪ್ರತಿಭೆ ಮೂಲದಲ್ಲಿಲ್ಲದ ಹಲವಾರು ರಮಣೀಯ ಸನ್ನಿವೇಶಗಳ ನಿರ್ಮಾಣ, ವರ್ಣನೆ ಕಾರಣವಾಗಿ ವಿನೂತನ ಅವತಾರಿಯಾಗಿ ಅಲ್ಲಲ್ಲಿ ಕಥಾನಾಯಕ ಕಾಣಿಸಿಕೊಳ್ಳುತ್ತಾನೆ. 'ಜಗನ್ನಾಥವಿಜಯ'ದ ಕೃಷ್ಣ ಬಾಲಗೋಪಾಲನಾಗಿ ತನ್ನ ಲೀಲೆಗಳನ್ನು ಬೆಳಗಿದ ರೀತಿ ಅಪೂರ್ವವಾಗಿದೆ. ಶಿಶುವಾದ ಕೃಷ್ಣನನ್ನು ಜೋಗುಳ ಹಾಡಿ ತೂಗಿದ ರೀತಿಯಂತೂ ಹೃದಯಂಗಮವಾಗಿದೆ.

ಉದರಮೆ ತೊಟ್ಟಿಲಾಗೆ ಭುವನತ್ರಯಮುಂ ನೆಱೆ ತಾಳ್ದ ದೇಹವ
ಗ್ಗದಕೃತಪುಣ್ಯಪಾಪ ಫಲಮಂ ಸಲೆ ತೂಗುವ ಕರ್ಮಸಾಕ್ಷಿಯುಂ
ಪದುಳದೆ ತೊಟ್ಟಿಲೊಳ್ಪಡಿಸಿ ತೂಗಿದರಚ್ಯುತ ಜೋ ಮಹಾತ್ಮ ಜೋ
ಸದಮಲಬೋಧ ಜೋ ಪರಮಜೋ ಹರಿಜೋಯೆನುತಂ ಲತಾಂಗಿಯರ್
(ಆ.3 —ಪ. 28, ಜಗನ್ನಾಥ ವಿಜಯ)

ಶ್ರೀಕೃಷ್ಣನ ಜನನದಿಂದ ಬಾಣಾಸುರ ಯುದ್ಧದವರೆಗಿನ ಕಥಾವಸ್ತುವನ್ನು ಹರಹಿಕೊಂಡ ಈ ಕಾವ್ಯ ಜಗನ್ನಾಥನಾದ ಕೃಷ್ಣನನ್ನು ದೈವವನ್ನಾಗಿ ಅತಿ ಮಾನುಷದ ತೊಡಿಗೆಯಲ್ಲೇ ಚಿತ್ರಿಸ ಹೊರಟರೂ, ಕವಿಪ್ರತಿಭೆ ಬಾಲಗೋಪಾಲನ ಲೀಲೆಗಳನ್ನು ಚಿತ್ರಿಸುವಾಗ ಸಹಜತೆಯನ್ನು ಕಳೆದುಕೊಂಡಿಲ್ಲ. ಕವಿ ಬಾಲಗೋಪಾಲನು ತಪ್ಪುತಪ್ಪಾಗಿ ದಟ್ಟಡಿಗಳನ್ನು ಇಡುವಾಗಿನ ಸಹಜ ಸೌಂದರ್ಯದೊಂದಿಗೆ ದೈವಿಕತೆಯನ್ನೂ ಕಾಣುತ್ತಾನೆ.

ಒಂದಡಿಯನಿಟ್ಟು ಹರಿ
ಮತ್ತೊಂದಡಿಗಡಿಯೆತ್ತುವಾಗಳುಂ ವಿಕ್ರಮನಾ
ದಂದಿನ ಸಂಸ್ಕಾರಂ ಬಿಡ
ದೆಂದೆನೆ ಬಗೆಗೊಳಿಸಿದಂ ತಳರ್ನಡೆವೆಡೆಯೊಳ್
(ಆ, 3—ಪ. 42, ಜಗನ್ನಾಥ ವಿಜಯ)

ಬಾಲಲೀಲೆಗಳ ಚಿತ್ರಣದಲ್ಲಿ ಬಾಲಕನಷ್ಟೇ ಸುಂದರವಾದ ಲಲಿತ ನಿರೂಪಣೆಯನ್ನು ಕಾಣಬಹುದು. "ಕಥೆಯಂ ಕೇಳಲೆ ಕಂದ ಹುಂ.........", "ನಿಮ್ಮ ಹೇಮ ಘಂಟಿಕೆ ಘಣಿಲೆಂಬ ನಂದಿನಿಯ ಪಾಲಿದೆ ನೀ ಕುಡಿಯಲ್ಕೆ ನಿನ್ನ ಜೆಂಡಿಕೆ ಬೆಳೆದಪ್ಪುದು" ಎಂದು ಗೋಪಿ ಹೇಳಲು ಹಾಲ್ಕುಡಿದ ಶಿಶು "ಅಬ್ಬೆ ಜೆಂಡಿಕೆಯೆನಿತುದ್ದವಾದುದು?" ಎಂದು ಪ್ರಶ್ನಿಸುವ ರೀತಿ ಹೃದಯಸ್ಪರ್ಶಿಯಾಗಿದೆ. ಇಂಥ ಇನ್ನೂ ಹಲವಾರು ರಸದ ಒರತೆಗಳು ಆತನ ಕಾವ್ಯಭೂಮಿಯಲ್ಲಿ ಅಲ್ಲಲ್ಲಿ ಚಿಮ್ಮಿ ಓದುಗರ ಮನದ ದಾಹ ತಣಿಸುತ್ತದೆ.

ಕವಿಯ ಅಷ್ಟಾದಶ ವರ್ಣನೆಗಳಲ್ಲಿ ಸಂಪ್ರದಾಯಕ್ಕೆ ಶರಣಾದಂತೆ ಕಂಡುಬಂದರೂ ಕೆಲವೆಡೆ ವರ್ಣನೆಗಳಲ್ಲಿ ಅಪೂರ್ವ ಜೀವಂತಿಕೆಯನ್ನು ತಂದಿದ್ದಾನೆ. ಕದ್ದು ಬೆಣ್ಣೆಯನ್ನು ತಿನ್ನುತ್ತಿದ್ದ ಗೋಪಾಲನನ್ನು ಯಶೋದೆ ಕಂಡ ಸನ್ನಿವೇಶವನ್ನು ಇಲ್ಲಿ ನಿದರ್ಶನವಾಗಿ ನೋಡಬಹುದು.

ಘನ ಕುಚೆ ಗೋಪಿ ಪಾಲ್ಗರೆಯುತುಂ ಮನೆವಾಟಿಗೆ ಪೋಗೆ ಗಜ್ಜೆಯುಂ
ದನಿ ನಸು ಪೊಣ್ಮದಂತು ಪಿಂತಡೆಪಗೆಯ್ಯೊಳ್ ತೋಡಿ ಬೆಣ್ಣೆಯುಂ
ತಿನುತಿರೆ ಗೋಪಿ ಕಂಡೆಲೆಲೆ ಕಳ್ಳತನಂಗಳನಣ್ಣ ಕಂಡೆವಾ
ಪೆಸೆ ಕದಪಾಯ್ತು ಬೆಣ್ಣೆ ಪೆರಸೋಯ್ತು ನೆ ಓಡುಗುವ ಕೃಷ್ಣನೊಪ್ಪಿದಂ
(ಆ. 3,—ಪ, 51, ಜಗನ್ನಾಥ ವಿಜಯಂ)

ನೀರಜೋತ್ಪಲಸಾದಿವಂ ...." ಇತ್ಯಾದಿ ಪದ್ಯಗಳನ್ನು ವರ್ಣನಾ ಚಾತುರ್ಯಕ್ಕೆ ನಿದರ್ಶನವಾಗಿ ನೋಡಬಹುದು.

ಕಾವ್ಯನಾಯಕ ಕೃಷ್ಣನಿಗೆ ಸಲ್ಲಿಸಿದ ಅಪೂರ್ವ ಭಕ್ತಿಯಲ್ಲಿ ಭಕ್ತಿರಸಾಯನವೇ ಅಡಗಿರುವುದನ್ನು ನೋಡಬಹುದು.

ಜಗಮುಂ ನುಂಗುವ ಶೂಲಿ ನೀನೆ ಜಗಮುಂ ಮಾಳ್ಪಬ್ಜಜು ನೀನೆ ತ
ಜ್ಜಗಮುಂ ರಕ್ಷಿಪ ವಿಷ್ಣು ನೀನೆ ಜಗಮುಂ ಪೋ ನೀನೆ ಸರ್ವೇಶ ಸ
ರ್ವಗ ಸರ್ವಾತ್ಮಕ ಸರ್ವಭೂತಮಯ ನಿನ್ನಿಂ ಭಿನ್ನಮಾಗಿರ್ಪ ವ
ಸ್ತುಗಳಿಲ್ಲೀ ರಿಪು ಭಿನ್ನನಾದನಿದು ಚಿತ್ರಂ ಪದ್ಮಪತ್ರಾಂಬಕಾ

(ಆ. 5, ಪ. 49. ಜಗನ್ನಾಥ ವಿಜಯಂ)

ಪೂತನೀ ಹರಣ, ಶಕಟಾಸುರ ಮರ್ದನ, ಧೇನುಕಾಸುರ ವಧೆ – ಇತ್ಯಾದಿ ಪ್ರಸಂಗಗಳಲ್ಲಿ ಕೃಷ್ಣನನ್ನು ಪವಾಡ ಶಿಶುವನ್ನಾಗಿ ಚಿತ್ರಿಸಿದ್ದರೂ, ಕವಿ ಅವುಗಳೆಲ್ಲವನ್ನೂ ಚಮತ್ಕಾರಿಕವಾಗಿ ನಿರೂಪಿಸುತ್ತಾನೆ.

ಭಕ್ತಕವಿಯಾದರೂ ಸಮರ್ಥವಾದ ಉನ್ನತ ಶೃಂಗಾರ ನಿರೂಪಣೆ ಮಾಡಿರುವುದನ್ನು ಕಾಣಬಹುದು. ಕೃಷ್ಣ – ರುಕ್ಮಿಣಿಯರ ಮಿಲನದ ಒಂದು ಚಿತ್ರಣವನ್ನು ಇದಕ್ಕೆ ನಿದರ್ಶನವಾಗಿ ಕೆಳಗೆ ಕೊಟ್ಟಿದೆ.

ದ್ಯಾವಾ ಪೃಥ್ವೀವಲ್ಲರಿ
ತೀವಿದುವಲರಂಬಿನಿಂದಮೆನೆ ಬೆಳ್ದಿಂಗ
ಳ್ತೀವಿರೆ ಜಗಮುಂ ಕೃಷ್ಣಂ
ದೇವಿಯುವೆರಸಮಳ ಧವಳ ಶಯನದೊಳೆಸೆದಂ॥

(ಆ. 1—ಪ. 135, ಜಗನ್ನಾಥ ವಿಜಯಂ)

ಪಾಂಡಿತ್ಯದ ಪ್ರಭೆಗೆ ಸಿಲುಕಿ ರುದ್ರಭಟ್ಟನ ಕೃಷ್ಣ ಪಾತ್ರ ಕೆಲವೊಮ್ಮೆ ಮಸುಳಿಸಿರುವುದನ್ನು ಕಾಣಬಹುದಾದರೂ, ಅಕ್ರೂರಾಗಮನದ ಸನ್ನಿವೇಶ, ಪಾರಿಜಾತ ಪ್ರಸಂಗ, ಶಚಿ – ಸತ್ಯಭಾಮೆಯರ ಸಂವಾದ – ಇವೇ ಮೊದಲಾದ ಸನ್ನಿವೇಶ ಚಿತ್ರಣಗಳಲ್ಲಿ ದೈವಿಕ ಕೃಷ್ಣ ಪಾತ್ರ ಸಹಜ ಸುಂದರವಾಗಿ ವಿಕಸಿತವಾಗಿರುವುದನ್ನು ಗಮನಿಸಬೇಕಾಗಿದೆ.

ನಾರಣಪ್ಪನ ಪ್ರಬುದ್ಧ ಕೃಷ್ಣ

ಋಷಿ ಕವಿ ವ್ಯಾಸನಾದರೆ, ಕಲಿಕವಿ ಪಂಪನಾದರೆ, ನಾರಣಪ್ಪ ಭಕ್ತಕವಿ. ಭಾರತವನ್ನು ದ್ರಷ್ಟಾರನಾಗಿ ವ್ಯಾಸ ಕಾವ್ಯ ರಚಿಸಿದರೆ, ದೊರೆಗಾಗಿ ಲೌಕಿಕ ಕಾವ್ಯವನ್ನು ಪಂಪ

ರಚಿಸಿದರೆ, 'ತೇನ ವಿನಾ ತೃಣಮಪಿ ನ ಚಲತಿ' ಎಂಬ ತತ್ವ ನಿರೂಪಣೆಗಾಗಿ ಶ್ರೀ ಕೃಷ್ಣ ಕಾವ್ಯವನ್ನು ವೀರನಾರಾಯಣನ ಭಕ್ತನಾಗಿ ಹಲಗೆ ಬಳಪವ ಒಡಿಯದ ಅಗ್ಗಳಿಕೆಯಲ್ಲಿ ನಾರಣಪ್ಪ ರಚಿಸಿದನು.

ನಾರಣಪ್ಪನ ಕೃಷ್ಣಕಥಾ ಚಿತ್ರಣವನ್ನು ಪರಿಶೀಲಿಸುವ ಮೊದಲು ವ್ಯಾಸ – ಪಂಪ ರಿಗೂ ನಾರಣಪ್ಪನಿಗೂ ಇರುವ ದೃಷ್ಟಿಭೇದವನ್ನು ಮರೆಯಲಾಗದು. ವ್ಯಾಸರ ಕೃತಿಯಲ್ಲಿ ಯುಧಿಷ್ಠಿರ ಕಥಾನಾಯಕನಾಗಿ ಕಂಡರೆ, ಪಂಪನಲ್ಲಿ ಅರ್ಜುನ ಕಥಾನಾಯಕ, ನಾರಣಪ್ಪನಿಗೆ ಶ್ರೀಕೃಷ್ಣ ಕಥಾನಾಯಕ. ವೈದಿಕ ಮತದ ಹಿನ್ನೆಲೆಯಲ್ಲಿ ಇತಿಹಾಸ ಕಾವ್ಯವನ್ನಾಗಿ ವ್ಯಾಸ ಕೃತಿರಚನೆ ಮಾಡಿದರೆ, ಜೈನಮತದ ಪ್ರಾಬಲ್ಯದ ಕಾಲದಲ್ಲಿ ಕ್ಷಾತ್ರ ಕಾವ್ಯವನ್ನಾಗಿ ಪಂಪ ರಚಿಸಿದನು. ವೈಷ್ಣವ ಮತದ ಪ್ರಾಬಲ್ಯದ ಕಾಲದಲ್ಲಿ ನಾರಣಪ್ಪ ಭಕ್ತಿಕಾವ್ಯವಾಗಿ ರಚಿಸಿದ. ವ್ಯಾಸನಿಗೆ ಲೌಕಿಕದ ಹಂಗು ಇರಲಿಲ್ಲ, ಋಷಿ ಜೀವನ ಆತನದು. ಪಂಪನಿಗೆ ಅರಮನೆಯ ಋಣವಿತ್ತು. ನಾರಣಪ್ಪನಿಗೆ ಅರಮನೆ ಭಾರ – ಗುರುಮನೆ ವ್ಯವಹಾರ ಯಾವುದೂ ಇರಲಿಲ್ಲ. ಒಂದು ರೀತಿಯಲ್ಲಿ ನಾರಣಪ್ಪ ನನ್ನು 'ಜನತಾಕವಿ' ಎನ್ನಬಹುದು.

ಶ್ರೀಕೃಷ್ಣನನ್ನು ವ್ಯಾಸ – ಪಂಪ – ನಾರಣಪ್ಪರು ಹೇಗೆ ಚಿತ್ರಿಸಿದ್ದಾರೆ ಎಂಬುದನ್ನು ವಿ. ಸೀ. ಹೀಗೆ ವಿವರಿಸಿದ್ದಾರೆ.

ವ್ಯಾಸಭಾರತದಲ್ಲಿ ಶ್ರೀಕೃಷ್ಣ ಚಿತ್ರಣವು "ಸ್ವಲ್ಪ ಸ್ವಲ್ಪವಾಗಿ ಆತನ ಪ್ರಭಾವವು ಕಾಣಲು ಪ್ರಾರಂಭವಾಗಿ ಆತನು ಸರ್ವವ್ಯಾಪಕವಾಗುವ ದೃಶ್ಯವು ಕಟ್ಟಿ ನಿಲ್ಲುವುದು."

"ಪಂಪಭಾರತದಲ್ಲಿ ಶ್ರೀಕೃಷ್ಣನು ಆದಿಪುರುಷನ ಅವತಾರವಾದರೂ ಕೇವಲ ವಿಕ್ರಮಾರ್ಜುನನ ದಿವ್ಯ ಸಖ ಮಂತ್ರಿ."

"ನಾರಣಪ್ಪನ ಭಾರತದ ಪ್ರಕಾರ ಭೂಭಾರವಿಳಿಸಲು ಜನ್ಮವೆತ್ತಿ ಖಳಮಂಡಲ ವನ್ನೆಲ್ಲ ಒರೆಸಿ ತನ್ನ ಕಾರ್ಯವನ್ನು ಮಾಡಿಕೊಂಡ ಭಕ್ತಬಂಧು, ಮಹಾವಿಷ್ಣು"

ನಾರಣಪ್ಪನ ಭಾರತವನ್ನೇ ಒಳಹೊಕ್ಕು ನೋಡಿದರೆ ಉಳಿದಿಬ್ಬರಿಗಿಂತ ವೈವಿಧ್ಯ ಪೂರ್ಣವಾಗಿ ಕೃಷ್ಣನನ್ನು ನಾರಣಪ್ಪ ಚಿತ್ರಿಸಿದ್ದಾನೆ. ಆತನು ವಿನೋದಪ್ರಿಯ. ದುರ್ಯೋಧನ, ಅರ್ಜುನರು ಕುರುಕ್ಷೇತ್ರ ಯುದ್ಧಕ್ಕೆ ಮೊದಲು ದ್ವಾರಾವತಿಯಲ್ಲಿ ಭೇಟಿಯಾದ ಪ್ರಸಂಗ ಇದಕ್ಕೆ ಸಾಕ್ಷಿ – "ಇದಿರಲಿ ಸುರಪತಿಯ ಸೂನುವನು ಕಂಡನು ನಗೆಯ ಮೊನೆ ಮಿಸುಗೆ, ತಿರುಗಿ ನೋಡುತ ತಲೆಯ ದೆಸೆಯಲಿ, ಕುರುಕುಲೇಶನ ಅತಿ ವಿಕಾರತೆ, ಇರವ ಕಂಡೆನಿದೇನೆಂದು ಅಸುರರಿಪು ನುಡಿದ" (ಉದ್ಯೋಗಪರ್ವ ಸಂ. 1, ಪು. 25).

ಕಾವ್ಯದ ಕಥಾನಾಯಕ ಕೃಷ್ಣ ಮುಕ್ತಿದಾಯಕನೂ ಹೌದು – ಏಕೆಂದರೆ ಕುಮಾರ ವ್ಯಾಸ ಭಕ್ತಕವಿ. ಅವನಿಗೆ ಮುಕ್ತಿಯೇ ಪರಮಗತಿ. ಅದೇ ಆತನಿಗೆ ಕಾವ್ಯ ಪ್ರಯೋ

ಜನವೂ ಹೌದು! ನಾರಣಪ್ಪನ ಕೃಷ್ಣ ಕೇವಲ ಪಾಂಡವರಿಗೆ ಅಥವಾ ಒಂದು ವರ್ಗಕ್ಕೆ ಮುಕ್ತಿ ನೀಡುವ ಪಕ್ಷಪಾತಿ ಅಲ್ಲ. ನಿಜವಾದ ಸದ್ಗುಣ ಮೂರ್ತಿ, ಆದರ್ಶವ್ಯಕ್ತಿ ಯಾವುದೇ ಪಕ್ಷ, ಕುಲ, ಪಂಥಕ್ಕೆ ಸೇರಿದ್ದರೂ ಅವನ ಭಕ್ತಿ–ನಿಷ್ಠೆಗಳನ್ನಷ್ಟೇ ಕಂಡು ತಾನಾಗಿ ಕರುಣಿಸುತ್ತಾನೆ. ಇದಕ್ಕೆ ನಿದರ್ಶನವೆಂದರೆ ಕರ್ಣ. ಆತ ಹೊರನೋಟಕ್ಕೆ ಪಾಂಡವ ದ್ವೇಷಿ–ಕೌರವ ಪಕ್ಷಪಾತಿ ಆಗಿದ್ದರೂ ಕುಲಶ್ರೇಷ್ಠನಲ್ಲ ಎಂಬ ಅಪಖ್ಯಾತಿಗೆ ಒಳಗಾಗಿದ್ದರೂ ಸದ್ಗುಣಿಯಾದ್ದರಿಂದ ಕೃಷ್ಣ ತಾನಾಗಿ ಅವನಿಗೆ ಕಾಣಿಸಿಕೊಂಡು ಮುಕ್ತಿ ಕಾಣಿಸಿದ ಬಗೆ ಹೀಗಿದೆ: "ಪರಮ ಕರುಣಾಸಿಂಧು ಕರ್ಣಂಗಿರದೆ ನಿಜಮೂರ್ತಿಯನು ತೋರಿದನುರುತರ ಪ್ರೇಮದಲಿ ಮುಕುತಿಯ ಪದವ ನೇಮಿಸಿದ" (ಕರ್ಣಪರ್ವ ಸಂ 27–ಪ 19)

ನಾರಣಪ್ಪನು ಪಂಪನ ಹಾಗೆ ರಾಜಕಾರಣದ ಪರಿಚಯವನ್ನು ಅನುಭವದಿಂದ ಪಡೆಯದಿದ್ದರೂ ಶಾಸ್ತ್ರಾಭ್ಯಾಸದ ಫಲವಾಗಿ ತೀವ್ರ ಪರಿಚಯ ಹೊಂದಿದ್ದು, ತನ್ನ ರಾಜಕಾರಣ ಜ್ಞಾನವನ್ನು ಕೃಷ್ಣ ಪಾತ್ರದಲ್ಲಿ ಆತನ ಸಾಧನಾಂಶವನ್ನಾಗಿ ಬಳಸಿದ್ದಾನೆ. ಹೊರನೋಟಕ್ಕೆ ಶುದ್ಧ ರಾಜಕಾರಣ – ಒಳಗೆ ಭಕ್ತರ ಉದ್ಧರಣ. ಇದು ನಾರಣಪ್ಪನ ನಿರೂಪಣಾ ರೀತಿ. ಉದ್ಯೋಗಪರ್ವದ ಪ್ರಸಂಗ ಈ ಮಾತಿಗೆ ಸೊಗಸಾದ ನಿದರ್ಶನವಾಗಿದೆ.

ಸಂಧಿಗಾಗಿ ರಾಯಭಾರವನ್ನು ಹೊತ್ತುಬಂದ ಕೃಷ್ಣ ವಿದುರನ ಮನೆಯಲ್ಲಿ ಉದ್ದೇಶಪೂರ್ವಕವಾಗಿ ಆತಿಥ್ಯ – ಸ್ವೀಕರಿಸಿದ್ದಲ್ಲದೆ, ತುಂಬು ಸಭೆಯಲ್ಲಿ ಹಾಗೆ ತಾನು ಕುರುರಾಜನ ಆತಿಥ್ಯ ಸ್ವೀಕರಿಸದಿರಲು ಕೊಡುವ ಕಾರಣ—

ಹಗೆಯನೊಳಗಿಡಲಾಗದು ವೈ
ರಿಗಳ ನಿಳಯದಲನ್ನ ಪಾನಾ
ದಿಗಳನುಣಲಾಗದು ನಿಧಾನಿಸೆ ರಾಜನೀತಿಯಿದು
ಬಗೆಯೇ ನೀ ಪಾಂಡವರಿಗಹಿತನು
ವಿಗಡ ಪಾಂಡವರೆನ್ನ ಜೀವನ
ಹಗೆಯ ನಂಬುವೆನೆಂತು ಹೇಳೈ ಕೌರವರ ರಾಯ......

(ಉದ್ಯೋಗಪರ್ವ, ಸಂ. 9, ಪ. 70)

ಭೇದೋಪಾಯದ ಸಿಡಿಮದ್ದನ್ನು ತುಂಬಿ, ಸಂಧಿಯ ಹೆಸರಿನಲ್ಲಿ ಕಾಳಗವನ್ನೇ ಸ್ಥಿರಗೊಳಿಸುವ, ದ್ರೌಪದಿಗೆ ಹೇಳಿದ "ಕಾಳಗವನೆ ಬಲಿದು ಬಹೆನು" ಎಂದು ಹೇಳಿದ ಭಾಷೆಯನ್ನು ಹಾಗೆಯೇ ನಡೆಸಿಕೊಟ್ಟ ಆತನ ರಾಯಭಾರಕತ್ವಕ್ಕೆ ಬೇರೆ ಉತ್ತಮ ನಿದರ್ಶನ ಬೇಕೆ?

ಶ್ರೀಕೃಷ್ಣನ ಮುಖವಂತಿಕೆಯನ್ನು ಚಿತ್ರಿಸುವಲ್ಲಿ ಮೈಮರೆಯುವ ನಾರಣಪ್ಪ, ಆತನ ರೂಪು, ಸೌಂದರ್ಯಗಳನ್ನು ಬಣ್ಣಿಸುವಲ್ಲಿ ಚಿತ್ರಕಾರನ ವೈಖರಿಯನ್ನು.

ಶಿಲ್ಪಿಯು ನಿರ್ಮಾಣದ ಸೊಗಸನ್ನು ಒಳಗೊಂಡಂತೆ ಕಣ್ಣೆದುರಿಗೇ ಕೃಷ್ಣನನ್ನು ಶಬ್ದ ಜಾಲದಲ್ಲಿ ತಂದು ನಿಲ್ಲಿಸುತ್ತಾನೆ. ಈ ವರ್ಣನೆಗೆ ಸಾಕ್ಷಿಯಾಗಿ ಸರಳ, ಚೇತೋಹಾರಿ ಕಲ್ಪನೆಯನ್ನು ಹೊಂದಿದ ಈ ಪದ್ಯವನ್ನು ಗಮನಿಸಬಹುದು.

ಸಿರಿಮೊಗದ ಕಿರುಬೆಮರ ತೇಜಿಯು
ಖುರಪುಟದ ಕೆಂಧೂಳಿ ಸೋಂಕಿದ
ಸಿರಿಮುಡಿಯ ಕುಡಿ ಮೀಸೆಯಲಿ ಕೆಂಪಡರ್ದ ರೇಣುಗಳ
ಖರ ಮರೀಚಿಯು ಜಳಕೆ ಬಾಡಿದ
ತರುಣ ತುಲಸಿಯು ದಂಡೆಯೊಪ್ಪುವ
ಗರುವದೇವನ ಬರವ ಕಂಡನು ಬಾಗಿಲಲಿ ವಿದುರ

(ಉದ್ಯೋಗಪರ್ವ, ಸಂ 8, ಪ 7)

ಧರ್ಮಪರಂಪರೆಯಲ್ಲಿ ಪವಾಡಕ್ಕೂ ಭಗವಂತನ ಕಲ್ಪನೆಗೂ ಅದೇನೋ ನೆಂಟುತನ ಬೆಳೆದಂತೆ ಕಾಣುತ್ತದೆ. ಜಗತ್ತಿನ ಎಲ್ಲ ದೇಶದ ಮಹಾತ್ಮರ ಜೀವನದ ಬಗ್ಗೆ ನಡೆದಿರಬಹುದಾದ ಅಥವಾ ಭಕ್ತ ಜನರು ಭಾವಿಸಿದ ಪವಾಡಗಳ ಪರಂಪರೆಯೇ ಇದಕ್ಕೆ ನಿದರ್ಶನ. ಭಾರತೀಯ ಕಾವ್ಯಪರಂಪರೆಯಲ್ಲೂ, ಭಾರತ – ಭಾಗವತ – ಇತಿಹಾಸ ಕಥನದಲ್ಲೂ ಈ ಪವಾಡಗಳ ಮಾಲೆಯೇ ಕೃಷ್ಣನ ಬಗ್ಗೆ ನಿರೂಪಿತವಾಗಿದೆ. ಪವಾಡಗಳ ಹಿನ್ನೆಲೆ ಏನೇ ಇರಲಿ ಅವುಗಳನ್ನು ನಾಟಕೀಯ ಸನ್ನಿವೇಶಕ್ಕೆ ಸಾಧನವಾಗಿ, ಕಥನ ಕುತೂಹಲಕ್ಕೆ ಮಾಧ್ಯಮವನ್ನಾಗಿ ಶ್ರೀಕೃಷ್ಣನ ಮಹಿಮಾ ಪ್ರಕಾಶನಕ್ಕೆ ಪ್ರಮುಖ ಸಾಧನವಾಗಿ ಬಳಸಿಕೊಳ್ಳುವುದರಲ್ಲಿ ಕುಮಾರವ್ಯಾಸ ಅದ್ವಿತೀಯ. ಅದಕ್ಕೆ ಅಕ್ಷಯವಸ್ತ್ರ ಪ್ರಸಂಗ, ಹಾಗೂ ದೂರ್ವಾಸ ಪ್ರಕರಣ ಒಳ್ಳೆಯ ಉದಾಹರಣೆಗಳಾಗಿವೆ. ಅವು ಪ್ರತ್ಯೇಕ ಪ್ರಸಂಗಗಳಾಗುವಂತೆ ರಸಪೂರ್ಣವಾಗಿ ಚಿತ್ರಿತವಾಗಿರುವುದೇ ಸಾಕ್ಷಿ.

ಒಟ್ಟಿನಲ್ಲಿ ಕೃಷ್ಣನ ಜೀವನದ ಎಲ್ಲ ಬಗೆಗಳನ್ನು ಕುಮಾರವ್ಯಾಸ ಶ್ರದ್ಧೆ. ಭಕ್ತಿಗಳಿಂದ ರಸಪೂರ್ಣವಾಗಿ, ಉಳಿದ ಪಾತ್ರಗಳಿಗಿಂತ ಅತಿಶಯವಾಗಿ – ಒಮ್ಮೊಮ್ಮೆ ಕಾವ್ಯದ ಔಚಿತ್ಯ ಮೀರಿಯೂ ವರ್ಣಿಸಿದ್ದಾನೆ. ಇವನ ಕೃತಿಯಲ್ಲಿ ಶ್ರೀಕೃಷ್ಣನು ವಾಸ್ತವ ದೃಷ್ಟಿಯಲ್ಲಿ ಸಾಹಸಿ, ಸುಂದರ, ಸಜ್ಜನಪ್ರಿಯ, ರಾಜಕಾರಣಿ, ಪಾಂಡವ ಪಕ್ಷಪಾತಿ, ವ್ಯವಹಾರ ಚತುರ ಮೊದಲಾದ ಸ್ವರೂಪಗಳಲ್ಲಿ ಕಾಣಿಸಿಕೊಂಡಿದ್ದರೆ. ಆದರ್ಶದ ಹಿನ್ನೆಲೆಯಲ್ಲಿ ಪವಾಡ ಪುರುಷ, ಮುಕ್ತಿದಾಯಕ, ಗೀತಾಚಾರ್ಯ ಮೊದಲಾದ ಅದ್ಭುತಗಳ ಅತಿಶಯದ ವರ್ಣನೆಗಳ ವಸ್ತುವಾಗಿ ಕಂಗೊಳಿಸಿದ್ದಾನೆ.

ಲಕ್ಷ್ಮೀಶನ ಶ್ರೀಕೃಷ್ಣ

ಲಕ್ಷ್ಮೀಶ ಕವಿ ಕನ್ನಡದಲ್ಲಿ ಕೃಷ್ಣಚರಿತ್ರೆ ಕಾವ್ಯ ಬರೆದು ಜನಪ್ರಿಯವಾಗಿರುವವರಲ್ಲಿ ಕುಮಾರ ವ್ಯಾಸನ ನಂತರದ ಸ್ಥಾನ ಪಡೆಯುತ್ತಾನೆ. ಅವನದೂ ಷಟ್ಪದಿ ಕಾವ್ಯ. ಈತನದೂ ಷಟ್ಪದಿ ಕಾವ್ಯ. ಇವೆರಡೂ ಕಾವ್ಯಗಳು ಗಮಕ ಕಲೆಯ ಝೇಂಕಾರದಿಂದ

ಕನ್ನಡಿಗರ ಮನೆಮನೆಗಳಲ್ಲಿ ನೆಲಸಿದೆ. ಕವಿಯೇ ಹೇಳಿಕೊಂಡಂತೆ "ಸಕಲಜನ ಸಂತತಿಗೆ ಕರ್ಣಾವತಂಸಮೆನೆ ಮಧುರತರ ಭಾರತದ ಸತ್ಕಥೆಯನು" ಹೇಳಿದ್ದಾನೆ. ಸುಶ್ರಾವ್ಯ ಮಪ್ಪ ಈತನ ಕಾವ್ಯದಲ್ಲಿ ವೀರ, ಭಕ್ತಿರಸಗಳ ಸಂಗಮವನ್ನು ಕಾಣಬಹುದು.

ಕುಮಾರವ್ಯಾಸ ಭಾರತದಲ್ಲಿ ಶ್ರೀಕೃಷ್ಣ ಕೇಂದ್ರ ಕಥಾನಾಯಕನಾದರೆ ಇಲ್ಲಿ ಸೂತ್ರಧಾರನಂತೆ ಕಾಣಿಸಿಕೊಳ್ಳುತ್ತಾನೆ. ಭಕ್ತರಿಗೆ ಮುಕ್ತಿಪಥವನ್ನು ಕರುಣಿಸುವ ದಾತನಾಗುತ್ತಾನೆ. ಆದರೆ ಅಲ್ಲಿನ ಕೃಷ್ಣ ನಮ್ಮ ಹೃನ್ಮನ ಸೆರೆಗೊಳ್ಳುವಂತೆ ಇಲ್ಲಿನ ಕೃಷ್ಣ ಅಷ್ಟಾಗಿ ಸೆರೆಗೊಳ್ಳಲಾರನು. ಏಕೆಂದರೆ ಕುಮಾರವ್ಯಾಸನ ಕೃಷ್ಣ ಚಿತ್ರಣದಲ್ಲಿ ಪಾಂಡಿತ್ಯಕ್ಕಿಂತ ಪ್ರತಿಭೆ ಹೆಚ್ಚಾಗಿದೆ. ಲಕ್ಷ್ಮೀಶನ ಚಿತ್ರಣದಲ್ಲಿ ಪ್ರತಿಭೆಗಿಂತ ಪಾಂಡಿತ್ಯ ಅಧಿಕವಾಗಿದೆ. ವರ್ಣನೆಗಳಂತೂ ಶ್ರೀ ಎಸ್. ವಿ. ರಂಗಣ್ಣನವರು ಹೇಳುವಂತೆ 'ದಟ್ಟ ಹಸುರೆಲೆಯ ಪ್ರಾಬಲ್ಯಕ್ಕೆ ಸರಿಸಮಾನ ಅದರ ಸುಶ್ರಾವ್ಯ ವಾಗ್ವಿಜೃಂಭಣೆ' ಆಗಿದೆ. ಇದು ಒಂದು ಲಕ್ಷ್ಮೀಶನ ವಾಗ್ವಿಜೃಂಭಣೆಗೆ ಉದಾಹರಣೆ.

........ಸರಸಿರುಹನಯನ ! ಫಣಿರಾಜಶಯನ !
ಶರಣಜನ ದುರಿತಾಪಹರಣ ! ದೈತೇಯಸಂ
ಹರಣ ! ಗೋವರ್ಧನೋದ್ಧರಣ ! ಪೀತಾಂಬರಾ
ವರಣ ! ಸತ್ಕೌಸ್ತುಭಾಭರಣ ! ಸಲಹೆಂದು ಹರಿಚರಣಕೆರಗಿದಳು ಬಂದು !

(ಸಂ 3 —ಪ50)

"ಮಿರುಪ.........(ಸಂ 2, ಪ. 48) "ಬಳಿಕವಲ........." (ಸಂ 7—ಪ 7) ಇತ್ಯಾದಿ ಪದ್ಯಗಳನ್ನು ಇತರ ನಿದರ್ಶನಗಳಾಗಿ ನೋಡಬಹುದಾಗಿದೆ.

ಕೃಷ್ಣನನ್ನು ಲಕ್ಷ್ಮೀಶನು ಅನೇಕ ಸಂದರ್ಭಗಳಲ್ಲಿ ಹಲವರ ಮಾತಿನ ಮೂಲಕ ವಿಡಂಬನೆಗೆ ಒಳಗಾಗಿಸುತ್ತಾನೆ. ಇಂಥ ಸನ್ನಿವೇಶಗಳು ತುಂಬಾ ಔಚಿತ್ಯಪೂರ್ಣವಾಗಿರು ವುದೆಂದು ಹೇಳಲಾಗದು. ಉದಾಹರಣೆಗೆ ಅನುಸಾಲ್ವನು ತನ್ನ ಅಣ್ಣ ಸಾಲ್ವನನ್ನು ಕೊಂದ ಕೃಷ್ಣನ ಮೇಲಿನ ಪೂರ್ವದ್ವೇಷದಿಂದ ಯಜ್ಞಾಶ್ವವನ್ನು ಕಟ್ಟೊಯ್ದು, ನಾನಾ ರೀತಿಯಲ್ಲಿ ಹಳಿಯುತ್ತಾನೆ.

"ಹೆಂಗಸಂ ಕೊಂದಟತನದಿಂದ ಬಂಡಿಯಂ
ಭಂಗಿಸಿದ ಬಲ್ಪಿಂದೆ ಯೆತ್ತು ಕತ್ತೆಯನಿರಿದ
ತುಂಗ ವಿಕ್ರಮದಿಂದೆ ಹಕ್ಕಿ ಹಾವಂ ಸದೆದ ಸಾಹಸದೆ ಬೆರತಿರ್ದೊಡೆ
ಸಂಗರದೊಳಾಳಹನೆ.. ?" ಎನ್ನುತ್ತಾನೆ.

ಮತ್ತೊಂದು ಸನ್ನಿವೇಶದಲ್ಲಿ ಭೀಮ ಕೃಷ್ಣನನ್ನು – ಬ್ರಹ್ಮಾಂಡ ನಾಯಕ, ನರಕಾಸುರ ಸಂಹಾರಿ, ಲೋಕೋಪಕಾರಿ, ಜಾಂಬವತೀಪ್ರಿಯ, ಮೋಹಿನೀ ಅವತಾರಿ, ಪೂತನೀ ಮರ್ದನ – ಇತ್ಯಾದಿ ವಿಶೇಷಣಗಳನ್ನು ಹೊಂದಿದ ಅವನನ್ನು "ಹಲವು ಲೋಕಗಳನ್ನು ಒಳಗೊಂಡ ಉದರ ನಿನ್ನದು. ನರಕಾಸುರನ ಬಾಲಕಿಯರು ನಿಶಾಚರಿ

ಯರು, ಕರಡಿಯ ಮಗಳನ್ನು ಆಳ್ದನು ನೀನು, ಕೈತವ ಜಾರ ವಿದ್ಯೆಗಳ ದೂಷಣೆಗೆ ಬೆದರಿ ನುಡಿದಿರಿ, ಹೇವರಿಸದೆ ಅಸುರೆಯ ಅಸುವೀಂಟಿದವನು" ಇತ್ಯಾದಿಯಾಗಿ ದೂಷಿಸುತ್ತಾನೆ. ಈ ಸನ್ನಿವೇಶಗಳ ನಿರೂಪಣೆಯಿಂದ ಕವಿಯ ವಿಡಂಬನಶಕ್ತಿ ಅರ್ಥವಾದರೂ, ಕೃಷ್ಣನ ಭವ್ಯತ್ವ – ದೈವತ್ವದ ಪ್ರತಿಪಾದನೆಗೆ ನೇರ ಸಮರ್ಥನೆ ಸಿಗಲಾರದು.

ಆದರೂ, ತನ್ನನ್ನೇ ನಿಂದಿಸಿದವರಿಗೂ ಭಗವಂತನು ತನ್ನ ಕರುಣಾ ದೃಷ್ಟಿಯನ್ನು ದಯಾರಸ ಪ್ರವಾಹವನ್ನು ಹರಿಸದಿರಲಾರನು ಎನ್ನುವುದನ್ನು ಎತ್ತಿ ತೋರಿಸುವುದೂ ಕವಿಯ ಆಶಯ ಇದ್ದಿರಬಹುದು. ಹಾಗಾಗಿ ನಿಂದಿಸಿದ ಅನುಸಾಲ್ವನು, ಭೀಕರವಾಗಿ ಹೋರಾಡಿದರೂ ಕೊನೆಗೆ ವೃಷಕೇತುವಿನೊಂದಿಗೆ "ಕೃಷ್ಣನಂ ದ್ವೇಷದಿಂ ಜೈದೊಡಂ ತನ್ನ ಮನವಾರೆ ಸಂತೋಷದಿಂ ನುತಿಗೈದೊಡಂ ಪೋಗದಿರ್ದಪುವೆ ಕೋಟಿಜನ್ಮದೊಳೊದವಿದ ದೋಷಗಳಿಂದು, ವೀರಾವೇಶದಿಂದೆ ನಾಂ ದೂಷಿಸಿದೊಡೀ ದಯಾಂಬುಧಿ ಕಾಯ-ದುಳಿವನೆ?" ಎಂದು ಹೇಳುವ ಮಾತುಗಳೆ ಈ ಭಾವನೆಗೆ ಸಾಕ್ಷಿಯಂತಿವೆ.

ಕೃಷ್ಣ ತನ್ನ ಮಹಿಮಾತಿಶಯಗಳ ಕಥೆಯ ಹಿನ್ನೆಲೆಯಲ್ಲಿ ಭಕ್ತರಿಗೊಲಿವನಾಗಿ ಕಾಣಿಸಿಕೊಳ್ಳುತ್ತಾನೆ. ಪಾಂಡವರನ್ನು ಕಂಡು ಹೋರಾಡಿದ ವೀರರು ಕೃಷ್ಣನ ದರ್ಶನ ಸ್ಮರಣೆ ಉಂಟಾದರೆ ಸಾಕು ಪರಮಭಕ್ತರಾಗಿ ಶರಣಾಗತಿ ಹೊಂದುತ್ತಾರೆ. ಆ ಮೂಲಕ ಪಾಂಡವರಿಗೆ ಗೆಲುವು ದೊರೆಯುತ್ತದೆ. ಸಾಹಸದಿಂದ ಹೋರಾಡಿದ ಯೌವನಾಶ್ವನು ವೃಷಕೇತುವಿನಿಂದ "ನರಲೀಲೆಗಾಗಿ ಯಾದವರ್ಗರಸಾದ ಕೃಷ್ಣ ಭರತಕುಲದ ಮೇದಿನೀಶ್ವರ ಯುಧಿಷ್ಠಿರನಿಂ ಮಖಂಗೈಸಲ್ ಈ ದಿವ್ಯ ಹಯನಟ್ಟಿದ" ನೆಂಬ ಮಾತು ಕೇಳಿ "ತನ್ನ ಸರ್ವಸ್ವಮಂ ತಾನೆ ತಂದು ಹರಿಪದಕರ್ಪಿಸುವೆನಲ್ಲ" ಎನ್ನುತ್ತಾನೆ.

ಕುಮಾರವ್ಯಾಸನ ಭಾರತದಲ್ಲಿ ಕಂಡು ಬರುವ ಪಕ್ಷಗಳ ಹೋರಾಟಕ್ಕಿಂತ, ವ್ಯಕ್ತಿಗಳ ಅಥವಾ ವ್ಯಕ್ತಿಗಳ ಗುಂಪಿನ ಹೋರಾಟವಾಗಿ ಜೈಮಿನಿ ಭಾರತದಲ್ಲಿ ಸಮರ ಚಿತ್ರಣ ರೂಪಿತವಾಗಿದೆ ಎನ್ನಬಹುದು. ರುದ್ರಭಟ್ಟನ ಕೃತಿಯಲ್ಲಿ ಕೃಷ್ಣನು ವ್ಯಕ್ತಿಯಾಗಿ ನಿಂತು ತಾನೇ ಹೋರಾಡಿದರೆ ಕುಮಾರವ್ಯಾಸನ ಭಾರತದಲ್ಲಿ ಕೃಷ್ಣ ಒಬ್ಬ ಪಕ್ಷಪಾತಿಯಾಗಿ ಪಾಂಡವರ ಬೆಂಬಲಿಗನಾಗಿ ನಿಲ್ಲುತ್ತಾನೆ, ತಂತ್ರಮಾಡುತ್ತಾನೆ. ಸ್ಫೂರ್ತಿ ನೀಡುತ್ತಾನೆ. ಸ್ವತಃ ಹೋರಾಡುವುದಿಲ್ಲ. ಜೈಮಿನಿ ಭಾರತದಲ್ಲಿ ಪಕ್ಷದಲ್ಲಿ ಸೇರಿಕೊಂಡು ನೇರವಾಗಿ ಅರ್ಜುನನೊಂದಿಗೆ ಜೊತೆಯಾಗಿ ಶತ್ರುಗಳ ವಿರುದ್ಧ ಹೋರಾಡುತ್ತಾನೆ. ಅಷ್ಟೇ ಅಲ್ಲ, ಸ್ವತಃ ಸೋತು ಹೋಗುತ್ತಾನೆ. ಈ ಸೋಲಿಗೆ ಕಾರಣ ಭಕ್ತ ಪರಾಧೀನನೆಂಬ ಮಾತನ್ನು ತಾನು ಭಕ್ತನಾದ ತಾಮ್ರಧ್ವಜನಿಗೆ ಸೋಲುವುದರ ಮೂಲಕ ತೋರಿಸಿ ತನ್ನ ಅತಿಶಯ ಮಹಿಮೆಯನ್ನು ಎತ್ತಿ ಹಿಡಿಯುವುದೇ ಆಗಿದೆ. ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಕೇವಲ ಕೃಷ್ಣನಷ್ಟೇ ಅಲ್ಲ, ರಾಮನೂ ಸೋಲುತ್ತಾನೆ. ರಾಮನು ಮಕ್ಕಳಿಗೆ ಸೋತರೆ. ಕೃಷ್ಣನು ಭಕ್ತನಿಗೆ ಸೋತನು. ಅಂತೂ ಇಬ್ಬರೂ ಒಂದು ರೀತಿಯಲ್ಲಿ ಭಕ್ತನಿಗೆ ಸೋತರು

ಎನ್ನುವುದು ಲಕ್ಷ್ಮೀಶನ ಅಭಿಮತ. ರಾಮ, ಕೃಷ್ಣ ಈ ವ್ಯಕ್ತಿಗಳಿಗಿಂತ ಭಕ್ತಿಯ ಶಕ್ತಿ ಮತ್ತು ಅದರ ಅಭಿವ್ಯಕ್ತಿ ದೊಡ್ಡದು ಎಂಬುದು ಲಕ್ಷ್ಮೀಶನ ಅಭಿಪ್ರಾಯವಿದ್ದಂತೆ ಕಾಣುತ್ತದೆ. ರುದ್ರಭಟ್ಟ ಮತ್ತು ಕುಮಾರವ್ಯಾಸರ ಕೃತಿಗಳಲ್ಲಿ ರಾಮ, ಕೃಷ್ಣರು ನೇರವಾಗಿ ಹೋರಾಡಿ ಸೋಲುವ ಸನ್ನಿವೇಶ ಇಲ್ಲ.

ಲಕ್ಷ್ಮೀಶ ಕೃಷ್ಣಭಕ್ತಿಯನ್ನು ವೀರರಲ್ಲಿ ಕಾಣಿಸಿದ್ದಕ್ಕಿಂತ ಚೇತೋಹಾರಿಯಾಗಿ ಬಾಲಕನಲ್ಲಿ ಕಾಣಿಸಿದ್ದಾನೆ. ಚಂದ್ರಹಾಸೋಪಾಖ್ಯಾನ ಇದಕ್ಕೆ ರಸನಿದರ್ಶನ ಆಗಿದೆ. ಇಲ್ಲಿ ಕಾಣುವ ಭಕ್ತಿಯ ತೆರ ಕವಿಯ ಕಾವ್ಯದ ರಸಪ್ರಸಂಗದಲ್ಲಿ ಒಂದಾಗಿದೆ. ಈ ಕಾವ್ಯಭಾಗದಲ್ಲಿನ ಸೊಗಸಿನ ಬಗ್ಗೆ ಎಸ್. ವಿ. ರಂಗಣ್ಣನವರು ಹೀಗೆ ಹೇಳಿದ್ದಾರೆ. "ಒಟ್ಟಿನಲ್ಲಿ ನಿರ್ದೋಷವಾದ ಕಲಾವಿಚಕ್ಷಣೆಯಿಂದ ಬೆಳೆದು, ಮುಂದುವರಿದು, ಸೂಕ್ತ ರಸ ವೈವಿಧ್ಯವನ್ನು ಸಮಂಜಸವಾಗಿ ಪ್ರಕಟಿಸುತ್ತ, ಅತ್ಯುತ್ತಮ ಕವಿತ್ವದ ಗಂಭೀರ ಸತ್ವವನ್ನು ಒಳಕೊಂಡು ಮೇಲ್ಮಟ್ಟದ ಮನೋಜ್ಞತೆಯಿಂದ ಸಂತೃಪ್ತಿಕರವಾದ ಕಾವ್ಯಭಾಗವೊಂದೇ ಚಂದ್ರಹಾಸೋಪಾಖ್ಯಾನ."

ಇಂಥ ಪ್ರಸಂಗದಲ್ಲಿ ಚಂದ್ರಹಾಸನು ಮೊದಲಿನಿಂದಲೂ ಕೃಷ್ಣಭಕ್ತಿಯಲ್ಲಿ ಓಲಾಡಿದವನಾದ್ದರಿಂದ ಪಾಂಡವರ ಯಜ್ಞಾಶ್ವವನ್ನು ಚಂದ್ರಹಾಸನ ಮಕ್ಕಳು ಸೆರೆಗೈದಾಗ ಆತ ಕೊಟ್ಟ ಉತ್ತರ ಇದು – "ಸಿಕ್ಕಿದೊಡೆ ಕೃಷ್ಣದರ್ಶನದ ಪುಣ್ಯಮ ಸಾಕು, ಮಿಕ್ಕ ಸುಕೃತದ ಗಸಣಿಯೇಕಿನ್ನು? ಧರ್ಮಾಧ್ವರಕ್ಕೆ ತಿರುಗುವ ಕುದುರೆಗಳನಿಲ್ಲಿ ಕಟ್ಟಿದೊಡೆ ಪುರುಷಾರ್ಥಮೆ?" ಎನ್ನುತ್ತಾನೆ.

ವೀರರೂ ಅಲ್ಲದ ಬಾಲರೂ ಅಲ್ಲದ ಯೋಗಮೂರ್ತಿಗಳೂ ಕೃಷ್ಣದರ್ಶನಕ್ಕೆ ಕಾತರರಾಗಿದ್ದು ಜನ್ಮ ಸಾಫಲ್ಯ ಮಾಡಿಕೊಂಡರು ಎನ್ನುವುದಕ್ಕೆ ಬಕದಾಲ್ಭ್ಯ ಪ್ರಸಂಗ ಒಂದು ನಿದರ್ಶನವಾಗಿದೆ.

ಯೌವನಾಶ್ವ, ತಾಮ್ರಧ್ವಜ, ಚಂದ್ರಹಾಸ, ಲವಕುಶ ಬಕದಾಲ್ಭ್ಯ ಸುಧನ್ವ ಮುಂತಾದ ಭಕ್ತರನ್ನು ಕೊನೆಗೆ ತನ್ನ ಪಂಚಪ್ರಾಣವೆನಿಸಿದ ಪಾಂಡವರನ್ನೂ ಸಾಹಸ ಪರೀಕ್ಷೆ ಮತ್ತು ಭಕ್ತಿನಿಷ್ಠೆಗಳ ಮೂಲಕ ಪರೀಕ್ಷಿಸಿ ಮುಕ್ತಿನೀಡುವ ಶಕ್ತಿಯಾಗಿ ಭಕ್ತರಿದ್ದೆಡೆಗೆ ಸಂಚರಿಸುವ ಜಂಗಮದೇವನಾಗಿ ಕೃಷ್ಣನು ಕಂಗೊಳಿಸುವುದನ್ನು ಲಕ್ಷ್ಮೀಶ ಚಿತ್ರಿಸಿದ್ದಾನೆ. ಇಡೀ ಕಾವ್ಯದಲ್ಲಿ ಕಥಾಪತಿ ಕೃಷ್ಣನಲ್ಲದಿದ್ದರೂ ಸರ್ವವ್ಯಾಪಿ ಪಾತ್ರವಾಗಿ ಕೃಷ್ಣ ಮೂಡಿದ್ದಾನೆ. ಈ ಅಭಿಪ್ರಾಯದ ಸಮರ್ಥನೆಗೆ ಬೇಂದ್ರೆಯವರ ನುಡಿ ಸಾಕ್ಷಿಯಾಗಿದೆ. "ಮೂವತ್ತುನಾಲ್ಕು ಸಂಧಿಗಳ ಈ ಕಾವ್ಯದಲ್ಲಿ ಹತ್ತೊಂಬತ್ತು ಸಂಧಿಗಳಲ್ಲಿ ಶ್ರೀಕೃಷ್ಣ ಪ್ರತ್ಯಕ್ಷನಾಗಿದ್ದು, ಹನ್ನೊಂದು ಸಂಧಿಗಳಲ್ಲಿ ನಾಮಸ್ಮರಣೆಯ ಗರ್ಭದಲ್ಲಿ ಇಲ್ಲವೆ ಪ್ರತಿನಿಧಿ ರೂಪದಲ್ಲಿ ಇದ್ದಾನೆ. ನಾಲ್ಕು ಸಂಧಿಗಳಲ್ಲಿ ಶ್ರೀಕೃಷ್ಣನು ರಾಮಚಂದ್ರನಾಗಿದ್ದಾನೆ. ಒಟ್ಟಿನಲ್ಲಿ ಶ್ರೀಕೃಷ್ಣನು ಇಲ್ಲದೇ ಇದ್ದ ಸಂಧಿಯೇ ಇಲ್ಲ ಜೈಮಿನಿ ಭಾರತದಲ್ಲಿ" (ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕ ರತ್ನಗಳು, ಪು. 42).

ಒಟ್ಟಿನಲ್ಲಿ ಕನ್ನಡ ಸಾಹಿತ್ಯದಲ್ಲಿ ವೈಷ್ಣವ ಕವಿಗಳು ಚಿತ್ರಿಸಿದ ಕೃಷ್ಣ ಚಿತ್ರಣವನ್ನು ಕಂಡರೆ ಈ ಕೆಲವಂಶಗಳು ಗಮನಾರ್ಹವಾಗಿ ಕಂಡುಬರುತ್ತದೆ.

(1) ಕೃಷ್ಣನು ಪರಮಾತ್ಮ, ಲೀಲಾವಿನೋದಕ್ಕಾಗಿ ಮಾನವ ಅವತಾರಿ ಆಗಿದ್ದಾನೆ ಎಂಬ ಸಿದ್ಧಾಂತ ಎಲ್ಲ ವೈಷ್ಣವ ಕವಿಗಳಿಗಿದೆ.

(2) ಭಗವಂತನಾದ ಕೃಷ್ಣನನ್ನು ಒಲಿಸಿಕೊಳ್ಳಲು ಭಕ್ತಿಯೇ ಪರಮಸಾಧನ. ಆತನು ಭಕ್ತಾಧೀನ ಎಂಬ ಮಾತಿನ ಸಮರ್ಥನೆಗೆ ಈ ಕಾವ್ಯದ ಭಕ್ತರ ಕಾರ್ಯಗಳು ಸಮರ್ಥನೆ ನೀಡುತ್ತವೆ.

(3) ಕೃಷ್ಣಸ್ತುತಿಯನ್ನು ಮೈದುಂಬಿ ಭಕ್ತಿಪರವಶತೆಯಲ್ಲಿ ರಸದುಂಬಿಗಳಾಗಿ ಕವಿಗಳು ಹಾಡಿದ್ದಾರೆ. ವರ್ಣನೆಗಳ ಭಾಗದಲ್ಲಿ ವಿಪುಲ ಶಬ್ದಸಂಪತ್ತು, ಸಂಸ್ಕೃತ ವಿಶೇಷಣಗಳಿಂದ ಕೂಡಿದ ಸಮಾಸಪದ ಮಾಲೆಗಳನ್ನು ನಿರೂಪಣೆಯಲ್ಲಿ ಕಾಣಬಹುದು. ಶ್ರೀಕೃಷ್ಣ ವರ್ಣನೆಯನ್ನು ಕವಿ ಭಕ್ತಿಯಿಂದ ಮೈಮರೆತು ವರ್ಣಿಸುವ ಪರಿಣಾಮವಾಗಿ ಕೇಳುವ ಜನರೂ ಪರವಶರಾಗುತ್ತಾರೆ.

(4) ಧರ್ಮದ ಉಪದೇಶಕ್ಕಿಂತ ಹೆಚ್ಚಾಗಿ ಕಥನಕ್ರಿಯೆಗೆ ಹೆಚ್ಚು ಪ್ರಾಶಸ್ತ್ಯ-ದೊರೆತಿದೆ.

(5) ಭಾರತ, ಭಾಗವತ ಮೊದಲಾದ ಸಂಸ್ಕೃತ ಕೃತಿಗಳನ್ನು ಮೂಲಾಧಾರವಾಗಿಟ್ಟು ಕಥಾವಸ್ತುವನ್ನು ಬಹುಮಟ್ಟಿಗೆ ಅನುಸರಿಸಲು ಯತ್ನಿಸಿದ್ದಾರೆ. ಜೈನ ಕವಿಗಳಂತೆ ವೈಷ್ಣವ ಕವಿಗಳಿಗೆ ಮೂಲವನ್ನೇ ಅನುಸರಿಸುವುದರಲ್ಲಿ ಅನೇಕ ಸಮಸ್ಯೆಗಳಿರಲಿಲ್ಲ.

(6) ವೈಷ್ಣವ ಕವಿಗಳು ಚಂಪೂ ರೀತಿಯಲ್ಲೂ ಇತರ ಷಟ್ಪದಿ ಇತ್ಯಾದಿ ಛಂದೋರೂಪಗಳಲ್ಲೂ ಕೃತಿರಚನೆ ಮಾಡಿದ್ದಾರೆ. ಅಲ್ಲದೆ ಇವರ ಕೃತಿಗಳು ಜೈನಕವಿಗಳಿಗಿಂತ ಹೆಚ್ಚು ಜನಪ್ರಿಯವಾಗಿವೆ. ಇದಕ್ಕೆ ಗಮಕ ಕಲೆಯ ನೆರವು ಈ ಕವಿಗಳಿಗೆ ದೊರೆತದ್ದು ಕಾರಣವಾಗಿದೆ.

(7) ಕೃಷ್ಣಕಥೆಯ ಒಂದೊಂದು ಬಗೆ ಚಿತ್ರಣಕ್ಕೆ ಒಬ್ಬೊಬ್ಬ ವೈಷ್ಣವ ಕವಿಯ ಕೃತಿಯಲ್ಲಿ ವಿಶೇಷ ಪ್ರಾಶಸ್ತ್ಯ ದೊರೆತಿದೆ. ಉದಾಹರಣೆಗೆ ಮುಗ್ಧ ಶಿಶುವಾಗಿ ಬಾಲಕೃಷ್ಣನ ಲೀಲೆಗೆ ರುದ್ರಭಟ್ಟನ ಜಗನ್ನಾಥ ವಿಜಯದಲ್ಲಿ; ನೇರ ಪಾತ್ರಧಾರಿಯಾದ ಪ್ರಬುದ್ಧ ಕೃಷ್ಣನ ವರ್ಣನೆಗೆ ಕುಮಾರವ್ಯಾಸನ ಭಾರತದಲ್ಲಿ; ಪರೋಕ್ಷ ಸೂತ್ರಧಾರಿಯಾಗಿ ಭಕ್ತೋದ್ಧಾರಿ ಭಗವಾನ್ ಕೃಷ್ಣನ ವರ್ಣನೆಗೆ ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಹೆಚ್ಚಿನ ಪ್ರಾಶಸ್ತ್ಯ ದೊರೆತಿದೆ.

(8) ವೈಷ್ಣವ ಕವಿಗಳಿಗೆ ಬಹುಶಃ ರುದ್ರಭಟ್ಟನನ್ನು ಬಿಟ್ಟರೆ ನಾರಣಪ್ಪ, ಲಕ್ಷ್ಮೀಶ, ಚಾಟು ವಿಠಲನಾಥ ಮೊದಲಾದ ಇತರ ವೈಷ್ಣವ ಕವಿಗಳಿಗೆ ರಾಜಾಶ್ರಯ ಇರಲಿಲ್ಲ ಮತ್ತು ಕವಿಧರ್ಮ– ರಾಜಧರ್ಮ ಬೇರೆಬೇರೆ ಎಂಬ ದ್ವಂದ್ವ ಜೈನಕವಿಗಳಿಗಿದ್ದಂತೆ ಈ ವೈಷ್ಣವ ಕವಿಗಳಿಗಿರಲಿಲ್ಲ. ಇದರ ಪರಿಣಾಮವಾಗಿ ಶ್ರೀಕೃಷ್ಣನನ್ನು ಕಥಾನಾಯಕ ನನ್ನಾಗಿ ಅತಿಶಯ ವ್ಯಕ್ತಿಯನ್ನಾಗಿ ಚಿತ್ರಿಸಲು ಈ ಕವಿಗಳಿಗೆ ಸುಲಭವಾಯಿತು.

ಒಟ್ಟಿನಲ್ಲಿ ಜೈನ ಕವಿಗಳಾಗಲೀ ವೈಷ್ಣವ ಕವಿಗಳಾಗಲೀ ಕೃಷ್ಣನನ್ನು ಕುರಿತು ಮಾಡಿದ ಕಾವ್ಯ ರಚನೆಗಳಿಂದ ಕನ್ನಡ ಕಾವ್ಯ ಶ್ರೀಮಂತಿಕೆಯನ್ನು, ವಿಶೇಷವಾಗಿ ಚಂಪೂ ಮತ್ತು ಷಟ್ಪದಿ ಕಾವ್ಯ ಸಾಹಿತ್ಯವನ್ನು ಹೆಚ್ಚಿಸಿದ್ದಾರೆ. ಸಂಸ್ಕೃತದ ಭಾರತ – ಭಾಗವತಗಳ ಕೃಷ್ಣಕಥನದ ಕೃತಿಗಳ ರಸಪೂರ ಸಾಹಿತ್ಯವನ್ನು ಕನ್ನಡದಲ್ಲಿ ಸೊಗಸಾಗಿ ಅನುವಾದಿಸಿ ಅಳವಡಿಸಿದ್ದಾರೆ. ಸಂಸ್ಕೃತ ಅರಿಯದ ಜನತೆಗೆ ಕೃಷ್ಣದರ್ಶನವನ್ನು ಕಾವ್ಯದಲ್ಲಿ ನೀಡಿರುವುದೇ ಅಲ್ಲದೆ, ಬಹುಶಃ, ಭಾರತದ ಇತರ ಯಾವ ಭಾಷೆಯಲ್ಲಾಗಲೀ ಇರುವ ಕೃಷ್ಣಕಾವ್ಯಗಳಿಗೆ ಕಡಿಮೆ ಇಲ್ಲದ ಕೃತಿಗಳನ್ನು ರಚಿಸಿ ಕನ್ನಡದ ಕೊರತೆಯನ್ನು ತುಂಬಿದ್ದಾರೆ. ಆ ಮೂಲಕ ನಾಡಿನ ಋಣ ತೀರಿಸಿ ಪುಣ್ಯಭಾಜನರೂ ಕೀರ್ತಿವಂತರೂ ಆಗಿದ್ದಾರೆ.

ಇಷ್ಟಾದರೂ ಕನ್ನಡದಲ್ಲಿ ಸಂಸ್ಕೃತ ಸಾಹಿತ್ಯದಲ್ಲಿ ಚಿತ್ರಿತವಾಗಿರುವ ಸಮಗ್ರ ಕೃಷ್ಣಚಿತ್ರಣ ಬಂದಿದೆ ಎಂದು ಹೇಳಲಾಗದು. ಏಕೆಂದರೆ, ಗೀತಗೋವಿಂದದ ರಾಧಾ ಕೃಷ್ಣನ ಚಿತ್ರಣವಾಗಲಿ ಅಥವಾ ನೃತ್ಯದ ಹಿನ್ನೆಲೆಯ ರಾಸನೃತ್ಯದ ಕೃಷ್ಣನಾಗಲಿ, ಗಾನಲೋಕ ಮುರಳಿ ಕೃಷ್ಣನಾಗಲಿ ಅಷ್ಟಾಗಿ ಚಿತ್ರಿತವಾಗಿಲ್ಲ.

ಕನ್ನಡದ ಯಾವುದೇ ಕೃಷ್ಣನನ್ನು ಕುರಿತ ಕಾವ್ಯದಲ್ಲಾಗಲೀ, ದಾಸರ ಕೀರ್ತನೆಗಳಲ್ಲಾಗಲೀ ರಾಧೆಗೆ ಸ್ಥಾನ ಸಿಗದಿರುವುದು, ರಾಧಾ ಸಾಹಿತ್ಯವಿಲ್ಲದಿರುವುದು ಸೋಜಿಗ ಸಂಗತಿ ಆಗಿದೆ. ಅಧ್ಯಾತ್ಮ ರಾಮಾಯಣದಂತೆ ಸಂಪೂರ್ಣವಾಗಿ ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ಶ್ರೀಕೃಷ್ಣನನ್ನು ಕಂಡು, ಅಖಂಡವಾಗಿ ಚಿತ್ರಿಸಿದ ಆಧ್ಯಾತ್ಮಿಕ ಕಾವ್ಯ ಇದ್ದಂತೆ ಕಂಡುಬಂದಿಲ್ಲ. ಆದರೆ, ಹೊಸಗನ್ನಡದಲ್ಲಿ ನೂತನ ದೃಷ್ಟಿಯಿಂದ ರಚಿತವಾಗಿರುವ ಕೃತಿಗಳಲ್ಲಿ ನಾವೀನ್ಯತೆ ಹಾಗೂ ಭಿನ್ನದೃಷ್ಟಿಯಿಂದ ಕೃಷ್ಣನನ್ನು ಕಾಣುವ ಪ್ರಯತ್ನಗಳು ಕಂಡುಬರುತ್ತಿವೆ. ಪು. ತಿ. ನ. ರವರ 'ಗೋಕುಲ ನಿರ್ಗಮನ', ಡಿ. ವಿ. ಜಿ. ಅವರ 'ಶ್ರೀಕೃಷ್ಣ ಪರೀಕ್ಷಣಂ' ಮೊದಲಾದವು ಆ ದೃಷ್ಟಿಯ ಕೃತಿಗಳಾಗಿವೆ. ಹೀಗೆಯೇ ಕೃಷ್ಣಕಾವ್ಯ ನಿರ್ಮಾಣ ಪರಂಪರೆ ಮುಂದುವರಿದಂತೆಲ್ಲಾ ಇತರ ಭಾರತೀಯ ಭಾಷೆಗಳಲ್ಲಿ ಕಂಡುಬರುವ ಕೃಷ್ಣಚಿತ್ರಣದ ಮಾದರಿ ಕೃತಿಗಳು ಕನ್ನಡದಲ್ಲಿ ಮೂಡಿಬರುತ್ತವೆ ಎಂದು ಆಶಿಸಬಹುದಾಗಿದೆ.

ಒಂಟಿ

ಜಯಸುದರ್ಶನ

ಮುಂಜಾವಿನೊಂಟಿತನದಲ್ಲಿ ಶಬ್ದ
ಕವನವಾಗುವ ಹೊತ್ತು ಆಕಾಶದಲಿ
ಒಂಟಿ ಸೂರ್ಯನ ಬೆಳಕು ಥಳಥಳಿಸುವುದು;
ಸ್ವಂತಕ್ಕೆ ಮರುಕ ಒಂದು ಕ್ಷಣ, ಸ್ತಬ್ಧ
ಮನಸಿನಲಿ ಆಕಳಿಸುತ್ತಿರುವ ಬಯಲಲ್ಲಿ
ನನ್ನತನ ದಿಕ್ಕುತಪ್ಪಿದ ಹೊತ್ತಾಗುವುದು.

ರಾತ್ರಿ ಎಲ್ಲವನ್ನೂ ಒಂದುಗೂಡಿಸಿದ್ದ
ಕತ್ತಲು ಬೆಳಕು ಹರಿದಾಗ ಹರಿಯುವುದು
ಬಟ್ಟೆಯೊಳಗೆ ತನ್ನನ್ನೆ ಮೂಸುತ್ತಿದ್ದ
ನಮ್ಮ ಬೆತ್ತಲು ಬೆಂತರವಾಗುವುದು.

ನಿಜರೂಪಕ್ಕೆ ಮರುಕ ಪಡಲೆ, ಬೆಳಕು ತಂದ
ವಿಭಜನೆಯ ಒಂಟಿತನದಲ್ಲಿ ಕತ್ತಲು ಹಡೆದ
ಏಕೀಕರಣ ಮರೆಯಲೆ, ನೆನೆಯಲೆ ನನ್ನ?
ಅಷ್ಟರಲ್ಲೆ ಕಂಡೆ ಸೂರ್ಯ ಮುಟ್ಟಿದ್ದೆಲ್ಲ ಚಿನ್ನ!

ಏಡಿಗಂತಿ ಮೇಲೆ ಒಳಸುರಿಕ ರಸಗಳ ಪ್ರಭಾವ

ಡಿ. ಎಸ್. ಶಿವಪ್ಪ

ಮೊಲೆಯಲ್ಲೂ ಗಂಡಸಿನ ಮುನ್ನಿಲುಗ (ಪ್ರಾಸ್ಟೇಟ್) ಗ್ರಂಥಿಯಲ್ಲೂ ಏಳುವ ಏಡಿಗಂತಿ (ಕ್ಯಾನ್ಸರ್) ಗಳು ಒಳಸುರಿಕ ರಸಗಳಾದ ಚೋದನಿಗಳನ್ನು (ಹಾರ್ಮೋನ್ಸ್) ನೆಚ್ಚಿಕೊಂಡಿರುತ್ತವೆಂದು ಎಲ್ಲ ವೈದ್ಯರೂ ಒಪ್ಪಿರುವರೆಂದು ಕೇಡ್ ಒಂದು ಭಾಷಣದಲ್ಲಿ ಹೇಳಿದ (1955). ಮೊಲೆಯಲ್ಲೇಳುವ ಏಡಿಗಂತಿಗಳಲ್ಲಿ ಅರೆಪಾಲಿಗೆ ಮಾತ್ರ ಹೀಗೆ ಹೇಳಬಹುದೆನ್ನುವುದು ಇಂದಿನ ಅಭಿಪ್ರಾಯ. ಇದಕ್ಕೆ ಹಿನ್ನೆಲೆಯಾಗಿ, ಬಹಳ ಮಂದಿ ವೈದ್ಯರಿಗೆ ಗೊತ್ತಿಲ್ಲದ ಒಂದು ಕತೆಯಿದೆ. ಜಾರ್ಜ್ ಬೀಟ್ಸನ್ ಇಂಗ್ಲೆಂಡಿನ ಲ್ಯಾನ್ಸೆಟ್ ಪತ್ರಿಕೆಯಲ್ಲಿ 1896 ರಲ್ಲಿ, 'ಶಸ್ತ್ರಕ್ರಿಯೆ ಮಾಡಲಾಗದ ಮೊಲೆಯಲ್ಲೆದ್ದ ಏಡಿಗಂತಿಗಳ ಚಿಕಿತ್ಸೆ' ಎಂಬ ಎರಡು ಲೇಖನಗಳನ್ನು ಬರೆದ. ಈಗ ನಮಗೆ ಚೆನ್ನಾಗಿ ಗೊತ್ತಿರುವ ಏಡಿಗಂತಿಗಳ ಮೇಲಿನ ಚೋದನಿಗಳ ಪ್ರಭಾವಕ್ಕೆ ಇವು ತಳಗಟ್ಟಾದುವು. ಈಗಲೂ ಏಡಿಗಂತಿಗಳ ಸಂಶೋಧನೆಯಲ್ಲಿ ಚೋದನಿಗಳ ಪಾತ್ರ ದೊಡ್ಡದಾಗೇ ಉಳಿದಿದೆ. ಎಡಿನ್‌ಬರೋ ವಿಶ್ವವಿದ್ಯಾನಿಲಯದ ವೈದ್ಯ ಪದವೀಧರನಾಗಿದ್ದ ಬೀಟ್ಸನ್, ತಲೆನೆಟ್ಟಗಿಲ್ಲದ ಒಬ್ಬನನ್ನು ನೋಡಿಕೊಳ್ಳಲು ಸ್ಕಾಟ್ಲೆಂಡಿನ ಪಡುವಲಿಗೆ ಹೋಗಿದ್ದ. ಅವನಿಗೆ ಕೊಂಚ ಬಿಡುವಿದ್ದುದರಿಂದ ತನ್ನ ಎಂ.ಡಿ. ಪದವಿಗಾಗಿ ಒಂದು ಮಹಾ ಪ್ರಬಂಧವನ್ನು ಬರೆಯಲು ಹವಣಿಸಿದ. ಅಲ್ಲಿ ಎಲ್ಲೆಲ್ಲೂ ಕುರಿ ಸಾಕುತ್ತಿದ್ದರು. ಕುರಿಗಳು ಹಾಲೂಡಿಸುವುದರಲ್ಲೂ ಮೊಲೆ ಬಿಡಿಸುವುದರಲ್ಲೂ ಅವನಿಗೆ ಕುತೂಹಲ ಹುಟ್ಟಿತು. ಹಾಲೂಡಿಸುವುದರ ಮೇಲೇ ತನ್ನ ಮಹಾ ಪ್ರಬಂಧ ಬರೆಯಬಹುದೆನಿಸಿ. ಕುರುಬರೊಂದಿಗೆ ಮಾತಾಡಿದ. ಆಸ್ಟ್ರೇಲಿಯದಲ್ಲಿ, ಹಸುಗಳು ಯಾವಾಗಲೂ ಹಾಲು ಕರೆಯುತ್ತಿರುವಂತೆ ಮಾಡಲು ಅವುಗಳ ಅಂಡಾಶಯಗಳನ್ನು (ಓವರೀಸ್) ತೆಗೆದುಹಾಕುವರೆಂದು ಅವನಿಗೆ ತಿಳಿಯಿತು. ಆದರೆ ಇಂಗ್ಲೆಂಡಲ್ಲಿ ಮಾತ್ರ ಅಂಡಾಶಯಗಳನ್ನು ತೆಗೆಯುತ್ತಿರಲಿಲ್ಲ. ಅವರ ಬದಲಾಗಿ, ಹಾಲು ಕರೆಯುತ್ತಿರುವ ಹಸು ಈಲಾದರೆ, ಹಾಲು ಕರಾವು ನಿಲ್ಲದೆ ಒಂದೇ ಸಮನಾಗಿರುವುದೆಂದು ತಿಳಿದು, ಹಾಗೇ ಮಾಡಿಸುತ್ತಿದ್ದರು. ಅದಕ್ಕೋಸ್ಕರ. ಕರುಹಾಕಿದ ಹಸುವಿಗೆ 2–3 ತಿಂಗಳಲ್ಲೇ ಗೂಳಿ ಕೂಡಿಸುತ್ತಿದ್ದರು. ಮೊಲೆಯಲ್ಲಿ ಹಾಲೂರುವುದಕ್ಕೂ ಅಂಡಾಶಯಗಳಿಗೂ ಇರುವ ಸಂಬಂಧ ಬೀಟ್ಸನ್ನಿಗೆ ಕುತೂಹಲ ಕೆರಳಿಸಿತು. ಅಂಡಾಶಯಗಳು ಇದ್ದರೆ ಹಾಲೂರುವುದು ಬರುಬರುತ್ತಾ ಇಳಿದು ಹೋಗುತ್ತಿತ್ತು. ಅವನ್ನು ತೆಗೆದುಹಾಕಿದರೆ ಕರಾವು ನಿಲ್ಲುತ್ತಿರಲಿಲ್ಲ. ಹಸು ಈಲಾ

ದಾಗ ಕರಾವನ್ನು ನಿಲ್ಲಿಸುವ ಅಂಡಾಶಯುಗಳ ಶಕ್ತಿ ಕುಂದಿರುತ್ತಿತ್ತು. ಹೀಗೆ ಮೊಲೆಗಳ ಮೇಲೆ ಅಂಡಾಶಯುಗಳ ಹತೋಟಿಯನ್ನು ತೋರುವ ಎರಡು ಪುರಾವೆಗಳು ದೊರೆತುವು.

ಹಾಲೂರಿಕೆ, ಏಡಿಗಂತಿ:

ಈ ವಿಚಾರಗಳನ್ನು ತನ್ನಲ್ಲೇ ತಿರುವಿಹಾಕುತ್ತಿರುವಾಗ, ಬೀಟ್ಸನ್ನಿಗೆ ಒಂದು ಭಾವನೆ ಉಂಟಾಯಿತು. ಮೊಲೆಯಲ್ಲಿ ಹಾಲೂರಿಸುವ ಕೆಲಸ ವಿಧಾನಕ್ಕೂ ಮೊಲೆಯಲ್ಲಿ ಏಡಿಗಂತಿ ಬೆಳೆವ ಕ್ರಮಗತಿಗೂ ಏನೋ ಸಂಬಂಧ ಇರಬೇಕು ಅಂದುಕೊಂಡ. 'ಮೇಲ್ಪರೆ' ಯಲ್ಲಿ (ಎಪಿತೀಲಿಯಂ) ಹುಟ್ಟಿದ ಏಡಿಗಂತಿ, ಅದೇ ರಚನೆ ಹೊಂದಿರುತ್ತದೆ. ಈ ಮೇಲ್ಪರೆ ಒಂದೇ ಸಮನಾಗಿ ಮಿತಿಮೀರಿ ಬೆಳೆದು ಸುತ್ತಮುತ್ತಲ ಊತಕಗಳಲ್ಲಿ (ಟಿಷ್ಯೂಸ್) ನುಗ್ಗಿ ಹಾಲ್ರಸ (ಲಿಂಫ್) ನಾಳಗಳ ಮೂಲಕ ಹರಡಿ, ಗ್ರಂಥಿ ಕೂಟದಿಂದ ಇನ್ನೊಂದಕ್ಕೆ ಸಾಗಿ ಕೊನೆಗೆ ಮೈಯಲ್ಲಿನ ದೂರದ ಅಂಗಗಳು, ಭಾಗಗಳಲ್ಲಿ ಇಡುಂಗೆಗಳಾಗಿ (ಡಿಪಾಸಿಟ್ಸ್) ಸೇರಿಕೊಳ್ಳುವುದೇ ಏಡಿಗಂತಿಯ ಹಾಳು ಮೂಲಗುಣ. ಹಾಲೂರುತ್ತಿರುವ ಮೊಲೆಯಲ್ಲಾಗುವ ಬದಲಾವಣೆಗಳು ಬಹುಮಟ್ಟಿಗೆ ಒಂದು ಹಂತದತನಕ ಮೊಲೆಯ ಏಡಿಗಂತಿಯಲ್ಲಿ ಆಗುವುದನ್ನೇ ಹೋಲುವುವು. ಇವೆರಡರಲ್ಲೂ ಮೇಲ್ಪರೆಯ ಜೀವಕಣಗಳ ಪೀಳಿಗೆಗಳು ಗುಣಿತವಾಗಿ ಸಾಗುನಾಳಗಳಲ್ಲಿ (ಡಕ್ಟ್ಸ್) ಅಡ್ಡಗಟ್ಟಿ ಗ್ರಂಥಿಯ ಗ್ರಂಥಿನೆರಿಗಳ (ಅಸಿನೈ) ತುಂಬ ಬಿರಿದುಂಬಿರುತ್ತವೆ. ಆದರೆ ಹಾಲೂಡಿಸುವ ಮೊಲೆಯಲ್ಲಿ ಇವು ಬೇಗನೆ ಬರಿ ಗುಳ್ಳೆಗಳಾಗಿ (ವ್ಯಾಕ್ಯುಯೋಲ್ಸ್) ಕೊಬ್ಬುಗೂಡಿ ಹಾಲೂರುವುದು; ಏಡಿಗಂತಿಯಲ್ಲಿ ಅಲ್ಲಿಗೇ ನಿಂತು, ಬೇರೆ ಜಾಗವಿಲ್ಲದೆ ಸಾಗುನಾಳಗಳ ಗೋಡೆಗಳು, ಗ್ರಂಥಿನೆರಿಗಳನ್ನೂ ತೂರಿ ಸುತ್ತಮುತ್ತಣ ಊತಕಗಳಿಗೂ ನುಗ್ಗಿ ಧಾಳಿ ಇಡುತ್ತವೆ. ಕೊಂಚದರಲ್ಲಿ ಹೇಳಬೇಕೆಂದರೆ, ಇನ್ನೇನು ಏಡಿಗಂತಿ ಆಗಬೇಕೆನ್ನುವುದಕ್ಕೆ ಮುಂಚೆ ನಿಂತುಹೋಗುವುದೇ ಹಾಲೂರಿಕೆ ಎನ್ನಬಹುದು.

ಕರುಹಾಕಿದ ಮೇಲೆ ಹಾಲು ಕರೆಯುತ್ತಲೇ ಇರುವಂತೆ ಮಾಡಲು, ಹಸುವಿನ ಅಂಡಾಶಯುಗಳನ್ನು ತೆಗೆದುಹಾಕುವ ಪದ್ಧತಿ ಬೀಟ್ಸನ್ನಿಗೆ ತುಂಬಾ ಆಸಕ್ತಿ ಕೆರಳಿಸಿತು. ಒಂದು ಅಂಗ ಬೇರೆ ಇನ್ನೊಂದು ಅಂಗದ ಸುರಿತದ ಮೇಲೆ ಹತೋಟಿ ಇಟ್ಟುಕೊಳ್ಳುವುದು ಇದರಿಂದ ಕಂಡುಬಂದಿತು. ಹಾಲೂರುತ್ತಿರುವ ಮೊಲೆಯಲ್ಲಿ ಕಂಡ ಮೇಲ್ಪೊರೆಯ ತಾವಿನ ಹೆಗ್ಗಳಿಕೆಯೇ (ಪ್ರೊಲಿಫರೇಷನ್) ಮೊಲೆಯ ಏಡಿಗಂತಿಯ (ಅಲ್ಲದೆ ಎಲ್ಲಾದರೂ ಸರಿಯೆ ಏಡಿಗಂತಿಗಳ) ಮೂಲಗುಣವಾಗಿತ್ತು. ಆದರೆ ಇಲ್ಲಿ ಮಾತ್ರ ಇನ್ನೊಂದು ಅಂಗ ಇದನ್ನು ಅಂಕೆಯುಲ್ಲಿರಿಸಿತ್ತು. ಮುಟ್ಟಿನಲ್ಲಾಗುವಂತೆ ಅಂಡಾಶಯುದ ಬದಲಾವಣೆಗಳ ಚಕ್ರದಲ್ಲಿ ಏನೋ ತಪ್ಪಿ ಕೆಟ್ಟಿದ್ದರಿಂದ ಮೊಲೆಯಲ್ಲಿ ಏಡಿಗಂತಿ ಏಳಬಹುದೇ, ಹಾಗಿದ್ದರೆ ಅಂಡಾಶಯುಗಳನ್ನು ತೆಗೆದುಹಾಕಿದರೆ ಜೀವಕಣಗಳು ಗುಣಿತವಾಗುವುದು ನಿಂತುಹೋಗಬಹುದೇ ಎಂದು ಶಂಕಿಸಿದ ಬೀಟ್ಸನ್.

ಹಾಲೂರಿಕೆಯಲ್ಲಿ ಅವನ ಆಸಕ್ತಿ ಕೆರಳಿದ ಇಪ್ಪತ್ತು ವರುಷಗಳ ತನಕ, ಹಾಲೂರಿಕೆ ಏಡಿಗಂತಿ ಬೆಳೆತವನ್ನು ಹೋಲುವುದೆಂಬ ತನ್ನ ಕಲ್ಪನೆಯನ್ನು ಪರೀಕ್ಷಿಸಿ ನೋಡಲಾಗಲಿಲ್ಲ. 'ಇವಳಿಗೆ ಇನ್ನಾವ ಚಿಕಿತ್ಸೆಯನ್ನೂ ಮಾಡುವಂತಿಲ್ಲ ಅನ್ನಿಸುತ್ತದೆ'ಂದು ಕಾಗದ ಬರೆದು, 1895 ರಲ್ಲಿ ಒಬ್ಬ ಗ್ಲಾಸ್ಗೊ ವೈದ್ಯ ಒಬ್ಬ ಹೆಂಗಸನ್ನು ಇವನಲ್ಲಿಗೆ ಕಳುಹಿಸಿಕೊಟ್ಟ. ಈ 33 ವರುಷಗಳ ಹೆಂಗಸಿಗೆ 10–12 ತಿಂಗಳು ಹಾಲೂಡಿಸಿದ್ದ ಇಬ್ಬರು ಮಕ್ಕಳಿದ್ದರು. ಚೊಚ್ಚಲ ಮಗುವಿಗೆ ಹಾಲೂಡಿಸುತ್ತಿದ್ದಾಗ ಅವಳ ಎಡ ಮೊಲೆಯಲ್ಲಿ ಒಂದು ಗಟ್ಟಿ ಗಡ್ಡೆ ಎದ್ದಿದ್ದೂ ಕಂಡಿತು. ಎರಡನೆಯ ಮಗುವಿಗೆ ಹಾಲು ಕೊಟ್ಟು ಬಿಡಿಸಿದ ಮೇಲೆ, ಗಡ್ಡೆ ಇನ್ನೂ ಬಲುದೊಡ್ಡದಾದ್ದರಿಂದ ಆಸ್ಪತ್ರೆಯಲ್ಲಿ ತೋರಿಸಿದಳು. ಆ ಗಡ್ಡೆಯನ್ನು ಏಡಿಗಂತಿಯೆಂದು ಗುರುತಿಸಿ, ಅವಳ ಎಡ ಮೊಲೆಯ ಜೊತೆಗೆ ಆ ಕಡೆಯ ಕಂಕುಳಲ್ಲಿದ್ದ ಹಾಲ್ರಸ ಗ್ರಂಥಿಗಳನ್ನೂ ಎದೆ ಸ್ನಾಯುವಿನ ಬಹುಪಾಲನ್ನೂ ತೆಗೆದುಹಾಕಿದರು. ಹೀಗಾದ ಮೂರೇ ತಿಂಗಳಲ್ಲಿ ಗಾಯ ಒಡೆದುಕೊಂಡು, ರಸ ಸುರಿದು ನೋವಿಟ್ಟಿತು. ಆಗಲೇ ಅವಳನ್ನು ಬೀಟ್ಸನ್ ಕಂಡಿದ್ದು. ಶಸ್ತ್ರಕ್ರಿಯೆಯಿಂದಾದ ಉದ್ದನೆಯ ಗಾಯ ಕಲೆಯಲ್ಲಿ ಗಟ್ಟಿಯಾಗಿ ಗಂಟುಕಟ್ಟಿದ ಮರುಕಳಿಸಿದ ಗಂತಿ (ಟ್ಯೂಮರ್) ಇದ್ದುದನ್ನು ಕಂಡ. ಏಡಿಗಂತಿ ಮತ್ತೆ ಎದ್ದಿತ್ತು. ಅವಳ ಇನ್ನೊಂದು ಮೊಲೆ, ಕಂಕುಳಲ್ಲಿ ಏನೂ ರೋಗವಿರಲಿಲ್ಲ. ಈ ಗಂತಿಯನ್ನು ಮತ್ತೆ ಕೊಯ್ದು ಹಾಕಿದರೂ ಏನೂ ಒಳ್ಳೆಯದಾಗದೆಂದು, 3 ವಾರಗಳು ಅವಳಿಗೆ ಗುರಾಣಿಕದ (ತೈರಾಯ್ಡ್) ಮಾತ್ರೆಗಳನ್ನು ಕೊಟ್ಟರೂ ಗುಣವಾಗದ್ದರಿಂದ, ಅವಳ ಅಂಡಾಶಯಗಳನ್ನು ತೆಗೆದುಹಾಕಬೇಕೆಂದು ಅವಳಿಗೂ ಅವಳ ಗಂಡನಿಗೂ ಸೂಚಿಸಿದ. ಈ ಶಸ್ತ್ರಕ್ರಿಯೆಯಿಂದ ಪ್ರಾಣಕ್ಕೆ ಅಪಾಯ ಇಲ್ಲವಾದರೂ, ಇದು ಕೇವಲ ಮಾಡಿ ನೋಡಬಹುದಾದ್ದೆಂದೂ ವಿವರಿಸಿದ. ಇದರಿಂದ ಅವಳಿಗೆ ಆಗಿರುವುದಕ್ಕಿಂತಲೂ ಹೆಚ್ಚಿನ ಕೆಡುಕಾಗದು. ಅವಳು ಕೂಡಲೇ ಒಪ್ಪಿದಳು. ಅಂಡಾಶಯಗಳನ್ನು ತೆಗೆದಿದ್ದೂ ಆಯಿತು.

ಐದು ವಾರಗಳು ಕಳೆದ ಮೇಲೆ, ರೋಗ ಹತ್ತಿದ್ದ ಎಡಗಡೆಯ ಭಾಗಗಳಲ್ಲಿ ಬಹಳ ವ್ಯತ್ಯಾಸಗಳು ಕಂಡುಬಂದುವು. ಏಡಿಗಂತಿಯ ದೊಡ್ಡ ಗಡ್ಡೆಯಲ್ಲಿ ರಕ್ತ ಗೂಡಿರುವುದು ತಗ್ಗಿ, ಗಂತಿ ಸಣ್ಣಗೆ ಚಪ್ಪಟೆಯಾಗಿ ಅಷ್ಟಾಗಿ ಎದ್ದು ಕಾಣದಂತಾಯಿತು. ಅದರ ಸುತ್ತಣ ಊತಕಗಳು ಮೆತ್ತಗಾಗಿದ್ದುವು. ಏಡಿಗಂತಿಯ ಚಿಪ್ಪೆಗಳು ಹೋದುವು. ಶಸ್ತ್ರಕ್ರಿಯೆಯಾದ 8 ತಿಂಗಳ ಮೇಲೆ, 'ಅವಳ ಹಿಂದಿನ ಏಡಿಗಂತಿ ರೋಗದ ಹಳೆಯ ಗುರುತುಗಳೆಲ್ಲ ಮಾಯವಾಗಿದ್ದುವು. ಅವಳ ಆರೋಗ್ಯ ಸುಧಾರಿಸಿದಂತಿದೆ' ಎಂದು ಬೀಟ್ಸನ್ ಬರೆದಿಟ್ಟ.

ಇನ್ನೊಬ್ಬಳು ರೋಗಿಯಲ್ಲೂ ಅವನಿಗೆ ಹೀಗೇ ಕೈಗೂಡಿತು. ಈ ಪರಿಣಾಮಗಳು ತುಂಬ ಗಹನವಾಗಿದ್ದುವು. ಮೊಲೆಯ ಏಡಿಗಂತಿಗೂ ಅಂಡಾಶಯಗಳಿಗೂ

ಸಂಬಂಧವನ್ನು ಹಿಂದೆ ಯಾರೂ ಊಹಿಸಿರಲಿಲ್ಲ. ಅಂತಹ ನಂಟು ಇರಬಹುದೆಂದು ತಾನೇಕೆ ಶಂಕಿಸಿದೆನೆಂದು ಸರಳವಾಗಿ, ವಿವರವಾಗಿ ತಿಳಿಸಿ ತನ್ನ ಭಾವನೆಯೇ ಸರಿಯೆಂದು ಮಾಡಿ ತೋರಿಸಿಕೊಟ್ಟ. ಇಷ್ಟೇ ಅಲ್ಲದೆ, ಅಂಡಾಶಯಗಳನ್ನು ತೆಗೆದು ಹಾಕಿದರೆ ಏಡಿಗಂತಿ ಇಲ್ಲವಾಗುವುದನ್ನೂ ಮಾಡಿ ತೋರಿಸಿದ. ಈ ವಿಧಾನದ ಕೀರ್ತಿ ಅವನಿಗೇ ಸಲ್ಲಬೇಕು.

ಅಂಡಾಶಯಗಳನ್ನು ತೆಗೆಪುದರಿಂದಾಗುವ ಅನಾನುಕೂಲಗಳನ್ನೂ ಆತ ವಿವರಿಸಿದ. ಹೈಡ್ರ ತೆರನ ಕೀಳುಮಟ್ಟದ ಜೀವಿಗಳಲ್ಲಿ, ಒಂದು ಭಾಗವನ್ನು ತುಂಡರಿಸಿದರೆ, ಉಳಿದಿರುವ ಭಾಗ ಪೂರ್ತಿ ಇನ್ನೊಂದು ಹೈಡ್ರವನ್ನೇ ಬೆಳೆಸುತ್ತದೆ. ಅಂದರೆ, ಅದರ ಒಂದೊಂದು ಭಾಗವೂ ಹೀಗೆ ಇನ್ನೊಂದು ಜೀವಿಯಾಗಿ ಬೆಳೆಯಬಲ್ಲದು. ಮೇಲ್ತರದ ಜೀವಿಗಳ ಮೈಗಳಲ್ಲಿನ ಸಾಧಾರಣ ಜೀವಕಣಗಳು ಹೀಗೆ ಬೆಳೆವ ಶಕ್ತಿಯನ್ನು ಕಳೆದುಕೊಳ್ಳದಿದ್ದರೂ, 'ಕೇವಲ ಮೇಲ್ಪರೆಗಳ ಕೂಟವಾಗಿರುವ, ಆರೋಗ್ಯದ ಅಂಡಾಶಯಗಳು ಈ ಶಕ್ತಿಯನ್ನು ಉಳಿಸಿಕೊಂಡಿವೆ. ಈ ಅಂಗಗಳ ಸುರಿತದಲ್ಲಿ ವ್ಯತ್ಯಾಸವಾದರೆ, ಏನಾದರೂ ಬೇನೆಯಾದರೆ, ಮೈಯಲ್ಲಿನ ಬೇರೆ ಜೀವಕಣಗಳು ಮತ್ತೆ ಬೆಳೆವಂತೆ ಬಲಗೊಳ್ಳಲು ಬಿಡುವುದಲ್ಲದೆ, ಮೊಳೆಯುವ ಮೇಲ್ಪರೆಯ ಚುರುಕಾಗಿ ವೆಗ್ಗಳಿಸುವ ಬಲ ಈ ಜೀವಕಣಗಳಿಗೆ ಶಕ್ತಿ ನೀಡಬಹುದು.' ಇದಲ್ಲದೆ ಗಂಡಸಿನಲ್ಲಿ ಏಡಿಗಂತಿಯಾಗಲು ಅವನ ತಡ್ಡು (ತರಡು, ವೃಷಣ) ವಿನಲ್ಲಿ ಏನೋ ಕೆಟ್ಟಿರುವುದೋ, ಸುರಿತ ವ್ಯತ್ಯಾಸವೋ ಕಾರಣವಾಗಿರಬೇಕೆಂದು ಆತ ಹೇಳಿದ್ದಾನೆ.

ಇದನ್ನೆಲ್ಲ ಬೀಟನ್ ಹೇಳುವ ಕಾಲಕ್ಕೆ ಒಳಸುರಿಕ ಶಾಸ್ತ್ರ (ಎಂಡೋಕ್ರೈನಾಲಜಿ) ಇನ್ನೂ ಹುಟ್ಟಿರಲಿಲ್ಲ; ಜನನಾಂಗಗಳ ವಿಚಾರವಾಗೂ ಹೆಚ್ಚಾಗಿ ಗೊತ್ತಿರಲಿಲ್ಲ. ಆಗಲೂ ಶಸ್ತ್ರಕ್ರಿಯೆ ಮಾಡಲಾಗದವರಿಗೆ ಮಾತ್ರ ಈ ಚಿಕಿತ್ಸೆಯನ್ನು ಬೀಟ್ಸನ್ ಸೂಚಿಸಿದ್ದ.

ಅಂಡಾಶಯದ ಚೋದನಿಗಳು:

ಅಂಡಾಶಯದ ಚೋದನಿಗಳ ವಿವರವಾದ ತಿಳಿವಳಿಕೆ 1917 ಕಳೆದ ಮೇಲೇ ಬಂದಿದ್ದು ; ಅದೂ ಕೇವಲ ಇಲಿಗಳಲ್ಲಿನ ತಿಳಿವಳಿಕೆ. ಹೆಣ್ಣು ಇಲಿಯಲ್ಲಿ ಸುಮಾರು 4 ದಿನಗಳಲ್ಲಿ ಜನನಾಂಗಗಳಲ್ಲಿ ವ್ಯತ್ಯಾಸಗಳ ಒಂದು ಚಕ್ರ ಮುಗಿಯುತ್ತದೆ. ಈ ವ್ಯತ್ಯಾಸಗಳನ್ನು ಯೋನಿಯಲ್ಲೂ ಗರ್ಭಕೋಶದಲ್ಲೂ ಕಾಣಬಹುದು. ಬೆದೆಹತ್ತಿ ಗಂಡು ಇಲಿಯೊಂದಿಗೆ ಕೂಡುವಂತೆ ಮಾಡುವುದರಿಂದ, ಇದಕ್ಕೆ ಬೆದೆಯ (ಈಸ್ಟ್ರಸ್) ಚಕ್ರ ಎಂದಿದೆ. ಯೋನಿಯ ಗೋಡೆಯ ಹೊಸ ಜೀವಕಣಗಳು ಬೇಗ ಬೇಗನೆ ಬೆಳೆವುದರಲ್ಲಿ ಈ ಚಕ್ರವನ್ನು ಮೊದಲು ಗುರುತಿಸಬಹುದು. ಈ ಜೀವಕಣಗಳು ವೆಗ್ಗಳಿಸುತ್ತವೆ. ಗುಣಿತವಾಗಿ ಹೆಚ್ಚಿಕೊಳ್ಳುತ್ತವೆ. ಮೊದಮೊದಲು ಜೀವಕಣಗಳಲ್ಲಿ ನಬ್ಬೀಜ

ಗಳು (ನ್ಯೂಕ್ಲಿಯೈ) ಇರುತ್ತವೆ. ಇವುಗಳ ಹಿಂದೆ ಹೊಸ ಜೀವಕಣಗಳು ಹುಟ್ಟಿ ಬೆಳೆದು ಇವನ್ನು ತಳ್ಳಿದಂತೆಲ್ಲ ಇವು ನಬ್ಬೀಜಗಳನ್ನು ಕಳೆದುಕೊಂಡು ಚಪ್ಪಟೆಯಾಗಿ ಇನ್ನೂ ಗಡುಸಾಗುತ್ತವೆ. ಇದರಿಂದಲೇ ಯೋನಿಯ ಮೇಲ್ಮಲದಲ್ಲಿನ ಈ ಜೀವಕಣ ಗಳು ಕೋಡ್ಪರೆ (ಕೋಡುಪರೆ) ಗೂಡಿವೆ (ಕಾರ್ನಿಫೈಡ್) ಎನುವುದು. ಹೀಗಾಗು ವುದು ಮಿತಿ ಮುಟ್ಟಿದಾಗ ಗಂಡನ್ನು ಕೂಡಲು ಹೆಣ್ಣಲಿ ಸಿದ್ಧವಾಗಿರುತ್ತದೆ. ಅದೇ ವೇಳೆಯಲ್ಲಿ, ಗರ್ಭಕೋಶದಲ್ಲೂ ಬದಲಾವಣೆಗಳು ಆಗುತ್ತಿರುತ್ತವೆ. ಗರ್ಭಕೋಶ v ಆಕಾರದಲ್ಲಿರುವುದು. ಕೊಂಬುಗಳೆಂಬ ಇದರ ಎರಡು ಕವಲುಗಳೂ ಕೆಳಗಡೆ ಒಂದಾಗಿ ಯೋನಿಯಾಗುತ್ತವೆ. ಬೆದೆ ಏರಿದಂತೆಲ್ಲ, ಇದರ ಗೋಡೆಗಳೂ ಇನ್ನೂ ಮಂದವಾಗಿ ಅದರೊಳಗಿನ ಪೊಳ್ಳಿನಲ್ಲಿ ರಸ ತುಂಬುತ್ತದೆ. ಹೆಣ್ಣೂ ಗಂಡೂ ಕೂಡಿದರೆ, ಗಂಡಿನಿಂದ ರೇತುಕಣಗಳು ಗರ್ಭಕೋಶದ ಎರಡು ಕೊಂಬುಗಳ ಒಳಹೊಕ್ಕು, ಕೊಂಬು ಗಳ ತೆರೆದಿರುವ ಕೊನೆಗಳ ಮೂಲಕ ಗರ್ಭಕೋಶದಲ್ಲಿ ಹೊಕ್ಕಿರುವ ಅಂಡಾಣುಗಳನ್ನು ಅಲ್ಲಿರುವ ರಸದಲ್ಲಿ ಸೇರುತ್ತವೆ. ಹಾಗೆ ಫಲವಂತವಾದ (ಫರ್ಟಿಲೈಸ್ಡ್) ಅಂಡಾಣು ಗಳು ಗರ್ಭಕೋಶದ ಗೋಡೆಯಲ್ಲಿ ನೆಲೆಸಿ ಅಲ್ಲೇ ಬೆಳೆಯುುವುವು.


ಇದೇ ವೇಳೆಯಲ್ಲಿ, ಗಂಡೂ ಹೆಣ್ಣೂ ಕೂಡದಿದ್ದರೆ ಮೇಲ್ಕಂಡ ಯೋನಿ, ಗರ್ಭಕೋಶಗಳಲ್ಲಿನ ವ್ಯತ್ಯಾಸಗಳೆಲ್ಲ ಹಿಂದುಮುಂದಾಗುತ್ತವೆ. ಯೋನಿಯಲ್ಲಿ ಹೊಸ ದಾಗಿ ಬೆಳೆದ ಜೀವಕಣಗಳ ಪದರ ಉದುರಿಹೋಗಿ, ಗರ್ಭಕೋಶದ ಕೊಂಬುಗಳ ಗಾತ್ರವೂ ಕಿರಿದಾಗುತ್ತದೆ. ಅಲ್ಲಿಗೆ ಒಂದು ಚಕ್ರ ಮುಗಿದು, ಮತ್ತೆ ಇನ್ನೊಂದು ಆರಂಭವಾಗುತ್ತದೆ. ಇವೆಲ್ಲ ವ್ಯತ್ಯಾಸಗಳಿಗೂ ಕಾರಣ ಅಂಡಾಶಯದಲ್ಲಿ ತಯಾ ರಾಗುವ ಒಂದು ರಸಾಯನಿಕ ವಸ್ತುವಾದ ಈಸ್ಟ್ರಾಡಿಯೋಲ್. ಇದು ನೇರವಾಗಿ ರಕ್ತವನ್ನು ಸೇರಿ ಯೋನಿ, ಗರ್ಭಕೋಶಗಳಲ್ಲಿ ಈ ವ್ಯತ್ಯಾಸಗಳ ಚಕ್ರ ಆಗುವುದೇ ನಿಂತುಹೋಗುತ್ತದೆ. ಅಂಡಾಶಯದಿಂದ ಬೇರ್ಪಡಿಸಿ ತೆಗೆದ ಈಸ್ಟ್ರಾಡಿಯೋಲನ್ನು ಅಂಡಾಶಯಗಳನ್ನು ತೆಗೆದುಹಾಕಿರುವ ಇಲಿಗೆ ಚುಚ್ಚಿದರೆ ಈ ಚಕ್ರ ಮತ್ತೆ ಆರಂಭಿ ಸುವುದು. ಅಂದರೆ, ಯೋನಿ, ಗರ್ಭಕೋಶಗಳಲ್ಲಿ ಜೀವಕಣಗಳ ವೆಗ್ಗಳಿಕೆ ಬಲು ಬೇಗನೆ ಆಗುವಂತೆ ಈಸ್ಟ್ರಾಡಿಯೋಲ್ ಚೋದಿಸುವಂತೆ ಮಾಡುವ ಈಸ್ಟ್ರಾಡಿಯೋಲ್ ಅಪೂರ್ವ ವಸ್ತು. ಒಂದೇ ಒಂದು ವಸ್ತು ಹೀಗೆ ಪ್ರಬಲವಾಗಿ ಬೆಳೆಸುವ ಶಕ್ತಿ ಪಡೆದಿರುವುದಂತೂ ಸೋಜಿಗವೇ.

ಮೊಲೆಯಲ್ಲಿರಲಿ, ಜಠರದಲ್ಲಿರಲಿ, ಅಂತೂ ಎಲ್ಲಾದರೂ ಇರಲಿ, ಏಡಿಗಂತಿ ಕೂಡ ಯಾವಾಗಲೂ ವೆಗ್ಗಳಿಸುತ್ತಿರುವ, ಗುಣಿತವಾಗುತ್ತಿರುವ, ಬಲು ಬೇಗನೆ ವಿಪರೀತ ಜೋರಾಗಿ ಬೆಳೆವ ಜೀವಕಣಗಳ ತಂಡವೇ. ಆದ್ದರಿಂದ ಬೆದೆಯ ಚಕ್ರ ದಲ್ಲಿ, ಗರ್ಭಕೋಶದಲ್ಲಿ ಜೀವಕಣಗಳ ಜೋರಾದ ಬೆಳವಣಿಗೆಗೂ ಏಡಿಗಂತಿಯಲ್ಲಿ ವೆಗ್ಗಳಿಸುವುದಕ್ಕೂ ಪಾಸಟಿಯನ್ನು ತರಬಹುದು. ಇವೆರಡರಲ್ಲೂ ಬೆಳೆವ ವೇಗ ಬಲು ಜೋರಾಗಿರಬಹುದು.


ಯೋನಿ, ಗರ್ಭಕೋಶಗಳ ಜೀವಕಣಗಳ ಬೆಳೆವಣಿಗೆಯನ್ನು ಈಸ್ಟ್ರಾಡಿಯೋಲ್ ಹೆಚ್ಚಿಸುವ ಬಗೆ ಹೇಗೆ? ಅದಕ್ಕೆ ಬೇಕಾದ ಶಕ್ತಿಯನ್ನು ನೀಡುವುದರಲ್ಲಿ ಇದರ ಪಾತ್ರವೂ ಇರಬಹುದು. ಜೀವಕಣಗಳು ಗುಣಿತವಾಗುವ ವೇಗ ಅದಕ್ಕೆ ದೊರೆವ ಶಕ್ತಿಗೆ ತಕ್ಕಹಾಗಿದ್ದರೆ, ಈ ಶಕ್ತಿ ರಸಾಯನಿಕ ಕೆಲಸಗಳ ಸರಣಿಯಿಂದ ಬರುತ್ತದೆ ಎನ್ನುವುದಾದರೆ, ಆಗ ಆ ಶಕ್ತಿ ದೊರೆವ ವೇಗ ಆ ಸರಣಿಯಲ್ಲಿನ ತೀರ ನಿಧಾನ ವಾಗಿ ನಡೆವುದರದನ್ನು ಅನುಸರಿಸುವುದು. ಈ ನಿಧಾನದ ಕ್ರಮುಗತಿಯನ್ನು ಈಸ್ಟ್ರಾಡಿ ಯೋಲ್ ವೇಗಗೊಳಿಸುವುದಾದರೆ ಹೊಸ ಜೀವಕಣಗಳು ತಯಾರಾಗುವ ವೇಗದ ಮೇಲೂ ಪ್ರಭಾವ ಬೀರುತ್ತದೆ.

ಅಂಡಾಶಯಗಳನ್ನು ತೆಗೆದುಹಾಕಿದಾಗ ಬಹುಮಟ್ಟಿಗೆ ಗುಣವಾದ ಮೊಲೆಯು ಏಡಿಗಂತಿಗಳಿಂದ, ಏಡಿಗಂತಿ ಬೆಳೆಯಲು ಅಂಡಾಶಯದ ಚೋದನಿಯಾದ ಈಸ್ಟ್ರಾಡಿ ಯೋಲ್ ಈಗತಾನೇ ಹೇಳಿದ ರೀತಿಯಲ್ಲಿ ನೆರವಾಗುವುದೆಂದು ತಿಳಿಯಬಹುದು. ಈಸ್ಟ್ರಾಡಿಯೋಲ್ ಇಲ್ಲವಾದರೆ ಏಡಿಗಂತಿ ಜೀವಕಣಗಳು ಬೆಳೆಯುವು. ಅಂಡಾಶಯ ಗಳನ್ನು ತೆಗೆದುಹಾಕಿದಾಗ ಈಸ್ಟ್ರಾಡಿಯೋಲಿನ ಮೂಲವನ್ನೇ ತೆಗೆದಂತಾಗಿ ಏಡಿ ಗಂತಿಯ ಜೀವಕಣಗಳ ವೆಗ್ಗಳಿಕೆ ನಿಲ್ಲುತ್ತದೆ.

ತನ್ನ ಫಲಿತಾಂಶಗಳನ್ನು ಬೀಟ್ಸನ್ ವರದಿ ಮಾಡಿದಾಗ ಎಲ್ಲರಲ್ಲೂ ಆಸಕ್ತಿ ಕೆರಳಿಸಿತು. ಆ ಮೇಲಿನ ದಶಕದಲ್ಲಿ ಯಾರಿಗೂ ಆಸಕ್ತಿ ಉಳಿಯಲಿಲ್ಲ. ಇದಕ್ಕೆ ಎರಡು ಕಾರಣಗಳಿವೆ. ಮೊದಲಾಗಿ, ಎಷ್ಟೋ ರೋಗಿಗಳಲ್ಲಿ ಈ ವಿಧಾನದಿಂದ ಏನೂ ಗುಣ ಕಾಣಲಿಲ್ಲ. ಏಡಿಗಂತಿ ಸಿಹಿಮೂತ್ರದ ಹಾಗಲ್ಲ ಎನ್ನುವುದು ಈಗ ಎಲ್ಲರಿಗೂ ಗೊತ್ತು. ಎಲ್ಲ ಸಿಹಿಮೂತ್ರ ರೋಗಿಗಳಿಗೂ ಇನ್ಸುಲಿನ್ನಿಂದ ಗುಣ ಕಾಣುತ್ತದೆ. ಏಡಿಗಂತಿಯನ್ನು ಎಲ್ಲೋ ಕೆಲವರಲ್ಲಿ ಮಾತ್ರ ವಾಸಿಮಾಡಬಹುದು. ಗಂಡಸರಲ್ಲಿ ಮುನ್ನಿಲುಗದ ಏಡಿಗಂತಿ ಎದ್ದಿರುವವರಲ್ಲಿ ಸ್ಟಿಲ್‌ಬೀಸ್ಟ್ರಾಲ್‌ನಿಂದ ನೂರಕ್ಕೆ 80 ಮಂದಿಗೆ ಗುಣ ಕಂಡರೂ, ಎಲ್ಲ ರೋಗಿಗಳಲ್ಲೂ ಏಡಿಗಂತಿಯನ್ನು ವಾಸಿ ಮಾಡುವ ಮದ್ದು ಇನ್ನೂ ಗೊತ್ತಿಲ್ಲ. ಆದ್ದರಿಂದಲೇ, ಈ ಶತಮಾನದ ಮೊದ ಲಲ್ಲಿ, ಅಂಡಾಶಯಗಳನ್ನು ತೆಗೆದುಹಾಕಿದರೆ ಎಲ್ಲೋ ಕೆಲವರಿಗೆ ಮಾತ್ರ ಗುಣಕಾರಿ ಎನ್ನುವ ವಿಚಾರ ಎಡೆಗುಂದಿಸುತ್ತಿತ್ತು. ಈ ಶಸ್ತ್ರಕ್ರಿಯೆಯು ಬಳಕೆ ತಗ್ಗಿದುದಕ್ಕೆ ಎರಡನೆಯ ಕಾರಣ, ಅಂಡಾಶಯದ ವಿಕಿರಣ ಚಿಕಿತ್ಸೆ ಜಾರಿಗೆ ಬಂದುದು. ಎಕ್ಸ್ ಕಿರಣಗಳ ವಿಕಿರಣಕ್ಕೊಡ್ಡಿದರೆ ಅಂಡಾಶಯಗಳಲ್ಲಿ ತಯಾರಾಗುವ ಈಸ್ಟ್ರಾಡಿಯೋಲನ್ನು ತಗ್ಗಿಸುತ್ತಿತ್ತು. ಹೀಗೆ ಯಾವ ಶಸ್ತ್ರಕ್ರಿಯೆಯನ್ನೂ ಮಾಡದೆಯೇ ಎಕ್ಸ್‌ಕಿರಣ ಚಿಕಿತ್ಸೆಯಿಂದ ಏಡಿಗಂತಿ ಮೇಲೆ, ಅಷ್ಟಾಗಿ ಖಚಿತವಲ್ಲದಿದ್ದರೂ ನಿಧಾನವಾಗಾದರೂ ಒಳ್ಳೆಯ ಪ್ರಭಾವ ಕಾಣುತ್ತಿತ್ತು.



ಚಿತ್ರ 1 ಹೆಣ್ಣಿನಲ್ಲಿ ಒಳಸುರಿಕ ಗ್ರಂಥಿಗಳು



ಚಿತ್ರ 2 ಗಂಡಿನಲ್ಲಿ ಒಳಸುರಿಕ ಗ್ರಂಥಿಗಳು

1905 ರ ಹೊತ್ತಿಗೆ, ಕೆಲವರಿಗಂತೂ ಚೆನ್ನಾಗಿ ಗುಣವಾಗಿ, ಉಳಿದವರಲ್ಲಿ ಬಹಳ ಮಂದಿಗೆ ಈ ಚಿಕಿತ್ಸೆಯಿಂದ ನಾಲ್ವರಲ್ಲಿ ಒಬ್ಬರಿಗಾದರೂ ಅನುಕೂಲ ಕಂಡಿತ್ತು. ರೋಗಿಯ ಆರೋಗ್ಯ ಸುಧಾರಿಸಿತು, ಮೈತೂಕ ಹೆಚ್ಚಿತು, ನೋವು ಇಳಿಯಿತು, ಮೊಲೆಯಲ್ಲಿನ ಹುಣ್ಣು ವಾಸಿಯಾಯಿತು. ಕೆಲವೇಳೆ ಗಡ್ಡೆಯೂ ಕರಗಿತು. ಆಯುಸ್ಸೂ ಹೆಚ್ಚಿತು. ಇವೆಲ್ಲ ಕೆಲಕಾಲ ಮಾತ್ರ ಇದ್ದುವು. 2–3 ವರುಷಗಳಲ್ಲಿ ಗಡ್ಡೆ ಮತ್ತೆ ತಲೆದೋರಿತು. ಅಂತೂ ಐವರಲ್ಲಿ ಇಬ್ಬರಿಗೆ ಒಂದಿಷ್ಟು ಗುಣವಾಗಿತ್ತು.

ಅಡ್ರಿನಲ್ ಗ್ರಂಥಿಗಳು

ಐವರಲ್ಲಿ ಸುಮಾರು ಮೂವರಿಗೆ ಏನೂ ಗುಣ ಕಾಣದಾಯಿತು. ಈ ಚಿಕಿತ್ಸೆಯಿಂದ ಮೊದಮೊದಲು ಬಹಳ ಗುಣ ಕಂಡಿದ್ದವರಲ್ಲೂ ಏಡಿಗಂತಿ ಮರುಕಳಿಸಿದ್ದರಿಂದ ಇನ್ನೂ ಗೊಂದಲಕ್ಕೆ ಸಿಕ್ಕಿದಂತಾಯಿತು. ಇದು ವಿಜ್ಞಾನದ ಸಮಸ್ಯೆ. ಇದಕ್ಕೆ ಸಮಜಾಯಿಷಿ ಸಿಗಲು ಬಹುಕಾಲ ಹಿಡಿಯಿತು. ಬೆದೆ ಹುಟ್ಟಿಸುವುದಕ್ಕಾಗಿ ಹೆಂಗಸಲ್ಲಿರುವ ಈಸ್ಟ್ರಾಡಿಯೋಲ್, ಗಂಡಸಲ್ಲಿರುವ ಟೆಸ್ಟೊಸ್ಟಿರೋನ್ ಲೈಂಗಿಕ ಚೋದನಿಗಳು ರಸಾಯನಿಕಜ್ಞನಿಗೆ ಗೊತ್ತಿರುವ ಸ್ಟಿರಾಯ್ಡ್ ಸಂಯುಕ್ತಗಳು. ಇವುಗಳ ರಚನೆ ವಿಚಿತ್ರ, ಜಟಿಲ. ಪ್ರಯೋಗಾಲಯದಲ್ಲಿ ಇವನ್ನು ತಯಾರಿಸುವುದು ಕಷ್ಟ, ದುಬಾರಿ ಖರ್ಚು. ಸ್ಟಿರಾಯ್ಡುಗಳು ಬೇರೆ ಗ್ರಂಥಿಗಳಲ್ಲೂ ತಯಾರಾಗುತ್ತವೆ: ಅವೇ ಅಡ್ರಿನಲ್ ಗ್ರಂಥಿಗಳು. ರಸ ಸುರಿಸುವ ಜೀವಕಣಗಳು ತುಂಬಿರುವುದೇ ಗ್ರಂಥಿ ಎನಿಸಿಕೊಳ್ಳುವುದು. ತಿಂದ ಆಹಾರವನ್ನು ನುಂಗಲಾಗುವಂತೆ ಮಾಡುವ ಜೊಲ್ಲು ಬಾಯಿಯ ತಳದಲ್ಲಿರುವ 'ಗ್ರಂಥಿ'ಗಳಿಂದ ನಾಳಗಳ ಮೂಲಕ ಬರುತ್ತದೆ. ಕೆಲವೇಳೆ, ಇಂತಹ ರಸ ನಾಳಗಳ ಮೂಲಕ ಹೊರಬೀಳದೆ ನೇರವಾಗಿ ರಕ್ತವನ್ನೇ ಸೇರುವುದು. ಹೀಗೆ ರಸವನ್ನು ಒಳಸುರಿಸುವವಲ್ಲಿ ಅಡ್ರಿನಲ್ ಗ್ರಂಥಿಗಳೂ ಇವೆ. ಮೂತ್ರಪಿಂಡಗಳ ಮೇಲಿರುವುದರಿಂದ ಇವಕ್ಕೆ ಈ ಹೆಸರು. ಒಂದೊಂದು ಗ್ರಂಥಿಯಲ್ಲೂ ಹೊರಗಿನ ರಗಟೆ (ಕಾರ್ಟೆಕ್ಸ್), ಒಳಗಿನ ಕುಸುರಿ (ಮೆಡುಲ) ಎಂಬ ಎರಡು ಭಾಗಗಳಿವೆ. ಮನೋದ್ವೇಗ, ಒತ್ತರಗಳಲ್ಲಿ ರಕ್ತದೊಳಕ್ಕೆ ಸುರಿವ ಅಡ್ರಿನಲೀನನ್ನು ತಯಾರಿಸುವುದು ಈ ಕುಸುರಿ. ರೇಗಿದಾಗ. ಉದ್ವೇಗದಲ್ಲಿ, ದಿಗಿಲಾದಾಗ. ರಕ್ತದೊಳಕ್ಕೆ ಅಡ್ರಿನಲೀನ್ ಸುರಿವುದು. ಅಡ್ರಿನಲ್ ಗ್ರಂಥಿಯ ರಗಟೆ ಅಡ್ರಿನಲ್ ರಗಟೆಯು ಸ್ಟಿರಾಯ್ಡುಗಳನ್ನು ರಕ್ತಕ್ಕೆ ಸುರಿಬಿಡುವುದು.

ಸಾಮಾನ್ಯವಾಗಿ, ಅಡ್ರಿನಲ್ ರಗಟೆಯಲ್ಲಿ ತಯಾರಾಗುವ ಮುಖ್ಯ ಸ್ಟಿರಾಯ್ಡುಗಳು ಎರಡಿವೆ: ಹೈಡ್ರೊಕಾರ್ಟಿಸೋನ್, ಆಲ್ಡೊಸ್ಟಿರೋನ್. ಮೊದಲಿನದಕ್ಕೆ ಎಷ್ಟೋ ಕೆಲಸಗಳಿವೆ. ತುರ್ತಿನ ವೇಳೆಗಳಲ್ಲಿ ಮೈಗೆ ಬೇಕೆನಿಸಿದಾಗ ರಕ್ತದೊಳಕ್ಕೆ

ದ್ರಾಕ್ಷಿಸಕ್ಕರೆಯನ್ನು (ಗ್ಲೂಕೋಸ್) ಒದಗಿಸುವುದೂ ಇವುಗಳಲ್ಲಿ ಒಂದು. ಮೈಯಲ್ಲಿರುವ ಸೋಡಿಯಂ, ಉಚ್ಚೆಯಲ್ಲಿ ಹೊರಬೀಳದಂತೆ ತಡೆದು ಮೈಯಲ್ಲೇ ಉಳಿಸಿಕೊಳ್ಳುವುದು ಆಲ್ಡೊಸ್ಟಿರೋನಿನ ಕೆಲಸ. ಆದರೆ ಇವೇ ಅಲ್ಲದೆ, ಈಸ್ಟ್ರಾಡಿಯೋಲ್, ಟೆಸ್ಟೊಸ್ಟಿರೋನ್‌ಗಳಂತಹ ಸ್ಟಿರಾಯ್ಡುಗಳನ್ನೂ ಅಡ್ರಿನಲ್ ರಗಟೆ ತಯಾರಿಸಬಲ್ಲದು. ಹೆಣ್ಣು ಚಿಟ್ಟಿಲಿಗಳಲ್ಲಿ (ಮೈಸ್) ಅಂಡಾಶಯಗಳನ್ನು ತೆಗೆದುಹಾಕಿದಾಗ, ಅಡ್ರಿನಲ್ ಗ್ರಂಥಿಗಳು ದೊಡ್ಡದಾಗಿ ಊದಿದುವು. ಸೂಕ್ಷ್ಮದರ್ಶಕದಲ್ಲಿ (ಮೈಕ್ರೊಸ್ಕೋಪ್) ಇದನ್ನಿರಿಸಿ ನೋಡಿದಾಗ ಅಸಾಮಾನ್ಯ ಚಟುವಟಿಕೆಯ ಲಕ್ಷಣಗಳಿದ್ದುವು. ಆದ್ದರಿಂದ, ಅಂಡಾಶಯಗಳನ್ನು ತೆಗೆದುಹಾಕಿದಾಗ, ಅವುಗಳ ನಿಜಗೆಲಸಗಳನ್ನು ಎತ್ತಿಕೊಳ್ಳಲು ಯತ್ನಿಸಿ ಅಡ್ರಿನಲ್ ಗ್ರಂಥಿಗಳೂ ಈಸ್ಟ್ರಾಡಿಯೋಲ್ ತೆರನ ವಸ್ತುಗಳನ್ನು ತಯಾರಿಸುವಂತೆ ತೋರಿತು. ಚಿಟ್ಟಿಲಿಗಳಲ್ಲಿ ಮೊಲೆ ಗ್ರಂಥಿಗಳ ಏಡಿಗಂತಿ ಬೆಳೆಯಿತು. ಬೀಟ್ಸನ್‌ನ ಮೊಟ್ಟಮೊದಲ ಹೇಳಿಕೆ ಅಲ್ಲಿಗೆ ನಿಜವಾಯಿತು. ಅಂಡಾಶಯಗಳು ಹೋದ ಮೇಲೆ ಅವುಗಳ ಕೆಲಸಗಳನ್ನು ಕೊಂಚಮಟ್ಟಿಗೆ ಅಡ್ರಿನಲ್ ಗ್ರಂಥಿಗಳು ಎತ್ತಿಕೊಳ್ಳುವುದರಿಂದ, ಅಂಡಾಶಯಗಳನ್ನು ಮಾತ್ರ ತೆಗೆದರೆ ಸಾಲದೆಂದು ಚಿಕಾಗೋದ ಚಾರ್ಲ್ಸ್ ಹಗ್ಗಿನ್ಸ್ ಕಂಡುಕೊಂಡ.

ಹೆಂಗಸರ ಉಚ್ಚೆಯ ಪರೀಕ್ಷೆಗಳಿಂದ ಮೇಲಿನ ಅಭಿಪ್ರಾಯ ಖಚಿತವಾಯಿತು. ಅಡ್ರಿನಲ್ ರಗಟೆಯ ಗಂತಿಗಳಿದ್ದ ರೋಗಿಗಳು ಬೆದೆಜನಕ (ಈಸ್ಟ್ರೊಜನ್) ಗುಣಗಳಿರುವ ವಸ್ತುಗಳನ್ನು ಹೊರದೂಡುತ್ತಿದ್ದರು. ಕೆಲವರು ಹೆಂಗಸರಿಗೆ ವಯಸ್ಸಾಗಿ ಕೊನೆಗೆ ಮುಟ್ಟಾಗುವುದೂ ಪೂರ್ತಿ ನಿಂತು ಮುಟ್ಟುತೀರುವೆ (ಮೀನೊಪಾಸ್) ಆಗಿ, ಅಂಡಾಶಯದ ನಿಜಗೆಲಸ ಕುಂದಿರುವಾಗ ಈ ತೆರನ ವಸ್ತುಗಳನ್ನು ಹೊರದೂಡುತ್ತಿದ್ದರು. ಅಂಡಾಶಯದ ಚೋದನಿಯಾದ ಈಸ್ಟ್ರಾಡಿಯೋಲ್‌ನಿಂದ ಬರುವ ವಸ್ತುಗಳನ್ನು ಆರೋಗ್ಯವಂತ ಹೆಂಗಸರು ಹೊರದೂಡುತ್ತಿದ್ದರು. ಅಂಡಾಶಯಗಳನ್ನು ತೆಗೆದುಹಾಕಿದಾಗ ಉಚ್ಚೆಯಲ್ಲಿ ಮೊದಲು ಈ ವಸ್ತುಗಳು ಇಲ್ಲವಾದುವು; ಆಮೇಲೆ ಮತ್ತೆ ಕಾಣಿಸಿಕೊಂಡುವು. ಬೆದೆಜನಕ ವಸ್ತುಗಳು ಹೆಚ್ಚಿದ್ದುವು. ಆದರೆ, ಅಡ್ರಿನಲ್ ಗ್ರಂಥಿಗಳನ್ನೂ ತೆಗೆದುಹಾಕಿದಾಗ, ಈ ಬೆದೆಜನಕ ವಸ್ತುಗಳೂ ಕಾಣವಾದುವು.

ಆದ್ದರಿಂದ, ಅಂಡಾಶಯಗಳನ್ನು ತೆಗೆದ ಮೇಲೂ ಮೊಲೆಯ ಏಡಿಗಂತಿ ವಾಸಿಯಾಗದ್ದಕ್ಕೆ ಅಡ್ರಿನಲ್ ರಗಟೆಯ ಚಟುವಟಿಕೆ ಕಾರಣವೆಂದು ಖಚಿತವಾಯಿತು. ಅಂಡಾಶಯಗಳ ಜೊತೆಗೆ ಅಡ್ರಿನಲ್ ಗ್ರಂಥಿಗಳನ್ನೂ ತೆಗೆದರೆ ಮೊಲೆಯ ಏಡಿಗಂತಿಯನ್ನು ಇನ್ನೂ ಚೆನ್ನಾಗಿ ಗುಣಪಡಿಸಬಹುದೆಂದು ಹಿಗ್ಗಿನ್ಸ್ ಕಂಡುಕೊಂಡ.

ಅಡ್ರಿನಲ್ ಗ್ರಂಥಿಗಳು ಅಂಡಾಶಯಗಳಂತಲ್ಲ. ಬದುಕಿರಲು ಅವು ಇದ್ದೇ ತೀರಬೇಕು. ಅಂಡಾಶಯಗಳನ್ನು ತೆಗೆದರೂ ಬದುಕಿರಬಹುದು. ಆದರೆ ಅಡ್ರಿನಲ್

ಗ್ರಂಥಿಗಳನ್ನು ತೆಗೆದ ಮೇಲೆ, ಅಡ್ರಿನಲ್ ಗ್ರಂಥಿ ಒದಗಿಸುವ ಚೋದನಿಗಳನ್ನು ಕೊಡದಿದ್ದರೆ ರೋಗಿ ಸಾಯುತ್ತಾನೆ.

ಕಾರ್ಟಿಸೋನ್‌ನ್ನು ಕೆಂಡಾಲ್ 1940 ರಲ್ಲಿ ಚೊಕ್ಕ ವಸ್ತುವಾಗಿ ಪಡೆದ. ಆಮೇಲೆ 8–10 ವರುಷಗಳಲ್ಲಿ ಅಮೆರಿಕದ ಮದ್ದು ತಯಾರಕರು ಇದನ್ನು ಕೃತಕವಾಗಿ ತಯಾರಿಸಿದರು. ಆಳವಾದ ಸಂಶೋಧನೆ ಬೇಕಿರುವ ಬಲು ಕಷ್ಟದ ಕೆಲಸವಿದು. ಕಾರ್ಟಿಸೋನ್ ಕೈಗೆ ಬಂದ ಮೇಲೆ, ಅಡ್ರಿನಲ್ ಗ್ರಂಥಿಗಳನ್ನು ತೆಗೆದುದರಿಂದ ಮೊಲೆಯ ಏಡಿಗಂತಿಯ ಮೇಲೆ ಆಗುವ ಪರಿಣಾಮವನ್ನು ತಿಳಿವ ದಾರಿ ಸಿಕ್ಕಿದಂತಾಯಿತು. ಒಂದಷ್ಟು ರೋಗಿಗಳ ಮೇಲೆ ಅಂತಹ ಶಸ್ತ್ರಕ್ರಿಯೆಗಳನ್ನು ಮಾಡಿ ಹಗ್ಗಿನ್ಸ್ (1951) ವಿವರಿಸಿದ್ದಾನೆ.

52 ವರುಷ ತುಂಬಿದ ರೋಗಿಗಳಲ್ಲಿ ಎರಡು ಅಂಡಾಶಯಗಳು, ಅಡ್ರಿನಲ್ ಗ್ರಂಥಿಗಳು ಎರಡು ಜೊತೆಗಳನ್ನೂ ತೆಗೆದುಹಾಕಿದ; ಇನ್ನೂ ವಯಸ್ಸಾದವರಲ್ಲಿ, ಅಂಡಾಶಯಗಳ ಕೆಲಸ ನಿಂತುಹೋಗಿರುವುದೆಂದು ಊಹಿಸಬಹುದಾದ್ದರಿಂದ ಅಡ್ರಿನಲ್ ಗ್ರಂಥಿಗಳನ್ನು ಮಾತ್ರ ತೆಗೆದುಹಾಕಿದ. ಈ ರೋಗಿಗಳಿಗೆ ದಿನವೂ ತಪ್ಪದೆ ಕಾರ್ಟಿಸೋನ್ ಕೊಡುತ್ತಿದ್ದರೆ ಆರೋಗ್ಯವಾಗಿ ಎಂದಿನ ಕೆಲಸಗಳನ್ನು ಮಾಡುವಂತಾದರು. 1951–1953 ರಲ್ಲಿ ಶಸ್ತ್ರಕ್ರಿಯೆ ಮಾಡಿಸಿಕೊಂಡ 14 ರೋಗಿಗಳಲ್ಲಿ 7 ಮಂದಿ, ಎರಡು ವರುಷಗಳು ಕಳೆದರೂ ಚೆನ್ನಾಗಿದ್ದರು. ಬ್ರಿಟನ್‌ನಲ್ಲಿ 1955 ರಲ್ಲಿ ಕೇಡ್ 56 ರೋಗಿಗಳಿಗೆ ಇದೇ ಶಸ್ತ್ರಕ್ರಿಯೆ ಮಾಡಿದ. ಇವರಲ್ಲಿ 13 ಮಂದಿಗೆ ಬಲು ಚೆನ್ನಾಯಿತು, 33 ಮಂದಿಗೆ ಅನುಕೂಲವಾಯಿತು. ಇನ್ನಾವ ಚಿಕಿತ್ಸೆಯಲ್ಲೂ ಹಿಂದೆಂದೂ ಕಾಣದಿದ್ದ ಅನುಭವವೂ ರೋಗ ಲಕ್ಷಣಗಳ ಶಮನವೂ ಇದರಿಂದ ಕಂಡಿದೆ.

ತೆಮುಡಿಕ ಗ್ರಂಥಿ

ಚಿಕಿತ್ಸೆಯ ಗುರಿಯಾದ ಮಾನವ ಮೊಲೆಗಳ ಚಟುವಟಿಕೆಗಳನ್ನು ಪೂರ್ತಿಯಾಗಿ ಅಣಗಿಸುವುದು, ಕೇವಲ ಅಂಡಾಶಯಗಳು, ಅಡ್ರಿನಲ್‌ಗಳನ್ನು ತೆಗೆವುದರಿಂದ ಸಾಧ್ಯವಿಲ್ಲ. ಮಿದುಳಿನ ತಳದಲ್ಲಿರುವ ಪುಟಾಣಿ ತೆಮುಡಿಕ (ಪಿಟುಯಿಟರಿ) ಗ್ರಂಥಿಯಲ್ಲಿ ತಯಾರಾಗುವ ಹಲವು ಚೋದನಿಗಳನ್ನು ಒಂದಾದ ಹಾಲುಜನಿಕ (ಲ್ಯಾಕ್ಟೊಜನಿಕ್) ಚೋದನಿ ಮೊಲೆಯಲ್ಲಿ ಹಾಲೂರಿಸುವುದು. ವಯಸ್ಸಾದ ಬಂಜೆಯರಿಗೆ ಇದನ್ನು ಕೊಟ್ಟರೂ ಹಾಲೂರಿಸುತ್ತದೆ. ಆದ್ದರಿಂದ ಹೆಂಗಸಿನ ಮೊಲೆಯ ಗ್ರಂಥಿ ಮುಪ್ಪಿನಲ್ಲೂ ಹಾಲು ತಯಾರಿಸುವ ಬಲವನ್ನು ಉಳಿಸಿಕೊಂಡಿರುವುದು ಬಲು ಸೋಜಿಗವೇ. ಆ ವಯಸ್ಸಿಗೆ ಹಾಲೂರಿಸುವ ಬಲ ಏನೂ ಇರದೆಂದು ಸಾಮಾನ್ಯ ನಂಬಿಕೆಯಿದೆ. ಮೊಲೆಯಲ್ಲಿ ಏಡಿಗಂತಿ ಎದ್ದಿರುವ ಕೆಲವು ರೋಗಿಗಳಿಗೆ ಹಾಲು

ಜನಿಕ ಚೋದನಿಯನ್ನು ಕೊಟ್ಟು ನೋಡಿದಾಗ ಅವರಲ್ಲೂ ಹಾಲೂರಿಸಿತು. ಇವರು ಕೆಲವರಲ್ಲಿ ಅಂಡಾಶಯಗಳನ್ನೂ ಅಡ್ರಿನಲ್‌ಗಳನ್ನೂ ತೆಗೆದುಹಾಕಿದಾಗ, ಹೀಗೆ ಹಾಲೂರು ವಂತೆ ಮಾಡಿದ್ದು ಸರಕ್ಕನೆ ನಿಂತುಹೋಯಿತು; ಆದರೂ, ಇನ್ನೂ ಕೆಲವರಲ್ಲಿ ಎಷ್ಟೋ ತಿಂಗಳತನಕ ನಿಲ್ಲಲಿಲ್ಲ. ಆದ್ದರಿಂದ ಕೆಲವರಲ್ಲಾದರೂ, ಅಂಡಾಶಯಗಳು, ಅಡ್ರಿನಲ್‌ಗಳ ಇಜ್ಜೋಡಿಗಳನ್ನು ತೆಗೆದುಹಾಕಿದರೂ ಮೊಲೆಯು ಗ್ರಂಥಿಗಳು ಕೆಲಸ ಮಾಡುತ್ತಲೇ ಇದ್ದುವು ಎಂದಾಯಿತು.

ಹಾಲುಜನಿಕ ಚೋದನಿಯನ್ನು ಸುರಿಸುವ ತೆಮಡಿಕ ಗ್ರಂಥಿ, ಬೇರೆ ಗ್ರಂಥಿಗಳನ್ನು ಅಂಕೆಯಲ್ಲಿಡುವ ಇನ್ನೂ ಕೆಲವು ಚೋದನಿಗಳನ್ನು ಸುರಿಸುತ್ತದೆ. ಇದರಿಂದಲೇ, ಹುಡುಗನಲ್ಲಿ ತಡ್ಡುಗಳೂ ಹುಡುಗಿಯಲ್ಲಿ ಅಂಡಾಶಯಗಳೂ ಸುಮಾರು 13 ವರುಷ ತುಂಬುವತನಕ ಚಟುವಟಿಕೆಯಿಲ್ಲದೆ ಸುಮ್ಮನಿರುವುವು. ಜನನಾಂಗ ಪಾಲಿಕವೆಂಬ (ಗೊನಾಡೊಟ್ರೋಪಿನ್) ಒಂದು ಚೋದನಿ ತೆಮಡಿಕ ಗ್ರಂಥಿಯಿಂದ ಸುರಿದು ರಕ್ತ ಸೇರುವುದು. ತೆಮಡಿಕದ ಇನ್ನೊಂದು ಚೋದನಿ ಅಡ್ರಿನಲ್ ಗ್ರಂಥಿಗಳ ಚಟುವಟಿಕೆಯನ್ನು ಚೋದಿಸುತ್ತದೆ. ಹೀಗೆ, ತೆಮಡಿಕ ಒಂದು ಯಜಮಾನ ಗ್ರಂಥಿ ಎನ್ನಬಹುದು. ಇದನ್ನು ತೆಗೆದುಹಾಕಿದರೆ, ಅಂಡಾಶಯಗಳ, ಅಡ್ರಿನಲ್‌ಗಳ ಚಟುವಟಿಕೆಗಳೂ ಇಳಿದುಹೋಗುತ್ತವೆ. ಆದ್ದರಿಂದಲೇ ಮೊಲೆಯ ಏಡಿಗಂತಿಯ ಶಮನಕ್ಕಾಗಿ ತೆಮಡಿಕ ಗ್ರಂಥಿಯನ್ನು ತೆಗೆದುಹಾಕುವುದುಂಟು.

ಅಂಡಾಶಯಗಳನ್ನು ತೆಗೆದುಹಾಕುವುದು ಶಸ್ತ್ರವೈದ್ಯನಿಗೆ ಸುಲಭವಾದ ಶಸ್ತ್ರಕ್ರಿಯೆ. ಅಡ್ರಿನಲ್ ಗ್ರಂಥಿಗಳನ್ನು ತೆಗೆಯುವುದು ಕಷ್ಟ. ರೋಗಿಯನ್ನು ಆಮೇಲೆ ನೋಡಿಕೊಳ್ಳಲು ಇನ್ನಷ್ಟು ಚಾಲೂಕೂ ಅನುಭವವೂ ಇರಬೇಕು. ಇಷ್ಟಾದರೂ, ತೆಮಡಿಕ ಗ್ರಂಥಿಯನ್ನು ತೆಗೆದುಹಾಕುವುದಕ್ಕೆ ಹೋಲಿಸಿದರೆ, ಈ ಶಸ್ತ್ರಕ್ರಿಯೆಯೂ ಸುಲಭವೇ ಅನ್ನಬಹುದು. ತೆಮಡಿಕ ಗ್ರಂಥಿಯ ಹತ್ತಿರ ಹೋಗುವ ದಾರಿ ತೊಡಕಿನದು. ಹೀಗಿದ್ದರೂ, ಅಂಡಾಶಯಗಳನ್ನೂ ಅಡ್ರಿನಲ್ ಗ್ರಂಥಿಗಳನ್ನೂ ಆಗಲೇ ತೆಗೆದುಹಾಕಿರುವ ಹೆಂಗಸರ ತಂಡಗಳಲ್ಲಿ ತೆಮಡಿಕ ಗ್ರಂಥಿಯನ್ನೂ ತೆಗೆದಿದ್ದಾಗಿದೆ. ಇದರಿಂದ ಇನ್ನಷ್ಟು ಅನುಕೂಲ ಕಂಡಿತು. ಏಡಿಗಂತಿಗಳು ಸಣ್ಣಗೆ ಮುದುರಿದುವು. ಇದೇ ತೆರನ ಪರಿಣಾಮಗಳನ್ನು ಸ್ವೀಡನ್, ಅಮೆರಿಕಗಳಲ್ಲಿನ ಕೆಲಸಗಾರರೂ ಕಂಡಿರುವರು.

ಮೊಲೆಯ ಏಡಿಗಂತಿಗೆ ಶಸ್ತ್ರಕ್ರಿಯೆಯಿಂದ ಇನ್ನೂ ಪೂರ್ತಿ ಗುಣ ಕಂಡಿಲ್ಲ. ಕೆಲವೇಳೆ, ಗಂತಿಯನ್ನು ಎಳೆಯದರಲ್ಲೇ ತೆಗೆದುಹಾಕಿದರೆ ವಾಸಿಯಾಗುವುದು. ಅದರೆ ಒಂದು ಅಪಾಯವಿದೆ. ಕೆಲವು ವರುಷಗಳ ಮೇಲೆ ಗಂತಿ ಮರುಕಳಿಸುತ್ತದೆ. ಆಗ ಕೈಗೊಳ್ಳುವ ಚಿಕಿತ್ಸೆಯ ಒಂದು ರೂಪವೆಂದರೆ, ಅಡ್ರಿನಲ್ ಗ್ರಂಥಿಗಳನ್ನು

ತೆಗೆದುಹಾಕುವುದು. ಇದರೊಂದಿಗೇ, ಮುಟ್ಟುತೀರುವ ಇನ್ನೂ ಕಾಣದ, ಇಲ್ಲವೇ ಮುಟ್ಟುತೀರುವೆಯಾಗಿ ಬಹಳ ವರುಷಗಳಾದವರಲ್ಲಿ ಅಂಡಾಶಯಗಳನ್ನೂ ತೆಗೆದು ಹಾಕಬೇಕು.

ಶಸ್ತ್ರಕ್ರಿಯೆಯೇ ಅಲ್ಲದೆ ಬೇರೆ ಚಿಕಿತ್ಸೆಗಳೂ ಇವೆ. ಯಜಮಾನ ಗ್ರಂಥಿ ಎನಿಸಿಕೊಂಡಿರುವ ತೆಮಡಿಕ ಗ್ರಂಥಿಯಿಂದ ಸುರಿವ ರಸಗಳು ಬೇರೆ ಗ್ರಂಥಿಗಳನ್ನು ಚೋದಿಸುತ್ತವೆ. ಹೀಗೆ ಸುಮಾರು 13 ವರುಷಗಳು ತುಂಬಿದ ಮೇಲೆ, ಹೆಣ್ಣಿನಲ್ಲಿ ಅಂಡಾಶಯ ಈಸ್ಟ್ರಾಡಿಯೋಲನ್ನೂ ಗಂಡಿನಲ್ಲಿ ತಡ್ಡು ಟೆಸ್ಟೋಸ್ಟಿರೋನ್‌ನೂ ಚೋದಿಸುವ ರಸವನ್ನು ತೆಮಡಿಕ ಗ್ರಂಥಿ ಸುರಿಸುತ್ತದೆ. ಇಲ್ಲಿ ಇನ್ನೊಂದು ಸೋಜಿಗವಿದೆ. ಅಂಡಾಶಯವನ್ನು ತೆಮಡಿಕ ಗ್ರಂಥಿ ಹೀಗೆ ಚೋದಿಸಬಲ್ಲದು. ಆದರೆ ಅಂಡಾಶಯದಲ್ಲಿ ತಯಾರಾಗುವ ಈಸ್ಟ್ರಾಡಿಯೋಲ್ ಮಿತಿಮೀರಿದ ಪ್ರಮಾಣದಲ್ಲಿದ್ದರೆ, ತೆಮಡಿಕವನ್ನೇ ತಡೆಗಟ್ಟಿ ಅಂಡಾಶಯದ ಚೋದನೆಯನ್ನೇ ತಗ್ಗಿಸುವುದು. ಇದಕ್ಕೆ ಹಿಂದುಂಬುವ (ಫೀಡ್‌ಬ್ಯಾಕ್) ಯಾಂತ್ರಿಕತೆ ಎಂದಿದೆ. ಇದರ ವಿವರ ಹೀಗೆ: ಅಂಡಾಶಯವನ್ನು ಚೋದಿಸಲು ರಕ್ತದೊಳಕ್ಕೆ ಒಂದು ವಸ್ತುವನ್ನು ತೆಮಡಿಕ ಬಿಡುತ್ತದೆ. ಇದರಿಂದ ಅಂಡಾಶಯ ಈಸ್ಟ್ರಾಡಿಯೋಲನ್ನು ತಯಾರಿಸುವುದು. ಆಗ ಈಸ್ಟ್ರಾಡಿಯೋಲ್ ತೆಮಡಿಕದ ಚಟುವಟಿಕೆಯನ್ನು ತಡೆದು, ಅಂಡಾಶಯದ ಚೋದನೆಯೂ ಕುಗ್ಗುತ್ತದೆ. ತೆಮಡಿಕದ ಚಟುವಟಿಕೆ ಏನೂ ಸಾಲದಾಗದಂತೆ, ಇಲ್ಲವೇ ಮಿತಿಮೀರದಂತೆ ಸಮತೋಲದಲ್ಲಿ ಹೀಗೆ ಇರಿಸುವುದು. ಇದರಿಂದ ಅಂಡಾಶಯದಿಂದ ಎಷ್ಟು ಬೇಕೋ ಅಷ್ಟು ಪ್ರಮಾಣದಲ್ಲಿ ಈಸ್ಟ್ರಾಡಿಯೋಲ್ ಸುರಿವಂತಾಗುತ್ತದೆ. ಇದೇ ಸಮತೋಲನದ ಯಾಂತ್ರಿಕತೆ ಅಂಡಾಶಯಕ್ಕೇ ಅಲ್ಲದೆ ತಡ್ಡು, ಅಡ್ರಿನಲ್ ರಗಟೆ, ಗುರಾಣಿಕ ಗ್ರಂಥಿಗಳಿಗೂ ಅನ್ವಯಿಸುತ್ತದೆ.

ಕೊನೆಯದಾಗಿ, ಈಸ್ಟ್ರಾಡಿಯೋಲನ್ನೋ ಅವೇ ಗುಣಗಳಿರುವ ಇನ್ನೊಂದು ವಸ್ತುವನ್ನೋ ಸಾಕಾದಷ್ಟು ಪ್ರಮಾಣದಲ್ಲಿ ಕೊಟ್ಟರೆ, ತೆಮಡಿಕ ಗ್ರಂಥಿಯ ಚಟುವಟಿಕೆ ಕುಂದುವುದು. ಇದರ ಪರಿಣಾಮ ತೆಮಡಿಕ ಗ್ರಂಥಿಯನ್ನು ಶಸ್ತ್ರಕ್ರಿಯೆಯಿಂದ ತೆಗೆದಂತಿರುತ್ತದೆ. ಬಸಿರುತಡೆಕ (ಕಾಂಟ್ರಸೆಪ್ಟಿವ್) ಗುಳಿಗೆಗಳ ಪ್ರಭಾವವೂ ಹೀಗೇ ಇರುವುದು. ಅಂಡಾಣುಗಳನ್ನು ಅಂಡಾಶಯ ತಯಾರಿಸುವಂತೆ ತೆಮಡಿಕ ಗ್ರಂಥಿ ಇನ್ನು ಚೋದಿಸಲಾಗದಂತೆ ಇವು ಕುಂದಿಸುತ್ತವೆ. ಅಂಡಾಶಯದಿಂದ ಅಂಡಾಣುಗಳು ಹೊರಬೀಳದಿದ್ದಲ್ಲಿ ಬಸಿರಾಗುವಂತಿಲ್ಲ.

ಇನ್ನೊಂದು ವಿಚಿತ್ರ ಸನ್ನಿವೇಶ ಇಲ್ಲಿದೆ. ಮೊಲೆಯ ಏಡಿಗಂತಿಗೆ ಕಾರಣವಾಗುತ್ತವೆಂದು ಈಸ್ಟ್ರಾಡಿಯೋಲ್‌ನಂತಹ ವಸ್ತುಗಳ ಪ್ರಭಾವ ಮೈಯಲ್ಲಿ ಇನ್ನಿಲ್ಲದಂತೆ ಮಾಡುವುದೇ ಶಸ್ತ್ರಕ್ರಿಯೆಯ ಮುಖ್ಯ ಗುರಿ. ಆದರೆ, ಶಸ್ತ್ರಕ್ರಿಯೆಯಿಲ್ಲದ

ಚಿಕಿತ್ಸೆಯಲ್ಲಿ, ತೆಮಡಿಕದ ಚಟುವಟಿಕೆಯನ್ನು ಅಣಗಿಸಲೂ ಅದೇ ಈಸ್ಟ್ರಾಡಿಯೋಲನ್ನು ಹೆಚ್ಚೆಚ್ಚಾಗಿ ಕೊಡುವುದೇ ಗುರಿ. ಇಲ್ಲಿ ಎರಡಕ್ಕೂ ಒಂದೇ ಮದ್ದು ಕೊಡಲು ಕೆಲವು ಆಧಾರಗಳಿವೆ. ಈಸ್ಟ್ರಾಡಿಯೋಲ್‌ನಂತಿರುವ ಸ್ಟಿಲ್‌ಬೀಸ್ಟ್ರಾಲ್ ಹಾಲೂರಿಸುವುದರ ಮೇಲೆ ತೋರುವ ಪ್ರಭಾವ ಇದರ ಒಂದು ಉದಾಹರಣೆ. ತೆಮಡಿಕ ಗ್ರಂಥಿಯಿಂದ ಸುರಿವ ಹಾಲುಜನಿಕ ಚೋದನಿಯ ಪ್ರಭಾವದಿಂದ, ಆಗಲೇ ವಿವರಿಸಿದಂತೆ ಮೊಲೆಯಲ್ಲಿ ಹಾಲೂರುವುದು. ಮೊಲೆಯಲ್ಲಿ ಹಾಲೂರುವುದನ್ನು ನಿಲ್ಲಿಸಬೇಕಾದರೆ, ಸ್ಟಿಲ್‌ಬೀಸ್ಟ್ರಾಲನ್ನು ಕೊಡಬೇಕು. ಈಸ್ಟ್ರಾಡಿಯೋಲ್ ಗುಣಗಳಿರುವ ವಸ್ತು ಸ್ಟಿಲ್‌ಬೀಸ್ಟ್ರಾಲ್, ರಚನೆಯಲ್ಲಿ ಸರಳವಾದ್ದರಿಂದ ಪ್ರಯೋಗಾಲಯದಲ್ಲಿ ಸುಲಭವಾಗಿ ತಯಾರಿಸಬಹುದು. ಮೊಲೆಯಲ್ಲಿ ಏಡಿಗಂತಿ ಎದ್ದಿರುವ ಕೆಲವು ರೋಗಿಗಳಿಗೆ ಸ್ಟಿಲ್‌ಬೀಸ್ಟ್ರಾಲನ್ನು ಹೆಚ್ಚಿನ ಪ್ರಮಾಣಗಳಲ್ಲಿ ಕೊಟ್ಟಿದ್ದರಿಂದ ಗಂತಿ ಕರಗಿ ಹೋಗಿದೆ. ಹೀಗಾಗುವುದು ಕೆಲವರಲ್ಲಿ ಮಾತ್ರ. ಇಷ್ಟಾದರೂ, ಹಾಲೂರಿಕೆ, ಮೊಲೆಯ ಏಡಿಗಂತಿ ಇವೆರಡನ್ನೂ ಸ್ಟಿಲ್‌ಬೀಸ್ಟ್ರಾಲೇ ಕುಂದಿಸುವುದೆಂಬ ನಿಜವಾದ ಸಂಗತಿಯಂತೂ, ಹಾಲೂರುವುದೂ ಏಡಿಗಂತಿಯೂ ಒಂದನ್ನೊಂದು ಹೋಲುತ್ತವೆಂದು ಬೀಟ್ಸನ್ ಹೇಳಿದ್ದನ್ನು ಸಮರ್ಥಿಸುತ್ತದೆ.

ಶಸ್ತ್ರಕ್ರಿಯೆಯ ಚಿಕಿತ್ಸೆಯ ಹಿಂದಿರುವ ಭಾವನೆಗಳಿಗೂ, ಸ್ಟಿಲ್‌ಬೀಸ್ಟ್ರಾಲ್‌ನಂತಹ ಬೆದೆಜನಕಗಳನ್ನು ಹೆಚ್ಚಿನ ಪ್ರಮಾಣಗಳಲ್ಲಿ ಕೊಡುವುದಕ್ಕೂ ತಾಳೆಹಾಕುವುದು ಕಷ್ಟವಾಗಬಹುದು. ಮೈಯಲ್ಲಿರುವ ಬೆದೆಜನಕಗಳು ಎಲ್ಲವನ್ನೂ ತೊಡೆದುಹಾಕುವುದೇ ಅಂಡಾಶಯಗಳು, ಅಡ್ರಿನಲ್ ಗ್ರಂಥಿಗಳನ್ನೂ ಶಸ್ತ್ರಕ್ರಿಯೆಯಿಂದ ತೆಗೆದುಹಾಕುವುದರ ಗುರಿ. ರೋಗ ವಿಪರೀತ ಮುಂದುವರಿದಿದ್ದರೆ ಈ ಚಿಕಿತ್ಸೆಯನ್ನು ಮಾಡಿನೋಡುವುದೂ ಒಳ್ಳೆಯದೇ. ಈ ಕಲ್ಪನೆಯಂತೆ. ಸ್ಟಿಲ್‌ಬೀಸ್ಟ್ರಾಲನ್ನು ವಿಪರೀತವಾಗಿ ಕೊಟ್ಟರೆ ಗಂತಿ ಬೆಳೆತವನ್ನು ಹೆಚ್ಚಿಸುವುದೆಂಬ ಕಲ್ಪನೆಯಂತೆ, ತೆಮಡಿಕ ಗ್ರಂಥಿಯ ಚಟುವಟಿಕೆಯನ್ನು ಅಣಗಿಸಲು ಸ್ಟಿಲ್‌ಬೀಸ್ಟ್ರಾಲನ್ನು ಹೆಚ್ಚೆಚ್ಚಾಗಿ ಕೊಡುವುದರಲ್ಲಿ ಅರ್ಥವೇ ಕಾಣದಿರಬಹುದು. ಇದರಲ್ಲಿ ತರ್ಕವಿಲ್ಲವಾದರೆ, ಈ ಒಳಸುರಿಕ ರಸಗಳ ವಿಚಾರವಾಗಿ ನಮ್ಮ ತಿಳಿವಳಿಕೆ ಅರೆಬರೆಯಾಗಿದೆ ಎನ್ನಬಹುದು. ಮೊಲೆಯ ಏಡಿಗಂತಿ ಬೆಳೆವಣಿಗೆಯ ಬಲಾಬಲಗಳ ತಿಳಿವಳಿಕೆ ಈಗ ಒಂದಿಷ್ಟು ಇದ್ದರೂ ಇದು ತೀರ ಕಡಿಮೆ. ಇಲ್ಲಿನತನಕ, ಸಹಜವಾದ ಊತಕ ಮತ್ತು ಏಡಿಗಂತಿಯ ಊತಕಗಳಲ್ಲಿ ರಸಾಯನಿಕಗಳ ವ್ಯತ್ಯಾಸಗಳು ಏನಿವೆ ಎನ್ನುವುದೇ ಇನ್ನೂ ಗೊತ್ತಾಗಿಲ್ಲ. ಬೆಳೆವಣಿಗೆ ಮುಂದೆ ಹೇಗೆ ಸಾಗಬೇಕೆಂದು ಕೊನೆಗೆ ನಿರ್ಧರಿಸುವವು ಇವೇ ಆದ್ದರಿಂದ ಈ ರಸಾಯನಿಕಗಳಲ್ಲಿ ವ್ಯತ್ಯಾಸ ಇರಲೇ ಬೇಕು. ಜೀವರಸಾಯನ ಶಾಸ್ತ್ರಜ್ಞರು ಇವನ್ನು ಕಂಡುಹಿಡಿವ ತನಕ ಏಡಿಗಂತಿಗಳ ಕಾರಣ, ಚಿಕಿತ್ಸೆಗಳ ತಿಳಿವಳಿಕೆ ಅರೆಬರೆಯಾಗೇ ಉಳಿಯುತ್ತದೆ.

ಶಸ್ತ್ರಕ್ರಿಯೆಯಾಗದ ಇನ್ನೊಂದು ಬಗೆಯ ಚಿಕಿತ್ಸೆಯಲ್ಲಿ ಗಂಡಿನ ಚೋದನಿ ಬಳಕೆಗೆ ಬಂದಿದೆ. ಹೆಣ್ಣಿನ ಚೋದನಿಯಾದ ಈಸ್ಟ್ರಾಡಿಯೋಲ್ ಪ್ರಭಾವವನ್ನು ಅಣಗಿಸುವ ಗುರಿ ಇದಕ್ಕಿರುವುದರಿಂದ, ಈ ಮದ್ದಿನ ಚಿಕಿತ್ಸೆ, ಅಂಡಾಶಯಗಳು, ಅಡ್ರಿನಲ್ ಗ್ರಂಥಿಗಳನ್ನು ತೆಗೆದುಹಾಕುವ ಶಸ್ತ್ರಕ್ರಿಯೆಯ ಚಿಕಿತ್ಸೆಗೆ ಸಮನಾಗಿರುವುದು. ಏಡಿಗಂತಿಯ ಊತಕಗಳ ವಿಷಯದಲ್ಲಂತೂ ಇವೆರಡು ಚೋದನಿಗಳೂ ಒಂದು ಇನ್ನೊಂದರ ವಿರೋಧಿಗಳು. ಗಂಡಸಿನಲ್ಲಿ ಮುನ್ನಿಲುಗದ ಏಡಿಗಂತಿಯ ಚಿಕಿತ್ಸೆ ಯಲ್ಲಿ ಮುಂದೆ ಇದು ವಿಶದವಾಗುತ್ತದೆ.

ಆದ್ದರಿಂದ, ಮೊಲೆಯ ಏಡಿಗಂತಿಗೆ ಹೆಂಗಸಿನ ಲಿಂಗ ಚೋದನಿಯಾದ ಈಸ್ಟ್ರಾಡಿಯೋಲ್ ಬೇಕೇಬೇಕೆನ್ನುವುದನ್ನು ಅನುಸರಿಸಿ ಆ ಏಡಿಗಂತಿಯ ಚಿಕಿತ್ಸೆಗೆ ಟೆಸ್ಟೊಸ್ಟಿರೋನ್ ಕೊಡುವುದುಂಟು. ಅಂದರೆ, ಮೊಲೆಯ ಏಡಿಗಂತಿಯನ್ನು ಈಸ್ಟ್ರಾಡಿಯೋಲ್ ಬೆಳೆಸಲು ನೆರವಾಗುವುದು. ಈಸ್ಟ್ರಾಡಿಯೋಲ್‌ನ ವಿರೋಧಿಗುಣ ಗಳು ಟೆಸ್ಟೊಸ್ಟಿರೋನಿಗಿದೆ. ಆದ್ದರಿಂದ, ಮೊಲೆಯ ಏಡಿಗಂತಿ ಎದ್ದಿರುವ ರೋಗಿಗೆ ಟೆಸ್ಟೊಸ್ಟಿರೋನ್ ಕೊಟ್ಟರೆ ಆ ಏಡಿಗಂತಿ ಕರಗಿ ಮಾಯವಾಗಬೇಕು. ಆದರೆ ಕೊಟ್ಟು ನೋಡಿದ ಅನುಭವದಲ್ಲಿ ಈ ಚಿಕಿತ್ಸೆಯಿಂದ ನೂರಕ್ಕೆ 5 ಮಂದಿ ರೋಗಿ ಗಳಿಗೆ ಮಾತ್ರ ಪರಿಣಾಮಕಾರಿಯಾಗಿದೆ. ನಾಲಗೆಯ ಕೆಳಗಿಟ್ಟರೆ ಕರಗಿ ಈ ಚೋದನಿ ರಕ್ತಗೂಡುವುದರಿಂದ, ಮೆತಿಲ್ ಟೆಸ್ಟೊಸ್ಟಿರೋನನ್ನು ಮಾತ್ರೆಯಾಗಿ ಕೊಡುವುದು ವಾಡಿಕೆಯಾಗಿದೆ.

ಜನನಾಂಗಗಳು

ಕೆಲವೇಳೆ, ಗಂಡಸಿನಲ್ಲೂ ಮೊಲೆಯ ಏಡಿಗಂತಿ ಏಳುವುದಾದರೂ, ಹಾಗಾಗು ವುದು ಬಹಳ ಅಪರೂಪ. ಇನ್ನೂ ಸಾಮಾನ್ಯವಾಗಿ, ಏಡಿಗಂತಿ ಮುನ್ನಿಲುಗ ಗ್ರಂಥಿ ಯಲ್ಲಿ ಏಳುತ್ತದೆ.

ಮೂತ್ರಪಿಂಡಗಳಲ್ಲಿ ತಯಾರಾದ ಉಚ್ಚೆ ಕಂಕೋಶದಲ್ಲಿ (ಮೂತ್ರಕೋಶ) ಕೂಡಿ ರುತ್ತದೆ. ಕಂಕೋಶದಿಂದ ಉಚ್ಚೆ ಬುಲ್ಲದ (ಶಿಶ್ನ) ಉದ್ದಕ್ಕೂ ಇರುವ ಮೂತ್ರನಾಳದ (ಯೂರಿತ್ರ) ಮೂಲಕ ಹೊರಸಾಗುತ್ತದೆ. ಕಂಕೋಶವನ್ನು ಮೂತ್ರನಾಳ ಬಿಡುವ ಭಾಗದ ಸುತ್ತಲೂ ಒಂದು ಗ್ರಂಥಿ ಇದೆ. ಇದೇ ಮುನ್ನಿಲುಗ ಗ್ರಂಥಿ. ಇದೂ ಒಂದು ತಿಳಿಯಾದ ರಸವನ್ನು ಮೂತ್ರನಾಳದೊಳಕ್ಕೆ ಸುರಿಸುವುದು. ಮುನ್ನಿಲುಗ ಗ್ರಂಥಿಯ ಮೂಲಕ ಹಾಯ್ದು ಮೂತ್ರನಾಳ ಸೇರುವ ರೇತುಚಿಮ್ಮಿಕ (ಇಜಾಕ್ಯುಲೇಟರಿ) ಸಾಗು ನಾಳಗಳು ಎರಡಿವೆ. ಅಂಗಸಂಗ ಕೂಟದ ವೇಳೆಯಲ್ಲಿ, ರೇತುಕಣಗಳು ತಡ್ಡುಗ ಳಿಂದ ರೇತುಸಾಗುನಾಳಗಳ (ವಾಸ ಡೆಫರೆನ್ಸಿಯ) ಮೂಲಕ ಬಂದು ರೇತುಚಿಮ್ಮಿಕ

ಸಾಗುನಾಳಗಳನ್ನು ಸೇರುತ್ತವೆ. ರೇತು ಕೋಶಕಗಳಿಂದ (ಸೆಮಿನಲ್ ವೆಸಿಕಲ್ಸ್) ರೇತುಚಿಮ್ಮಿಕ ಸಾಗುನಾಳಗಳಿಗೆ ಬಂದ ರಸದಲ್ಲಿ ಈ ರೇತುಕಣಗಳು ಮುಂದೆ ಸಾಗುತ್ತವೆ.

ಅಂಡಾಶಯಗಳಂತೆ, ತಡ್ಡುಗಳಿಗೂ ಎರಡು ನಿಜಗೆಲಸಗಳಿವೆ. ಅಂಡಾಶಯ ಗಳು ಅಂಡಾಣುಗಳನ್ನು ತಯಾರಿಸುವ ಹಾಗೇ, ತಡ್ಡುಗಳಲ್ಲಿ ರೇತುಕಣಗಳು ತಯಾ ರಾಗುವುವು. ಅಂಡಾಶಯಗಳು ಹೆಣ್ಣಿನ ಲಿಂಗ ಚೋದನಿ ರಸವಾದ ಈಸ್ಟ್ರಾಡಿಯೋ ಲನ್ನು ಸುರಿಬಿಡುವಂತೆ ಗಂಡಸಿನಲ್ಲಿ ತಡ್ಡುಗಳು ಗಂಡಿನ ಲಿಂಗ ಚೋದನಿ ರಸವಾದ ಟೆಸ್ಟೊಸ್ಟಿರೋನನ್ನು ತಯಾರಿಸಿ ಸುರಿಸುವುದು. ಇವೆರಡು ಅಂಗಗಳೂ ಈ ಚೋದನಿ ಗಳನ್ನು ನೇರವಾಗಿ ರಕ್ತದೊಳಕ್ಕೇ ಸೇರಿಸುತ್ತವೆ. ಗಂಡಸಿನಲ್ಲಿ ಟೆಸ್ಟೊಸ್ಟಿರೋನ್ ಮರುಚಲದ ಲೈಂಗಿಕ ಗುಣಗಳನ್ನು (ಸೆಕೆಂಡರಿ ಸೆಕ್ಸ್ ಕ್ಯಾರೆಕ್ಟರ್ಸ್) ಬೆಳೆಸುತ್ತದೆ. ಗಂಡಸಿನ ಬಲವಾದ ಸ್ನಾಯು ಬೆಳೆವಣಿಗೆ ಹೆಚ್ಚಿಸಿ, ಗಂಟಲಿನ ಸ್ವರದ ಆಳವನ್ನು ಏರಿಸಿ, ಮೊಗ, ಎದೆ, ಕಂಕುಳು ತೊಡೆಸಂದುಗಳಲ್ಲಿ ಕೂದಲು ಬೆಳೆಸಿ, ಮುನ್ನಿಲುಗ ಗ್ರಂಥಿಯನ್ನೂ ಬೆಳೆಸುವುದು.

ಗಂಡು ಹೆಣ್ಣನ್ನು ಫಲವಂತಿಸುವ (ಫರ್ಟಿಲೈಸ್) ಬಲವನ್ನು ಎರಡು ಬಗೆ ಗಳಲ್ಲಿ ಕಳೆಯಬಹುದು. ರೇತುಸಾಗುನಾಳಗಳನ್ನು ಕತ್ತರಿಸಿ, ಅವುಗಳ ಕೊನೆಗಳನ್ನು ಕಟ್ಟಿಹಾಕಿದರೆ, ರೇತುಕಣಗಳು ಮೂತ್ರನಾಳಕ್ಕೆ ಹೋಗಲಾರವು. ಅಂಗಸಂಗ ಕೂಡು ವಾಗ, ಯೋನಿಗೆ ಬೀಳುವ ರೇತುರಸದಲ್ಲಿ ರೇತುಕಣಗಳು ಇಲ್ಲವಾಗುತ್ತವೆ. ಇಷ್ಟಾ ದರೂ, ರೇತುಸಾಗುನಾಳಗಳನ್ನು ಕೊಯ್ದು ಹಾಕಿದರೆ, ತಡ್ಡುಗಳಲ್ಲಿ ಟೆಸ್ಟೊ ಸ್ಟಿರೋನ್ ತಯಾರಾಗಲು ಯಾವ ಅಡ್ಡಿಯೂ ಇರದು. ಟೆಸ್ಟೊಸ್ಟಿರೋನ್ ಎಂದಿ ನಂತೆ ರಕ್ತವನ್ನು ಸೇರುತ್ತಿರುತ್ತದೆ. ರಸಗಳನ್ನು ಸೇರಿಸುವ ರೇತುಕೋಶಕಗಳೂ ಮುನ್ನಿಲುಗವೂ ಎಂದಿನಂತೆಯೇ ಕೆಲಸಮಾಡುತ್ತಿರುವುವು. ಅಂಗಸಂಗ ಕೂಟವೂ ಎಂದಿನಂತಿರುತ್ತದೆ; ರೇತುಕಣಗಳೊಂದಿಗೆ ಅಂಡಾಣು ಸೇರಿ ಫಲವಂತವಾಗುವುದಿಲ್ಲ ಅಷ್ಟೆ. ಹೆಂಡತಿಗೆ ಇನ್ನು ಮಕ್ಕಳಾಗುವುದು ಬೇಡವೆನಿಸಿದರೆ, ಗಂಡನ ರೇತುಸಾಗು ನಾಳಗಳನ್ನು ಹೀಗೆ ಕತ್ತರಿಸಿ ಕಟ್ಟಿಹಾಕುವುದೇ ಖಚಿತ ಸರಳ ಉಪಾಯ. ಇದಕ್ಕೆ ರೇತುನಾಳ ಕೊಯ್ತೆಗೆತ (ವೇಸೆಕ್ಟೊಮಿ) ಎಂದಿದೆ. ತಡ್ಡುಗಳ ಹೊರಚರ್ಮದ ಕೆಳಗೇ ತುಸು ದೂರ ಸುಲಭವಾಗಿ ಕೈಗೆ ಸಿಗುವ ಹಾಗಿರುವುದರಿಂದ, ತಾವಿನ ಅರಿವಳಿಕೆಯಲ್ಲಿ (ಲೋಕೆಲ್ ಅನೀಸ್ತೀಸಿಯ) ಈ ಸರಳ ಶಸ್ತ್ರಕ್ರಿಯೆಯನ್ನು ಮಾಡ ಬಹುದು.

ಗಂಡು ಹೆಣ್ಣನ್ನು ಫಲವಂತಿಸುವ ಬಲ ಕಳೆವ ಎರಡನೆಯ ಉಪಾಯದಲ್ಲಿ ತಡ್ಡುಗಳನ್ನೇ ತಗೆದುಹಾಕಬಹುದು. ಈ ಶಸ್ತ್ರಕ್ರಿಯೆಯೂ ಬಲು ಸುಲಭವೇ.

ಇದರಿಂದ ರೇತುಕಣಗಳ ಆಗರವನ್ನೇ ಅಲ್ಲದೆ ಟೆಸ್ಟೊಸ್ಟಿರೋನ್ ತಯಾರಿಸುವ ಮೂಲಾಂಗವನ್ನು ತೆಗೆದುಹಾಕಿದಂತಾಗುವುದು. ಮರುಚಲದ ಲಿಂಗಲಕ್ಷಣಗಳು ತಗ್ಗುತ್ತವೆ. ಟೆಸ್ಟೊಸ್ಟಿರೋನ್ ಇಲ್ಲವಾದರೆ, ಬೀಜದ ಹೋರಿಗೂ ಎತ್ತಿಗೂ ಇರುವ ವ್ಯತ್ಯಾಸ ಇಲ್ಲೂ ತೋರುವುದು. ಗಾತ್ರದಲ್ಲಿ ಮುನ್ನಿಲುಗ ಕುಂಗುವುದಲ್ಲದೆ ರಸ ಸುರಿಸದಾಗುವುದು. ಬುಲ್ಲ ಸಿಗುರದ್ದರಿಂದ ಅಂಗಸಂಗ ಕೂಡುವುದೂ ಆಗ ಸಾಧ್ಯವಾಗದು.

ಡೆನ್ಮಾರ್ಕಿನಲ್ಲಿ, ಕೊಲೆಗಾರರಿಗೆ ನ್ಯಾಯಾಂಗ ಶಿಕ್ಷೆಯಾಗಿ ತಡ್ಡುಗಳನ್ನು ತೆಗೆದು ಹಾಕುವಂತೆ ಅಪ್ಪಣೆಕೊಡಬಹುದು. ಅವನ ಹುಚ್ಚೇಗನ್ನು ಅಣಗಿಸುವುದರ ಹೊರ ತಾಗಿ, ಕೊಲೆಗಾರನ ಮನಸ್ಸನ್ನು ಕೆಡಿಸದೆಯೇ ಮರಣ ಶಿಕ್ಷೆಯನ್ನು ಹೀಗೆ ತಪ್ಪಿಸ ಬಹುದು. ಇದರಿಂದ ಸಮಾಜಕ್ಕೆ ಅವನಿಂದಾಗುವ ಅಪಾಯವನ್ನು ಹೋಗಲಾಡಿ ಸಿದ ಹಾಗಾಗುವುದಂತೆ. ಪ್ರಾಣಿಗಳಲ್ಲಿ ಬೀಜವೊಡೆವುದರ ಉದ್ದೇಶವಂತೂ ಇದೇ. ದಿನದ ಬಾಳಿನಲ್ಲಿ ಬುದ್ಧಿವಂತಿಕೆ, ಆಸಕ್ತಿಗಳಿಗೆ ಇದರಿಂದ ಏನೇನೂ ಹಾನಿಯಿಲ್ಲ. ಕೊಲೆಗಾರರ ಮೇಲೆ ಈ ಶಿಕ್ಷೆ ಹೆಚ್ಚು ಪರಿಣಾಮಕಾರಿಯಾಗಿದೆಯಂತೆ.

ಮೂತ್ರನಾಳದ ಮೊದಲ ಭಾಗವನ್ನು ಸುತ್ತುಗಟ್ಟಿರುವ ಮುನ್ನಿಲುಗ ಗ್ರಂಥಿ. ಗಂಡಸಿಗೆ 60-70 ವರುಷಗಳ ವಯಸ್ಸಾದ ಮೇಲೆ ಕೆಲವೇಳೆ ದೊಡ್ಡದಾಗುತ್ತದೆ. ಹಾಗಾದಾಗ, ಮೂತ್ರನಾಳವನ್ನು ಇರುಕಿಸಿ ಒತ್ತಿದಂತಾಗಿ ಉಚ್ಚೆ ಹುಯ್ಯಲು ಕಷ್ಟ ವಾಗುವುದು. ಕೊನೆಗೆ ಉಚ್ಚೆ ಹೊರಬರದಂತೆ ತಡೆಯಾಗಿ ನಿಂತುಹೋಗಬಹುದು. ಮುನ್ನಿಲುಗ ಗ್ರಂಥಿಯನ್ನು ತೆಗೆದುಹಾಕುವುದೇ ಇದರ ಶಸ್ತ್ರಕ್ರಿಯೆ ಚಿಕಿತ್ಸೆ.

ಸಾಧಾರಣವಾಗಿ ಮುನ್ನಿಲುಗದ ಈ ಬೆಳೆತ ಯಾವಾಗಲೂ ಕೆಡುಕಿನದಲ್ಲ; ವಿಷ ಮವಾದ್ದೂ (ಮೆಲಿಗ್ನೆಂಟ್) ಅಲ್ಲ; ಏಡಿಗಂತಿಯುದೂ ಅಲ್ಲ. ಆದರೂ ಕೆಲವೇಳೆ ಇದೇ ಬೆಳೆತ ವಿಷಮವಾಗಬಹುದು. ಆಗ ಮುಖ್ಯವಾಗಿ ಮೂಳೆಯಂತಹ ಬೇರೆ ಊತಕಗಳಿಗೂ ದಾಳಿಯಿಟ್ಟು ನುಗ್ಗಿ ಮರುಚಲದ ಇಡುಗೆಗಳಾಗಿ (ಡಿಪಾಸಿಟ್ಸ್) ಅಲ್ಲೂ ಚುರುಕಾಗಿ ಹಾನಿಗೊಳಿಸಬಹುದು. ಇದೇ ಮುನ್ನಿಲುಗದ ಏಡಿಗಂತಿ.

ಮುನ್ನಿಲುಗದ ಮೇಲೆ ಪ್ರಯೋಗ

ಚಿಕಾಗೋದಲ್ಲಿ ಚಾರ್ಲ್ಸ್ ಹಗ್ಗಿನ್ಸ್, ಮತ್ತವನ ಸಂಗಡಿಗರು ನಾಯಿಯಲ್ಲಿ ಮುನ್ನಿಲುಗ ಗ್ರಂಥಿಯನ್ನು ಪರಿಶೀಲಿಸಿದ್ದಾರೆ. ಗಂಡಸರಲ್ಲಿ ಆಗುವ ಹಾಗೆ ವಯಸ್ಸಾ ದಂತೆಲ್ಲ ನಾಯಿಯಲ್ಲೂ ಮುನ್ನಿಲುಗ ದೊಡ್ಡದಾಗುತ್ತದೆ. ನಾಯಿಯಲ್ಲಿ ಎಂದಿನಂತೆ 10 ಗ್ರಾಂ. ತೂಕವಿದ್ದುದು ಆಗ ಸುಮಾರು 160 ಗ್ರಾಂ. ತೂಕಕ್ಕೇರಬಹುದು. ಅರಿವಳಿಸಿ ಕಂಕೋಶವನ್ನು ಶಸ್ತ್ರಕ್ರಿಯೆಮಾಡಿ ಮುನ್ನಿಲುಗದಿಂದ ಬೇರ್ಪಡಿಸಿ, ಮುನ್ನಿಲುಗ

ಸುರಿಸುವ ರಸವನ್ನು ಬೇರೆಯಾಗಿ ಹಿಡಿದಿಟ್ಟು ಅಳೆದರು. ಪೈಲೊಕಾರ್ಪಿನ್ ಮದ್ದನ್ನು ನಾಯಿಗೆ ಚುಚ್ಚಿದಾಗ ಈ ಗ್ರಂಥಿಯ ರಸವನ್ನು ಹೆಚ್ಚಾಗಿ ಸುರಿವಂತೆ ಮಾಡಿತು. ಕೆಲವು ತಿಂಗಳ ಕಾಲ, ಈ ಮದ್ದನ್ನು ಚುಚ್ಚಿದಾಗಲೆಲ್ಲ ಸುರಿವ ರಸದ ಪ್ರಮಾಣ ಹೆಚ್ಚು ಕಡಿಮೆ ಒಂದೇ ಸಮನಾಗಿತ್ತು. ಹೀಗೆ ಚುಚ್ಚಿದಾಗ ಮುನ್ನಿಲುಗ ಗ್ರಂಥಿ ಕೆಲ ವೇಳೆ ತಾಸಿಗೆ ಅದರ 2-4 ರಷ್ಟು ಮೀರಿದ ತೂಕದಷ್ಟು ರಸವನ್ನು ಸುರಿಸುತ್ತಿತ್ತು. ಮುನ್ನಿಲುಗ ಗ್ರಂಥಿ ಕೇವಲ ಇಲ್ಲಿಗೆ ಬಂದು ಸೇರುವ ರಸವನ್ನು ಮಾತ್ರ ಹೊರ ದೂಡದೆ, ಅದೂ ರಸವನ್ನು ಸುರಿಸುವುದೆಂದು ಇದರಿಂದ ಖಚಿತವಾಯಿತು.

ತಡ್ಡುಗಳನ್ನು ತೆಗೆದುಹಾಕಿದಾಗ, ಮುನ್ನಿಲುಗದಿಂದ ಸುರಿವ ರಸದ ಪ್ರಮಾಣ ಇಳಿದುಹೋಗಿ 6 ದಿನಗಳಾದ ಮೇಲೆ ನಿಂತೇಹೋಯಿತು. ಮತ್ತೆ ಅದು ಸರಿಹೋಗಲೇ ಇಲ್ಲ. ಇಷ್ಟಾದರೂ, ದಿನವೂ ಗಂಡಸಿನ ಲಿಂಗ ಚೋದನಿಯಾದ ಟೆಸ್ಟೊಸ್ಟಿರೋನನ್ನು ನಾಯಿಗೆ ಚುಚ್ಚುತ್ತಿದ್ದಷ್ಟು ದಿನಗಳೂ ಮುನ್ನಿಲುಗ ಗ್ರಂಥಿಯಲ್ಲಿ ಮತ್ತೆ ರಸ ಸುರಿಯು ತ್ತಲೇ ಇತ್ತು. ಮದ್ದು ಚುಚ್ಚುವುದನ್ನು ನಿಲ್ಲಿಸಿದ ಕೂಡಲೇ ಸುರಿತವೂ ನಿಂತಿತು. ಮುನ್ನಿಲುಗದ ಎಂದಿನ ಕೆಲಸಕ್ಕೆ ತಡ್ಡಿನಿಂದ ಬರುವ ಚೋದನಿಯೇ ಕಾರಣವೆಂದು ಇದರಿಂದ ತಿಳಿಯುತ್ತದೆ.

ಅಲ್ಲಿಂದ ಮುಂದೆ, ಹಗ್ಗಿನ್ಸ್ ಇನ್ನೊಂದು ಮುಖ್ಯ ಕಣ್ಣರಿಕೆಮಾಡಿದ. ಹೆಣ್ಣಿನ ಲಿಂಗ ಚೋದನಿಯಾದ ಈಸ್ಟ್ರಾಡಿಯೋಲ್ ಗುಣಗಳುಳ್ಳ ಸ್ಟಿಲ್ ಬೀಸ್ಟ್ರಾಲನ್ನು ಆರೋಗ್ಯವಂತ ನಾಯಿಗಳಿಗೆ ಕೊಟ್ಟರೆ, ಮುನ್ನಿಲುಗದ ರಸ ಸುರಿತವೂ ನಿಂತುಹೋಗುವುದನ್ನು ಕಂಡ. ಈ ಸ್ಟಿಲ್‌ಬೀಸ್ಟ್ರಾಲನ್ನು ಮೊದಲು ಬ್ರಿಟನ್ನಿನಲ್ಲಿ ಹೆನ್ರಿ ಡಾಡ್ಸ್ ಕಂಡುಹಿಡಿದ. ಈಸ್ಟ್ರಾಡಿಯೋಲನ್ನು ತಯಾರಿಸುವುದು ಕಷ್ಟ. ಅಷ್ಟೇ ಬಲವಾದ ಗುಣಗಳಿರುವ, ಸರಳ ಸಂಯುಕ್ತವಾದ ಸ್ಟಿಲ್‌ಬೀಸ್ಟ್ರಾಲನ್ನು ಕೃತಕವಾಗಿ ತಯಾರಿಸುವುದು ಸುಲಭ. ಸಂಶೋ ಧನೆಯಲ್ಲಾಗಲಿ ರೋಗಿಗಳಿಗಾಗಲಿ ಪ್ರಬಲವಾದ ವೈದ್ಯಕೀಯ ಗುಣಗಳಿರುವ ಮದ್ದನ್ನು ಧಾರಾಳವಾಗಿ ಕೊಡಬೇಕಾದಾಗ, ಅಗ್ಗವಾಗಿ ದೊರೆವ ಮದ್ದಾದ್ದರಿಂದ ಸ್ಟಿಲ್‌ಬೀಸ್ಟ್ರಾ ಲನ್ನು ಕಂಡುಹಿಡಿದಿದ್ದು ಒಂದು ಹೆಚ್ಚಳಿಕೆ. ಇದು ಬಂದಾಗಿಂದಲೂ ಎಲ್ಲ ದಿಕ್ಕು ಗಳಲ್ಲೂ ಮುನ್ನಡೆ ಅಪಾರವಾಗಿದೆ.

ಮುನ್ನಿಲುಗದ ಮೇಲಿನ ಟೆಸ್ಟೊಸ್ಟಿರೋನ್ ಪ್ರಭಾವವನ್ನು ಸ್ಟಿಲ್‌ಬೀಸ್ಟ್ರಾಲ್ ಪೂರ್ತಿ ಹೋಗಲಾಡಿಸಬಲ್ಲುದೆಂದು ಹಗ್ಗಿನ್ಸನ ಕಣ್ಣರಿಕೆಗಳಿಂದ ಖಚಿತವಾಯಿತು. ಆದರೆ ಇದು ಕೇವಲ ಟೆಸ್ಟೊಸ್ಟಿರೋನನ್ನು ಸ್ಟಿಲ್‌ಬೀಸ್ಟ್ರಾಲ್ ವಿರೋಧಿಸುವುದಲ್ಲ. ಇದು ಇನ್ನೂ ಜಟಿಲವಾದ ಕೆಲಸ. ಸ್ಟಿಲ್ ಬೀಸ್ಟ್ರಾಲಿನ ಪ್ರಭಾವ ಮೊದಲು ತೋರು ವುದು ತಲೆಯಲ್ಲಿ ಮಿದುಳಿನ ತಳದಲ್ಲಿರುವ ತೆಮುಡಿಕ ಗ್ರಂಥಿಯ ಮೇಲೆ. ಅಂಡಾಶಯ ವನ್ನು ಚೋದಿಸುವ ಚೋದನ ರಸವನ್ನು ತೆಮುಡಿಕ ಗ್ರಂಥಿ ಸುರಿಸದಂತೆ ಅದರ ಚಟು

ಪಟಿಕೆಯನ್ನು ಸ್ಟಿಲ್‌ಬೀಸ್ಟ್ರಾಲ್ ಕುಂದಿಸುತ್ತದೆಂದು ಆಗಲೇ ತೋರಿಸಿದ್ದಾಗಿದೆ. ಹೀಗೆ ಸ್ಟಿಲ್‌ಬೀಸ್ಟ್ರಾಲ್ ಅಂಡಾಣು ನೆರೆತವನ್ನು (ಅಪ್ಯುಲೇಷನ್) ಅಣಗಿಸುತ್ತದೆ. ಅದೇ ಬಗೆಯಲ್ಲಿ, ಗಂಡಸಿನಲ್ಲಿ ತಡ್ಡನ್ನು ಚೋದಿಸುವ ಚೋದನಿಯನ್ನು ಸುರಿಬಿಡದಂತೆ ತೆಮಡಿಕ ಗ್ರಂಥಿಯನ್ನು ಸ್ಟಿಲ್‌ಬೀಸ್ಟ್ರಾಲ್ ತಡೆಯುವುದು ಕಂಡುಬಂದಿತು. ಸ್ಟಿಲ್‌ಬೀಸ್ಟ್ರಾಲನ್ನು ಚುಚ್ಚಿ ಹಗ್ಗಿನ್ಸ್ ಮುನ್ನಿಲುಗದ ಸುರಿತವನ್ನು ಅಣಗಿಸಿದ. ಆಮೇಲೆ, ಇದರ ಜೊತೆಗೆ ತಡ್ಡನ್ನು ಚೋದಿಸುವ ತೆಮಡಿಕ ಚೋದನಿಯನ್ನು ಚುಚ್ಚಿದಾಗ, ಮುನ್ನಿಲುಗದ ಸುರಿತ ಎಂದಿನಂತೆ ಸುರಿವಂತಾಯಿತು. ಹೀಗೆ, ಅಂಡಾಣು ನೆರೆತವನ್ನು ಅಣಗಿಸುವ ರೀತಿಯಲ್ಲೇ, ಸ್ಟಿಲ್‌ಬೀಸ್ಟ್ರಾಲ್ ಮುನ್ನಿಲುಗದ ಸುರಿತವನ್ನೂ ಅಣಗಿಸುತ್ತದೆ ಎಂದಾಯಿತು.

ಮುನ್ನಿಲುಗದ .ಸುರಿತವನ್ನು ಸ್ಟಿಲ್‌ಬೀಸ್ಟ್ರಾಲ್ ಅಣಗಿಸಿದ್ದೇ ಅಲ್ಲದೆ, ಮುನ್ನಿಲುಗದ ತೂಕವನ್ನೂ ಇಳಿಸಿತು. ಇದೊಂದು ಮುಖ್ಯವಾದ ಕಣ್ಣರಿಕೆ. ದೊಡ್ಡದಾದ ಮುನ್ನಿಲುಗದ ಮೇಲೆ ಸ್ಟಿಲ್‌ಬೀಸ್ಟ್ರಾಲಿನ ಪ್ರಭಾವವನ್ನು ತಿಳಿಯಲು ಮುಪ್ಪಡರಿದ ನಾಯಿಗೆ ಕೊಟ್ಟು ನೋಡುವಂತಾಯಿತು. ಹಾಗೆ ಕೊಟ್ಟಮೇಲೆ, ನಾಯಿಗಳ ಮುನ್ನಿಲುಗವನ್ನು ತೆಗೆದು ಸೂಕ್ಷ್ಮದರ್ಶಕದಡಿ ಇಟ್ಟು ನೋಡಿದಾಗ, ನಾಯಿಯ ಎಂದಿನ ಮುನ್ನಿಲುಗದ ರಚನೆಯುದರಂತೆ ಇರಲಿಲ್ಲ. ಎಂದಿಗಿಂತಲೂ ಬಲು ದೊಡ್ಡದಾಗಿರುವ ಮೇಲ್ಪರೆಯ ಜೀವಕಣಗಳೂ, ನಡುವೆ ಬರಿದಾದ ಜಾಗಗಳೂ, ಜಿಟ್ಟಿಗಳೂ (ಸಿಸ್ಟಸ್) ಇರುವ ಗಂತಿಗಳಾಗಿದ್ದುವು. ತಡ್ಡುಗಳನ್ನು ತೆಗೆದು ಹಾಕಿದರೆ ಇಲ್ಲವೇ ಸ್ಟಿಲ್-ಬೀಸ್ಟ್ರಾಲನ್ನು ಕೊಟ್ಟಾಗ ಈ ಗಂತಿಗಳು ಬಲು ಸಣ್ಣಗಾಗಿ ಮುದುರಿಕೊಂಡುವು. ಅವನ್ನು ಹೀಗೆ ಮುದುರಿಸಿರುವಾಗ, ಟೆಸ್ಟೊಸ್ಟಿರೋನ್ ಚುಚ್ಚುವುದರಿಂದ ಎಂದಿನ ಗಾತ್ರಕ್ಕೇರಿಸಿ ಬೆಳೆತವನ್ನೂ ವೇಗಗೊಳಿಸುವಂತಾಯಿತು.

ಮುನ್ನಿಲುಗದ ಏಡಿಗಂತಿ:

ಹೀಗೆ, ಗಂಡಸಿನಲ್ಲಿ ಮುನ್ನಿಲುಗದ ಏಡಿಗಂತಿಯ ಶಮನಕ್ಕಾಗಿ ಏನು ಮಾಡಬಹುದೆಂದು ನಾಯಿಯ ಮೇಲಿನ ಪ್ರಯೋಗದಿಂದ ಖಚಿತವಾಯಿತು. ನಾಯಿಯಲ್ಲಿನ ಈ ಅನುಭವಗಳನ್ನು ನೇರವಾಗಿ ಮಾನವನಿಗೂ ಅನ್ವಯಿಸಬಹುದಾಗಿತ್ತು. ಮುನ್ನಿಲುಗದ ಏಡಿಗಂತಿಯ ಬೆಳೆತವನ್ನು ಕುಗ್ಗಿಸಲೂ, ಈ ವಿಷಮಗಂತಿ ಹರಡಿಕೊಂಡು ಬೆಳೆದಿರುವ ಮರುಜಲದ ಇಡುಗೆಗಳನ್ನು ಕರಗಿಸಲೂ ರೋಗಿಗೆ ಸ್ಟಿಲ್‌ಬೀಸ್ಟ್ರಾಲನ್ನು ಕೊಡುವಂತಾಯಿತು. ಮುನ್ನಿಲುಗದ ಏಡಿಗಂತಿ ಸಾಮಾನ್ಯವಾಗಿ ಮೂಳೆಯ ಮಜ್ಜೆಗೆ (ಮ್ಯಾರೊ) ಹರಡಿಕೊಳ್ಳುತ್ತದೆ. ಏಡಿಗಂತಿಯ ಇಡುಗೆಗಳು ಮೂಳೆಯನ್ನು ಕೊರೆದುಹಾಕುವುವು. ಸ್ಟಿಲ್‌ಬೀಸ್ಟ್ರಾಲನ್ನು ಕೊಟ್ಟಾಗ ಮೂಳೆಯಲ್ಲಿನ ಅಂತಹ ಇಡುಗೆಗಳೂ ಕರಗಿಹೋಗುತ್ತಿದ್ದುವು.

ಮುನ್ನಿಲುಗದ ಏಡಿಗಂತಿಯು ಕಂಕಾಲದೊಳಕ್ಕೆ (ಸ್ಕೆಲಿಟನ್) ನುಗ್ಗಿದ್ದರೆ, ರಕ್ತದ ರಸಿಕೆಯಲ್ಲಿ (ಸೀರಂ) ಅಲ್ಕಲೈನ್ ಫಾಸ್ಫಟೇಸ್ ಎಂಬ ಒಂದು ಗೊತ್ತಾದ ದೊಳೆ (ಕಿಣ್ವ) ಇರುವುದೆಂದು ಗೊತ್ತಾದುದು ಅನುಕೂಲವಾಯಿತು. ಸ್ಟಿಲ್‌ಬೀಸ್ಟ್ರಾಲಿನ ಪ್ರಭಾವದಿಂದ ಮೂಳೆಯಲ್ಲಿನ ಮರುಚಲದ ಇಡುಗೆಗಳು ಕರಗಿಹೋದಂತೆಲ್ಲ, ರಕ್ತದಲ್ಲಿನ ಈ ದೊಳೆಯ ಪ್ರಮಾಣವೂ ಇಳಿಯಿತು. ಆದ್ದರಿಂದ, ರಕ್ತದಲ್ಲಿ ಈ ದೊಳೆಯು ಮಟ್ಟದ ಇಳಿತವನ್ನು ಅಳೆವುದರಿಂದ, ಏಡಿಗಂತಿ ಎಷ್ಟು ಬೇಗನೆ ಕರಗುತ್ತಿರುವುದೆಂದೂ, ಸ್ಟಿಲ್‌ಬೀಸ್ಟ್ರಾಲಿನ ಪ್ರಮಾಣ ಹೆಚ್ಚಿಸಬೇಕೋ ಬೇಡವೋ ಎಂದು ಗೊತ್ತಾಗುವುದು.

ಸ್ಟಿಲ್‌ಬೀಸ್ಟ್ರಾಲಿಂದ ಮುನ್ನಿಲುಗದ ಏಡಿಗಂತಿಯ ಚಿಕಿತ್ಸೆ ಚೆನ್ನಾಗಿ ಕೈಗೂಡಿದೆ. ಐವರಲ್ಲಿ ನಾಲ್ವರು ರೋಗಿಗಳಲ್ಲಿ ಗಂತಿಯನ್ನು ಚೆನ್ನಾಗಿ ಕರಗಿಸಿದೆ. ಏಡಿಗಂತಿ ಚಿಕಿತ್ಸೆಯಲ್ಲಿ ಇಷ್ಟು ಚೆನ್ನಾಗಿ ಮತ್ತೆಲ್ಲೂ ಕೈಗೂಡಿಲ್ಲ. ನಾಯಿಗಳಲ್ಲಿ ಪ್ರಯೋಗಿಸಿ ನೋಡಿದ್ದಾಗಿದೆ. ಅಲ್ಲದೆ, ತರ್ಕಬದ್ಧವಾಗಿರುವುದರಿಂದ ಇದು ಕೈಗೂಡುವುದು ಇನ್ನೂ ತೃಪ್ತಿಕರ.

ಸ್ಟಿಲ್‌ಬೀಸ್ಟ್ರಾಲನ್ನು ಕೊಟ್ಟರೂ ಅನುಕೂಲ ಕಾಣದ ರೋಗಿಗಳಲ್ಲಿ ತಡ್ಡುಗಳನ್ನೂ ಅಡ್ರಿನಲ್ ಗ್ರಂಥಿಗಳನ್ನೂ ತೆಗೆದುಹಾಕುವಂತೆ ಸೂಚಿಸುವುದುಂಟು. ಏಕೆಂದರೆ, ಅಡ್ರಿನಲ್ ಗ್ರಂಥಿಗಳು ಹೆಂಗಸರಲ್ಲಿ ಈಸ್ಟ್ರಾಡಿಯೋಲ್ ತೆರನ ಬೆದೆಜನಕ ವಸ್ತುಗಳನ್ನು ತಯಾರಿಸುವ ಹಾಗೆ, ಗಂಡಸರಲ್ಲಿ ಅವೇ ಗ್ರಂಥಿಗಳು ಟೆಸ್ಟೋಸ್ಟಿರೋನ್ ತೆರನ ಪುಂಜನಕ (ಆಂಡ್ರೊಜನಿಕ್) ವಸ್ತುಗಳನ್ನು ತಯಾರಿಸುವುವು. ಆದ್ದರಿಂದ, ಹೆಂಗಸರಲ್ಲಿ ಮೊಲೆಯ ಏಡಿಗಂತಿಯ ಚಿಕಿತ್ಸೆಗಾಗಿ ಅಂಡಾಶಯಗಳನ್ನೂ ಅಡ್ರಿನಲ್ ಗ್ರಂಥಿಗಳನ್ನೂ ತೆಗೆದು ಹಾಕುವಂತೆ, ಪುಂಜನಕ ವಸ್ತುಗಳ ತಯಾರಿಕೆಯನ್ನು ತೀರ ಕೆಳಮಟ್ಟಕ್ಕೆ ಇಳಿಸಲು, ಗಂಡಸಿನಲ್ಲಿ ತಡ್ಡುಗಳನ್ನೂ ಅಡ್ರಿನಲ್ ಗ್ರಂಥಿಗಳನ್ನೂ ತೆಗೆಯುವುದುಂಟು. ಈ ಚಿಕಿತ್ಸೆ ಮಾಡುವುದು ಈಗ ಬಲು ಅಪರೂಪ.

ಕೆಲವರಿಗೆ ಹೂವೆಂದರೆ ಬಲು ಪ್ರೀತಿ

ಶ್ರೀನಾಥ್ ರಾಯಸಮ್

ಕೆಲವರಿಗೆ ಹೂವೆಂದರೆ ಬಲು ಪ್ರೀತಿ;
ಮೆತ್ತಗೆತ್ತಿ ಮೂಸಿನೋಡಿ
ಮೈಯಂಗಿಗೆ ಸಿಕ್ಕಿಸಿಕೊಂಡು
ಮೆರೆದಾಡುತ್ತಾರೆ; ಅದು ಅವರ ಸ್ವಭಾವ;
ಮತ್ತೆ ಕೆಲವರಿಗೆ ಹೂವೆಂದರೆ
ಹೆಂಡತಿಯಿದ್ದಂತೆ; ಮುತ್ತಿಟ್ಟ
ಮರುಕ್ಷಣದಲ್ಲೇ ಮೆತ್ತಗೆ ಮಾಡುವುದು
ಅವರ ಸ್ವಭಾವ;

ಹೀಗೆ ಜನ; ತಮ್ಮ ಎದೆಯಳತೆಗೆ
ಬದುಕು ಸುರಿದುಕೊಳ್ಳುತ್ತಾರೆ;
ಕೆಲವರು ಗಾಳಿಯಾಗಿ ತೆಗೆದುಕೊಂಡ
ಬದುಕು
ಮತ್ತಿತರರಿಗೆ ಗೂಳಿ, ಎತ್ತಿ ಕೊತ್ತಿ
ಒತ್ತಿದಂತಾಗುತ್ತದೆ;
ಅದು ಜಗತ್ತು;
ಭಿನ್ನಕ್ಕೆ ಭಿನ್ನ ಬೆನ್ನು;

ಅವರಿವರಷ್ಟಿಷ್ಟನರಿತು
ಅರಿಯದುದನು ಮರೆತು
ಹಾಗಲ್ಲ ಹೀಗೆಂದು ಹೇಳ ಬಂದಾಗ
ಬದುಕು ಈ ಜನರ ಮಾತೆ?
ಎಂದು ಜಿಜ್ಞಾಸೆ ಕೆರಳಿಸುತ್ತದೆ
ಸಂಶಯಕ್ಕೆ ಕುತೂಹಲ
ಜೊತೆಯಾಗಿ ಅರಳುತ್ತದೆ;
ಅವರಿವರ ಮಾತಿಗೊಂದು ಮಾತು

ಮಾರುತ್ತರ ಉಟ್ಟು ಬಾರದಾಗ
ಅವರಸ್ತಿತ್ವ ಅಸ್ತಮಿಸಿ ಬರೀ
ನಾನು ಮತ್ತು ಜಗತ್ತು
ಅದರ ನಡುವೆ ಹಾವು—ಬದುಕು.
ಇದನ್ನೆಲ್ಲ ಎತ್ತಿ ಹಿಡಿಯ ಬಲ್ಲೆ
ಒತ್ತಿ ನಡೆಯಬಲ್ಲೆ
ಎಂದು
ಹೊಟ್ಟೆ ಕೊಟ್ಟುದನುಂಡು ಉಬ್ಬಿದ
ರಟ್ಟೆಗಳು
ಗಾಳಿಗೆ
ಗಾಳಿ ಊರಿಂದೂರಿಗೆ
ದೇಶದಿಂದ ದೇಶಕ್ಕೆ
ಸಾರುತ್ತಾ ಬರುವಾಗ
ನನ್ನ ಹಿಂದೆ ತಿದ್ದಲು ಬಂದ
ಬದ್ಧರು
ಸಾಲು ಸಾಲಾಗಿ ಬರುತ್ತಾರೆ:

ದ್ವಿಪದ ಮತ್ತು ಪ್ವೊಸೋನ್ ಸಂಭಾವ್ಯತಾ ವಿತರಣೆಗಳು*

[Binomial and Poisson Probability Distributions]

ಟಿ. ಶ್ರೀವೆಂಕಟರಮಣ

1. ಪರಿಚಯ

ಸಂಭಾವ್ಯತಾ ಶಾಸ್ತ್ರ (Probability Theory) ಸಂಖ್ಯಾಕಲನಶಾಸ್ತ್ರ (Statistics) ದ ಜನ್ಮಲುಬು. ಪಾಸ್ಕಲ್ (Pascal) ಮತ್ತು ಫರ್ಮಾ (Fermat) ಮೊದಲಾದ ಗಣಿತಜ್ಞರ ಕಾಲ (ಕ್ರಿ. ಶ. 17ನೇ ಶತಮಾನ)ದಲ್ಲಿ ಜೂಜಿನ ಮೇಜುಗಳ ಮೇಲೆ ಹುಟ್ಟಿಕೊಂಡಿತೆನ್ನಲಾಗಿರುವ ಈ ಶಾಸ್ತ್ರ ವಿಕಾಸಹೊಂದಿ ಬಹಳವಾಗಿ ಬೆಳೆದು, ಇನ್ನೂ ಬೆಳೆಯುತ್ತ, ಈಗ ಜನಜೀವನದ ಹೆಚ್ಚಿನ ಎಲ್ಲ ರಂಗಗಳಲ್ಲಿ ಉಪಯೋಗವಾಗುತ್ತಿದೆ. ವಿವಿಧ ಕ್ಷೇತ್ರಗಳಲ್ಲಿ ಸಿಗುವ ದತ್ತಾಂಶಗಳು ಹೆಚ್ಚಾಗಿ ಯಾವುದಾದರೊಂದು ಸಂಭಾವ್ಯತಾ ವಿತರಣೆಯ ಸ್ಥಿರ ಚೌಕಟ್ಟಿನೊಳಗೆ ಓರಣವಾಗಿ ಹೊಂದಿಕೊಳ್ಳುತ್ತವೆ. ದ್ವಿಪದ ಮತ್ತು ಪ್ವೊಸೋನ್ ಸಂಭಾವ್ಯತಾ ವಿತರಣೆಗಳು ಅಂಥ ಎರಡು ಮುಖ್ಯ ಚೌಕಟ್ಟುಗಳು. ಪ್ರಸ್ತುತ ಲೇಖನದಲ್ಲಿ ಅವುಗಳ ಉಪಯುಕ್ತತೆಯ ಪರಿಚಯವನ್ನು ಕನ್ನಡದಲ್ಲಿ ಮಾಡಿಕೊಡಲು ಪ್ರಯತ್ನಿಸಲಾಗಿದೆ.

2. ಪ್ರವೇಶ

ಬೆಂಗಳೂರಿನಲ್ಲಿರುವ ಕೆಂಪೇಗೌಡ ವೃತ್ತದಿಂದ ಮೈಸೂರು ಬ್ಯಾಂಕ್ ಚೌಕಕ್ಕೆ ನೇರವಾದ ರಸ್ತೆಯಿದೆ. ದೂರ ಸುಮಾರು 300 ಮೀಟರ್‌ಗಳು. ನಿಬಿಡ ವಾಹನ

---

* ಪ್ರಸ್ತುತ ಲೇಖನದ ಸಿದ್ಧತೆಗೆ ಶ್ರೀ ಜಿ. ಟಿ. ನಾರಾಯಣರಾವ್, ವಿಜ್ಞಾನ ಸಂಪಾದಕರು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. ಇವರು ನೀಡಿರುವ ಪ್ರೋತ್ಸಾಹ ಮತ್ತು ಸೂಕ್ತ ಸಲಹೆಗಳನ್ನು ಲೇಖಕ ಅತ್ಯಂತ ಕೃತಜ್ಞತೆಯಿಂದ ಸ್ಮರಿಸುತ್ತಾನೆ. ಬೆಂಗಳೂರು ವಿಶ್ವವಿದ್ಯಾಲಯದ ಸಂಖ್ಯಾಕಲನ ಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರುಗಳಾದ ಪ್ರೊಫೆಸರ್ ಆರ್. ಆರ್. ಉಮರ್ಜಿ, ಡಾ॥ ಕೆ. ಪಿ. ಶ್ರೀನಾಥ್, ಶ್ರೀ ಎಚ್. ಜೆ. ವಾಮನ್ ಮತ್ತು ಶ್ರೀ ಎಸ್. ಎಮ್. ಮಂಜುನಾಥ್ ಅವರು ಲೇಖನವನ್ನು ವಿಶ್ವಾಸದಿಂದ ಓದಿ ಕೆಲವು ಉಪಯುಕ್ತ ಬದಲಾವಣೆಗಳನ್ನು ಸೂಚಿಸಿದ್ದುದನ್ನೂ ಲೇಖಕ ಕೃತಜ್ಞತೆಯಿಂದ ಸ್ಮರಿಸುತ್ತಾನೆ.

ಸಂಚಾರ ಜನಸಂದಣಿ. ಕಾಲ್ನಡಿಗೆಯಲ್ಲಿ ಈ ದೂರವನ್ನು ನಾವು ಗಮಿಸಬೇಕಾಗಿದೆ. ಕಾಲುದಾರಿಯ ಮೇಲೆಯೇ ನಾವು ನಡೆಯಬಹುದು. ಅಥವಾ (ಟ್ರಾಫಿಕ್ ಪೋಲೀಸರ ಕಣ್ಣುಗಳನ್ನು ತಪ್ಪಿಸಿ) ರಸ್ತೆಯ ಮಧ್ಯದಲ್ಲಿಯೇ ನಡೆಯಲೂ ಬಹುದು. ಎರಡೂ ರೀತಿಗಳಲ್ಲಿ ವಾಹನ ಅಪಘಾತಕ್ಕೆ ನಾವು ತುತ್ತಾಗುವ ಸಾಧ್ಯತೆಯಿದೆ. ಆದರೆ, ಎರಡನೆಯ ರೀತಿಯನ್ನು ಅನುಸರಿಸಿದರೆ ಅಂಥ ಅಪಘಾತಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚು ಎಂಬುದು ಸ್ಪಷ್ಟ. ಸಾಧ್ಯತೆಗಳ ಇಂಥ ಹೋಲಿಕೆ ಸಂಭಾವ್ಯತೆಯ ಪರಿಕಲ್ಪನೆ-ಯೆಡೆಗೆ ಮೊದಲ ಹೆಜ್ಜೆ.

ಸಂಜೆ ಐದರ ಹೊತ್ತು. ನೀವು ಮಾರುಕಟ್ಟೆಗೆ ಹೋಗಿ ಬರಬೇಕೆಂದಿದ್ದೀರಿ. ಮನೆಯಿಂದ ಹೊರಬೀಳುವ ಮುನ್ನ ಬಾನಿನೆಡೆಗೆ ದಿಟ್ಟಿಸುತ್ತೀರಿ. ಅಲ್ಲಿ ಅಲ್ಲಲ್ಲಿ ಮೋಡಗಳು. ಮನೆಯಿಂದ ಹೊರಟು ಕೆಲಸ ಕಾರ್ಯಗಳನ್ನು ಮುಗಿಸಿ ಮನೆಗೆ ಹಿಂತಿರುಗುವ ಮೊದಲೇ ಮಳೆ ಬೀಳಬಹುದೇ ಎಂಬುದು ನಿಮ್ಮ ಭಯ. ಹಿಂದೆ ಹಲವು ಬಾರಿ ಅಂಥ ಸಂದರ್ಭಗಳಲ್ಲಿ ಮಳೆ ಬಿದ್ದದ್ದು, ತೋಯಿಸಿಕೊಂಡದ್ದು ಅನುಭವವಾಗಿದ್ದರೆ ಇಂದೂ ಮಳೆ ಬೀಳಲಿದೆಯೆಂದು ನೀವು ತಿಳಿಯಬಹುದು. ಕೆಲವೊಮ್ಮೆ ಮಾತ್ರ ಮಳೆ ಬಿದ್ದಿದೆಯಾದರೆ ಇಂದು ಮಳೆ ಬಿದ್ದರೂ ಬೀಳಬಹುದೆಂದು ತರ್ಕಿಸಬಹುದು; ಮಳೆ ಬಿದ್ದುದೇ ಅಪರೂಪವಾದರೆ ಮಳೆಯನ್ನು ಎದುರಿಸಲು ಪೂರ್ವಸಿದ್ಧತೆ ಇಲ್ಲದೆಯೇ ಮನೆಯಿಂದ ಹೊರಡುವ ಧೈರ್ಯ ಮಾಡಬಹುದು. ಮೇಲಿನ ಭಾವನೆಗಳನ್ನು ಸಂಖ್ಯಾರೂಪದಲ್ಲಿ ತಿಳಿಸುವ ಪ್ರಯತ್ನದಲ್ಲಿ, ಹತ್ತರಲ್ಲಿ ಒಂಬತ್ತು ಪಾಲು, ಹತ್ತರಲ್ಲಿ ಐದು ಪಾಲು ಅಥವಾ ಹತ್ತರಲ್ಲಿ ಒಂದು ಪಾಲು ಮಳೆಯಾಗಬಹುದೆಂದು ಸೂಚಿಸುವುದುಂಟು. ಇಂಥ ಪ್ರಯತ್ನಗಳು ಸಂಭಾವ್ಯತೆಯ ಪರಿಕಲ್ಪನೆಯೆಡೆಗೆ ಎರಡನೆ ಹೆಜ್ಜೆ.

ಸಂಭಾವ್ಯತೆಯ ಪರಿಕಲ್ಪನೆಯ ಬಗ್ಗೆ ಹೆಚ್ಚು ತಿಳಿಯಲು ಕೆಳಗಿನ ಪ್ರಯೋಗವನ್ನು ನಾವು ಸ್ವಲ್ಪ ಪರಿಶೀಲಿಸೋಣ. ಕೈಚೀಲವೊಂದರಲ್ಲಿ 6 ಚೆಂಡುಗಳಿವೆ. ಅವುಗಳ ಪೈಕಿ 4 ಬಿಳಿ ಬಣ್ಣದವು. ಉಳಿದ 2 ಕೆಂಪುಬಣ್ಣದವು. ಬಣ್ಣದ ವ್ಯತ್ಯಾಸದ ಹೊರತು ಉಳಿದ ಎಲ್ಲ ದೃಷ್ಟಿಗಳಿಂದಲೂ ಚೆಂಡುಗಳು ಒಂದೇ ರೀತಿ ಇವೆ. ಆ ಕೈಚೀಲದಿಂದ ಒಂದು ಚೆಂಡು ಆರಿಸಲ್ಪಡಲಿ ಮತ್ತು ಅದರ ಬಣ್ಣ ಗಮನಿಸಲ್ಪಡಲಿ. ಆರಿಸಲ್ಪಟ್ಟ ಚೆಂಡಿನ ಬಣ್ಣ ಏನಿರಬಹುದೆಂದು ಕೇಳಲು ನಾವು ಬಯಸಬಹುದು. ಆದರೆ ಈ ಪ್ರಶ್ನೆಗೆ ನಿಖರವಾದ ಉತ್ತರವಿಲ್ಲವೆಂಬುದು ಸ್ಪಷ್ಟ. ಮೇಲೆ ವಿವರಿಸಿದಂತೆ ಚೀಲವೊಂದರಿಂದ ಚೆಂಡುಗಳನ್ನು ಆರಿಸುವ ಪ್ರಯೋಗವನ್ನು ನಾವು ನಡೆಸಿದರೆ ಆರಿಸಲ್ಪಟ್ಟ ಚೆಂಡಿನ ಬಣ್ಣ ಕೆಲವೊಮ್ಮೆ ಬಿಳಿ ಮತ್ತು ಕೆಲವೊಮ್ಮೆ ಕೆಂಪು ಆಗಿರಬಹುದು. ಹೀಗಾಗಿ, ಪ್ರಯೋಗದ ಫಲಿತಾಂಶವನ್ನು ಮುಂದಾಗಿ ಹೇಳುವುದು ಅಸಾಧ್ಯ.

ಆದರೂ ಈ ಪ್ರಯೋಗದ ಬಗ್ಗೆ ಮುಂದಾಗಿ ಹೇಳಬಹುದಾದ ಕೆಲವು ಸಂಗತಿಗಳಿವೆ. ಕೋಷ್ಟಕ 2 – 1 ಅಂಥ 600 ಸ್ವತಂತ್ರ ಕೈವಿಸಕಗಳ (independent trials) ಫಲಿತಾಂಶಗಳನ್ನು ತೋರಿಸುತ್ತದೆ. ಅಂದರೆ 4 ಬಿಳಿ ಮತ್ತು 2 ಕೆಂಪು ಬಣ್ಣದ ಚೆಂಡುಗಳಿದ್ದ ಕೈಚೀಲವೊಂದನ್ನು ತೆಗೆದುಕೊಂಡು ಅದರಲ್ಲಿದ್ದ ಚೆಂಡುಗಳನ್ನು ಚೆನ್ನಾಗಿ ಕಲಸಲಾಯಿತು. ಆ ಚೀಲದಿಂದ ಯಾವುದೋ ಒಂದು ಚೆಂಡನ್ನು ಆರಿಸಿ, ಅದರ ಬಣ್ಣವನ್ನು ಗಮನಿಸಿ, ಆರಿಸಲ್ಪಟ್ಟ ಚೆಂಡನ್ನು ಕೈಚೀಲಕ್ಕೆ ಹಿಂತಿರುಗಿಸಲಾಯಿತು. ಇದೇ ರೀತಿ 600 ಬಾರಿ ಪುನರಾವರ್ತಿಸಲಾಯಿತು.

ಕೋಷ್ಟಕ 2—1

ಕೈವಿಸಕ ಸಂಖ್ಯೆಗಳು	ಆರಿಸಲ್ಪಟ್ಟ ಬಿಳಿ ಚೆಂಡುಗಳ ಸಂಖ್ಯೆ
1—100	69
101—200	70
201—300	59
301—400	63
401—500	76
501—600	64

ಕೋಷ್ಟಕ 2—2

ಕೈವಿಸಕ ಸಂಖ್ಯೆಗಳು	ಆರಿಸಲ್ಪಟ್ಟ ಬಿಳಿ ಚೆಂಡುಗಳ ಪ್ರಮಾಣ
1—100	0.690
1—200	0.695
1—300	0.660
1—400	0.653
1—500	0.674
1—600	0.668

ನೂರು ಕೈವಿಸಕಗಳ ಪ್ರತಿ ಸಮೂಹದಲ್ಲಿ (ಮತ್ತು 600 ಕೈವಿಸಕಗಳ ಒಟ್ಟು ಸಮೂಹದಲ್ಲಿ ಕೂಡ) ಬಿಳಿ ಚೆಂಡುಗಳು ಆರಿಸಲ್ಪಟ್ಟ ಕೈವಿಸಕಗಳ ಪ್ರಮಾಣ (ಒಟ್ಟು ಕೈವಿಸಕಗಳ) ಸರಿಸುಮಾರು 2/3 ರಷ್ಟು ಆಗಿರುವುದನ್ನು ಗಮನಿಸಿ. ಹೀಗಾಗಿ, ಭಿನ್ನರಾಶಿ 2/3ಕ್ಕೆ ಈ ಪ್ರಯೋಗದೊಡನೆ ಏನೋ ನಿಜವಾದ ಸಂಬಂಧ ಇದೆ ಎಂದು ಹೇಳಲು ನಾವು ತವಕಿಸುವುದು ಸಹಜ. ಇಂಥ ಕೈವಿಸಕಗಳ ಸಾಕಷ್ಟು ಉದ್ದವಾದ ಸರಣಿಯಲ್ಲಿ ಆರಿಸಲ್ಪಟ್ಟ ಚೆಂಡುಗಳ ಪೈಕಿ 2/3 ರಷ್ಟು ಚೆಂಡುಗಳು ಬಿಳಿ ಬಣ್ಣದವು ಎಂದೂ ಪ್ರತಿಪಾದಿಸಬಹುದು. ಒಟ್ಟಿನಲ್ಲಿ ಈ ಪ್ರಯೋಗದ ಫಲಿತಾಂಶ ಒಂದು ಯಾದೃಚ್ಛಿಕ ವಿದ್ಯಮಾನ (random phenomenon) ಎಂದು ಹೇಳಬಂತಾಯಿತು.

ಚೀಲವೊಂದರಿಂದ ಒಂದು ಚೆಂಡನ್ನು ಆರಿಸುವ ಪ್ರಯೋಗದ ಕೈವಿಸಕಗಳ ಉದ್ದವಾದ ಒಂದು ಸರಣಿಯಲ್ಲಿ. ಬಿಳಿ ಚೆಂಡುಗಳ ಪ್ರಮಾಣ ಕೈವಿಸಕಗಳ ಒಟ್ಟು

ಸಂಖ್ಯೆಯು ಒಂದು ನಿರ್ದಿಷ್ಟ ಅಂಶ (ಅದರ ಮೌಲ್ಯ ಅವ್ಯಕ್ತವಾಗಿರಬಹುದು) ಎಂದು ನಂಬಬಹುದಾಗಿದೆ. ಆಗ ಈ ಕೆಳಗಿನ ವಿಚಾರಗಳನ್ನು ನಾವು ಪ್ರತಿಪಾದಿಸಿದಂತಾಯಿತು: (i) ಅಂಥ ಚೀಲವೊಂದರಿಂದ ಚೆಂಡುಗಳ ಆಯ್ಕೆ ಒಂದು ಯಾದೃಚ್ಛಿಕ ವಿದ್ಯಮಾನ. ಮತ್ತು (ii) ಬಿಳಿ ಚೆಂಡಿನ ಆಯ್ಕೆ ಒಂದು ಯಾದೃಚ್ಛಿಕ ಘಟನೆ (random event). ಯಾದೃಚ್ಛಿಕ ವಿದ್ಯಮಾನ ಒಂದು ಅನುಭವಜನ್ಯ ಸತ್ಯ. ದತ್ತ ಪರಿಸ್ಥಿತಿಗಳಲ್ಲಿ ಅದು ಯಾವಾಗಲೂ ಒಂದೇ ತೆರನಾದ ಫಲಿತಾಂಶಗಳನ್ನು ಕೊಡಲಾರದು. ಆದ್ದರಿಂದ ಇಲ್ಲಿ ನಿಶ್ಚಯಾತ್ಮಕ ನಿಯಮಿತತ್ವ (deterministic regularity) ಇಲ್ಲ. ಆದರೆ ಕಂಡುಬರುವ ವಿವಿಧ ಫಲಿತಾಂಶಗಳು ಸಂಖ್ಯಾಕಲನೀಯ ನಿಯಮಿತತ್ವ (statistical regularity) ವನ್ನು ಪ್ರದರ್ಶಿಸುತ್ತವೆ. ಅಂದರೆ, ವಿದ್ಯಮಾನದ ಸ್ವತಂತ್ರ ಆಗುವಿಕೆಗಳ ಒಂದು ಸರಣಿಯಲ್ಲಿ ಸಾಧ್ಯವುಳ್ಳ ವಿಭಿನ್ನ ಫಲಿತಾಂಶಗಳ ಸಾಪೇಕ್ಷ ಆವರ್ತಾಂಕ[1] (relative frequency) ಗಳನ್ನು ಪ್ರತಿನಿಧೀಕರಿಸುವ ಸಂಖ್ಯೆಗಳು **0** ಮತ್ತು **1** ರ ನಡುವೆ ಇರುತ್ತವೆ.

ಯಾದೃಚ್ಛಿಕ ಘಟನೆ ಮತ್ತು ಯಾದೃಚ್ಛಿಕ ಘಟನೆಯ ಸಂಭಾವ್ಯತೆಯು ಪರಿಕಲ್ಪನೆಗಳು ಯಾದೃಚ್ಛಿಕ ವಿದ್ಯಮಾನದ ಪರಿಕಲ್ಪನೆಗೆ ಸಮೀಪವರ್ತಿಗಳಾದ ಇನ್ನೆರಡು ಪರಿಕಲ್ಪನೆಗಳು. ಒಂದು ಘಟನೆ ನಡೆಯಬಹುದಾದ ಯಾದೃಚ್ಛಿಕವಾಗಿ ಆರಿಸಲ್ಪಟ್ಟ ಸಂದರ್ಭಗಳ ಸಾಕಷ್ಟು ದೊಡ್ಡ ಸರಣಿಯಲ್ಲಿ. ಆ ಘಟನೆ ಆಗುವ ಸಾಪೇಕ್ಷ ಆವರ್ತಾಂಕವನ್ನು ಗಮನಿಸಿ. ಅಂಥ ಸಂದರ್ಭಗಳ ಒಟ್ಟು ಸಂಖ್ಯೆ ಅನಂತ (infinity) ವನ್ನು ಸಮೀಪಿಸಿದಂತೆ ಈ ಸಾಪೇಕ್ಷ ಆವರ್ತಾಂಕ ಒಂದು ಸ್ಥಿರ ಮೌಲ್ಯ (stable value)ಕ್ಕೆ ಅಭಿಸರಿಸಿದರೆ, ಆಗ ಆ ಘಟನೆಯನ್ನು ಒಂದು ಯಾದೃಚ್ಛಿಕ ಘಟನೆ ಎನ್ನುತ್ತೇವೆ: ಮತ್ತು ಆ ಸ್ಥಿರ ಮೌಲ್ಯವನ್ನು ಆ ಯಾದೃಚ್ಛಿಕ ಘಟನೆಯ ಸಂಭಾವ್ಯತೆ ಎನ್ನುತ್ತೇವೆ. ಮೇಲಿನ ನಿದರ್ಶನದಲ್ಲಿ ಬಿಳಿ ಚೆಂಡಿನ ಆಯ್ಕೆ ಒಂದು ಯಾದೃಚ್ಛಿಕ ಘಟನೆ ಮತ್ತು 2/3 ಆ ಘಟನೆಯ ಸಂಭಾವ್ಯತೆ.

3. ಸಂಭಾವ್ಯತೆಯು ಅಳತೆಗೋಲು

ಚಾಮುಂಡಿ ಬೆಟ್ಟ ಬೆಂಗಳೂರಿಗೆ ಬರುವುದು ಅಸಾಧ್ಯ. ಸಂಭಾವ್ಯತೆಯು ಪರಿಭಾಷೆಯಲ್ಲಿ ಇದನ್ನು $p=0$ ಎಂದು ಸೂಚಿಸುತ್ತೇವೆ. p ಎಂಬುದು ಸಂಭಾವ್ಯತೆಯು ಸೂಚಕ. ನಾಳೆ ದಿನ ಸೂರ್ಯ ಮೂಡಣ ದಿಗಂತದಲ್ಲಿ ಉದಯಿಸುವುದು ಖಂಡಿತ. ಇದನ್ನು $p=1$ ಎಂದು ಸೂಚಿಸುತ್ತೇವೆ. 0 ಮತ್ತು 1 ನಮ್ಮ


---

1 ಫಲಿತಾಂಶವೊಂದರ ಸಾಪೇಕ್ಷ ಆವರ್ತಾಂಕ

$$= \frac{\text{ನಿರ್ದಿಷ್ಟ ಫಲಿತಾಂಶ ದೊರೆತ ಕ್ರಿಯಸಕಗಳ ಸಂಖ್ಯೆ}}{\text{ಕ್ರಿಯಸಕಗಳ ಒಟ್ಟು ಸಂಖ್ಯೆ}}$$

ಅಳತೆಗೋಲಿನ ಎರಡು ಕೊನೆಗಳು. ಜೀವನದ ಎಲ್ಲ ಆಗುಹೋಗುಗಳು ಮೇಲಿನ ನಿದರ್ಶನಗಳಲ್ಲಿರುವ ಫಲಿತಾಂಶಗಳಷ್ಟೇ ಪೂರ್ವನಿಶ್ಚಿತವಾಗಿದ್ದರೆ, ಆಗ ನಮ್ಮ ಅಳತೆ ಗೋಲಿನಲ್ಲಿ ಇನ್ನು ಯಾವ ಗುರುತುಗಳೂ ಇರಬೇಕಾಗಿರಲಿಲ್ಲ. ಆದರೆ ವಾಸ್ತವಿಕತೆ ಹೆಚ್ಚಾಗಿ ಅನಿಶ್ಚಿತ. ತಂಪಾದ ಗಾಳಿ ಬೀಸುತ್ತಿದ್ದು, ಆಕಾಶದಲ್ಲೆಲ್ಲ ಕಪ್ಪಗೆ ಮೋಡ ಕವಿದಿದ್ದರೆ ಮಳೆ ಬರಲಿದೆ ಎನ್ನಬಹುದು. ಆದರೆ ಅದು ಖಂಡಿತವಲ್ಲ. ಪರಿಸ್ಥಿತಿಯ ಲಕ್ಷಣಗಳನ್ನು ನಮ್ಮ ಹಿಂದಿನ ಅನುಭವಗಳೊಂದಿಗೆ ಹೋಲಿಸಿ, $p=0.9$, $p=0.5$ ಅಥವಾ $p=0.1$ ಎಂದು ಪ್ರವೇಶದಲ್ಲಿ ಹೇಳಿರುವ ನಿದರ್ಶನದಲ್ಲಿರುವ ಅನಿಶ್ಚಿತತೆಯ ಮೂರು ಘಟ್ಟಗಳನ್ನು ಸೂಚಿಸಬಹುದು. ಸಂಭಾವ್ಯತೆಯ ಅಳತೆ ಗೋಲಿನ ವಿವಿಧ ಗುರುತುಗಳು ಇಂಥ ಅನಿಶ್ಚಿತತೆಯ ವಿವಿಧ ಘಟ್ಟಗಳನ್ನು ಸೂಚಿಸುತ್ತವೆ (ಚಿತ್ರ 3 – 1).

ಚಿತ್ರ 3 – 1. ಸಂಭಾವ್ಯತೆಯ ಅಳತೆಗೋಲು



ನಿಜಜೀವನದಲ್ಲಿ ಘಟನೆಗಳ ಸಂಭಾವ್ಯತೆಗಳನ್ನು ನಿರ್ಧರಿಸಲು ಎರಡು ಮುಖ್ಯ ವಿಧಾನಗಳಿವೆ.

4. ಪ್ರಯೋಗಪೂರ್ವ(a priori) ಸಂಭಾವ್ಯತೆಗಳು

ನಿದರ್ಶನ 4—1:

ದಾಳ (die, pl. dice) ಒಂದು ಸಮಘನಾಕೃತಿ. ಅದಕ್ಕೆ ಆರು ಮುಖಗಳು. ಅವುಗಳ ಮೇಲೆ ಅನುಕ್ರಮವಾಗಿ 1, 2, ……,6 ಗುರುತುಗಳಿವೆ. ಅಂಥ ದಾಳವನ್ನು ಒಂದು ಬಾರಿ ಉರುಳಿಸಿದಾಗ ಅದರ ಯಾವುದೇ ಒಂದು ನಿರ್ದಿಷ್ಟ ಮುಖ ಮೇಲೆ ಕಾಣಿಸಿಕೊಳ್ಳುವ ಸಂಭಾವ್ಯತೆ ಏನು? ಈ ಪ್ರಶ್ನೆಗೆ ಉತ್ತರ ತಟ್ಟನೆ ಹೊಳೆಯುವುದು—1/6. ಉರುಳಿಸಲ್ಪಟ್ಟ ದಾಳ ತನ್ನ ಅಂಚಿನ ಮೇಲೆ ನಿಲ್ಲಲಾರದು; ನಮ್ಮ ಕಣ್ಣುಗಳನ್ನು ತಪ್ಪಿಸಿ ಹೋಗಲೂ ಆಗದು. ತನ್ನ ಒಂದಲ್ಲ ಒಂದು ಮುಖವನ್ನು ಅದು ನಮಗೆ ತೋರಿಸಲೇ ಬೇಕು. ಅದು ಸಮಘನಾಕೃತಿಯಾದುದರಿಂದ ಅದರ ಆರೂ ಮುಖಗಳೂ ಸಮಾನ ಪ್ರಾಯಿಕ (equally likely) ಎಂದು ತಿಳಿಯಬಹುದು. ಅದೂ ಅಲ್ಲದೆ ಆ ದಾಳದ ಒಂದೇ ಒಂದು ಮುಖ ಮೇಲೆ ಕಾಣಿಸಿಕೊಳ್ಳಬಹುದಾದುದರಿಂದ

ಅದರ ಮುಖಗಳು ಪರಸ್ಪರ ವರ್ಜ್ಯ (mutually exclusive) ಫಲಿತಾಂಶಗಳು. Pi ಎಂಬುದು i ಗುರುತುಗಳುಳ್ಳ ಮುಖ ಕಾಣಿಸಿಕೊಳ್ಳುವ ಸಂಭಾವ್ಯತೆ ಯಾದರೆ. ಆಗ

$$\left.\begin{aligned} p_1 = p_2 = p_3 = p_4 = p_5 = p_6 \quad \text{ಮತ್ತು} \\ p_1 + p_2 + p_3 + p_4 + p_5 + p_6 = 1 \end{aligned}\right\} \quad (4-1)$$

ಹೀಗಾಗಿ $pi = \frac{1}{6}.\ i = 1, 2 \ldots .6$

ನಿದರ್ಶನ 4—2

ಇಸ್ಪೀಟು ಎಲೆಗಳ ಆಟ ಎಲ್ಲ (ಸಭ್ಯ)ರಿಗೂ ಪರಿಚಿತ. ಕಟ್ಟೊಂದರಲ್ಲಿ 52 ಎಲೆಗಳು. ಕೆಂಪು ಎಲೆಗಳು 26; ಉಳಿದ 26 ಎಲೆಗಳು ಕಪ್ಪು. ಕಟ್ಟಿನಲ್ಲಿರುವ ಎಲೆಗಳನ್ನು ಚೆನ್ನಾಗಿ ಕಲಸಿ ಒಂದು ಎಲೆಯನ್ನು ಯಾದೃಚ್ಛಿಕವಾಗಿ ಆರಿಸಿದರೆ ಆ ಎಲೆಯ ಬಣ್ಣ ಕಪ್ಪಾಗಿರುವ ಸಂಭಾವ್ಯತೆ ಏನು? ಕಟ್ಟಿನಲ್ಲಿರುವ ಎಲೆಗಳನ್ನು ಚೆನ್ನಾಗಿ ಕಲಸಿರುವುದರಿಂದ ಅವೆಲ್ಲ ಸಮಾನ ಪ್ರಾಯಿಕತೆವುಳ್ಳವು ಎಂದು ತಿಳಿಯಬಹುದು. ಹೀಗಾಗಿ. ಆರಿಸಲ್ಪಟ್ಟ ಎಲೆ ಕಪ್ಪು ಬಣ್ಣದ್ದಾಗಿರುವ ಸಂಭಾವ್ಯತೆ $\frac{26}{52}$ ಅಥವಾ $\frac{1}{2}$

ಮೇಲಿನ ನಿದರ್ಶನಗಳಲ್ಲಿ ಅನುಸರಿಸಿರುವ ವಿಧಾನವನ್ನು ಸಂಕ್ಷೇಪವಾಗಿ ಹೀಗೆ ವಿವರಿಸಬಹುದು: ಪ್ರಯೋಗವೊಂದು n ಪರಸ್ಪರ ವರ್ಜ್ಯ ಮತ್ತು ಸಮಾನ ಪ್ರಾಯಿಕತೆ ಉಳ್ಳ ಫಲಿತಾಂಶಗಳಲ್ಲಿ ಮಾತ್ರ ಕೊನೆಗೊಳ್ಳಬಹುದಾದರೆ ಮತ್ತು ಅವುಗಳ ಪೈಕಿ r ಫಲಿತಾಂಶಗಳು ಘಟನೆ A ಗೆ ಅನುಕೂಲವಾದವುಗಳಾದರೆ. ಆಗ

$$\text{ಘಟನೆ } A \text{ ಯ ಸಂಭಾವ್ಯತೆ} = \frac{A \text{ ಗೆ ಅನುಕೂಲ ಫಲಿತಾಂಶಗಳ ಸಂಖ್ಯೆ}}{\text{ಸಾಧ್ಯವುಳ್ಳ ಫಲಿತಾಂಶಗಳ ಒಟ್ಟು ಸಂಖ್ಯೆ}}$$

ಸೂತ್ರರೂಪದಲ್ಲಿ, $P(A) = \frac{r}{n} \quad \cdots \quad (4-2)$

$P(A)$ಯ ಕೆಲವೊಂದು ಗುಣಲಕ್ಷಣಗಳು ತಕ್ಷಣ ದೊರೆಯುತ್ತವೆ:

(*i*) $0 \leq r \leq n$; ; ಆದ್ದರಿಂದ. $0 \leq P(A) \leq 1$

(*ii*) A ಮತ್ತು B ಗಳು ಪರಸ್ಪರ ವರ್ಜ್ಯ ಘಟನೆಗಳಾದರೆ. ಆಗ

$$P\ (A \text{ ಅಥವಾ } B) = \frac{A \text{ ಅಥವಾ } B \text{ ಗೆ ಅನುಕೂಲ ಫಲಿತಾಂಶಗಳ ಸಂಖ್ಯೆ}}{\text{ಸಾಧ್ಯವುಳ್ಳ ಫಲಿತಾಂಶಗಳ ಒಟ್ಟು ಸಂಖ್ಯೆ}}$$

$$= \frac{r_1+r_2}{n}$$

$$= \frac{r_1}{n} + \frac{r_2}{n}$$

$$= P(A) + P(B)$$

ಇಲ್ಲಿ A ಗೆ ಅನುಕೂಲ ಫಲಿತಾಂಶಗಳ ಸಂಖ್ಯೆ r_1 ಮತ್ತು B ಗೆ ಅನುಕೂಲ ಫಲಿತಾಂಶಗಳ ಸಂಖ್ಯೆ r_2. A ಮತ್ತು B ಗಳು ಪರಸ್ಪರ ವರ್ಜ್ಯ ಘಟನೆಗಳಾದುದರಿಂದ ಅವು ಜೊತೆ ಜೊತೆಗೆ ಆಗುವುದು ಅಸಾಧ್ಯ. ಹೀಗಾಗಿ A ಅಥವಾ B ಗೆ ಅನುಕೂಲ ಫಲಿತಾಂಶಗಳ ಸಂಖ್ಯೆ (r_1+r_2).

5. ಅನುಭವಜನ್ಯ ಸಂಭಾವ್ಯತೆ (Empirical probability)

ಒಂದು ದಾಳದ ಆರು ಮುಖಗಳು ಸಮತೂಕದಲ್ಲಿದ್ದರೆ ಅದರ ಮುಖಗಳು ಸಮಾನ ಪ್ರಾಯಿಕತೆ ಉಳ್ಳವು ಎಂದು ತಿಳಿಯಬಹುದು ಮತ್ತು ಸಂಭಾವ್ಯತೆಗಳನ್ನು ಪಡೆಯಲು ಮೇಲೆ ವಿವರಿಸಿದ ವಿಧಾನವನ್ನು ಉಪಯೋಗಿಸಬಹುದು. ಆದರೆ ಆ ಮುಖಗಳು ಸಮಾನ ಪ್ರಾಯಿಕತೆ ಉಳ್ಳವು ಆಗಿಲ್ಲದಿದ್ದರೆ ಅಥವಾ ಅವು ಸಮಾನ ಪ್ರಾಯಿಕತೆ ಉಳ್ಳವು ಎಂಬುದು ಖಚಿತವಿಲ್ಲದಿದ್ದರೆ ಆಗ ಮಾಡುವುದೇನು? ಆ ದಾಳವನ್ನು ಸಾಕಷ್ಟು ಬಾರಿ ಉರುಳಿಸಿ ಅದರ ಮುಖಗಳು ಕಾಣಿಸಿಕೊಂಡ ಆವರ್ತಾಂಕಗಳನ್ನು ಗುರುತಿಸಿಕೊಳ್ಳಬಹುದು. n ಕೈವಿಸಕಗಳಲ್ಲಿ i ಗುರುತುಗಳುಳ್ಳ ಮುಖ ಕಾಣಿಸಿಕೊಂಡ ಆವರ್ತಾಂಕ f_i ಆದರೆ, ಆಗ ಆ ಮುಖ ಕಾಣಿಸಿಕೊಳ್ಳುವ ಸಂಭಾವ್ಯತೆ.

$$p_i = \frac{f_i}{n}, fi = 1, 2, \cdots 6 \ldots (5-1)$$

ಎಂದು ಅಂದಾಜುಮಾಡಬಹುದು. ನಿಜವಾಗಿ, Pi ಯು n ಕೈವಿಸಕಗಳಲ್ಲಿ i ಗುರುತುಗಳುಳ್ಳ ಮುಖದ ಸಾಪೇಕ್ಷ ಆವರ್ತಾಂಕ.

ನಿದರ್ಶನ 5—1

ಒಂದು ಯಂತ್ರ ಉತ್ಪಾದಿಸಿದ 10,000 ವಸ್ತುಗಳ ಪೈಕಿ 50 ದೋಷಯುಕ್ತವಾಗಿದ್ದರೆ, ಆಗ ಆ ಯಂತ್ರದಿಂದ ಉತ್ಪಾದಿಸಲ್ಪಟ್ಟ ವಸ್ತು ದೋಷಯುಕ್ತವಾಗಿರುವ ಸಂಭಾವ್ಯತೆ, $\frac{50}{10000} = 0.005$ ಎಂದು ಅಂದಾಜುಮಾಡಬಹುದು.

ಮೇಲೆ ವಿವರಿಸಿದ ಅನುಭವಜನ್ಯ ವಿಧಾನವನ್ನು ಸಂಭಾವ್ಯತೆಗಳನ್ನು ಅಂದಾಜು ಮಾಡಲು ಅನೇಕ ಸಂಶೋಧನಾ ರಂಗಗಳಲ್ಲಿ ಉಪಯೋಗಿಸಲಾಗುತ್ತಿದೆ.

6. ಬರ್ನೌಲಿ[2] ಕೈವಿಸಕಗಳು (Bernoulli trials)

ಕ್ರಿಕೆಟ್ ಪಂದ್ಯವೊಂದರ ಪ್ರಾರಂಭ. ಸಾವಿರಾರು ಕ್ರಿಕೆಟ್ ಉತ್ಸಾಹಿಗಳು ಪ್ರೇಕ್ಷಕರಾಗಿ ನೆರೆದಿದ್ದಾರೆ. ಉಭಯ ತಂಡಗಳ ನಾಯಕರು ಆಟದ ಬಯಲಿನ ನಡುವಿಗೆ ಜೊತೆಯಲ್ಲಿ ನಡೆಯುತ್ತಿದ್ದಾರೆ. ಅಲ್ಲಿ ಅವರಲ್ಲೊಬ್ಬ ನಾಣ್ಯವೊಂದನ್ನು ಮೇಲಕ್ಕೆಸೆಯಲಿದ್ದಾನೆ. ನಾಣ್ಯ ನೆಲದಮೇಲೆ ಬೀಳುವಾಗ ಅದರ ಯಾವ ಮುಖ ಮೇಲೆ ಕಾಣಿಸಿಕೊಳ್ಳಲಿದೆಯೆಂದು ಇನ್ನೊಬ್ಬ ಮುಂದಾಗಿ ಹೇಳಬೇಕು. ಅವನು ಹೇಳಿದುದು ಸರಿಯಾದರೆ ಅವನು 'ಟಾಸ್' ಗೆಲ್ಲುತ್ತಾನೆ. ಸರಿಯಾಗದಿದ್ದರೆ ಸೋಲುತ್ತಾನೆ. ಎಲ್ಲೆಲ್ಲೂ ಮೌನ, ಸ್ತಬ್ಧತೆ. ಯಾವನು 'ಟಾಸ್' ಗೆಲ್ಲುವನೆಂಬ ಕುತೂಹಲ ಉತ್ಸುಕತೆ. ಫಲಿತಾಂಶದ ಅನಿಶ್ಚಿತತೆಯೇ ಈ ಕುತೂಹಲಕ್ಕೆ ಮೂಲಕಾರಣ. ನಾಣ್ಯದ ಇದೇ ಮುಖ ಮೇಲೆ ಕಾಣಿಸಿಕೊಳ್ಳುವುದೆಂದು ಮುಂದಾಗಿ ಹೇಳುವುದು ಅಸಾಧ್ಯ. ಅದೊಂದು ಯಾದೃಚ್ಛಿಕ ಘಟನೆ (random event). ನಾಣ್ಯ ತನ್ನ ಅಂಚಿನ ಮೇಲೆ ನಿಲ್ಲುವುದು ಅಥವಾ ಉರುಳುತ್ತ ಹೋಗಿ ನಾಪತ್ತೆಯಾಗುವುದು ಸಾಧ್ಯವಿಲ್ಲ ಎಂದು ತಿಳಿದರೆ, ಇಲ್ಲಿ ಉಳಿಯುವ ಸಾಧ್ಯತೆಗಳು ಎರಡೇ ಎರಡು. ಅವು ನಾಣ್ಯದ ಎರಡು ಮುಖಗಳು—ತಲೆ ಮತ್ತು ಬಾಲ (Head and Tail) ನಾಣ್ಯ ಪಕ್ಷಪಾತಿ (unbiased) ಯಾಗಿಲ್ಲದಾಗ, ಅಂದರೆ ಅದರ ಎರಡು ಮುಖಗಳು ಸಮತೂಕದಲ್ಲಿದ್ದಾಗ, ಅದರ ಮುಖಗಳು ಮೇಲೆ ಕಾಣಿಸಿಕೊಳ್ಳುವ ಸಂಭಾವ್ಯತೆಗಳು ಒಂದಕ್ಕೊಂದು ಸಮವಾಗಿರುವುವು ಎಂದು ತಿಳಿಯಬಹುದು. ಆದ್ದರಿಂದ ಯಾವುದೇ ಒಂದು ನಿರ್ದಿಷ್ಟ ಮುಖ ಮೇಲೆ ಕಾಣಿಸಿಕೊಳ್ಳುವ ಸಂಭಾವ್ಯತೆ $\frac{1}{2}$. ನಾಣ್ಯ ಪಕ್ಷಪಾತಿಯಾಗಿದ್ದಾಗ ಈ ಸಂಭಾವ್ಯತೆ $\frac{1}{2}$ ಕ್ಕಿಂತ ಭಿನ್ನವಾಗಿರುವುದು.

ಮೇಲಿನಂತೆ ಎರಡೇ ಎರಡು ಫಲಿತಾಂಶಗಳು ಸಾಧ್ಯವುಳ್ಳ ಕೈವಿಸಕಗಳ ಒಂದು ಸರಣಿಯನ್ನು ಗಮನಿಸಿ. ಒಂದು ಕೈವಿಸಕದ ಫಲಿತಾಂಶ ಇನ್ನೊಂದು ಕೈವಿಸಕದ ಫಲಿತಾಂಶದ ಮೇಲೆ ಹೊಂದಿಕೊಂಡಿರದಿದ್ದರೆ ಅವು ಸ್ವತಂತ್ರ ಕೈವಿಸಕಗಳು. ನಿದರ್ಶನಕ್ಕಾಗಿ. ಒಂದು ನಾಣ್ಯವನ್ನು ಎರಡು ಬಾರಿ ಮೇಲೆಸೆಯಲಾಗಿದೆ ಎಂದು ಭಾವಿಸೋಣ. ಎರಡನೆ ಎಸೆತದ ಫಲಿತಾಂಶ ಮೊದಲನೆ ಎಸೆತದಲ್ಲಿ ದೊರಕಿದ ಫಲಿತಾಂಶವೇನು ಎಂಬುದರ ಮೇಲೆ ಹೊಂದಿಕೊಂಡಿಲ್ಲ. ಮೊದಲನೆ ಎಸೆತದ ಫಲಿತಾಂಶ ಎರಡನೆ

---

2 ಜೇಮ್ಸ್ ಬರ್ನೌಲಿ James Bernoulli (1654-1705) ಸ್ವಿಸ್ ಗಣಿತ ವಿದ್ವಾಂಸ. ಆತನ ಉದ್ಗ್ರಂಥ ದಿ ಆರ್ಸ್ ಕನ್‌ಜೆಕ್ಟಾಂಡಿ (The Ars Conjectandi) ಅವನ ಮರಣಾನಂತರ 1713ರಲ್ಲಿ ಪ್ರಕಾಶಿಸಲ್ಪಟ್ಟಿತು.

ಪ್ರಿಸೆತದ ಫಲಿತಾಂಶದ ಮೇಲೆ ಹೊಂದಿಕೊಂಡಿರುವುದಂತೂ ಅಸಾಧ್ಯ. ಆದ್ದರಿಂದ ಈ ಪ್ರಿಸೆತಗಳು ಎರಡು ಸ್ವತಂತ್ರ ಕೈಎಕಸಗಳು. ಸಾಧ್ಯವುಳ್ಳ ಎರಡು ಫಲಿತಾಂಶಗಳ ಸಂಭಾವ್ಯತೆಗಳು ಸರಣಿಯುಲ್ಲಿರುವ ಎಲ್ಲ ಕೈಎಕಸಗಳಲ್ಲಿಯೂ ಸ್ಥಿರವಾಗಿದ್ದರೆ ಮತ್ತು ಕೈಎಸಕಗಳು ಸ್ವತಂತ್ರವಾಗಿದ್ದರೆ, ಅಂಥ ಕೈಎಸಕಗಳಿಗೆ ಬರ್ನೋಲಿ ಕೈಎಸಕಗಳು ಎಂದು ಹೆಸರು. ಒಂದು ನಾಣ್ಯವನ್ನು ಹಲವಾರು ಬಾರಿ ಮೇಲೆಸೆಯುವುದು ಬರ್ನೋಲಿ ಕೈಎಸಕಗಳಿಗೆ ಒಂದು ನಿದರ್ಶನ. ಸಾಧ್ಯವುಳ್ಳ ಎರಡು ಫಲಿತಾಂಶಗಳ ಸಂಭಾವ್ಯತೆಗಳನ್ನು p ಮತ್ತು q ಎಂದು ಸೂಚಿಸುತ್ತೇವೆ.

ಸಂಭಾವ್ಯತೆ p ಇರುವ ಫಲಿತಾಂಶವನ್ನು 'ಗೆಲುವು' (Success, S) ಮತ್ತು ಸಂಭಾವ್ಯತೆ q ಇರುವ ಫಲಿತಾಂಶವನ್ನು 'ಸೋಲು' (Failure, F) ಎಂದು ಸೂಚಿಸುವುದು ಪದ್ಧತಿ. ಕೈಎಸಕವೊಂದರ ಫಲಿತಾಂಶ ಗೆಲುವು ಅಥವಾ ಸೋಲು ಆಗಲೇ ಬೇಕಾದ ಕಾರಣ, ಸೋಲಿನ ಸಂಭಾವ್ಯತೆ $q = 1 - p$. ಅಥವಾ

$$p + q = 1 \quad . \quad . \quad . \quad -(6-1)$$

ಸರಣಿಯಲ್ಲಿರುವ ಕೈಎಸಕಗಳ ಒಟ್ಟು ಸಂಖ್ಯೆ n ಆಗಿರಲಿ. ಪ್ರತಿ ಕೈಎಸಕದಲ್ಲೂ ಫಲಿತಾಂಶ S ಅಥವಾ F ಆಗಬಹುದಾದ ಕಾರಣ, n ಕೈಎಸಕಗಳಲ್ಲಿ ದೊರಕಬಹುದಾದ ಫಲಿತಾಂಶಗಳ ಒಂದು ಮಾದರಿ ಸರಣಿಯನ್ನು ಕೆಳಗಿನಂತೆ ಸೂಚಿಸಬಹುದು.

ಕೋಷ್ಟಕ 6–1

ಕೈಎಸಕ ಸಂಖ್ಯೆ	1	2	3	4	5	. . .	$n-2$	$n-1$	n
ಫಲಿತಾಂಶ	S	S	F	S	F	. . .	F	F	S

ಕೋಷ್ಟಕ 6—1 ರಲ್ಲಿ ಪ್ರತಿಯೊಂದು ಕೋಶದಲ್ಲೂ S ಅಥವಾ F ಸೂಚಕವಿರುವುದು ಸಾಧ್ಯವಿದೆ; ಅಂದರೆ ಪ್ರತಿ ಕೋಶವನ್ನೂ ಎರಡು ರೀತಿಗಳಲ್ಲಿ ತುಂಬಿಸಬಹುದು. ಹೀಗಾಗಿ, ಸಾಧ್ಯವುಳ್ಳ ಇಂಥ ಸರಣಿಗಳ ಒಟ್ಟು ಸಂಖ್ಯೆ $2 \times 2 \times 2 \times 2 \times 2 \times \cdots \times 2 \times 2 \times 2 = 2^n$. ಕೈಎಸಕಗಳು ಸ್ವತಂತ್ರವಾಗಿರುವುದರಿಂದ, ಯಾವುದೇ ಒಂದು ನಿರ್ದಿಷ್ಟ ಸರಣಿಯ ಸಂಭಾವ್ಯತೆಯನ್ನು ಪಡೆಯಲು ಅದರಲ್ಲಿರುವ ಫಲಿತಾಂಶಗಳ ವೈಯುಕ್ತಿಕ ಸಂಭಾವ್ಯತೆಗಳನ್ನು ಗುಣಿಸಿಕೊಂಡರಾಯಿತು. ಆದ್ದರಿಂದ.

$$P(SSFSF \cdots FFS) = p \times p \times q \times p \times q \times \cdots \times q + q \times p - (6-2)$$

(ಇಲ್ಲಿ P ಸಂಭಾವ್ಯತೆಯನ್ನು ಸೂಚಿಸುತ್ತದೆ.)

ಅಂದರೆ ಯಾವುದೇ ಒಂದು ನಿರ್ದಿಷ್ಟ ಸರಣಿಯ ಸಂಭಾವ್ಯತೆ ಅದರಲ್ಲಿರುವ S ಮತ್ತು F ಸೂಚಕಗಳನ್ನು ಅನುಕ್ರಮವಾಗಿ p ಮತ್ತು q ಗಳಿಂದ ಸ್ಥಾನಾಂತರಗೊಳಿಸಿದಾಗ ಸಿಗುವ ಗುಣಲಬ್ಧ.

ಬರ್ನೌಲಿ ಕೈವಿಸಕಗಳ ಪ್ರತಿರೂಪ (model) ಒಂದು ಸೈದ್ಧಾಂತಿಕ ಚೌಕಟ್ಟು. ಯಾವುದೇ ನಿರ್ದಿಷ್ಟ ಪ್ರಯೋಗಗಳ ಫಲಿತಾಂಶಗಳು ಈ ಚೌಕಟ್ಟಿನೊಳಗೆ ಓರಣವಾಗಿ ಹೊಂದಿಕೊಳ್ಳುತ್ತವೆಯೋ, ಇಲ್ಲವೇ ಎಂಬುದನ್ನು ನಾವು ಅನುಭವದಿಂದ ತಿಳಿಯಬೇಕು. ಒಂದು ನಾಣ್ಯವನ್ನು ಹಲವಾರು ಬಾರಿ ಮೇಲೆಸೆದರೆ ದೊರೆಯುವ ಫಲಿತಾಂಶಗಳು ಈ ಚೌಕಟ್ಟಿನೊಳಗೆ ಒಪ್ಪವಾಗಿ ಹೊಂದಿಕೊಳ್ಳುತ್ತವೆ ಎಂದು ಪ್ರಾಯೋಗಿಕ ಅನುಭವದಿಂದ ತಿಳಿದಿದೆ. ಇಂಥ ಪ್ರಯೋಗಗಳ ಬಗ್ಗೆ ಕೆ. ಮಾರ್ಬ್ (K. Marbe) ಎಂಬ ತತ್ವಶಾಸ್ತ್ರಜ್ಞನು ವೈಜ್ಞಾನಿಕವಾಗಿ ಒಪ್ಪಲು ಅಸಾಧ್ಯವಾದ ಒಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾನೆ. 17 ತಲೆಗಳ ಒಂದು ಅವಿರತ ಸರಣಿಯ ಬಳಿಕ ಬಾಲದ ಸಂಭಾವ್ಯತೆ ಅಧಿಕಗೊಳ್ಳುವುದಂತೆ. ಅಂದರೆ ನಾಣ್ಯವನ್ನು ಮೇಲೆಸೆಯುವ ಪ್ರಯೋಗದಲ್ಲಿ 17 ತಲೆಗಳು ಒಂದರ ಹಿಂದೊಂದು ದೊರಕಿದರೆ ಮುಂದಿನ (ಅಂದರೆ, 18ನೇ) ಮೇಲೆಸತದಲ್ಲಿ ಬಾಲ ಕಾಣಿಸಿಕೊಳ್ಳುವ ಸಂಭಾವ್ಯತೆ ಹೆಚ್ಚು ಎಂದು. ಭೌತ ನಾಣ್ಯಗಳಲ್ಲಿರಬಹುದಾದ ನ್ಯೂನತೆಗಳಿಗೂ ಈ ತರ್ಕಕ್ಕೂ ಏನೂ ಸಂಬಂಧವಿಲ್ಲ. ತಲೆಯನ್ನೇ ಒಂದರ ಹಿಂದೊಂದು ಹದಿನೇಳು ಬಾರಿ ತೋರಿಸಿದ ನಾಣ್ಯ ಮುಂದಿನ ಬಾರಿಯಾದರೂ ಬಾಲ ತೋರಿಸದೆ ಇರದು ಎಂದು ಜನಸಾಮಾನ್ಯರೂ ನಂಬಬಹುದು. ಅದು ಪ್ರಕೃತಿಗೆ ಜ್ಞಾಪಕಶಕ್ತಿ ಇದೆ; 17 ತಲೆಗಳನ್ನು ಒಂದರ ಹಿಂದೊಂದು ಅನುಗ್ರಹಿಸಿದ ಪ್ರಕೃತಿ ಮುಂದಿನ ಬಾರಿ (ಬಾಲಕ್ಕೆ ತೀರ ಅನ್ಯಾಯವಾಗದಂತೆ!) ಬಾಲವನ್ನು ಅನುಗ್ರಹಿಸುವ ಸಂಭಾವ್ಯತೆ ಹೆಚ್ಚು – ಎಂಬ ನಂಬಿಕೆಯ ಮೇಲೆ ಆಧಾರಿತವಾಗಿದೆ. ಅಂದರೆ, ನಮ್ಮ ಪರಿಭಾಷೆಯಲ್ಲಿ, ಕೈವಿಸಕಗಳು ಪರಸ್ಪರ ಸ್ವತಂತ್ರ ಎಂಬುದನ್ನು ಅಲ್ಲಗಳೆದಂತಾಯಿತು. ತಾರ್ಕಿಕವಾಗಿ ಮಾರ್ಬನ ಸಿದ್ಧಾಂತವನ್ನು ಖಂಡಿಸುವುದು ಅಸಾಧ್ಯ; ಆದರೆ ಈ ಸಿದ್ಧಾಂತಕ್ಕೆ ಅನುಭವ ಜನ್ಯ ಬೆಂಬಲವಿಲ್ಲದಿರುವುದರಿಂದ ಅದನ್ನು ತಿರಸ್ಕರಿಸಬಹುದು.

7. ದ್ವಿಪದ ಸಂಭಾವ್ಯತಾ ವಿತರಣೆ

n ಬರ್ನೌಲಿ ಕೈವಿಸಕಗಳ ಒಂದು ಸರಣಿಯಲ್ಲಿ ದೊರೆಯುವ ಗೆಲುವುಗಳ ಒಟ್ಟು ಸಂಖ್ಯೆಯ ಮೇಲೆ ನಮ್ಮ ಗಮನ ಹೆಚ್ಚಾಗಿ ಕೇಂದ್ರೀಕೃತವಾಗಿರುತ್ತದೆ. ಆ ಗೆಲುವುಗಳು ಯಾವ ಕ್ರಮದಲ್ಲಿ ದೊರಕಿದವು ಎಂಬುದು ಗೌಣ. n ಕೈವಿಸಕಗಳಲ್ಲಿ ಗೆಲುವುಗಳ ಒಟ್ಟು ಸಂಖ್ಯೆ X ಎಂದಿರಲಿ. X ನ ಮೌಲ್ಯ $0, 1, 2, \cdots, x, \cdots, n$ ಆಗಬಹುದು. X ಒಂದು ವಿರತ (discrete) ಯಾದೃಚ್ಛಿಕ ಚರ. ಈ ಬೇರೆ ಬೇರೆ ಮೌಲ್ಯಗಳನ್ನು X ಪಡೆಯುವ ಸಂಭಾವ್ಯತೆಗಳನ್ನು ನಿರ್ಧರಿಸುವುದು ನಮ್ಮ ಮೊದಲನೆ ಸಮಸ್ಯೆ.

ನಿದರ್ಶನ 7-1

ನಾಲ್ಕು ಬರ್ನೋಲಿ ಕೈ ಎಸಕಗಳಲ್ಲಿ ಸರಿಯಾಗಿ ಎರಡು ಗೆಲುವುಗಳು ಈ ಕೆಳಗಿನ 6 ವಿಭಿನ್ನ ರೀತಿಗಳಲ್ಲಿ ದೊರೆಯಬಹುದು.

SSFF	SFSF	SFFS
FSSF	FSFS	FFSS

ಚಿತ್ರ 7—1

ಪ್ರತಿಯೊಂದು ರೀತಿಯಲ್ಲೂ ಎರಡು S ಮತ್ತು ಎರಡು F ಪ್ರತೀಕಗಳು ಇರುವುದರಿಂದ, ಪ್ರತಿಯೊಂದು ರೀತಿಯು ಸಂಭಾವ್ಯತೆಯೂ p^2q^2. ಆದ್ದರಿಂದ 4ಕೈಎಸಕಗಳಲ್ಲಿ ಸರಿಯಾಗಿ ಎರಡು ಗೆಲುವುಗಳು ದೊರಕುವ ಸಂಭಾವ್ಯತೆ $6p^2q^2$.

"n ಕೈ ಎಸಕಗಳಲ್ಲಿ x ಗೆಲುವುಗಳು ಮತ್ತು ಉಳಿದ $(n-x)$ ಸೋಲುಗಳು" ಎಂಬ ಘಟನೆಗೂ, n ಕೋಶಗಳ ಪೈಕಿ x ಕೋಶಗಳಲ್ಲಿ "S" ಮತ್ತು ಉಳಿದ $(n-x)$ ಕೋಶಗಳಲ್ಲಿ "F" ಪ್ರತೀಕಗಳನ್ನು (ಕೋಷ್ಟಕ 6–1) ಬರೆಯುವುದಕ್ಕೂ ಒಂದಕ್ಕೊಂದು ಹೊಂದಾಣಿಕೆ (one–to–one correspondence) ಇದೆ. ಮೇಲೆ ಹೇಳಿರುವ ಘಟನೆ $\frac{n(u-1)\cdots(n-x+1)}{1\cdot 2\cdot\cdots x}$ ರೀತಿಗಳಲ್ಲಿ ನಡೆಯುವುದು ಸಾಧ್ಯವಿದೆ. ಈ ಸಂಖ್ಯೆಯನ್ನು $\binom{n}{x}$ ಎಂದು ಸೂಚಿಸುತ್ತೇವೆ. ಪ್ರತಿಯೊಂದು ರೀತಿಯಲ್ಲೂ x S ಗಳು ಮತ್ತು $(n-x)$ F ಗಳು ಇರುವುದರಿಂದ ಪ್ರತಿಯೊಂದು ರೀತಿಯು ಸಂಭಾವ್ಯತೆ p^xq^{n-x}. ಆದ್ದರಿಂದ n ಬರ್ನೋಲಿ ಕೈಎಸಕಗಳಲ್ಲಿ ಸರಿಯಾಗಿ $x(0\leq x\leq n)$ ಗೆಲುವುಗಳು ದೊರೆಯುವ ಸಂಭಾವ್ಯತೆ $\binom{n}{x}$ p^xq^{n-x}. ಇದರಿಂದಾಗಿ ಕೆಳಗಿನ ಪ್ರಮೇಯ ದೊರಕುತ್ತದೆ:

$b(x, n, p)$ ಎಂಬುದು, ಪ್ರತಿ ಕೈಎಸಕದಲ್ಲೂ ಗೆಲುವಿನ ಸಂಭಾವ್ಯತೆ p ಮತ್ತು ಸೋಲಿನ ಸಂಭಾವ್ಯತೆ $q=(1-p)$ ಇರುವ n ಬರ್ನೋಲಿ ಕೈಎಸಕಗಳಲ್ಲಿ x ಗೆಲುವುಗಳು ಮತ್ತು $(n-x)$ ಸೋಲುಗಳು $(0\leq x\leq n)$ ದೊರಕುವ ಸಂಭಾವ್ಯತೆಯನ್ನು ಸೂಚಿಸಿದರೆ, ಆಗ

$$b(x, n, p) = \binom{n}{x} p^xq^{n-x}; \quad x=0, 1, 2, \cdots, n \qquad ..(7-1)$$

X ಎಂಬುದು ದ್ವಿಪದ ಸಂಭಾವ್ಯತಾ ವಿತರಣೆಯುಳ್ಳ ಚರ.

$p(X=x) = b(x, n, p)$. (7–1)ರಲ್ಲಿ $x=0, 1, 2, \cdots, n$ ಎಂದು ಆದೇಶಿಸಿದಾಗ ಅನುಕ್ರಮವಾಗಿ $X=0, 1, 2, \cdots, n$ ಆಗುವ ಸಂಭಾವ್ಯತೆಗಳು ದೊರಕುತ್ತವೆ. ಆದ್ದರಿಂದ (7–1) Xನ ಸಂಭಾವ್ಯತಾ ವಿತರಣೆಯನ್ನು ಕೊಡುತ್ತದೆ. n ಮತ್ತು p (ಅಥವಾ q) ವಿತರಣೆಯ ಪ್ರಾಚಲ (parameter) ಗಳು ಕೆಳಗಿನ ಲಕ್ಷಣಗಳುಳ್ಳ ಕೈ ಎಸಕಗಳ ಸರಣಿಗೆ ದ್ವಿಪದ ವಿತರಣೆ ಅನ್ವಯಿಸುತ್ತದೆ.

(i) ಪ್ರತಿ ಕೈಎಸಕದ ಫಲಿತಾಂಶವನ್ನೂ "ಗೆಲುವು" ಅಥವಾ "ಸೋಲು" ಎಂದು ದ್ವಿವಿಧವಾಗಿ ವರ್ಗೀಕರಿಸಬಹುದು.

(ii) ಗೆಲುವಿನ ಸಂಭಾವ್ಯತೆ (p) ಎಲ್ಲ ಕೈಎಸಕಗಳಲ್ಲೂ ಸ್ಥಿರವಾಗಿರುವುದು.

(iii) ಕೈಎಸಕಗಳು ಪರಸ್ಪರ ಸ್ವತಂತ್ರವಾಗಿರುವುವು.

(iv) ಸರಣಿಯಲ್ಲಿರುವ ಕೈಎಸಕಗಳ ಒಟ್ಟು ಸಂಖ್ಯೆ (4) ಪೂರ್ವ ನಿಶ್ಚಿತವಾಗಿರುವುದು.

ಟಿಪ್ಪಣಿ:

(i) n ಬರ್ನೋಲಿ ಕೈಎಸಕಗಳಲ್ಲಿ ಎಲ್ಲ ಫಲಿತಾಂಶಗಳೂ ಗೆಲುವುಗಳಾಗುವ ಸಂಭಾವ್ಯತೆ p^n; ಎಲ್ಲ ಸೋಲುಗಳಾಗುವ ಸಂಭಾವ್ಯತೆ q^n ಮತ್ತು ಅತ್ಯಂತ ಕಡಿಮೆಯೆಂದರೆ ಒಂದು ಗೆಲುವು ದೊರಕುವ ಸಂಭಾವ್ಯತೆ $(1-q^n)$.


(ii) $(q+p)^n$ ಎಂಬುದರ ದ್ವಿಪದ ವಿಸ್ತರಣೆ (binomial expansion) ಕೆಳಗಿನಂತಿದೆ:

$$(q+p)^n = q^n + \binom{n}{1} q^{n-1}p + \binom{n}{2} q^{n-2}p^2 + \cdots + \binom{u}{x} q^{n-x}$$
$$p^x + \cdots p^u = b(o,n,p) + b(1,n,p) + b(2,n,p) + \cdots +$$
$$b(x,n,p) + \cdots + b(n,n,p)$$


7–1 ರಲ್ಲಿರುವ ಸಂಭಾವ್ಯತಾ ವಿತರಣೆಗೆ "ದ್ವಿಪದ" ಎಂಬ ವಿಶೇಷಣವನ್ನು ಬಳಸಲು ಇದೇ ಕಾರಣ.

(iii) $\sum_{x=0}^{n} b(x,n,p) = (q+p)^n = 1^n = 1$

ಎಂಬುದನ್ನು ಗಮನಿಸಿ.



ಚಿತ್ರ 8 −1. (ಕೋಷ್ಟಕ 8 −1 ರ ದತ್ತಾಂಶಗಳು)



ಚಿತ್ರ 8 – 2 (ಕೋಷ್ಟಕ 8 – 2 ರ ದತ್ತಾಂಶಗಳು)

(iv) n ಮತ್ತು p ಗಳ ವಿವಿಧ ಬೆಲೆಗಳಿಗೆ ಅನುಸಾರವಾಗಿ $b(x,n,p)$ ಯ ಬೆಲೆಯನ್ನು ಕೊಡುವ ಅನೇಕ ಮುದ್ರಿತ ಕೊಷ್ಟಕ[3]ಗಳಿವೆ.

8. ದ್ವಿಪದ ನಿದರ್ಶನಗಳು

(*a*) $n=4$, $p=0.1$ ಆಗಿರುವಾಗ ದ್ವಿಪದ ಸಂಭಾವ್ಯತಾ ವಿತರಣೆ ಕೆಳಗಿನಂತಿರುವುದು:

ಕೋಷ್ಟಕ 8–1

x	0	1	2	3	4	ಮೊತ್ತ
$b(x,n,p)$	0.6561	0.2916	0.0486	0.0036	0.0001	1.0000

ಆರಂಭದಲ್ಲೇ ಹೆಚ್ಚಿನ ಸಂಭಾವ್ಯತೆ ಶೇಖರವಾಗಿರುವುದನ್ನು ಗಮನಿಸಿ (ಚಿತ್ರ 8–1). ಇಲ್ಲಿ ವಿತರಣೆ ಧನ ಅಸಮಾಂಗ (Positively skew) ವಾಗಿದೆ $p < 0{\cdot}5$ ಆಗಿರುವುದು ಇದಕ್ಕೆ ಕಾರಣ. $p=0.5$ ಆದರೆ ಆಗ ವಿತರಣೆ ಸಮಾಂಗ (Symmetrical) ಆಗಿರುವುದು. $p > 0.5$ ಆದರೆ ಆಗ ವಿತರಣೆ ಋಣ ಅಸಮಾಂಗ (negatively skew) ವಾಗಿರುವುದು.

(*b*) ಹನ್ನೆರಡು ದಾಳಗಳನ್ನು 4096 ಬಾರಿ ಉರುಳಿಸಲಾಯಿತು. ಆರು ಗುರುತುಗಳಿರುವ ಮುಖ ಮೇಲೆ ಕಾಣಿಸಿಕೊಂಡದ್ದನ್ನು "ಗೆಲುವು" ಎಂದು ಪರಿಗಣಿಸಲಾಯಿತು. ಹೀಗಾಗಿ, $n=12$ ಮತ್ತು $p = 1/6$ (ದಾಳಗಳನ್ನು ಪಕ್ಷಪಾತಿಗಳಲ್ಲವೆಂದು ತಿಳಿದು). ದೊರೆತ ಫಲಿತಾಂಶಗಳು ಕೋಷ್ಟಕ 8–2 ರಲ್ಲಿ ಇವೆ.

ಕೋಷ್ಟಕ 8–2

ಗೆಲುವುಗಳ ಸಂಖ್ಯೆ (x)	0	1	2	3	4	5	6	≥ 7	ಮೊತ್ತ
x ಗೆಲುವುಗಳಿದ್ದ ಕೈ ಎಸೆತಗಳ ಆವರ್ತಾಂಕ (f)	447	1145	1181	796	380	115	24	8	4096

3 Tables of cumulative binomial probability distribution by the Harvard Computation Laboratary, 1955 ಒಂದು ಅಂಥ ಕೋಷ್ಟಕ.

ಈ ದತ್ತಾಂಶಗಳು ದ್ವಿಪದ ವಿತರಣೆಯ ಚೌಕಟ್ಟಿನೊಳಗೆ ಹೊಂದಿಕೊಳ್ಳುತ್ತವೆ ಎಂದು ತಿಳಿದರೆ ಆಗ x (ಗೆಲುವುಗಳ ಸಂಖ್ಯೆ) ಬೇರೆ ಬೇರೆ ಮೌಲ್ಯಗಳನ್ನು ಪಡೆಯುವ ಸಂಭಾವ್ಯತೆಗಳು $(5/6+1/6)^{12}$ ರ ದ್ವಿಪದ ವಿಸ್ತರಣೆಯ ಅನುಕ್ರಮ ಪದಗಳು. ನಿರೀಕ್ಷಿತ ಅವರ್ತಾಂಕ (Expected frequency) ಗಳನ್ನು 4096 $(5/6+1/6)^{12}$ ಕೊಡುತ್ತದೆ (ಕೋಷ್ಟಕ 8–3).

ಕೋಷ್ಟಕ 8–3

ಗೆಲುವುಗಳ ಸಂಖ್ಯೆ (x)	0	1	2	3	4	5	6	≥7	ಮೊತ್ತ
ನಿರೀಕ್ಷಿತ ಅವರ್ತಾಂಕ (e)	459	1102	1212	808	364	116	27	8	4096

ನಿರೀಕ್ಷಿತ ಅವರ್ತಾಂಕ (e) ಮತ್ತು ಅನುರೂಪವಾದ ದೊರೆತ ಅವರ್ತಾಂಕ (f) ಗಳಿಗಿರುವ ವ್ಯತ್ಯಾಸಗಳು ಲಕ್ಷ್ಯಾರ್ಹವೇ ಎಂದು ತಿಳಿಯಲು ಕೈವರ್ಗ ಪರೀಕ್ಷೆ (Chi square test) ಯನ್ನು ಉಪಯೋಗಿಸಿಕೊಳ್ಳಬಹುದು.

$$x^2 \text{ (ಕೈವರ್ಗ [4])} = \sum_{i=1}^{k}\left[\frac{(f_i-e_i)^2}{e_i}\right] \quad . \quad . \quad . \quad (8\text{–}1)$$

k ಅನಂತವನ್ನು ಸಮೀಪಿಸಿದಂತೆ ಮೇಲಿನ ಚರದ ಸಂಭಾವ್ಯತಾ ವಿತರಣೆ ಕೈವರ್ಗ ವಿತರಣೆಗೆ ಅಭಿಸರಿಸುವುದು ಎಂದು ತಿಳಿದಿದೆ. ಈ ದೃಷ್ಟಿಯಿಂದ x^2 ದ ಸಂಭಾವ್ಯತಾ ವಿತರಣೆ ಸರಿಸುಮಾರು ಕೈವರ್ಗ ವಿತರಣೆ ಎಂದು ತಿಳಿಯಬಹುದು. ಅದರ ಸ್ವಾತಂತ್ರ್ಯಾಂಕ ಗಳು ($k-s-1$).

---

4 ಕೈವರ್ಗ (ಪ್ರತೀಕ x^2) ಎಂಬುದು ಸಂಖ್ಯಾಕಲನಶಾಸ್ತ್ರ ನಮಗೆ ತಿಳಿಸುವ ಬಹಳ ಉಪಯುಕ್ತವಾದ ಅವಿಚ್ಛಿನ್ನ (Continuous) ಸಂಭಾವ್ಯತಾ ಚರವೊಂದನ್ನು ಸೂಚಿಸುತ್ತದೆ. ಕಾರ್ಲ್ ಪಿಯರ್‌ಸನ್ (Karl Pearson, 1857—1936) ಅವರು ಇದರ ವಿತರಣೆಯನ್ನು ಕಂಡುಹಿಡಿದರು : $x_i, i = 1, 2, \ldots, k$ ಗಳು ಸ್ವತಂತ್ರ ಪ್ರಸಾಮಾನ್ಯ ಚರಗಳು (independent normal variates) ಆಗಿದ್ದರೆ ಮತ್ತು μ_i, σ_i^2 ಗಳು ಅನುಕ್ರಮವಾಗಿ x_i ಯ ನಿರೀಕ್ಷೆ (expected value) ಮತ್ತು ಚಲನೀಯ (Variance) ಗಳಾದರೆ, ಆಗ

$$x^2 = \sum_{i=1}^{k}\left(\frac{x_i - \mu_i}{\sigma_i}\right)^2$$

ಉಪಯೋಗಿಸಿಕೊಂಡ ಸ್ವತಂತ್ರ ಪ್ರಸಾಮಾನ್ಯ ಚರಗಳ ಸಂಖ್ಯೆ (k) ಯನ್ನು ಕೈವರ್ಗ ಚರದ ಸ್ವಾತಂತ್ರ್ಯಾಂಕಗಳು (degrees of freedom) ಎನ್ನುತ್ತೇವೆ.

ಇಲ್ಲಿ $k =$ ಕ್ಲಾಸುಗಳ ಒಟ್ಟು ಸಂಖ್ಯೆ

$s =$ ದತ್ತಾಂಶಗಳಿಂದ ಅಂದಾಜು ಮಾಡಿದ ಪ್ರಾಚಲಗಳ ಸಂಖ್ಯೆ. ಉದಾಹರಣೆಗೆ p ಯ ಮೌಲ್ಯ ತಿಳಿದಿಲ್ಲದಿದ್ದರೆ, $np = \frac{\sum fx}{\sum f}$ ಎಂದು ಅಂದಾಜು ಮಾಡಬಹುದು. ಆಗ $s=1$.

ಬೇರೆ ಬೇರೆ ಸಾತಂತ್ರ್ಯಾಂಕಗಳಿಗೆ ಅನುರೂಪವಾದ ಕೈವರ್ಗದ ಮೌಲ್ಯವನ್ನು ಕೊಡುವ ಹಲವು ಮುದ್ರಿತ ಕೋಸ್ಟಕ[5]ಗಳಿವೆ. ಯಾದೃಚ್ಛಿಕ ಪ್ರತಿಚಯನ (random sampling) ನಲ್ಲಿ ದೊರಕಬಹುದಾದ ಕೈವರ್ಗದ ಮೌಲ್ಯ ಕೋಷ್ಟಕ ಮೌಲ್ಯವನ್ನು ಮೀರಿಸುವ ಸಂಭಾವ್ಯತೆಯನ್ನು ಈ ಕೋಷ್ಟಕಗಳು ಕೊಡುತ್ತವೆ. ಅಂಥ ಸಂಭಾವ್ಯತೆ 0.05 ಆದರೆ ಕೈವರ್ಗದ ಕೋಷ್ಟಕ ಮೌಲ್ಯವನ್ನು $x^2_{0.95}$ ಎಂದು ಸೂಚಿಸುತ್ತೇವೆ. ದತ್ತಾಂಶಗಳಿಂದ ರಚಿತ ಕೈವರ್ಗದ ಮೌಲ್ಯ $x^2_{0.95}$ನ್ನು ಮೀರಿಸಿದರೆ ಆಗನಿರೀಕ್ಷಿತ ಹಾಗೂ ದೊರೆತ ಆವರ್ತಾಂಕಗಳ ವ್ಯತ್ಯಾಸಗಳು, 5% ಲಕ್ಷ್ಯಾರ್ಹಮಟ್ಟದಲ್ಲಿ (5% level of significance) ಲಕ್ಷ್ಯಾರ್ಹವೆಂದು ತಿಳಿಯಬಹುದು.

ಮೇಲಿನ ನಿದರ್ಶನದಲ್ಲಿ $x^2=5.811$, $k=8$, ಯಾವ ಪ್ರಚಾಲವನ್ನೂ ದತ್ತಾಂಶಗಳಿಂದ ಅಂದಾಜು ಮಾಡದಿರುವುದರಿಂದ $s=0$. ಹೀಗಾಗಿ, ಸ್ವಾತಂತ್ರ್ಯಾಂಕಗಳು 7. ಕೋಷ್ಟಕ ಮೌಲ್ಯ $x^2_{0.95}=14.07$. ಆದ್ದರಿಂದ ನಿರೀಕ್ಷಿತ ಮತ್ತು ದೊರೆತ ಆವರ್ತಾಂಕಗಳ ನಡುವಿನ ವ್ಯತ್ಯಾಸ ಲಕ್ಷ್ಯಾರ್ಹವೆಂದು (5% ಮಟ್ಟದಲ್ಲಿ) ಹೇಳಲು ಬಾರದು. ಅಂದರೆ, ಸ್ಥೂಲವಾಗಿ ದತ್ತಾಂಶಗಳು $n=12$, $p=1/6$ ಇರುವ ದ್ವಿಪದ ವಿತರಣೆಯು ಚೌಕಟ್ಟಿನೊಳಗೆ ಓರಣವಾಗಿ ಹೊಂದಿಕೊಳ್ಳುತ್ತವೆ (ಚಿತ್ರ 8–2).

(c) **ಚುಚ್ಚುಮದ್ದುಗಳ ಪರೀಕ್ಷೆ:** ಒಂದು ನಿರ್ದಿಷ್ಟ ರೋಗ ಸಾಮಾನ್ಯವಾಗಿ 25% ಪ್ರಾಣಿಗಳಿಗೆ ತಗಲುವುದು ಎಂದು ಭಾವಿಸೋಣ. ಅಂದರೆ ಯಾವುದೇ ಒಂದು ಪ್ರಾಣಿಗೆ ಆ ರೋಗ ತಗಲುವ ಸಂಭಾವ್ಯತೆ 0.25; ತಗಲದಿರುವ ಸಂಭಾವ್ಯತೆ $1-0.25=0.75$. ಹೊಸ ಚುಚ್ಚುಮದ್ದೊಂದರ ಉಪಯುಕ್ತತೆಯನ್ನು ಪರೀಕ್ಷಿಸಲು

---

5 Fisher R. A. and yates F., Statistical Tables for Biological, Agricultural and Medical Research 3rd ed. Oliver and Boyd, 1948 — ಅಂಥ ಕೋಷ್ಟಕವನ್ನೊಳಗೊಂಡಿದೆ. ಗಣಿತೀಯ ಸಂಖ್ಯಾಕಲನಶಾಸ್ತ್ರದ ಹೆಚ್ಚಿನ ಪಠ್ಯಪುಸ್ತಕಗಳು ಈ ಕೋಷ್ಟಕವನ್ನು ಕೊಡುತ್ತವೆ.

ಅದನ್ನು n ರೋಗರಹಿತ ಪ್ರಾಣಿಗಳಿಗೆ ಪ್ರಯೋಗಿಸಬಹುದು. ಪ್ರಯೋಗದ ಫಲಿತಾಂಶವನ್ನು ಅಧ್ಯಯಿಸುವ ಬಗೆ ಹೇಗೆ? ಚುಚ್ಚುಮದ್ದು ಸಂಪೂರ್ಣ ನಿರುಪಯುಕ್ತವಾಗಿದ್ದರೆ, ಪ್ರಯೋಗಕ್ಕೆ ಒಳಪಡಿಸಿರುವ n ಪ್ರಾಣಿಗಳ ಪೈಕಿ ಸರಿಯಾಗಿ x ಪ್ರಾಣಿಗಳಿಗೆ ರೋಗ ತಗಲದಿರುವ ಸಂಭಾವ್ಯತೆ $b(x, n, 0.75)$ ಎಂದು ತಿಳಿಯಬಹುದು. $n = x = 10$ ಆಗಿದ್ದರೆ, ಯಾವ ಪ್ರಾಣಿಗೂ ರೋಗ ತಗಲದಿರುವ ಸಂಭಾವ್ಯತೆ $(0.75)^{10}$. ಇದರ ಸರಿಸುಮಾರು ಮೌಲ್ಯ 0.056. $n = x = 12$ ಆಗಿದ್ದರೆ ಈ ಮೌಲ್ಯ ಸರಿಸುಮಾರು 0.032. ಈ ಸಂಭಾವ್ಯತೆಗಳು ಸಾಕಷ್ಟು ಚಿಕ್ಕವು ಎಂಬುದನ್ನು ಗಮನಿಸಿ. ಆದ್ದರಿಂದ, ಚುಚ್ಚುಮದ್ದು ಸಂಪೂರ್ಣ ನಿರುಪಯುಕ್ತವಾಗಿದ್ದಲ್ಲಿ, ಯಾವ ಪ್ರಾಣಿಗೂ ರೋಗ ತಗಲದಿರುವುದು ಅಪರೂಪ. ಹೀಗಾಗಿ, ಪ್ರಯೋಗಕ್ಕೆ ಒಳಪಟ್ಟ ಹತ್ತು ಅಥವಾ ಹನ್ನೆರಡು ಪ್ರಾಣಿಗಳ ಪೈಕಿ ಯಾವ ಪ್ರಾಣಿಗೂ ಆ ರೋಗ ತಗಲಲಿಲ್ಲವಾದರೆ ಬಹಳ ಕಡಿಮೆ ಸಂಭಾವ್ಯತೆಯ ಘಟನೆ (ಅಪರೂಪವಾದ ಘಟನೆ) ನಡೆದಂತಾಯಿತು. ಈ ವಿದ್ಯಮಾನವನ್ನು ಚುಚ್ಚುಮದ್ದು ಪರಿಣಾಮಕಾರಿ ಎಂಬುದರ ಸೂಚಕವಾಗಿ ತೆಗೆದುಕೊಳ್ಳಬಹುದು.

(d) ರಕ್ತ ಒತ್ತಡದ ಪರೀಕ್ಷೆ: ಮನುಷ್ಯದೇಹದಲ್ಲಿ ರಕ್ತದ ಒತ್ತಡ ಮಿತಿ ಮೀರಿ ಹೆಚ್ಚಾಗುವುದು ಅಥವಾ ಕಡಿಮೆಯಾಗುವುದು (ಒಳಗಿರುವ) ಜೀವಕ್ಕೆ ಅಪಾಯದ ಚಿಹ್ನೆ. ಆರೋಗ್ಯವಂತನ ರಕ್ತದ ಒತ್ತಡ ಹೃದಯ ಸಂಕುಚಿತವಾಗಿರುವಾಗ (systolic pressure) 100–140 ಮತ್ತು ಹೃದಯ ವಿಕಸಿತವಾಗಿರುವಾಗ (diastolic pressure) 55–80 ಮಾನಗಳ (ಪಾದರಸದ ಮಿ. ಮೀ.) ಪರಿಮಿತಿಗಳಲ್ಲಿ ಇರಬೇಕು. ರಕ್ತದ ಒತ್ತಡದ ಮೇಲೆ ಒಂದು ಹೊಸ ಔಷಧದ ಪ್ರಭಾವವನ್ನು ತಿಳಿಯಬೇಕಾಗಿದೆ. ಅದಕ್ಕಾಗಿ n ವ್ಯಕ್ತಿಗಳ ರಕ್ತದ ಒತ್ತಡಗಳನ್ನು ಆ ಔಷಧದ ಸೇವನೆಯ ಮೊದಲು ಮತ್ತು ಸೇವನೆಯ ಬಳಿಕ ಅಳೆಯಲಾಗಿದೆ. ಅವುಗಳ ಮೌಲ್ಯಗಳು ಅನುಕ್ರಮವಾಗಿ $x_1, x_2, \cdots\cdots x_n$ ಮತ್ತು $y_1, y_2, \cdots\cdots, y_n$. $y_i < x_i$ ಆಗಿದ್ದರೆ ಕೈಎಸಕ i–ಯ ಫಲಿತಾಂಶ ಗೆಲುವು. $y_i > x_i$ ಆಗಿದ್ದರೆ ಫಲಿತಾಂಶ ಸೋಲು ಎನ್ನೋಣ. ಅನುಕೂಲತೆಗಾಗಿ. ನಿಖರವಾಗಿ $x_i = y_i$: ಆಗಿರುವುದು ಸಾಧ್ಯವಿಲ್ಲ ಎಂದು ಭಾವಿಸೋಣ. ಆ ಔಷಧ ರಕ್ತದ ಒತ್ತಡದ ಮೇಲೆ ಪ್ರಭಾವ ಬೀರದಿದ್ದರೆ ನಮ್ಮ ಪ್ರಯೋಗ $p = 0.5$ ಇರುವ n ಬರ್ನೋಲಿ ಕೈಎಸಕಗಳ ಒಂದು ಸರಣಿ. ಸೋಲುಗಳಿಗಿಂತ ಗೆಲುವುಗಳ ಸಂಖ್ಯೆಯದೇ ಮೇಲುಗೈ ಯಾದರೆ ಅದನ್ನು ರಕ್ತದ ಒತ್ತಡವನ್ನು ಇಳಿಸಲು ಔಷಧ ಸಹಕಾರಿ ಎಂಬುದರ ಸೂಚಕವಾಗಿ ತೆಗೆದುಕೊಳ್ಳಬಹುದು. ಗೆಲುವುಗಳ ಸಂಖ್ಯೆ ಹೆಚ್ಚಾದಷ್ಟು ಔಷಧದ ಸಾಮರ್ಥ್ಯಕ್ಕೆ ಪುರಾವೆ ಬಲವಾಗುವುದು.

(e) ವಿದ್ಯುಚ್ಛಕ್ತಿ ವಿತರಣೆಯ ಸಮಸ್ಯೆ: $n=10$ ಬಳಕೆದಾರರು ವಿದ್ಯುಚ್ಛಕ್ತಿಯನ್ನು ಆಗಾಗ ಉಪಯೋಗಿಸುವವರಿದ್ದಾರೆ. ಯಾವುದೇ ಒಂದು ಕಾಲದಲ್ಲಿ ಇರಬಹುದಾದ ಶಕ್ತಿಯ ಒಟ್ಟು ಬೇಡಿಕೆಯನ್ನು ಅಂದಾಜುಮಾಡ ಬೇಕಾಗಿದೆ. ಒಬ್ಬ ಬಳಕೆದಾರ ಒಂದು ಗಂಟೆಯ ಅವಧಿಯಲ್ಲಿ 12 ಮಿನಿಟುಗಳಷ್ಟು ಶಕ್ತಿಯ ಉಪಯೋಗ ಮಾಡುತ್ತಾನಾದರೆ, ಯಾವುದೇ ಒಂದು ಸಮಯದಲ್ಲಿ ಅವನಿಗೆ ಒಂದು ಮಾನ ಶಕ್ತಿ ಬೇಕಾಗುವ ಸಂಭಾವ್ಯತೆಯನ್ನು $p=\frac{12}{60}\left(=0{\cdot}20\right)$ ಎಂದು ಅಂದಾಜುಮಾಡಬಹುದು. ಈ ಪರಿಸರದಲ್ಲಿ ಏಳು ಅಥವಾ ಅದಕ್ಕಿಂತ ಹೆಚ್ಚು ಬಳಕೆದಾರರು ಏಕಕಾಲದಲ್ಲಿ ಶಕ್ತಿಯ ಉಪಯೋಗ ಮಾಡಿಕೊಳ್ಳುವ ಸಂಭಾವ್ಯತೆ $b(7,10..20)+b(8,10,.20)+b(9,10,.20)+b(10,10,.20)=0.000864$.

ಅಂದರೆ ವಿದ್ಯುತ್ ಸರಬರಾಜನ್ನು 6 ಮಾನಗಳಿಗೆ ಸರಿಯಾಗಿ ಹೊಂದಿಸಿದ್ದರೆ ಬೇಡಿಕೆ ಸರಬರಾಜನ್ನು ಮೀರಿಸುವ ಸಂಭಾವ್ಯತೆ (probability of overload) 0.00086...... ಇದು ಬಹಳ ಚಿಕ್ಕ ಸಂಖ್ಯೆ ಎಂಬುದನ್ನು ಗಮನಿಸಿ. ಹೀಗಾಗಿ. ಬೇಡಿಕೆ ಸರಬರಾಜನ್ನು ಮೀರಿಸುವುದು ಬಹಳ ಅಪರೂಪದ ವಿದ್ಯಮಾನ. ಅಂಥ ವಿದ್ಯಮಾನವನ್ನು $\frac{1}{0.00086}=1157$ ಮಿನಿಟುಗಳಲ್ಲಿ ಒಂದು ಮಿನಿಟು (ಅಥವಾ ಸರಿಸುಮಾರು 20 ಗಂಟೆಗಳಲ್ಲಿ ಒಂದು ಮಿನಿಟು) ಮಾತ್ರ ನಿರೀಕ್ಷಿಸಬಹುದು. ಇದೇ ರೀತಿ 8 ಅಥವಾ ಅದಕ್ಕಿಂತ ಹೆಚ್ಚು ಬಳಕೆದಾರರು ಏಕಕಾಲದಲ್ಲಿ ಶಕ್ತಿಯ ಉಪಯೋಗ ಮಾಡಿಕೊಳ್ಳುವ ಸಂಭಾವ್ಯತೆ ಕೇವಲ 0.0000779264. ಅಂದರೆ, ಹೆಚ್ಚುಕಡಿಮೆ 9 ದಿವಸಗಳಲ್ಲಿ ಒಂದು ಮಿನಿಟು ಮಾತ್ರ ಅಂಥ ವಿದ್ಯಮಾನವನ್ನು ನಿರೀಕ್ಷಿಸಬಹುದು.

(f) ಕೈಗಾರಿಕೆಗಳಲ್ಲಿ ಗುಣ ನಿಯಂತ್ರಣ: ಒಂದು ಕೈಗಾರಿಕೆಯಲ್ಲಿ ಉತ್ಪಾದಿಸುವ ವಸ್ತುಗಳನ್ನು ಅವುಗಳಿಗೆ ನಿಗದಿ ಮಾಡಿದ ಗುಣಗಳು ಇವೆಯೋ ಇಲ್ಲವೋ ಎಂಬುದಕ್ಕೆ ಅನುಸಾರವಾಗಿ ದೋಷಮುಕ್ತ/ದೋಷಯುಕ್ತ ವಸ್ತುಗಳು ಎಂದು ದ್ವಿವಿಧವಾಗಿ ವರ್ಗೀಕರಿಸಬಹುದು. ಒಂದು ವಸ್ತು ದೋಷಯುಕ್ತವಾಗಿರುವ ಸಂಭಾವ್ಯತೆ (p) ಸ್ಥಿರವೆಂದು ತಿಳಿದರೆ ದ್ವಿಪದ ವಿತರಣೆ ಇಲ್ಲಿ ಅನ್ವಯಿಸುತ್ತದೆ. ದೋಷಯುಕ್ತ ವಸ್ತುಗಳ ಪ್ರಮಾಣ ಕಡಿಮೆಯಾಗಿದ್ದರೆ ಉತ್ಪಾದನೆಯ ಗುಣಮಟ್ಟ ತೃಪ್ತಿಕರ. ಆ ಪ್ರಮಾಣ ಹೆಚ್ಚಾಗಿದ್ದರೆ ಗುಣಮಟ್ಟ ಅತೃಪ್ತಿಕರ. ಗುಣಮಟ್ಟ ತೃಪ್ತಿಕರವೇ ಅಲ್ಲವೇ ಎಂದು ಅರಿಯಲು ಯಾದೃಚ್ಛಿಕವಾಗಿ ಆರಿಸಲ್ಪಟ್ಟ ವಸ್ತುಗಳನ್ನು ಪರೀಕ್ಷಿಸಲಾಗಿದೆ. ಅಂಥ ಪರೀಕ್ಷೆಗೆ ಒಳಪಡಿಸಿದ $n_1 .\ n_2 .\ \cdots .\ n_k$ ವಸ್ತುಗಳಲ್ಲಿ ದೊರೆತ ದೋಷ

ಯುಕ್ತ ವಸ್ತುಗಳ ಪ್ರಮಾಣ⁶ಗಳು ಅನುಕ್ರಮವಾಗಿ $p_1, p_2, \cdots, p_k$. ಈ ಮೌಲ್ಯಗಳನ್ನು p – ನಿಯಂತ್ರಣ ನಕ್ಷೆಯಲ್ಲಿ (p–chart, [2], chapter 10) ಗುರುತಿಸಬಹುದು. ಅಂಥ ನಕ್ಷೆಯಲ್ಲಿ ಒಂದು ಮಧ್ಯರೇಖೆ ಮತ್ತು ಅದರ ಇಕ್ಕೆಡೆಗಳಲ್ಲಿ ಒಂದು ಜೊತೆ ಪರಿಮಿತಿ ರೇಖೆಗಳನ್ನು ಎಳೆಯಲಾಗುವುದು. ಸೂತ್ರಗಳು ಕೆಳಗಿನಂತಿವೆ:

ಮಧ್ಯರೇಖೆ: $\bar{p}, \quad \left(\bar{p} = \dfrac{\sum_{i=1}^{k} n_i p_i}{\sum_{i=1}^{k} n_i} \right)$

ಗರಿಷ್ಠ ಪರಿಮಿತಿ ರೇಖೆ: $\bar{p} + 3\sqrt{\dfrac{\bar{p}(1-\bar{p})}{n_i}}$ — (8 – 2)

ಕನಿಷ್ಠ ಪರಿಮಿತಿ ರೇಖೆ: $\bar{p} - 3\sqrt{\dfrac{\bar{p}(1-\bar{p})}{n_i}}$

ಪರಿಮಿತಿ ರೇಖೆಗಳ ಹೊರಗಿರುವ ಬಿಂದುಗಳು ಉತ್ಪಾದನಾ ವಿಧಾನದ ಗುಣಮಟ್ಟ ಅತೃಪ್ತಿಕರ ಎಂದು ಸೂಚಿಸುತ್ತವೆ.

9. ಪ್ಯೊಸೋನ್[7] ಅಂದಾಜು ಮೌಲ್ಯ

ಮಳೆಗಾಲದ ಒಂದು ಸಂಜೆ. ನಿಮ್ಮ ಮನೆಯ ಕೋಣೆಯ ಏಕಾಂತದಲ್ಲಿ ನೀವು ವಿರಮಿಸುತ್ತಿದ್ದೀರಿ. ಹೊರಗೆ ಬಾನಿನಲ್ಲಿ ಮೋಡಗಳು ದಟ್ಟವಾಗಿ ಕವಿದಿವೆ. ಆದರಿಂದಾಗಿ ಎಲ್ಲೆಲ್ಲೂ ಕತ್ತಲು. ತಟ್ಟನೆ ಗುಡುಗು ಮಿಂಚುಗಳಿಂದ ಕೂಡಿದ ಮಳೆಯು ಪ್ರಾರಂಭ. ನೀವು ಬಿಸಿ ಬಿಸಿ ಕಾಫಿಯ ಬಟ್ಟಲನ್ನು ಕೈಯಲ್ಲಿ ಹಿಡಿದುಕೊಂಡು ಕಿಟಿಕಿ ಯಿಂದ ಹೊರಗೆ ಬಾನಿನತ್ತ ದಿಟ್ಟಿಸುತ್ತೀರಿ. ಮಿಂಚು ಎಷ್ಟು ಬಾರಿ ಮಿಂಚಿತು ಎಂದು ಬೌದ್ಧಿಕ ಕುತೂಹಲಕ್ಕಾಗಿ ಎಣಿಸುತ್ತೀರಿ. ಸುಮಾರು ಹತ್ತು ಮಿನಿಟುಗಳ ಬಳಿಕ ಕಾಫಿಯ ಬಟ್ಟಲನ್ನು ಒಯ್ಯಲೆಂದು ಬಂದ ನಿಮ್ಮ ರಾಣಿಗೆ, "ನಾನು ಎಂಟುಬಾರಿ ಮಿಂಚಿದ್ದನ್ನು ಕಂಡೆ" ಎಂದು ವರದಿ ಒಪ್ಪಿಸುತ್ತೀರಿ. ಆಗ ಆ ಜಾಣೆ "ಎಂಟು ಬಾರಿ ಮಿಂಚಿದ್ದು ಸರಿಯಿರಬಹುದು. ಆದರೆ ಎಷ್ಟು ಬಾರಿ ಮಿಂಚಲಿಲ್ಲ? ಹೇಳಿ ನೋಡೋಣ" ಎಂದು ಪ್ರಶ್ನಿಸಿ, ಮೃದುವಾಗಿ ನಕ್ಕು, ಮಿಂಚಿನಂತೆ ಹೊರಟು ಹೋಗುತ್ತಾಳೆ. ನೀವು ಯೋಚನಾಮಗ್ನರಾಗುತ್ತೀರಿ. ಅವಳ ಪ್ರಶ್ನೆಗೆ ಉತ್ತರವೇನು?

---

6 $p_i = \dfrac{\text{ಉಪಗುಂಪು } i \text{ ಯಲ್ಲಿ ದೊರೆತ ದೋಷಯುಕ್ತ ವಸ್ತುಗಳ ಸಂಖ್ಯೆ}}{\text{ಉಪಗುಂಪು } i \text{ ಯಲ್ಲಿರುವ ವಸ್ತುಗಳ ಒಟ್ಟು ಸಂಖ್ಯೆ}}$

7 ಸೈಮನ್ ಡಿ ಪ್ಯೊಸೋನ್ (Simeon, D Poisson 1781-1840). ಈ ಕುರಿತಾದ ಆತನ ಉದ್ಗ್ರಂಥವೊಂದು 1837 ರಲ್ಲಿ ಪ್ರಕಾಶಿಸಲ್ಪಟ್ಟಿತು.

ಮೇಲಿನಂಥ ಪ್ರಸಂಗಗಳಲ್ಲಿ ನಾವು ಕಾಲಗತಿಯಲ್ಲಿ ಆಗೊಮ್ಮೆ ಈಗೊಮ್ಮೆ ಆಗುವ ಘಟನೆಗಳ ಕುರಿತು ಅಧ್ಯಯಿಸುತ್ತಿರುತ್ತೇವೆ. ಯಾವುದೇ ಒಂದು ಘಟನೆ ಎಷ್ಟು ಬಾರಿ ನಡೆಯಿತು ಎಂಬ ಪ್ರಶ್ನೆಗೆ ಅರ್ಥವತ್ತಾದ ಉತ್ತರ ದೊರೆತರೂ, ಅದು ಎಷ್ಟು ಬಾರಿ ನಡೆಯಲಿಲ್ಲ ಎಂಬ ಪ್ರಶ್ನೆ ಅರ್ಥಹೀನವಾಗಿರಬಹುದು (ಅಥವಾ ತುಂಟತನದ್ದಾಗಿರಬಹುದು.) ಒಂದು ಕಾಲ್ಚೆಂಡು ಪಂದ್ಯದಲ್ಲಿ ಹೊಡೆದ ಗೋಲುಗಳು ಕಾಲಗತಿಯಲ್ಲಿ ವಿರಳವಾಗಿ ಆಗುವ ಘಟನೆಗೆ ಇನ್ನೊಂದು ನಿದರ್ಶನ. ಒಂದು ವಿದ್ಯುತ್ ಕೇಬಲ್ಲಿನ ಉದ್ದದಲ್ಲಿರುವ ನ್ಯೂನತೆಗಳು, ಬಟ್ಟೆಯ ಒಂದು ತಾನಿನಲ್ಲಿರುವ ದೋಷಗಳು ಉದ್ದ ಮತ್ತು ವಿಸ್ತಾರಗಳಲ್ಲಿ ವಿರಳವಾಗಿ ನಡೆಯುವ ಘಟನೆಗಳಿಗೆ ನಿದರ್ಶನಗಳು. ಇಂಥ ಪ್ರಸಂಗಗಳಲ್ಲಿ n ನ ಬೆಲೆ ತಿಳಿಯದಿರುವುದರಿಂದ ದ್ವಿಪದ ವಿತರಣೆ ಅನ್ವಯಿಸುವುದಿಲ್ಲ.

ಅಂಥ ಸಂದರ್ಭಗಳಲ್ಲಿ ಸಾಪೇಕ್ಷವಾಗಿ n ದೊಡ್ಡದಿದ್ದು, $np=m$ ಮಿತವಾದ ಗಾತ್ರದ್ದಾಗಿರುವಂತೆ p ಚಿಕ್ಕದಾಗಿದ್ದರೆ, $b(x, n, p)$ ಗೆ ಒಂದು ಸರಿಸುಮಾರು ಸೂತ್ರವನ್ನು ಉಪಯೋಗಿಸಿಕೊಳ್ಳಬಹುದು. ಈ ಸೂತ್ರದ ಪ್ರಕಾರ.

$$b(x, n, p) \approx \frac{m^x e^{-m}}{x\underset{\circ}{!}} \; ; x=0, 1, 2, \cdots \quad (9-1)$$

$e=2.71828$ (ಸರಿಸುಮಾರಾಗಿ)

[$x\underset{\circ}{!}=1. 2. 3 \ldots x$, ಉದಾ. $4\underset{\circ}{!}=1. 2. 3. 4=24$;

$\approx$ ಸರಿಸುಮಾರು ಸಮ]. ಇದೊಂದು ಅತಿಸುಂದರಸೂತ್ರ. ಸೈಮನ್ ಡಿ. ಪ್ವೈಸೋನ್ ಅವರು ಈ ಸೂತ್ರವನ್ನು ಆವಿಷ್ಕರಿಸಿದರು. ಸೂತ್ರ (9 – 1) ರ ಬಲಬದಿಯನ್ನು $p(x, m)$ ಎಂದು ಸೂಚಿಸುತ್ತೇವೆ. $p(x, m)$ ಎಂಬುದು $b(x, n, m/n)$ಗೆ (n ಸಾಕಷ್ಟು ದೊಡ್ಡದಾಗಿರುವಾಗ) ತೃಪ್ತಿಕರ ಅಂದಾಜು ಮೌಲ್ಯವನ್ನು ಕೊಡುತ್ತದೆ. ಇದು ಪ್ವೈಸೋನ್ ಅಂದಾಜು ಮೌಲ್ಯ ಎಂದು ಪ್ರಸಿದ್ಧವಾಗಿದೆ.

10. ಪ್ವೈಸೋನ್ ನಿದರ್ಶನಗಳು

(a) ಹುಟ್ಟುಹಬ್ಬಗಳು: ಐನೂರು ವಿದ್ಯಾರ್ಥಿಗಳಿರುವ ಒಂದು ನಿಲಯ. ಅಲ್ಲಿರುವ ವಿದ್ಯಾರ್ಥಿಗಳೆಲ್ಲ ಒಂದೇ ಬಳಗ. ತಮ್ಮ ಹುಟ್ಟುಹಬ್ಬಗಳನ್ನು ಆಚರಿಸುವುದೆಂದರೆ ಅವರಿಗೆ ತುಂಬ ಇಷ್ಟ. ಅದರಲ್ಲಿ ಐವರ ಹುಟ್ಟುಹಬ್ಬಗಳು ಯುಗಾದಿಯಂದೇ ಬೀಳುವ ಸಂಭಾವ್ಯತೆ ಏನು? ನಾವು $n=500$. $p=\frac{1}{365}$ ಆಗಿರುವ ಬರ್ನೋಲಿ

ಕೈಎಸಕಗಳ ಚೌಕಟ್ಟನ್ನು ಉಪಯೋಗಿಸಿಕೊಳ್ಳಬಹುದು. ಅಥವಾ $m = 500 \times \frac{1}{365} = 1.3699$ ಇರುವ ಪ್ಯೊಸೋನ್ ಅಂದಾಜು ಮೌಲ್ಯಗಳನ್ನು ಉಪಯೋಗಿಸಿಕೊಳ್ಳಬಹುದು. ಕೋಷ್ಟಕ 10–1 ಸಂಬಂಧಿಸಿದ ಕೆಲವು ದ್ವಿಪದ ಸಂಭಾವ್ಯತೆಗಳನ್ನೂ, ಅವುಗಳಿಗೆ ಅನುರೂಪವಾದ ಪ್ಯೊಸೋನ್ ಅಂದಾಜು ಮೌಲ್ಯಗಳನ್ನೂ ತೋರಿಸುತ್ತದೆ.

ಕೋಷ್ಟಕ 10 – 1

$n = 500, \qquad p = \frac{1}{365} \qquad m = 1.3699$

x	$b(x, n, p)$	$p(x, m)$
(1)	(2)	(3)
0	0.2537	0.2541
1	0.3484	0.3481
2	0.2388	0.2385
3	0.1089	0.1089
4	0.0372	0.0373
5	0.0101	0.0102
6	0.0023	0.0023

ನೀಟಸಾಲು (2) ಮತ್ತು (3) ಗಳಲ್ಲಿರುವ ಅನುರೂಪವಾದ ಮೌಲ್ಯಗಳು ಸರಿಸುಮಾರು ಸಮಾನವಾಗಿರುವುದನ್ನು ಗಮನಿಸಿ. ಅವುಗಳಲ್ಲಿ ವ್ಯತ್ಯಾಸವೇನಿದ್ದರೂ ಅದು ದಶಮಾಂಶ ಬಿಂದುವಿನ ಬಳಿಕ ನಾಲ್ಕನೆ ಸ್ಥಾನದಲ್ಲಿ ಮಾತ್ರವಿರುವುದನ್ನೂ ಗಮನಿಸಿ. ಈ ಪರಿಸರದಲ್ಲಿ ಐದು ಹುಟ್ಟುಹಬ್ಬಗಳು ಯುಗಾದಿಯಂದೇ ಬೀಳುವ ಸಂಭಾವ್ಯತೆ 0.0101. ಅದರ ಪ್ಯೊಸೋನ್ ಅಂದಾಜು ಮೌಲ್ಯ 0.0102.

(b) **ಶತಾಯುಷಿಗಳು** : ಒಂದು ದೊಡ್ಡ ಸಮಾಜದಲ್ಲಿ ಜನನಗಳ ವಾರ್ಷಿಕ ಸಂಖ್ಯೆ ಸಾಕಷ್ಟು ದೊಡ್ಡದಾಗಿರುತ್ತದೆ. ಈಗ ತಾನೇ ಜನಿಸಿದ ಒಂದು ಶಿಶು ನೂರು ವರ್ಷಗಳ ವರೆಗೆ ಜೀವಿಸುವ ಸಂಭಾವ್ಯತೆ ಬಹಳ ಚಿಕ್ಕದು. ಯುದ್ಧಗಳು ಸಾಂಕ್ರಾಮಿಕ

ರೋಗಗಳು ಇತ್ಯಾದಿ ಕಾರಣಗಳಿಂದ ಬೇರೆ ಬೇರೆ ಮನುಷ್ಯಜೀವಿಗಳು ಸ್ವತಂತ್ರವಲ್ಲದಿದ್ದರೂ, ಸರಿಸುಮಾರಾಗಿ ಅವು ಸ್ವತಂತ್ರವೆಂದು ತಿಳಿದು n ಜನನಗಳನ್ನು n ಬರ್ನೋಲಿ ಕೈವಿಸಕಗಳಿಗೆ ಹೋಲಿಸಬಹುದು. ನೂರು ವರ್ಷಗಳ ಬಳಿಕದ ಸಾವನ್ನು 'ಗೆಲುವು' ಎಂದು ಭಾವಿಸೋಣ. ಸಮಾಜದ ಒಟ್ಟು ಜನಸಂಖ್ಯೆ ಹೆಚ್ಚುಕಡಿಮೆ ಸ್ಥಿರವಾಗಿದ್ದರೆ ಮತ್ತು ಸಾವಿನ ಪ್ರಮಾಣ (mortality rate) ಗಮನಾರ್ಹವಾಗಿ ಬದಲಾಗುತ್ತಿಲ್ಲದಿದ್ದರೆ, ಆಗ ಸರಿಯಾಗಿ x ಶತಾಯುಷಗಳು ಸಾಯುವ ವರ್ಷಗಳ ಸಾಪೇಕ್ಷ ಆವರ್ತಾಂಕ ಸರಿಸುಮಾರು $P(x, m)$ ಎಂದು ತಿಳಿಯಬಹುದು. ಸಮಾಜದ ಜನಸಂಖ್ಯೆ ಮತ್ತು ಆರೋಗ್ಯದ ಮಟ್ಟಗಳ ಮೇಲೆ m ನ ಮೌಲ್ಯ ಹೊಂದಿಕೊಂಡಿದೆ. ಸ್ವಿಟ್ಸರ್ಲೆಂಡಿನ ಮರಣಗಳ ದಾಖಲೆಗಳುಈ ಅಭಿಪ್ರಾಯವನ್ನು ಪುಷ್ಟೀಕರಿಸುತ್ತವೆ.

(c) **ಮುದ್ರಾರಾಕ್ಷಸ:** ಒಂದು ಪುಸ್ತಕವನ್ನು ಅಚ್ಚುಹಾಕುತ್ತಿರುವಾಗ ಯಾವುದೇ ಒಂದು ಅಕ್ಷರ ತಪ್ಪಾಗಿ ಮುದ್ರಿತವಾಗುವ ಸಂಭಾವ್ಯತೆ ಸ್ಥಿರವಾಗಿದ್ದರೆ ಮತ್ತು ಪುಸ್ತಕ ಅಚ್ಚಾಗುತ್ತಿರುವ ಪರಿಸರ ಬದಲಾಗುತ್ತಿಲ್ಲದಿದ್ದರೆ, ಆಗ ಒಟ್ಟು ಅಕ್ಷರಗಳಿರುವಷ್ಟೇ ಬರ್ನೋಲಿ ಕೈವಿಸಕಗಳಿದ್ದಂತಾಯಿತು. ಸರಿಯಾಗಿ x ಮುದ್ರಣದೋಷಗಳಿರುವ ಪುಟಗಳ ಸಾಪೇಕ್ಷ ಆವರ್ತಾಂಕ ಸರಿಸುಮಾರು $P(x, m)$; m ನ ಮೌಲ್ಯ ಅಚ್ಚುಮೊಳೆಗಳನ್ನು ಜೋಡಿಸುವವನ ಕಾರ್ಯಕುಶಲತೆಯ ಒಂದು ಪ್ರತೀಕ. ಆವನ ದೇಹಾಯಾಸ, ಮುದ್ರಿತವಾಗಲಿರುವ ಅಂಶಗಳ ಕ್ಲಿಷ್ಟತೆ ಇತ್ಯಾದಿಗಳು ಮುದ್ರಣದೋಷದ ಸಂಭಾವ್ಯತೆಯನ್ನು ಅಧಿಕಗೊಳಿಸುತ್ತವೆ. ಅಂಥ ಸಂದರ್ಭಗಳಲ್ಲಿ ದೋಷಗಳು ಒಂದರ ಹಿಂದೊಂದು ಕಾಣಿಸಿಕೊಳ್ಳಲೂ 'ಬಹುದು. ಪ್ಯೊಸೋನ್ ಸೂತ್ರ ಕೊಡುವ ನಿರೀಕ್ಷಿತ ಸಂಖ್ಯೆಗಳಿಗಿಂತ ದೊರೆತ ಸಂಖ್ಯೆಗಳು ಗಮನಾರ್ಹವಾಗಿ ಅಧಿಕವಾಗಿದ್ದಲ್ಲಿ, ಮುದ್ರಣದೋಷಗಳ ಸಂಖ್ಯೆ ಮಿತಿಮೀರುತ್ತಿದೆ ಎಂದು ತಿಳಿಯಬೇಕು.

(d) **ವಿಕಿರಣಪಟು ವಸ್ತುಗಳು (radio active substances)** ಇಂಥ ವಸ್ತುಗಳು α – ಕಣವನ್ನು ಹೊರಸೂಸುತ್ತಿರುತ್ತವೆ. ನಿರ್ದಿಷ್ಟ ಆಕಾರ ಭಾಗವನ್ನು ನಿರ್ದಿಷ್ಟ ಕಾಲಾವಧಿಯಲ್ಲಿ ತಲಪುವ α – ಕಣಗಳ ಸಂಖ್ಯೆ ಒಂದು ಪ್ಯೊಸೋನ್ ಚರ. ಪ್ಯೊಸೋನ್ ನಿಯಮವನ್ನು ಅನುಸರಿಸುತ್ತಿರುವ ಚರಗಳ ಪೈಕಿ. ಇದು ನಮಗೆ ತಿಳಿದಿರುವ ಅತ್ಯುತ್ತಮ ಉದಾಹರಣೆ.

ವಿಕಿರಣಪಟು ವಸ್ತುವೊಂದರ ಬಗ್ಗೆ ನಡೆಸಿದ ಪ್ರಯೋಗ[8] ಒಂದರ ಫಲಿತಾಂಶವನ್ನು ಕೋಷ್ಟಕ 10 – 2 ಸಂಕ್ಷೇಪವಾಗಿ ಕೊಡುತ್ತದೆ. 7.5 ಸೆಕೆಂಡುಗಳ $N = 2608$ ಕಾಲಾವಧಿಗಳಲ್ಲಿ ಆ ವಸ್ತು ಹೊರಸೂಸಿದ α – ಕಣಗಳ ಸಂಖ್ಯೆಗಳನ್ನು ಗುರುತಿಸಿ

8 Rutherford, Chadwick and Ellis, Radiations from radio active substances, Cambridge 1920, P.172

ಕೊಳ್ಳಲಾಯಿತು. ಸರಿಯಾಗಿ x ಕಣಗಳಿದ್ದ ಕಾಲಾವಧಿಗಳ ಆವರ್ತಾಂಕ (f)ದ ಮೌಲ್ಯಗಳನ್ನು ಮತ್ತು ಅನುರೂಪವಾದ ನಿರೀಕ್ಷಿತ ಆವರ್ತಾಂಕಗಳನ್ನು ಕೋಷ್ಟಕ 10 – 2 ತೋರಿಸುತ್ತದೆ.

ಕೋಷ್ಟಕ 10 – 2

x	f	N.P(x, 3·870)
(1)	(2)	(3)
0	57	54.399
1	203	210.523
2	383	407.361
3	525	525.496
4	532	508.418
5	408	393.515
6	273	253.817
7	139	140.325
8	45	67.882
9	27	29.189
≥10	16	17.075
ಮೊತ್ತ	2608	2608.000

ಕಣಗಳ ಒಟ್ಟು ಸಂಖ್ಯೆ, $T = \sum xf = 10{,}094$

$N = \sum f = 2608$

ಕಣಗಳ ಸರಾಸರಿ ಸಂಖ್ಯೆ. $T/N = \frac{\sum xf}{\sum f} = 3.870$

ನಿರೀಕ್ಷಿತ ಆವರ್ತಾಂಕಗಳಾದ N.P (x,3.870) ದೊರೆತ ಅನುರೂಪವಾದ ಆವರ್ತಾಂಕ (f) ಗಳಿಗೆ ಸಾಕಷ್ಟು ಸಮೀಪವಿರುವುದನ್ನು ಗಮನಿಸಿ (ಚಿತ್ರ 10–1) ಕೈವರ್ಗ ಪರೀಕ್ಷೆ ಕೂಡ ಈ ಅಭಿಪ್ರಾಯವನ್ನು ಪುಷ್ಟೀಕರಿಸುತ್ತದೆ.

(e) **ಲಂಡನ್ ನಗರದ ಮೇಲೆ ಹಾರುವ ಬಾಂಬುಗಳು :** ಎರಡನೆ ಮಹಾ ಯುದ್ಧ (1939–1945)ದ ಅವಧಿಯಲ್ಲಿ ದಕ್ಷಿಣ ಲಂಡನ್ನಿನ ಮೇಲೆ ಬಿದ್ದ ಹಾರುವ ಬಾಂಬುಗಳ ವಿತರಣೆ[9] ಯನ್ನು ಗಮನಿಸಿ. ಒಟ್ಟು ವಿಸ್ತೀರ್ಣವನ್ನು $\frac{1}{4}$ ಚದರ ಕಿ.ಮೀ.ಗಳ N = 576 ಚಿಕ್ಕ ಚಿಕ್ಕ ವಿಭಾಗಗಳಾಗಿ ವಿಂಗಡಿಸಲಾಗಿದೆ. ಸರಿಯಾಗಿ x ಬಾಂಬುಗಳ ಹೊಡೆತಕ್ಕೆ ಗುರಿಯಾದ ವಿಭಾಗಗಳ ಸಂಖ್ಯೆ (f) ಯನ್ನು ಕೋಷ್ಟಕ 10–3 ತೋರಿಸುತ್ತದೆ.

ಕೋಷ್ಟಕ 10–3

x	f	N.P(x,0.9323)
(1)	(2)	(3)
0	229	226·74
1	211	211.39
2	93	98.54
3	35	30.62
4	7	7.14
≥5	1	1.57
ಮೊತ್ತ	576	576.00

ಬಾಂಬು ಹೊಡೆತಗಳ ಒಟ್ಟು ಸಂಖ್ಯೆ, T = $\sum xf$ = 537

ಬಾಂಬು ಹೊಡೆತಗಳ ಸರಾಸರಿ ಸಂಖ್ಯೆ, m = T/N = 0.9323

ಬಾಂಬುಗಳ ಹೊಡೆತಗಳು ಕೆಲವೊಂದು ಜಾಗಗಳ ಮೇಲೆ ಮಾತ್ರ ಕೇಂದ್ರೀಕೃತವಾಗಿರುತ್ತವೆ. ಎಂದು ಜನರು ನಂಬಿದ್ದರು. ಈ ನಂಬಿಕೆ ಸರಿಯಾಗಿದ್ದರೆ ಮೇಲಿನ ವಿವರಣೆಯಲ್ಲಿ .

9 The figures are taken from R. D. Clarke, An application of the poisson distribution, Journal of the Institute of Actuaries, Vol. 72 (1949) p. 48.

ಬಹಳ ಕಡಿಮೆ ಮತ್ತು ಬಹಳ ಜಾಸ್ತಿ ಬಾಂಬುಗಳ ಹೊಡೆತಗಳು ಬಿದ್ದ ವಿಭಾಗಗಳ ಸಂಖ್ಯೆ ಹೆಚ್ಚಾಗಿದ್ದು ಇತರ ಮಧ್ಯವರ್ತಿ ವಿಭಾಗಗಳ ಸಂಖ್ಯೆ ಕಡಿಮೆ ಇರಬೇಕಾಗಿತ್ತು. ಆದ್ದರಿಂದ ಕೋಷ್ಟಕ 10–3 ಜನರ ನಂಬಿಕೆಯನ್ನು ಪುಷ್ಟೀಕರಿಸುವುದಿಲ್ಲ. ದತ್ತಾಂಶಗಳು ಪ್ಯೊಸೋನ್ ವಿತರಣೆಯ ಚೌಕಟ್ಟಿನೊಳಗೆ ಅಚ್ಚುಕಟ್ಟಾಗಿ ಹೊಂದಿಕೊಳ್ಳುತ್ತವೆ ಎಂದು ಕೈವರ್ಗ ಪರೀಕ್ಷೆ ತಿಳಿಸುತ್ತದೆ.

(f) **ಕೈಗಾರಿಕೆಗಳಲ್ಲಿ ಗುಣ ನಿಯಂತ್ರಣ :** ಒಂದು ಉತ್ಪಾದಿತ ವಸ್ತುವಿನಲ್ಲಿ (ಅಥವಾ ವಸ್ತುಗಳ ಒಂದು ಸಮೂಹದಲ್ಲಿ) ದೊರೆತ ದೋಷಗಳ ಸಂಖ್ಯೆಯನ್ನು c ಎಂದು ಸೂಚಿಸೋಣ. ವಸ್ತುವಿನಲ್ಲಿ ದೋಷವಿರಲು ವಿಪುಲ ಅವಕಾಶವಿದ್ದರೂ, ಅದರಲ್ಲಿ ಯಾವುದೇ ಒಂದು ಕಡೆ ದೋಷವಿರುವ ಸಂಭಾವ್ಯತೆ ಬಹಳ ಕಡಿಮೆ ಇದ್ದರೆ, ಅಂಥ ಸಂದರ್ಭದಲ್ಲಿ c ಪ್ಯೊಸೋನ್ ಚೌಕಟ್ಟಿನೊಳಗೆ ಹೊಂದಿಕೊಳ್ಳುವ ಚರ. ಆದರೆ c ಎಂಬುದು ವಸ್ತುಗಳ ಒಂದು ಸಮೂಹದಲ್ಲಿ ದೊರೆತ ದೋಷಗಳ ಒಟ್ಟು ಸಂಖ್ಯೆಯನ್ನು ಸೂಚಿಸುತ್ತಿದ್ದರೆ, ಆಗ ಬೇರೆ ಬೇರೆ ಸಮೂಹಗಳಲ್ಲಿ ವಸ್ತುಗಳ ಸಂಖ್ಯೆಗಳು ಸಮಾನವಾಗಿರುವುದು ಅವಶ್ಯ. ಆಗ ಮಾತ್ರ ಬೇರೆ ಬೇರೆ ಸಮೂಹಗಳಲ್ಲಿ ದೋಷಗಳಿರಲು ಸ್ಥೂಲವಾಗಿ ಸಮಾನ ಅವಕಾಶವಿದ್ದಂತಾಗುತ್ತದೆ. ಯಾದೃಚ್ಛಿಕವಾಗಿ ಆರಿಸಲಾದ k ವಸ್ತು (ಅಥವಾ ವಸ್ತುಸಮೂಹ) ಗಳಲ್ಲಿರುವ ದೋಷಗಳ ಸಂಖ್ಯೆಗಳನ್ನು c–ನಕ್ಷೆ (c—chart, (2), ಅಧ್ಯಾಯ 11) ಯಲ್ಲಿ ಗುರುತಿಸಬಹುದು. ನಕ್ಷೆಯ ರಚನೆಗೆ ಕೆಳಗಿನ ಸೂತ್ರಗಳನ್ನು ಉಪಯೋಗಿಸಿಕೊಳ್ಳುತ್ತೇವೆ:

$$\text{ಮಧ್ಯರೇಖೆ : } \bar{c} : \bar{c} = \frac{\text{ದೊರೆತ ದೋಷಗಳ ಒಟ್ಟು ಸಂಖ್ಯೆ}}{\text{ಪರೀಕ್ಷಿಸಲ್ಪಟ್ಟ ವಸ್ತು (ಸಮೂಹ)ಗಳ ಒಟ್ಟು ಸಂಖ್ಯೆ}}$$

$$\text{ಪರಿಮಿತಿ ರೇಖೆಗಳು : } \bar{c} \mp 3\sqrt{\bar{c}}.$$

ನಕ್ಷೆಯಲ್ಲಿ ಪರಿಮಿತಿ ರೇಖೆಗಳ ಹೊರಗಿರುವ ಬಿಂದುಗಳನ್ನು ಉತ್ಪಾದನಾ ವಿಧಾನದಲ್ಲಿ ಸಂಖ್ಯಾಕಲನೀಯ ನಿಯಂತ್ರಣ (Statistical control) ದ ಅಭಾವದ ಸೂಚಕವಾಗಿ ತೆಗೆದುಕೊಳ್ಳುತ್ತೇವೆ.

(g) **ಕುದುರೆ ಒದೆತಗಳು :** ಸೈನ್ಯದ ಅಶ್ವದಳದಲ್ಲಿ ಕುದುರೆಗಳ ಒದೆತದಿಂದಾಗಿ ಈಗೊಮ್ಮೆ ಆಗೊಮ್ಮೆ ಸಾವುಗಳಾಗುವುದುಂಟು. ಹತ್ತು ಅಶ್ವದಳಗಳಲ್ಲಿ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಸಂಭವಿಸಿದ ಅಂಥ ಸಾವುಗಳ ವಿವರ[10]ವೊಂದು ಪ್ಯೊಸೋನ್ ಚೌಕಟ್ಟಿನೊಳಗೆ ಅಚ್ಚುಕಟ್ಟಾಗಿ ಹೊಂದಿಕೊಳ್ಳುತ್ತದೆ.

---

10 Data relating to 10 Prussian Army Corps—collected by Bortkewitch and quoted by R. A. Fisher

ಕೋಷ್ಟಕ 10–4

ಸಾವುಗಳ ಸಂಖ್ಯೆ (x)	x ಸಾವುಗಳಿದ್ದ ವರ್ಷಗಳ ಆವರ್ತಾಂಕ (f)	ನಿರೀಕ್ಷಿತ ಸಾಪೇಕ್ಷ ಆವರ್ತಾಂಕ $p(x, 0{\cdot}61)$	ನಿರೀಕ್ಷಿತ ಆವರ್ತಾಂಕ $N{\cdot}p(x, 0{\cdot}61)$
0	109	0.544	108.8
1	65	0.331	66.2
2	22	0.101	20.2
3	3	0.021	4.2
4	1	0.003	0.6
5	0	0.000	0.0
6	0	0.000	0.0

ಟಿಪ್ಪಣಿ

(i) ಸಾವುಗಳ ಸರಾಸರಿ ಸಂಖ್ಯೆ $= \dfrac{\sum xf}{\sum f} = 0{\cdot}61$

$m = 0.61$ ಎಂದು ಅಂದಾಜುಮಾಡಲಾಗಿದೆ.

ದೊರೆತ ಆವರ್ತಾಂಕಗಳನ್ನೂ ನಿರೀಕ್ಷಿತ ಆವರ್ತಾಂಕಗಳನ್ನೂ ಹೋಲಿಸಿ

(h) ಎರಡು ಸಮಸ್ಯೆಗಳು:

ಸಮಸ್ಯೆ ಒಂದು :

ಒಂದು ರೀತಿಯ ಬ್ಯಾಕ್ಟೀರಿಯಾ ನೀರಿನಲ್ಲಿ ಘನ ಸೆಂಟಿಮೀಟರಿಗೆ 2 ರಂತೆ ಇರುತ್ತವೆ ಎಂದು ಅನುಮಾನಿಸಲಾಗಿದೆ. ಈ ವಿದ್ಯಮಾನ ಪ್ಯೊಸೋನ್ ನಿಯಮವನ್ನು ಅನುಸರಿಸುವುದು ಎಂದು ತಿಳಿದರೆ, ಪ್ರತಿಚಯವಾಗಿ ಆರಿಸಲ್ಪಟ್ಟ 2 ಘ. ಸೆ. ಮೀ ನೀರಿನಲ್ಲಿ

(i) ಬ್ಯಾಕ್ಟೀರಿಯಾ ಇಲ್ಲದಿರುವ ಸಂಭಾವ್ಯತೆ ಏನು?

(ii) ಕಡಿಮೆಯೆಂದರೆ 2 ಬ್ಯಾಕ್ಟೀರಿಯಾ ಇರುವ ಸಂಭಾವ್ಯತೆ ಏನು?

ದತ್ತ ಪರಿಸರದಲ್ಲಿ 2 ಘನ ಸೆ. ಮೀ ನೀರಿನಲ್ಲಿರುವ ಬ್ಯಾಕ್ಟೀರಿಯಾಗಳ ಸಂಖ್ಯೆ (×) ಪ್ವೊಸೋನ್ ನಿಯಮವನ್ನು ಅನುಸರಿಸುತ್ತದೆ ಮತ್ತು $m = 2 \times 2 = 4$ ಎಂದು ತಿಳಿಯಬಹುದು. ಆದ್ದರಿಂದ ಪ್ರತಿಚಯದಲ್ಲಿ ಬ್ಯಾಕ್ಟೀರಿಯಾ ಇಲ್ಲದಿರುವ ಸಂಭಾವ್ಯತೆ,

$$p(x=0) = e^{-m} = e^{-4} = 0.0183.$$

ಅದೇ ರೀತಿ ಕಡಿಮೆಯೆಂದರೆ 2 ಬ್ಯಾಕ್ಟೀರಿಯಾ ಇರುವ ಸಂಭಾವ್ಯತೆ,

$$\begin{aligned} P(\times \geq 2) &= 1 - p(x < 2) \\ &= 1 - \left\{ p(\times = 0) + p(\times = 1) \right\} \\ &= 1 - \left\{ e^{-4} + e^{-4} \cdot \frac{4}{1!} \right\} \\ &= 1 - 5e^{-4} \\ &= 0.9085 \end{aligned}$$


ಸಮಸ್ಯೆ ಎರಡು :

520 ಪುಟಗಳಿರುವ ಪುಸ್ತಕವೊಂದರಲ್ಲಿ 390 ಮುದ್ರಣದೋಷಗಳಿವೆ. ಅದೇ ಮುದ್ರಕನಿಂದ, ಅವನ ಕಾರ್ಯಕುಶಲತೆಯನ್ನು ಪರೀಕ್ಷಿಸಲು ಯಾದೃಚ್ಛಿಕವಾಗಿ ಆರಿಸಲಾದ ನಾಲ್ಕು ಪುಟಗಳಲ್ಲಿ ಒಂದೂ ದೋಷವಿಲ್ಲದಿರುವ ಸಂಭಾವ್ಯತೆ ಏನು?


ಮುದ್ರಣ ದೋಷಗಳು ಪ್ವೊಸೋನ್ ನಿಯಮವನ್ನು ಅನುಸರಿಸುತ್ತವೆ ಎಂದು ಭಾವಿಸೋಣ. ಪುಟವೊಂದರಲ್ಲಿರುವ ಮುದ್ರಣ ದೋಷಗಳ ನಿರೀಕ್ಷಿತ ಸಂಖ್ಯೆ $390/520 = \frac{3}{4}$ ಎಂದು ಅಂದಾಜು ಮಾಡಿದರೆ, ನಾಲ್ಕು ಪುಟಗಳಲ್ಲಿರುವ ದೋಷಗಳ ಸಂಖ್ಯೆ $m = (\frac{3}{4})4 = 3$ ಇರುವ; ಪ್ವೊಸೋನ್ ನಿಯಮವನ್ನು ಅನುಸರಿಸುತ್ತದೆ ಎಂದು ತಿಳಿಯಬಹುದು. ಆದ್ದರಿಂದ ಆರಿಸಲ್ಪಟ್ಟ ನಾಲ್ಕು ಪುಟಗಳಲ್ಲಿ ದೋಷಗಳೇ ಇಲ್ಲದಿರುವ ಸಂಭಾವ್ಯತೆ, $e^{-3} = 0.0498$ (ಸರಿಸುಮಾರಾಗಿ).

11. ಪ್ವೊಸೋನ್ ವಿತರಣೆಯ ಸೂಕ್ತತೆ

ಯಾವುದೇ ಒಂದು ಅವಿಚ್ಛಿನ್ನತೆ (Continuum) ಯಲ್ಲಿ (ಕಾಲ ಉದ್ದ, ವಿಸ್ತೀರ್ಣ, ಘನಫಲ ಇತ್ಯಾದಿ) ಘಟನೆಗಳ ಆಗುವಿಕೆಯನ್ನು ಪ್ವೊಸೋನ್ ಸಂಭಾವ್ಯತಾ ವಿತರಣೆ ಅಚ್ಚುಕಟ್ಟಾಗಿ ವಿವರಿಸುತ್ತದೆ. ಅಂಥ ಘಟನೆ ಆಗಲು ವಿಪುಲ ಅವಕಾಶವಿದ್ದರೂ ಯಾವುದೇ ಒಂದು ಬಿಂದುವಿನಲ್ಲಿ ಅದು ಆಗುವ ಸಂಭಾವ್ಯತೆ ಸಾಕಷ್ಟು ಚಿಕ್ಕದಿರಬೇಕು. ಕೈಪಿಡಿಕವೊಂದರಲ್ಲಿ ಅಂಥ ಘಟನೆಗಳ ನಿರೀಕ್ಷಿತ ಸಂಖ್ಯೆ m. ಇದು ವಿತರಣೆಯ ಏಕಮಾತ್ರ ಪ್ರಾಚಲ. m ನ ಮೌಲ್ಯ ತಿಳಿದಿದ್ದರೆ ವಿತರಣೆ ಸಂಪೂರ್ಣ



ಚಿತ್ರ 10–1 (ಕೋಷ್ಟಕ 10–2ರ ದತ್ತಾಂಶಗಳು)



ಚಿತ್ರ 11-1 (ಕೋಷ್ಟಕ 11-1, 11-2 ರ ದತ್ತಾಂಶಗಳು)

ತಿಳಿದಂತೆ. m ನ ಮೌಲ್ಯ ಎಲ್ಲ ಕೈವಿಸಕಗಳಲ್ಲಿಯೂ ಸ್ಥಿರವಾಗಿರಬೇಕೆಂಬುದು ಇರುವ ಒಂದೇ ಒಂದು ನಿರ್ಬಂಧ. m ಬದಲಾಗುತ್ತಿದ್ದರೆ ಪ್ರೈಸೋನ್ ವಿತರಣೆಯ ಉಪಯೋಗ ಸೂಕ್ತವಲ್ಲ. ನಿದರ್ಶನಕ್ಕಾಗಿ, ಬೇರೆ ಬೇರೆ ಉದ್ದಗಳ ಕೇಬಲ್‌ಗಳನ್ನು ಪರೀಕ್ಷಿಸಿ ಅವುಗಳಲ್ಲಿರುವ ದೋಷಗಳ ಸಂಖ್ಯೆಗಳನ್ನು ಗುರುತಿಸಿಕೊಂಡರೆ ಅವು ಪ್ರೈಸೋನ್ ಚೌಕಟ್ಟಿನೊಳಗೆ ಹೊಂದಿಕೊಳ್ಳಲಾರವು. ಪರೀಕ್ಷಿಸಿದ ಕೇಬಲ್‌ಗಳ ಉದ್ದಗಳು ಬೇರೆ ಬೇರೆಯಾಗಿರುವುದರಿಂದ m ನ ಮೌಲ್ಯ ಈ ಕೇಬಲ್‌ಗಳಲ್ಲಿ ಸ್ಥಿರವಿಲ್ಲ.

1930 ರಿಂದ ಆರಂಭವಾಗುವ ದಶಕದಲ್ಲಿ ಅಮೆರಿಕದಲ್ಲಿ ಆರ್ಥಿಕ ಮುಗ್ಗಟ್ಟು ಉಂಟಾಯಿತು. ಆ ವರ್ಷಗಳಲ್ಲಿ ಆತ್ಮಹತ್ಯೆಗಳ ವಾರ್ಷಿಕ ಸಂಖ್ಯೆಯೂ ಬಹಳವಾಗಿ ಏರಿತು. ಸಮಾಜದಲ್ಲಿ ಸಂಭವಿಸುವ ಆತ್ಮಹತ್ಯೆಗಳ ವಾರ್ಷಿಕ ಸಂಖ್ಯೆ ಸಮಾಜ ಎದುರಿಸುವ ಗೊಂದಲ ಸಂಕಷ್ಟ ಇತ್ಯಾದಿಗಳನ್ನು ಅವಲಂಬಿಸಿದೆ. ಇಂಥ ಚರಗಳು ಪ್ರೈಸೋನ್ ಚೌಕಟ್ಟಿನೊಳಗೆ ಅಚ್ಚುಕಟ್ಟಾಗಿ ಸೇರಿಕೊಳ್ಳಲಾರವು.

ಒಂದು ಕಾಲ್ಚೆಂಡು ಪಂದ್ಯ, ಪ್ರೇಕ್ಷಕರು ನೆರೆದಿದ್ದಾರೆ. ಒಂದನ್ನೊಂದು ಎದುರಿಸಲಿರುವ ತಂಡಗಳು ಅಣಿಯಾಗುತ್ತಿವೆ. ಯಾವ ತಂಡ ಎಷ್ಟು ಗೋಲು ಹೊಡೆಯಬಹುದು? ಯಾವುದು ಗೆಲ್ಲಬಹುದು? ಇದು ಎಲ್ಲರೂ ಯೋಚಿಸುತ್ತಿರುವ ವಿಚಾರ ಯಾವುದೇ ಒಂದು ತಂಡ ಹೊಡೆಯಬಹುದಾದ ಗೋಲುಗಳ ನಿರೀಕ್ಷಿತ ಸಂಖ್ಯೆ(m) ಎದುರಾಳಿ ತಂಡಗಳ ಬಲಾಬಲ, ದಿನದ ಹವಾಮಾನ ಇತ್ಯಾದಿ ವಿಚಾರಗಳ ಮೇಲೆ ಅವಲಂಬಿಸಿರುವುದರಿಂದ ಅದು ಎಲ್ಲ ಪಂದ್ಯಗಳಲ್ಲೂ ಸ್ಥಿರ ಎನ್ನುವಂತಿಲ್ಲ. ಹೀಗಾಗಿ ಪಂದ್ಯವೊಂದರಲ್ಲಿ ತಂಡಗಳು ತಲಾ ಹೊಡೆದ ಗೋಲುಗಳ ಸಂಖ್ಯೆಗೆ ಪ್ರೈಸೋನ್ ವಿತರಣೆಯ ಉಪಯೋಗ ಸೂಕ್ತವಲ್ಲ. ಕೋಷ್ಟಕ 11 – 1 ರ ನಿದರ್ಶನವನ್ನು ಗಮನಿಸಿ.

$$\text{ಗೋಲುಗಳ ಸರಾಸರಿ ಸಂಖ್ಯೆ} = \frac{\sum xf}{\sum f} = \frac{812}{480} = 1.7$$

$m = 1.7$ ಎಂದು ಅಂದಾಜುಮಾಡಿ ನಿರೀಕ್ಷಿತ ಆವರ್ತಾಂಕಗಳನ್ನು ಪಡೆಯಲಾಗಿದೆ, ನಿರೀಕ್ಷಿತ ಮತ್ತು ದೊರೆತ ಆವರ್ತಾಂಕಗಳಲ್ಲಿನ ವ್ಯತ್ಯಾಸ ವಿಪರೀತವೇನಿಲ್ಲ. ತಂಡಗಳ ಬಲಾಬಲ, ದಿನದ ಹವಾಮಾನ ಇತ್ಯಾದಿ ವಿಚಾರಗಳು ನಾವು ತಿಳಿದುಕೊಂಡಷ್ಟು ಮಟ್ಟಿಗೆ ಗೋಲುಗಳ ಸಂಖ್ಯೆಯ ಮೇಲೆ ಪ್ರಭಾವ ಬೀರುವುದಿಲ್ಲ ಎಂಬುದನ್ನು ಇದು ಸೂಚಿಸುತ್ತದೆ. ಆದರೂ ಕೈವರ್ಗ ಪರೀಕ್ಷೆ ಪ್ರೈಸೋನ್ ಚೌಕಟ್ಟು ಈ ಸಂದರ್ಭಕ್ಕೆ ಅಷ್ಟು ಸೂಕ್ತವಲ್ಲ ಎಂದು ಸೂಚಿಸುತ್ತದೆ.

ಕೋಷ್ಟಕ 11 – 1

ಗೋಲುಗಳ ಸಂಖ್ಯೆ (x)	ಪಂದ್ಯವೊಂದರಲ್ಲಿ x ಗೋಲುಗಳನ್ನು ಹೊಡೆದ (f) ತಂಡಗಳ ಆವರ್ತಾಂಕ	ನಿರೀಕ್ಷಿತ ಆವರ್ತಾಂಕ $N{\cdot}P(x, 1.7)$
0	95	88
1	158	150
2	108	126
3	63	72
4	40	30
5	9	10
6	5	3
7	2	1

ಕೈಎಸಕಗಳಲ್ಲಿ **m** ನ ಮೌಲ್ಯ ಸ್ಥಿರವಲ್ಲದಿರುವ ಪ್ರಸಂಗಗಳಲ್ಲಿ ಪ್ಯೊಸೋನ್ ವಿತರಣೆಯ ಒಂದು ರೂಪಾಂತರವನ್ನು ಉಪಯೋಗಿಸಕೊಳ್ಳಬಹುದು. $\bar{\mathbf{x}}$ ಮತ್ತು $\mathbf{s}^2$ ಗಳು ಅನುಕ್ರಮವಾಗಿ ದೊರೆತ ವಿತರಣೆಯ ಸರಾಸರಿ ಮತ್ತು ಚಲನೀಯ **(variance)** ಗಳಾದರೆ, ಆಗ

$$\left.\begin{aligned} \bar{x} &= \frac{\sum xf}{\sum f} \\ s^2 &= \frac{1}{N} \sum f(x-\bar{x})^2 \\ N &= \sum f \end{aligned}\right\} \quad \ldots \quad (11\text{–}1)$$

ಬಳಿಕ ನಾವು

$$\bar{x} = \frac{a}{b} \qquad \dots \qquad (11\text{–}2)$$

ಮತ್ತು $$\bar{x} + \frac{\bar{x}}{b} = s^2 \qquad \dots \qquad (11\text{–}3)$$

ಎಂದು ಬರೆಯುತ್ತೇವೆ. $\bar{x}$ ಮತ್ತು s^2 ಗಳ ಮೌಲ್ಯಗಳು ತಿಳಿದಿರುವುದರಿಂದ (11–3) b ಯು ಮೌಲ್ಯವನ್ನು ಕೊಡುತ್ತದೆ. ಈ ಮೌಲ್ಯವನ್ನು (11 – 2)ನಲ್ಲಿ ಆದೇಶಿಸಿದಾಗ a ಯು ಮೌಲ್ಯ ದೊರೆಯುತ್ತದೆ. ಪ್ವೊಸೋನ್ ವಿತರಣೆಯ ರೂಪಾಂತರದಲ್ಲಿ $x = 0,\ 1,\ 2,\ \dots\dots\dots$ ಆಗುವ ಸಂಭಾವ್ಯತೆಗಳು ಅನುಕ್ರಮವಾಗಿ (ಎಡದಿಂದ ಬಲಕ್ಕೆ)

$$\left(\frac{b}{b+1}\right)^a \left\{ 1\,,\ \frac{a}{b+1}\,,\ \frac{a\ (a+1)}{2!\,(b+1)^2}\,,\ \frac{a\ (a+1)\ (a+2)}{3!\ (b+1)^3}\ , \dots \right\} \qquad (11\text{–}4)$$

ಕಾಲ್ಚೆಂಡು ಪಂದ್ಯಗಳ ಮೇಲಿನ ನಿದರ್ಶನದಲ್ಲಿ

$\bar{x} = 1.7,\quad s^2 = 1.9.$ ಆದ್ದರಿಂದ ಸಮೀಕರಣ (11—2), (11—3)ಗಳು ಅನುಕ್ರಮವಾಗಿ

$$a/b = 1.7 \qquad \dots \qquad (11\text{–}5)$$

$$1.7 + \frac{1.7}{b} = 1.9 \qquad \dots \qquad (11\text{–}6)$$

ಎಂದಾಗುತ್ತವೆ.

ಇವುಗಳನ್ನು ಬಿಡಿಸಿದಾಗ $b = 8.5,\ \ a = 14.5$ ಎಂದು ದೊರೆಯುತ್ತದೆ. (11 – 4)ನ್ನು ಉಪಯೋಗಿಸಿ, ಸಂಭಾವ್ಯತೆಗಳನ್ನು ಪಡೆದು ಅವನ್ನು 480 ರಿಂದ ಗುಣಿಸಿದಾಗ ಕೆಳಗಿರುವ ನಿರೀಕ್ಷಿತ ಆವರ್ತಾಂಕಗಳು ದೊರೆಯುತ್ತವೆ.

ಕೈವರ್ಗ ಪರೀಕ್ಷೆ ಪ್ವೊಸೋನ್ ವಿತರಣೆಯ ರೂಪಾಂತರ ಸಾಮಾನ್ಯ ಪ್ವೊಸೋನ್ ವಿತರಣೆಗಿಂತ ಪ್ರಸ್ತುತ ಸಂದರ್ಭದಲ್ಲಿ ಚೆನ್ನಾಗಿ ಹೊಂದಿಕೊಳ್ಳುತ್ತದೆ ಎಂದು

ಕೋಷ್ಟಕ 11 – 2

ಗೋಲುಗಳ ಸಂಖ್ಯೆ (x)	ನಿರೀಕ್ಷಿತ ಆವರ್ತಾಂಕ (e)	ದೊರೆತ ಆವರ್ತಾಂಕಗಳು (f)
0	96	95
1	147	158
2	119	108
3	69	63
4	32	40
5	12	9
6	4	5
7	1	2

ತೋರಿಸುತ್ತದೆ. ಚಿತ್ರ 11 – 1 ದೊರೆತ ಮತ್ತು ನಿರೀಕ್ಷಿತ ಆವರ್ತಾಂಕಗಳನ್ನು ಹೋಲಿಸಲು ಸಹಾಯಕವಾಗಿದೆ. ಚಿತ್ರ (a) ಯಲ್ಲಿ ಸಾಮಾನ್ಯ ಪ್ಯೂಸೋನ್ ವಿತರಣೆಯನ್ನು ಉಪಯೋಗಿಸಲಾಗಿದೆ. ಚಿತ್ರ (b) ಯಲ್ಲಿ ಪ್ಯೂಸೋನ್ ವಿತರಣೆಯ ರೂಪಾಂತರವನ್ನು ಉಪಯೋಗಿಸಲಾಗಿದೆ. ಈ ಚಿತ್ರಗಳಲ್ಲಿ ಆಯತಾಕೃತಿಗಳು ದೊರೆತ ಆವರ್ತಾಂಕಗಳನ್ನೂ ಬಾಣಗಳು ಅನುರೂಪವಾದ ನಿರೀಕ್ಷಿತ ಆವರ್ತಾಂಕಗಳನ್ನೂ ತೋರಿಸುತ್ತವೆ.

12. ಹಿನ್ನೋಟ

ವಾಸ್ತವ ಪ್ರಪಂಚದಲ್ಲಿ ದೊರೆಯುವ ಅಂಕಿಅಂಶಗಳು ಕೆಲವೊಮ್ಮೆ ಅಸಂಬದ್ಧವಾಗಿ ಕಾಣಿಸುವುದುಂಟು. ಆದರೆ ಅವುಗಳ ಏರಿಳಿತಗಳಲ್ಲಿ ಒಂದು ಲಯ, ಒಂದು ಕ್ರಮ ಇರುತ್ತದೆ. ಅವು ಒಂದಲ್ಲ ಒಂದು ಸೈದ್ಧಾಂತಿಕ ಚೌಕಟ್ಟಿನೊಳಗೆ ಅಂದವಾಗಿ, ಅಚ್ಚುಕಟ್ಟಾಗಿ ಹೊಂದಿಕೊಳ್ಳುವುದುಂಟು. ಈ ಹೊಂದಿಕೊಳ್ಳುವಿಕೆ ಕೆಲವೊಮ್ಮೆ ವಿಸ್ಮಯ ತರಿಸುವಷ್ಟು ಅಚ್ಚುಕಟ್ಟು. ದ್ವಿಪದ ಮತ್ತು ಪ್ಯೂಸೋನ್ ವಿತರಣೆಗಳು ಅಂಥ

ಎರಡು ಚೌಕಟ್ಟುಗಳು. ಅವು ಮತ್ತು ಅವುಗಳ ರೂಪಾಂತರಗಳು ನಮ್ಮ ಚಟುವಟಿಕೆಗಳ ಹಲವು ರಂಗಗಳಲ್ಲಿ ದೊರೆಯುವ ಅಂಕಿಅಂಶಗಳ ಪರಿಣಿತಗಳನ್ನು ತೃಪ್ತಿಕರವಾಗಿ ವಿವರಿಸಲು, ತೋರಿಕೆಯ ಅವ್ಯವಸ್ಥೆಯಲ್ಲಿ ಸೋಜಿಗ ಬರಿಸುವಷ್ಟು ವ್ಯವಸ್ಥೆಯನ್ನು ಗುರುತಿಸಲು ಸಹಾಯಕವಾಗಿದೆ. ಸಂಖ್ಯಾಕಲನಶಾಸ್ತ್ರ ಇನ್ನೂ ಅನೇಕ ಸಂಭಾವ್ಯತಾ ವಿತರಣೆಗಳ ಬಗ್ಗೆ ತಿಳಿಸುತ್ತದೆ. ಪ್ರಸಾಮಾನ್ಯ ವಿತರಣೆ (normal distribution) ಇನ್ನೊಂದು ಉಪಯುಕ್ತ ಚೌಕಟ್ಟು. ಈ ಮೂರು ವಿತರಣೆಗಳ ಉಪಯೋಗ ಬಹಳ ವ್ಯಾಪಕವಾಗಿರುವುದರಿಂದ ಅವನ್ನು ಮೂಲಭೂತ ವಿತರಣೆಗಳು ಎನ್ನುವುದಿದೆ.

ಆಧಾರ ಗ್ರಂಥಗಳು

FELLER, W., An Introduction to Probability Theory and its Applications, Vol. I, John Wiley and Sons Inc.

GRANT, E. L., Statistical Quality control, 3d ed., Mc Graw Hill Book Company Inc.

MORONEY, M. J., Facts From Figures, Penguin Books

PARZEN, E., Modern Probability Theory and Its Applications, John Wiley and Sons Inc.

'ಕರ್ಮಣ್ಯೇವಾಧಿಕಾರಸ್ತೇ ....'

ಮ. ಗಂ. ರೇಣುಕ ಪ್ರಸನ್ನ

ಬರಿಯೊ !
ಏನಾದರು ಬರಿಯೊ ! !
ಕತೆ ಕವನ ಹರಟೆ ವಿಮರ್ಶೆ ನಾಟಕ ಇತ್ಯಾದಿ ಇತ್ಯಾದಿ—
ಏನಾದರು ಬರಿ
ಬರೆದರೆ ಸರಿ.

ವಸ್ತುವಿಗೇತಕೊ ತಡಕಾಟ
ಆ ಕಡೆ
ಈ ಕಡೆ
ಊ ಕಡೆ
ಕಣ್ಣಾಡಿಸೋ
ಕಾಣಿಸದೇನೋ
ಮಾನವ ಮನದ 'ಜನತ ಬಜಾರು'

'ಕನ್ನಡ ಮಾಧ್ಯಮ'
ವೆನ್ನುಸಿರೆಂದಾದರು ಘೋಷಿಸು.
(ಮಕ್ಕಳು ಕಾನ್ವೆಂಟಿಗೇ ಹೋಗುತಲಿರಲಿ)
ಮೇಣ್
ಇಂಗ್ಲಿಷೆನ್ನಯ
ಉಸಿರೆಂದಾದರು ಬಡಬಡಿಸು.
'ವಾಚಕವಾಣಿ'ಯ
ಲೇಖನವಾದರೂ ಸರಿಯೇ !
'ಅಭಿನಂದನೆಗಭಿನಂದನೆ'ಯಾದರೂ ಸಮ್ಮತವೆ !
ಲೇಖನವಾದರೆ
ಸರಿ
ಸ್ವೀಕೃತವೇ.

ಇಂತಹ ಕೃತಿ ಇನ್ನಿಲ್ಲ
ಎಂದಾದರು ಹೊಗಳು
ಲೇಖಣಿ ಬಿಟ್ಟರೆ ಲೋಕಕೆ ಕ್ಷೇಮ
ಎಂತಾದರು ತೆಗಳು
ಅಂತೂ ಇಂತು
ಗಳಿಸಿದರಾಯಿತು
ವಿಮರ್ಶಕ ಪಟ್ಟ
ಮುಡಿ ಬರಹಕ್ಕಿಂತ
ಅಡಿ ಟಿಪ್ಪಣಿ ಭರ್ಜರಿಯಿರಲಿ
ಅಡಿಟಿಪ್ಪಣಿಗಿಂತ ಮುನ್ನುಡಿ
ಪೊಗದಸ್ತಿರಲಿ.
ಮುನ್ನುಡಿ ಬರೆವನ ಹುದ್ದೆಯ ಮೇಲೂ ಕಣ್ಣಿರಲಿ
ಲೌಕಿಕ ಪ್ರಜ್ಞೆಯು ರಕ್ಷಣೆಗಿರಲಿ

ಬರಿಯೊ !
ಏನಾದರು ಬರೆಯೊ
ಮೌನವೆ ಮಾತಾದರೆ
ನೆನಪಿರಲಿಷ್ಟು,
ಸಿಕ್ಕುವುದಿಲ್ಲವೋ
ದಿನ ದಿನದಾ ಹಿಟ್ಟು.

ಬಡ್ತಿಗೆ ಬೇಕಯ್ಯಾ ಬರಹ
ಆರಂಭಿಕ ಅತಿವೇತನಕಂತೂ ಬರಹವೇ ಒರೆಗಲ್ಲು
ರಾಷ್ಟ್ರ ಪ್ರಶಸ್ತಿಯು
ಬೇಡವೆ ನಿನಗೆ?
ಅಕ್ಯಡಮಿ ಹಣ
ಒಲ್ಲೆಯಾ ನೀನು ?
ಟೆಕ್ಸ್ಟಾದರೆ ಪುಸ್ತಕ
ಸಂಕಟವೇನೋ ?
ಸನ್ಮಾನಕೆ ಬೆದರಲು ಸನ್ಯಾಸಿಯೆ ನೀನು?
(ಸನ್ಯಾಸಿಯೂ ಬಿಟ್ಟಿಲ್ಲ)

ಮರ್ತ್ಯೇತಕೆ ಚಿಂತೆ?
ಟೀಕೆಗೆ ಬೆದರದಿರಾಗದು ಮನುಜ
ನರ ನೀನಾಗು
ನಾರಾಯಣಗಿರಲಿ ಧರ್ಮದ ಚಿಂತೆ
'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನಾ'

ನಿರಾಶ್ರಿತರು ನಾವು

ಎಸ್. ವೆಂಕಟೇಶಮೂರ್ತಿ

ಈ ನಗರದಲ್ಲಿ
ಆತ್ಮಗಳಿಪ್ಪತ್ತು ಲಕ್ಷ
ಭಾರಿ ಭವನ
ಭೂರಿ ಭೋಜನ
ಕೆಲವರ ಪಕ್ಷ
ರಂಧ್ರ ವಾಸ
ಉದರ
ಹಂದರ
ಹಲವರ ರಕ್ಷ !

ಆದರೆ—
ನಮಗೆ ನಿಲ್ಲಲು
ಚದುರಡಿ ಇಲ್ಲ
ನಿರಾಶ್ರಿತರು
ನಗ್ನ
ನಿರಾಶ್ರಿತರು !

ಅಂದು—
ನಮಗೊಂದು
ದೇಶ ವೇಷ ಇತ್ತು
ಇಂದು—
ಅಟ್ಲಾಸಿನಲ್ಲಿ
ಕಾಣಬಹುದು
ನೀವದನ.
ಆದರೆ—
ಹೋಗಲಾರೆವಲ್ಲಿಗೆ

ರಹದಾರಿಯೇ
ಅಧಿಕಾರವೇ
ಒಂದೂ ಇಲ್ಲದ
ನಾವು
ನಿರಾಶ್ರಿತರು
ನಗ್ನ
ನಿರಾಶ್ರಿತರು !

ಹಳ್ಳಿಯ
ಹೂದೋಟದಲ್ಲಿ
ಒಂದು ಹಳೆಯ
ದಾಪ
ಗಿಡ
ವಸಂತ ವಸಂತ
ಚಿಗುರು ಚಿಗುರು
ಹೂವು ಅರಳು
ಘಮ ಘಮ
ಹಳೆಯ
ರಹದಾರಿ
ಆರೀತಿ ಅಲ್ಲ
ಅಂತೆ ನಮಗೆ
ಎಲ್ಲಿಯೂ
ಪ್ರವೇಶವಿಲ್ಲ !

ಅಧಿಕಾರಿಯ
ದರ್ಪ ನುಡಿ—
"ನಿಮ್ಮ ಬಳಿ
ರಹದಾರಿ ಇದೆಯೆ,
ಇಲ್ಲದಿರೆ ನೀವು
ಅಧಿಕೃತ ಸತ್ತಂತೆಯೇ"
ಆದರೆ —
ನಾವಿನ್ನೂ ಬದುಕಿದ್ದೇವೆ

ನಿರಾಶ್ರಿತರಾಗಿಯೇ
ಉಳಿದಿದ್ದೇವೆ
ನಗ್ನರು !

ನಿನ್ನೆ ಸಂಜೆ
ಸಭೆಯೊಂದರಲ್ಲಿ
ಕುರ್ಚಿಯೊಂದ
ಕೊಟ್ಟರು
ನಿಬಂಧನೆಯ
ಮೇರೆಗೆ
ಮುಂದಿನ ವರ್ಷ
ಮರಳಿ ಕೊಡುವಂತೆ—

ಇಂದು
ಕುರ್ಚಿ ಇಲ್ಲ
ನೆಲೆಯೇ ಇಲ್ಲ
ಹೋಗುವುದೆಲ್ಲಿಗೆ
ನಿರಾಶ್ರಿತರು
ನಾವು
ನಗ್ನರು !

ಸಾರ್ವಜನಿಕ ಸಭೆ
ಅಲ್ಲಿ ನಮ್ಮ ಕಂಡು
ಸಭಾಪತಿ ಧ್ವನಿ ಎತ್ತರಿಸಿದ—
"ಅವರನ್ನು ಒಳಗೆ
ಬಿಡಬೇಡಿ
ನಮ್ಮ ರೊಟ್ಟಿ
ಕಸಿವರು"—

ನಮ್ಮ ಕುರಿತೇ
ಹೇಳಿರಬೇಕು
ನಾವು
ನಿರಾಶ್ರಿತರು ತಾನೆ?

ಸಮುದ್ರ ತೀರದಲ್ಲಿ
ನಿಂತು ಕಂಡುದೇನು?
ಮೀನುಗಳು
ಈಜುತ್ತಿವೆ ಸ್ವತಂತ್ರ
ಯಾರ ಹಂಗೂ ಇಲ್ಲ.
ನಮ್ಮಿಂದ ಕೆಲವೇ
ಅಡಿಗಳ ದೂರ—
ಆದರೆ
ನಾವು !

ಕಾಡು, ಮೋಡು
ಮನ ಬಂದಂತೆ ಹಾಡು
ಪಕ್ಷಿಗಳ ಕಲರವ ನಾದ
ಯಾರ ಭಯವೂ ಅವಕ್ಕಿಲ್ಲ.
ಆದರೆ—
ಅವು ಮನುಷ್ಯ ಜಾತಿ
ಅಲ್ಲವಲ್ಲ !

ಕನಸು ಕಂಡೆ
ಭವ್ಯ ಭವನ
ಸಾವಿರಂತಸ್ತು
ಕಿಟಕಿ ಕದ ಸಾವಿರಗಳ
ಜನ ಬೆರಳೆಣಿಕೆಯಷ್ಟು !
ಅವುಗಳಲ್ಲಿ
ಯಾವೊಂದೂ ನಮ್ಮದಲ್ಲ
ನಿರಾಶ್ರಿತರು ನಾವು
ನಗ್ನ ನಿರಾಶ್ರಿತರು !

ಮಂಥನ

1 "ಪಂಪ ಭಾರತದಲ್ಲಿ ವರದಾ ನದಿ"—ಒಂದು ಪ್ರತಿಕ್ರಿಯೆ

ಶ್ರೀ ಸೀತಾರಾಮ ಜಾಗೀರ್‌ದಾರ್ ರವರ "ಸಾಧನೆ" ಪತ್ರಿಕೆಯ (2.3) ಲೇಖನಕ್ಕೆ ಪ್ರತಿಕ್ರಿಯೆ ನನ್ನ ಈ ಬರಹ. ಅರಿಕೇಸರಿಗೆ ಪಟ್ಟಾಭಿಷೇಕವಾದ ನಂತರ ಅವನ ಒಡ್ಡೋಲಗದಲ್ಲಿ ಮಂಗಳ ಪಾಠಕನೊಬ್ಬನು ಮಂಗಳ ವೃತ್ತವನ್ನು ಈ ರೀತಿ ವಾಚಿಸುತ್ತಾನೆ.

ರಂಗ ತ್ತುಂಗ ತರಂಗ ಭಂಗುರ ಲಸದ್‌ಗಂಗಾಜಳಂ ನರ್ಮದಾ
ಸಂಗಸ್ವಚ್ಛವನಂ ಪ್ರಸಿದ್ಧವರದಾ ಪುಣ್ಯಾಂಬು ಗೋದಾವರೀ
ಸಂಗತ್ಯೋರ್ಜಿತ ವಾರಿ ಸಾರ ಯಮುನಾ ನೀಳೋರ್ಮಿ ನೀರಂಭುಜೋ॥
ತ್ತುಂಗಂಗೀಗರಿಗಂಗೆ ಮಂಗಳ ಮಹಾ ಶ್ರೀಯಂ ಜಯಶ್ರೀ ಯುಮಂ

ಪಂಪ ಮಹಾಕವಿಯು ಬನವಾಸಿ ಮುಂತಾದ ಪ್ರದೇಶಗಳಲ್ಲಿ ಸಂಚರಿಸಿ ಅಲ್ಲಿನ ಪ್ರಕೃತಿ ಸೌಂದರ್ಯಕ್ಕೆ ಮಾರುಹೋಗಿದ್ದ. ಬನವಾಸಿಯ ಪಕ್ಕದಲ್ಲೇ ಹರಿಯುವ ವರದಾನದಿಯ ಸೌಂದರ್ಯವು ಅವನನ್ನು ವಿಶೇಷವಾಗಿ ಆಕರ್ಷಿಸಿತು. ಆದ್ದರಿಂದ ಬನವಾಸಿಯ ಪರಿಸರ ಪ್ರದೇಶಗಳನ್ನೂ ವಿಶೇಷವಾಗಿ ಅಲ್ಲಿ ಹರಿಯುವ ವರದಾನದಿಯನ್ನೂ ಪಂಪನು ತನ್ನ ಕಾವ್ಯಗಳಲ್ಲಿ ಬಣ್ಣಿಸಿದ್ದಾನೆ. ಡಾ॥ ಡಿ. ಎಲ್. ಎನ್. ಮೊದಲಾದ ವಿದ್ವಾಂಸರೆಲ್ಲರೂ ಮೇಲೆ ಹೇಳಿದ ವಿಷಯವನ್ನು ಅನುಮೋದಿಸುತ್ತಾರೆ.

ಈ ಲೇಖನವನ್ನು ಬರೆದಿರುವ ಶ್ರೀ ಜಾಗೀರ್‌ದಾರ್‌ರವರು ಡಾ। ಡಿ. ಎಲ್. ಎನ್. ಮುಂತಾದವರ ಅಭಿಪ್ರಾಯವನ್ನು ಒಪ್ಪಿಕೊಳ್ಳುವುದಿಲ್ಲ. ಪಂಪನ 'ರಂಗತ್ತುಂಗ ತರಂಗ' ಎಂಬ ಪದ್ಯದಲ್ಲೇ ಇದು ಬನವಾಸಿಯ ಹತ್ತಿರದಲ್ಲಿರುವ ವರದಾನದಿಯಲ್ಲ. ಗೋದಾವರಿ ನದಿಯನ್ನು ಸೇರುವ ಒಂದು ಉಪನದಿ ಎಂದು ಹೇಳಲು ಸಾಧ್ಯವಿದೆ ಎಂದು ಅಭಿಪ್ರಾಯಪಡುತ್ತಾರೆ ಶ್ರೀ ಜಾಗೀರ್‌ದಾರ್‌ರವರು. ತಮ್ಮ ಅಭಿಪ್ರಾಯವನ್ನು ಸಮರ್ಥಿಸಲು ಅವರು 'ಪ್ರಸಿದ್ಧ ವರದಾಪುಣ್ಯಾಂಬು ಗೋದಾವರೀ ಸಂಗತ್ಯೋರ್ಜಿತ ವಾರಿಸಾರ' ಎಂಬ ಭಾಗಕ್ಕೆ ತಮ್ಮದೇ ಆದ ಒಂದು ವ್ಯಾಖ್ಯಾನವನ್ನು ಇತ್ತಿದ್ದಾರೆ. ಈ ವ್ಯಾಖ್ಯಾನವು ಡಾ। ಡಿ.ಎಲ್. ಎನ್ ಬರೆದಿರುವ ವ್ಯಾಖ್ಯಾನಕ್ಕಿಂತ ತೀರ ಬೇರೆಯಾಗಿದೆ. ಲೇಖಕರು ಡಾ। ಡಿ. ಎಲ್. ಎನ್. ರವರ ವ್ಯಾಖ್ಯಾನವು ಅನುಚಿತವೆಂದು ತೋರಿಸಲು ಹೆಚ್ಚಾಗಿ ಪ್ರಯತ್ನ ಮಾಡಿದ್ದಾರೆ.

'ಪ್ರಸಿದ್ಧ ವರದಾ.................... ವಾರಿಸಾರ' ಎಂಬ ಪದ್ಯಭಾಗವನ್ನು ಲೇಖಕರು ಈ ರೀತಿ ವ್ಯಾಖ್ಯಾನಿಸುತ್ತಾರೆ. "ಪ್ರಸಿದ್ಧವಾದ ವರದಾಜಲ (ಪ್ರಸಿದ್ಧ ವರದಾ ಪುಣ್ಯಾಂಬು) ಗೋದಾವರೀ ವಾರಿಯ ಜತೆಗೆ (ಯಾವುದು) ಬೆರೆತು ಹರಿಯುತ್ತದೆಯೋ (ಸಂಗತ್ = ಸಂಗಚ್ಛತಿ ಇತಿ) ಅದು ಮತ್ತು ಆ ಗೋದಾವರಿ ವಾರಿಸಾರ (ಗೋದಾವರಿ ಜಲಸಂಪತ್ತು) ಯಾವುವು [ಅರಿಕೇಸರಿ ಮತ್ತು ಆತನ ಜನತೆ ಯಿಂದ ಪೂಜಿಸಿಕೊಳ್ಳುತ್ತವೆಯೋ (ಯೋಃ + ಅರ್ಜಿತ) (ಅವು)] ಅರಿಕೇಸರಿಗೆ ಮಂಗಳವನ್ನುಂಟುಮಾಡಲಿ—ಇದು ಪಂಪ ಮಹಾಕವಿಯ ಮನೋಗತ. "ಯೋಃ" ಎಂಬ ದ್ವಿವಚನವನ್ನು ಪರಿಭಾವಿಸಿಬೇಕು." ಇತ್ಯಾದಿ.

ಮಾನ್ಯ ಲೇಖಕರ ಮತ್ತು ಡಾ। ಡಿ. ಎಲ್. ಎನ್. ರವರ ವ್ಯಾಖ್ಯಾನಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಡಾ। ಡಿ. ಎಲ್. ಎನ್ ರವರ ವ್ಯಾಖ್ಯಾನವೇ ಔಚಿತ್ಯಪೂರ್ಣವಾಗಿದೆಯೆಂದು ಹೇಳಬಹುದು. ಪವಿತ್ರವಾದ ನದಿಗಳಿಂದ ತಂದು ಅನೇಕ ಕಲಶಗಳಲ್ಲಿ ಬೇರೆ ಬೇರೆಯಾಗಿಟ್ಟಿರುವ ನೀರುಗಳು ಅರಿಕೇಸರಿಗೆ ಮಂಗಳವನ್ನೂ ಜಯವನ್ನೂ ಕೊಡಲಿ, ಎಂಬುದೇ ಪದ್ಯದ ತಾತ್ಪರ್ಯ. ಪದ್ಯವನ್ನು ವಿಮರ್ಶಾತ್ಮಕ ದೃಷ್ಟಿಯಿಂದ ನೋಡಿದಾಗ 'ರಂಗತ್ತುಂಗ ತರಂಗ ಭಂಗುರ ಲಸದ್ಗಂಗಾಜಳಂ' ಎಂದು ಗಂಗಾನದಿಯ ನೀರನ್ನೂ, [ನರ್ಮದಾ ಸಂಗಸ್ವಚ್ಛವನಂ ಎಂದು ನರ್ಮದಾ ನದಿಯ ನೀರನ್ನು] 'ಪ್ರಸಿದ್ಧ ವರದಾ ಪುಣ್ಯಾಂಬು' ಎಂದು ವರದಾ ನದಿಯ ನೀರನ್ನೂ, 'ಗೋದಾವರೀ ಸಂಗತ್ಯೋರ್ಜಿತವಾರಿ' ಎಂದು ಗೋದಾವರಿಯ ನೀರನೂ 'ಸಾರ ಯಮುನಾ ನೀಳೋರ್ಮಿ ನೀರಂ' ಎಂದು ಯಮುನಾ ನದಿಯ ನೀರನ್ನೂ ಬೇರೆ ಬೇರೆಯಾಗಿ ಪ್ರಸ್ತಾಪಿಸಿರುವುದು ಪ್ರಕರಣಕ್ಕೆ ಅನುಗುಣವಾಗಿದೆ. ಆದರೆ. ಲೇಖಕರು ಇಲ್ಲಿ 'ಪ್ರಸಿದ್ಧ ವರದಾ ಪುಣ್ಯಾಂಬು ಸಂಗತ್ಯೋರ್ಜ್ಜಿತವಾರಿ' ಎಂಬುದನ್ನು ಒಂದೇ ಪದವಾಗಿ ಭಾವಿಸಿ' 'ಪ್ರಸಿದ್ಧವಾದ ವರದಾನದಿಯ ಪವಿತ್ರವಾದ ನೀರಿನೊಡನೆ ಬೆರೆತಿರುವ ಗೋದಾವರೀ ನೀರು' ಎಂದು ಅರ್ಥವನ್ನು ಹೇಳಿದ್ದಾರೆ. ಮುಂದೆ ಕೊಡಲ್ಪಟ್ಟಿರುವ ಕಾರಣಗಳಿಂದ ಈ ವ್ಯಾಖ್ಯಾನವು ಉಚಿತವಲ್ಲ.

1. ಶ್ರೀ ಜಾಗೀರ್‌ದಾರ್‌ರವರ ಅಭಿಪ್ರಾಯದಂತೆ 'ಪ್ರಸಿದ್ಧವಾದ ವರದಾನದಿಯ ಪವಿತ್ರವಾದ ನೀರಿನೊಡನೆ ಸೇರಿರುವ ಗೋದಾವರೀ ನೀರು' ಎಂಬ ಅರ್ಥ ಬರಬೇಕಾದರೆ ಪದ್ಯದಲ್ಲಿ ಪದಗಳ ಜೋಡಣೆಯೂ, 'ಪ್ರಸಿದ್ಧವರದಾ ಪುಣ್ಯಾಂಬು **ಸಂಗತ್ಯೋರ್ಜ್ಜಿತ ಗೋದಾವರೀ** ವಾರಿಸಾರಂ' ಎಂದಿರಬೇಕು. ಆದರೆ, ಪದ್ಯದಲ್ಲಿ ಗೋದಾವರೀ ಶಬ್ದವಾದ ನಂತರ ಸಗಂತ್ಯೋರ್ಜ್ಜಿತ ಎಂಬ ಪದ ಬಂದಿದೆ.

2. ಇದಲ್ಲದೆ, ಲೇಖಕರು ಹೇಳಿರುವ 'ಸಂಗತ್ಯೋರ್ಜ್ಜಿತ' ಎಂಬ ಪಾಠವನ್ನು ಡಾ। ಡಿ. ಎಲ್ ಎನ್. ರವರು 'ಸಂಗತ್ಯೂರ್ಜ್ಜಿತ' ಎಂದು ಊಹಿಸಿಕೊಂಡು ವ್ಯಾಖ್ಯಾನ

ಮಾಡಿರುವುದು ಅನುಚಿತ ಎಂಬ ಆರೋಪಣೆಯೂ ಸಲ್ಲದು. ಕಾರಣ, ಸಂಗತ್ಯಾ + ಊರ್ಜಿತ ಎಂದು ವಿಗ್ರಹ ವಾಕ್ಯವಿದ್ದಾಗ ಸಮಾಸ ಮತ್ತು ಸಂಧಿಯಾದ ನಂತರ ಸಂಗತ್ಯೂರ್ಜಿತ ಎಂಬ ಪ್ರಯೋಗವುಂಟಾಗುವುದು.

ಸಂಗತ್ಯಾ + ಊರ್ಜಿತ. ಎಂಬ ವಿಗ್ರಹ ವಾಕ್ಯಕ್ಕೆ ಸಮಾಸವನ್ನು ಮಾಡದೆ ಸಂಧಿಯನ್ನು ಮಾತ್ರ ಮಾಡಿ ಪ್ರಯೋಗವನ್ನು ಮಾಡಿದಾಗ 'ಸಂಗತ್ಯೋರ್ರ್ಜಿತ' ಎಂದು ಪ್ರಯೋಗವಾಗುವುದು. ಸಮಾಸವಾಗಲೀ, ಆಗದೇ ಇರಲಿ ಅರ್ಥದಲ್ಲೇನೂ ವ್ಯತ್ಯಾಸವಿಲ್ಲ. ಡಾ। ಡಿ. ಎಲ್. ಎನ್ ರವರು ಸಮಸ್ತ ಪದವನ್ನು ಇಟ್ಟುಕೊಂಡು ವ್ಯಾಖ್ಯಾನ ಮಾಡಿದ್ದಾರೆ. ಶ್ರೀ ಜಾಗೀರ್‌ದಾರ್‌ರವರ ಅಭಿಪ್ರಾಯದಂತೆ 'ಸಂಗತ್ಯೋರ್ರ್ಜಿತ' ಎಂಬ ಪಾಠವನ್ನೇ ಇಟ್ಟುಕೊಂಡರೂ ಅವರು ಹೇಳುವ ಅರ್ಥ ಅಲ್ಲಿ ಬರಲು ಸಾಧ್ಯವೇ ಇಲ್ಲ.

'ಸಂಗತ್ಯೋರ್ರ್ಜಿತ' ಎಂಬಲ್ಲಿ ಅವರು ಸಂಗತ್, ಯೋಃ, ಅರ್ಚಿತ ಎಂದು ಪದವಿಭಾಗಗಳನ್ನು ತೋರಿಸಿ ತಮ್ಮ ಅಭಿಪ್ರಾಯವನ್ನುಸಮರ್ಥಿಸಲು ಪ್ರಯತ್ನಿಸಿದ್ದಾರೆ. ಸಂಗತ್ ಎಂಬ ಶಬ್ದವು 'ಸಂಗಚ್ಛತಿ ಇತಿ ಸಂಗತ್' ಎಂಬುದಾಗಿ ನಿರೂಪಿಸಲ್ಪಟ್ಟಿದೆ. ಸಂಸ್ಕೃತ ಭಾಷೆಯಲ್ಲಿ 'ಸಂಗಚ್ಛತಿ ಇತಿ ಸಂಗತ್' ಎಂಬುದಾಗಿ ಪ್ರಯೋಗವು ಸಾಧ್ಯವಿಲ್ಲ ಇದು ವ್ಯಾಕರಣ ವಿರುದ್ಧ.

ಮತ್ತೆ, ಯೋಃ ಎಂಬುದು ದ್ವಿವಚನ ಎಂದು ಹೇಳುವುದು ಸಲ್ಲದು. ಸಂಸ್ಕೃತ ಭಾಷೆಯಲ್ಲಿ ಮೂರು ಲಿಂಗಗಳಲ್ಲೂ 'ಯತ್' ಶಬ್ದದ ಷಷ್ಠೀ ವಿಭಕ್ತಿ ದ್ವಿವಚನವು 'ಯಯೋಃ' ಎಂದಾಗುವುದೇ ಹೊರತು 'ಯೋಃ' ಎಂದಾಗಲಾರದು.

'ಯೋಃ' ಎಂದು ಪದವಿಭಾಗ ಮಾಡಿದನಂತರ 'ಯೋರ್ರ್ಜಿತ' ಎಂಬಲ್ಲಿ 'ಜಿತ' ಎಂಬ ಶಬ್ದ ಮಾತ್ರ ಉಳಿಯುತ್ತದೆ. ಪ್ರಕೃತ ಲೇಖಕರು ಇಲ್ಲಿ ಜ–ಕಾರವನ್ನು ಚ–ಕಾರವನ್ನಾಗಿ ಮಾರ್ಪಡಿಸಿ ಅರ್ಚಿತ ಎಂಬ ಪದವಿಭಾಗಮಾಡಿ ತಮಗೆ ತೋರಿದ ಅರ್ಥವನ್ನೇ ಹೇಳಿದ್ದಾರೆ. ಒಂದುವೇಳೆ ಲೇಖಕರ ಅಭಿಪ್ರಾಯದಂತೆ 'ಸಂಗತ್ಯೋರ್ರ್ಚಿತ' (ವಿಕ್ರಮಾರ್ಜುನ ವಿಜಯದ ಘ–ಪ್ರತ್ಯಯ ಪಾಠ) ಎಂಬ ಪಾಠವಿದ್ದರೂ, 'ಯೋಃ' ಎಂದು ಪದ ವಿಭಾಗ ಮಾಡಿದನಂತರ 'ಅರ್ಚಿತ' ಎಂಬ ಪದವು ಸಿದ್ಧಿಸಲಾರದು. ಲೇಖಕರ ವ್ಯಾಖ್ಯಾನವನ್ನೇ ಪುಷ್ಟೀಕರಿಸಬೇಕಾದರೆ ಸಂಗತ್—ಯೋ—ಅರ್ಚಿತ ಎಂದಾದರೂ ಪದವಿಭಾಗವಮಾಡಬೇಕು. ಆಗ, ಯಃ (ಯೋ) ಎಂಬುದು ಏಕವಚನವಾಗುವುದೇ ಹೊರತು ದ್ವಿವಚನವಾಗಲಾರದು. ಆದ್ದರಿಂದ ವರದಾ ಮತ್ತು ಗೋದಾವರಿಯ ನೀರುಗಳನ್ನು 'ಯೋಃ' ಎಂಬ ದ್ವಿವಚನವು ಸೂಚಿಸುತ್ತದೆ ಎಂಬುದು ಅನುಚಿತ.

3. ಪದ್ಯದಲ್ಲಿ ಒಂದೊಂದು ಪವಿತ್ರವಾದ ನದಿಗಳ ನೀರನ್ನು ಪ್ರತ್ಯೇಕವಾಗಿ ಪ್ರಸ್ತಾಪಿಸಿರುವುದು ಕಾಣುತ್ತದೆ. ಗಂಗಾ ಮತ್ತು ಯಮುನಾ ಮುಂತಾದ ಮಹಾ

ನದಿಗಳ ನೀರು ಅವುಗಳ ಉಪನದಿಗಳ ನೀರಿನೊಡನೆ ಬೆರೆತಿರುವುದಾಗಿ ಹೇಳಲ್ಪಟ್ಟಿಲ್ಲ. ಗೋದಾವರಿಯ ನೀರಿಗೆ ಮಾತ್ರ ವರದಾನದಿಯ ಪವಿತ್ರವಾದ ನೀರಿನ ಸಂಗತಿಯನ್ನು ಹೇಳುವುದು ಪ್ರಕ್ರಮ ಭಂಗಕ್ಕೆ ಕಾರಣವಾಗುತ್ತದೆ.

4. ಪಂಪ ಮಹಾಕವಿಯು ಈ ನೀರುಗಳನ್ನು ಉಲ್ಲೇಖಿಸುವ ಕಾಲದಲ್ಲಿ— ಗಂಗಾಜಳಂ, ನೀಳೋರ್ಮಿನೀರಂ ಮುಂತಾಗಿ ಪ್ರತಿಯೊಂದು ನೀರನ್ನೂ ಸ್ವತಂತ್ರವಾಗಿ ನಿರೂಪಿಸಿದ್ದಾನೆ. ಮಾನ್ಯ ಲೇಖಕರ ಅಭಿಪ್ರಾಯವೇ ಪಂಪನ ಅಭಿಪ್ರಾಯವಾಗಿದ್ದಲ್ಲಿ 'ಪ್ರಸಿದ್ಧ ವರದಾ.........ವಾರಿಸಾರಂ' ಎಂದು ಈ ಪದವು ಪ್ರಥಮಾ ವಿಭಕ್ತಿಯಲ್ಲಿ ಕೊನೆಗೊಳ್ಳಬೇಕಾಗಿತ್ತು. ವಿಭಕ್ತಿಯಿಲ್ಲದೆ 'ವಾರಿಸಾರ' ಎಂದು ಪದವನ್ನು ಅರ್ಥದಲ್ಲಿ ಯೇ ನಿಲ್ಲಿಸುವುದು ಅನುಚಿತ.

5. ಜಾಗೀರ್‌ದಾರ್‌ರವರು ಈ ವರದಾನದಿಯು ಪೈನಗಂಗಾ ಎಂಬ ನದಿಯೊಡನೆ ಬೆರೆತು ಗೋದಾವರಿಯನ್ನು ಸೇರುತ್ತದೆ ಎಂದು ತಿಳಿಸಿರುವುದರಿಂದ ವರದಾನದಿಯು ಗೋದಾವರಿಯ ಉಪನದಿಯಾದ ಪೈನಗಂಗಾ ಎಂಬ ನದಿಗೆ ಉಪ ನದಿಯಾಗಿದೆ ಎಂಬುದು ಸ್ಪಷ್ಟ. ಹಾಗಿದ್ದ ಪಕ್ಷದಲ್ಲಿ ಅಂತಹ ಅಲ್ಪವಾದ ನದಿ ಪ್ರಸಿದ್ಧ ವಾದ ವರದಾನದಿ ಹೇಗಾಯಿತು? 'ಪ್ರಸಿದ್ಧ ವರದಾ ಪುಣ್ಯಾಂಬು' ಎಂಬ ಪಂಪ ಮಹಾಕವಿಯ ಉಲ್ಲೇಖವನ್ನಾದರೂ ಹೇಗೆ ಸಮರ್ಥಿಸುವುದು?

6. ವಿವಾದಗ್ರಸ್ತವಾದ ಭಾಗಕ್ಕೆ ಲೇಖಕರು ವಿವರಿಸಿರುವ ಅರ್ಥ ಈ ಲೇಖನದ ಮೊದಲ ಭಾಗದಲ್ಲೇ ಕೊಡಲ್ಪಟ್ಟಿದೆ. ಆ ಭಾಗವನ್ನು ಸೂಕ್ಷ್ಮ ದೃಷ್ಟಿಯಿಂದ ವಿಚಾರಿ ಸಿದಾಗ ಲೇಖಕರು ಅನ್ವಯಕ್ರಮವನ್ನು ಪರಿಪೂರ್ಣವಾಗಿ ನಿರ್ಲಕ್ಷಿಸಿದಂತಿದೆ.

7. ಡಾ। ಡಿ. ಎಲ್. ಎನ್. ರವರ ವ್ಯಾಖ್ಯಾನವು ಅನುಚಿತವೆಂದು ತೋರಿಸಿ ತಮ್ಮ ವ್ಯಾಖ್ಯಾನದಿಂದ ವರದಾನದಿಯು ಗೋದಾವರೀ ನದಿಯ ಉಪನದಿ ಎಂಬುವಾಗಿ ನಿರೂಪಿಸಲು ತೊಡಗಿದ್ದಾರೆ ಜಾಗೀರ್‌ದಾರ್‌ರವರು. ಇಂತಹ ಭ್ರಮೆಗೆ ಮುಖ್ಯ ಕಾರಣವೆಂದರೆ ಪದ್ಯದ 'ಗೋದಾವರೀ ಸಂಗತ್ಯೋರ್ಜಿತ' ಎಂಬ ಭಾಗ. ಒಂದುವೇಳೆ ಗೋದಾವರಿ ನದಿಯ ಸಂಗತಿಯೇ ವರದಾನದಿಯ ಪಾವಿತ್ರ್ಯಕ್ಕೆ ಕಾರಣವಾದ ಪಕ್ಷದಲ್ಲಿ ಅದನ್ನು ಪಂಪನು 'ಪುಣ್ಯಾಂಬು' ಎಂದು ಉಲ್ಲೇಖಿಸುತ್ತಿರಲಿಲ್ಲ. ಪವಿತ್ರವಾದ ನದಿಗಳ ಪರಮ ಪವಿತ್ರವಾದ ನೀರನ್ನು ಪ್ರತ್ಯೇಕವಾಗಿಯೇ ತಂದು ಅರಿಕೇಸರಿಗೆ ಅಭಿಷೇಕ ಮಾಡಿರುವುದು ಈ ಪದ್ಯದ ಹಿನ್ನೆಲೆಯನ್ನು ಓದಿದಾಗ ಸ್ಪಷ್ಟವಾಗುತ್ತದೆ. ಪ್ರತಿಯೊಂದು ನದಿಯ ನೀರಿಗೂ ಪ್ರತ್ಯೇಕವಾಗಿಯೇ ಪಾವಿತ್ರ್ಯವಿರುವಾಗ ಗೋದಾವರಿಯ ನೀರಿ ನೊಡನೆ ಬೆರೆತೇ ಅದು ಪೂಜಾರ್ಹವಾಗಬೇಕಾಗಿಲ್ಲ. ಪಂಪನು ಬನವಾಸಿಯ ಸುತ್ತಮುತ್ತಲ ಪ್ರದೇಶಗಳಲ್ಲಿ ಸಂಚಾರಮಾಡಿ ಅಲ್ಲಿಯ ಪ್ರಕೃತಿ ಸೌಂದರ್ಯದಿಂದ

ಅತ್ಯಂತ ಪ್ರಭಾವಿತನಾಗಿದ್ದ. ವರದಾನದಿಯ ಸೌಂದರ್ಯವಂತೂ ಅವನ ಮನಸ್ಸಿನಲ್ಲಿ ಅಚ್ಚಳಿಯದೇ ನಿಂತಿತು. ಆದ್ದರಿಂದಲೇ ಇದನ್ನು ಅವನು 'ಪ್ರಸಿದ್ಧ ವರದಾ ಪ್ರವಾಹ್ಯಾಂಬು' ಎಂದು ವರ್ಣಿಸಿದ್ದಾನೆ. ಆದ್ದರಿಂದ ಮಾನ್ಯ ಲೇಖಕರು ಹೇಳುವಂತೆ ಇದು ಗೋದಾವರಿಯ ಉಪನದಿಯಾದ ಪೈನಗಂಗಾ ನದಿಗೆ ಉಪನದಿಯೂ ಅಲ್ಲ. ಗೋದಾವರಿ ನದಿಗೂ ಮತ್ತು ವರದಾನದಿಗೂ ಸಂಗಮವೂ ಇಲ್ಲಿ ಹೇಳಲ್ಪಟ್ಟಿಲ್ಲ. ಅದಕ್ಕೆ ಬದಲು ವರದಾ ನದಿಯು ಸ್ವತಂತ್ರವಾಗಿ ಪ್ರಸ್ತಾಪಿಸಲ್ಪಟ್ಟಿದೆ. ಇಂತಹ ನದಿಯು ಬನವಾಸಿಯ ಸಮೀಪದಲ್ಲಿ ಹರಿಯುವ ವರದಾನದಿ ಎಂಬುದನ್ನು ಖಂಡಿಸಲು ಆಧಾರಗಳಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಎಂ. ಎ. ಲಕ್ಷ್ಮೀತಾತಾಚಾರ್ಯ

2. ಕಟವಪ್ರ : ಕಳ್ವಪ್ಪು

ಶ್ರವಣಬೆಳಗೊಳದ ಶಾಸನಗಳಲ್ಲಿ ಈ ಶಬ್ದ ಮೊದಲಬಾರಿಗೆ ಕಣ್ಣಿಗೆ ಬೀಳುತ್ತದೆ. ಕಟವಪ್ರನಾಮಕೋಪಲಕ್ಷಿತೇ········ಉತ್ತುಙ್ಗ ಶೃಙ್ಗೇ (ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ 11.1–6. ಸುಮಾರು ಕ್ರಿ. ಶ. 600). ಶ್ರವಣಬೆಳಗೊಳದ ಚಂದ್ರಗಿರಿಯೇ ಈ ಕಟವಪ್ರಗಿರಿ. ಇದನ್ನು ಈಗ ಚಿಕ್ಕಬೆಟ್ಟ ಎಂದು ಕರೆಯುತ್ತಾರೆ. ಶ್ರವಣಬೆಳಗೊಳದ ಸಂಸ್ಕೃತ ಶಾಸನಗಳಲ್ಲಿ ಹೆಚ್ಚಾಗಿಯೂ ಕನ್ನಡ ಶಾಸನಗಳಲ್ಲಿ ಕ್ವಚಿತ್ತಾಗಿಯೂ ಕಟವಪ್ರದ ಪ್ರಯೋಗವಿದೆ: ಕೇಳೊಯ್ಬ್ಬನ್ + ಕಟವಪ್ರತ್ತೈಲ ಮುಡಿಪ್ಪಿದನಮ್ಮಾ (ಅದೇ, 22–23, ಸುಮಾರು 700). ಇದಕ್ಕೆ ಸದ್ಭವರೂಪವಾಗಿ ಕಳ್ವಪ್ಪು ಶಬ್ದವಿದೆ. ಕಳ್ವಪ್ಪು ಶಬ್ದ ಮಾತ್ರ. ಸಹಜವಾಗಿಯೇ, ಕನ್ನಡ ಶಾಸನಗಳಲ್ಲಿಷ್ಟೇ ದೊರೆಯುತ್ತದೆ. ಶ್ರೀ ಮಾಸೇನಪ್ಪೆರಮ ಪ್ರಭಾವ ರಿಷಿಯರ್ + ಕಳ್ವಪ್ಪಿನಾಪಟ್ಟುದುಳ್ (ಅದೇ, 27–1, ಸುಮಾರು 700). ಶ್ರೀ ದಿಣೆಗರ್ಕಳ್ವಪ್ಪುನಾಡು (ಮೈಸೂರು ಆರ್ಕಿಯಲಾಜಿಕಲ್ ರಿಪೋರ್ಟ್, 1927, 118–40. 726). ದೊಡ್ಡಬೆಟ್ಟವನ್ನು ಪೆರ್ಗಳ್ವಪ್ಪು ಎಂದು ನಿರ್ದೇಶಿಸಿದೆ: ಪೆರ್ಗ್ಗಳ್ವಪ್ಪಿನಾ ಪೊಲದಿನ್ನಡದು ಕೊಟ್ಟುದು (ಎಪಿಗ್ರಾಫಿಯಾ ಕರ್ನಾಟಿಕ, 11. 35–4, ಸುಮಾರು 800). ಕಳ್ವಪ್ಪು. ಕಳ್ಬಪ್ಪು ರೂಪಗಳಲ್ಲದೆ ಕಬ್ಬಪ್ಪು, ಕಾಳ್ಬಪ್ಪು, ಕಳ್ವಾಪ್ಪುಪರ್ವತ ಮೊದಲಾದ ರೂಪಗಳೂ ಇವೆ. ಅವು ಅಪ್ರಕೃತ.

ಕಟವಪ್ರ ಎಂಬುದು ಸಂಸ್ಕೃತ ಸಮಾಸ ಶಬ್ದ: ಕಟ + ವಪ್ರ. ಹಾಗೆಂದರೇನು? ಸಂಸ್ಕೃತದಲ್ಲಿ ಕಟ ಎಂಬ ಶಬ್ದಕ್ಕೆ ನಾನಾ ಅರ್ಥಗಳಿವೆ: ಕಟ = 1. ಹುಲ್ಲಿನ ಹುರಿ,

ಚಾಪೆ. 2. ಊರಿನ ಹೊರವಲಯ. 3. ಕಾಲ. 4. ಸೊಂಟ. 5. ಪಕ್ಕೆ 6. ಹೆಣ. 7. ಸುಡುಗಾಡು. 8. ಸಿದಿಗೆ. ಚಟ್ಟ. 9. ಮರದ ಹಲಗೆ 10. ಒಂದು ವರ್ಷ ಇರುವ ಸಸಿ. 11. ಜಾತಿಯ ಹುಲ್ಲು 12. ಹೆಚ್ಚಳ 13. (ಆನೆಯ) ಗಂಡಸ್ಥಳ. 14. ದವಡೆ. ಇತ್ಯಾದಿ. ಇವುಗಳಲ್ಲಿ ಒಂದು ಬಗೆಯ ಹುಲ್ಲು ಎಂಬುದೇ ಪ್ರಧಾನವಾದ ಅರ್ಥವಿರಬಹುದೆಂದು ತಿಳಿಯಲು ಅವಕಾಶವಿದೆ. ಯಾವುದೋ ಒಂದು ಮೂಲಾರ್ಥದ ಛಾಯೆಗಳ ಜೊತೆ ಹತ್ತು ನಾನಾರ್ಥಗಳು ನಿಷ್ಪನ್ನವಾಗುವುದು ಶಬ್ದಾರ್ಥಶಾಸ್ತ್ರಜ್ಞರಿಗೆ ಪರಿಚಿತವಾದದ್ದೇ. ಕಟ ಶಬ್ದಕ್ಕೆ ಮೊದಲಿಗೆ ಹುಲ್ಲು. ಒಂದು ಬಗೆಯ ಹುಲ್ಲು ಎಂಬರ್ಥವಿದ್ದಿರಬೇಕು. ಅದು ಕೇವಲ ಒಂದು ವರ್ಷಮಾತ್ರ ಇರುತ್ತಿದ್ದ ಕಾರಣ 'ಒಂದು ವರ್ಷವಿರುವ ಸಸಿ' ಅರ್ಥಕ್ಕೆ ಕಾರಣವಾಗಿದೆ. ಬಹುಶಃ ಇದು ಜೊಂಡಿನ ಜಾತಿಗೆ ಸೇರಿದ ಹುಲ್ಲು. ಈ ಹುಲ್ಲಿನ ಹುರಿಯಿಂದ ಚಾಪೆಯನ್ನು ಮಾಡುತ್ತಿದ್ದುದರಿಂದ ಕಟ ಶಬ್ದಕ್ಕೆ ಚಾಪೆ ಎಂಬರ್ಥ ಉಂಟಾಗಿದೆ. ಇದು ಊರಿನ ಹೊರಗೆ ಬೆಳೆಯುತ್ತಿದ್ದುದರಿಂದ ಊರಿನ ಹೊರ ವಲಯ ಎಂಬರ್ಥಕ್ಕೆ ಅವಕಾಶವಾಗಿದೆ. ಸಿದಿಗೆ ಅಥವಾ ಚಟ್ಟ ಕಟ್ಟಲು ಹುಲ್ಲನ್ನು ಇಂದಿಗೂ ಉಪಯೋಗಿಸುತ್ತಾರೆ. ತತ್ಫಲವಾಗಿ ಆ ಅರ್ಥ ಬಂದಿದೆ—ಹೀಗೆ ಈ ಶಬ್ದಾರ್ಥ ವಿಕಾಸವನ್ನು ಊಹಿಸಲವಕಾಶವಿದೆ. ಏನೇ ಇದ್ದರೂ ಒಂದು ಬಗೆಯ ಹುಲ್ಲು ಎಂಬುವನ್ನೇ ಕಟ ಶಬ್ದಕ್ಕೆ ಪ್ರಧಾನವಾದ ಮೂಲಾರ್ಥವೆಂದು ಪರಿಗಣಿಸುವುದು ಸಾಧು.

ಈ ಸಂಸ್ಕೃತ ಸಮಾಸ ಶಬ್ದದ ಉತ್ತರಾರ್ಧ ವಪ್ರ ಎಂಬುದು. ಇದರ ಅರ್ಥದಲ್ಲಿ ಕ್ಲಿಷ್ಟತೆಯಿಲ್ಲ. ವಪ್ರ ಎಂದರೆ ಬೆಟ್ಟದ ಪಕ್ಕ ಪ್ರದೇಶ. ಸಾನು. ಕಟವಪ್ರಗಿರಿ ಎಂದರೆ ಹುಲ್ಲು ಬೆಳೆದಿರುವ ಸಾನು ಪ್ರದೇಶವನ್ನುಳ್ಳ ಬೆಟ್ಟ ಎಂದರ್ಥ. ಇಂದಿಗಿಂತಲೂ ನೂರ್ಮಡಿ ಹೆಚ್ಚಾಗಿ ಈ ಚಂದ್ರಗಿರಿ (ಕಟವಪ್ರಗಿರಿ)ಯಲ್ಲಿ ಒಂದು ಬಗೆಯ ಹುಲ್ಲು ಸಮೃದ್ಧವಾಗಿ ಬೆಳೆಯುತ್ತಿದ್ದಿರಬೇಕು.

ಅಲ್ಲಿನ ಪ್ರಾಚೀನ ಶಾಸನಗಳಲ್ಲಿ ಅದೇ ಸ್ಥಳಕ್ಕೆ ಕಟವಪ್ರದಂತೆ ಕಳ್ವಪ್ಪು ಎಂಬ ಹೆಸರೂ ಇದೆ. ಅದು ಕನ್ನಡ ಶಬ್ದದಂತೆ ತಟ್ಟನೆ ತೋರುತ್ತದೆ. ಕನ್ನಡ ಗ್ರಂಥಗಳಲ್ಲಿ ಮೊಟ್ಟಮೊದಲು ಅದು ಕಂಡುಬರುವುದು ಹತ್ತನೆಯ ಶತಮಾನದ ವಡ್ಡಾರಾಧನೆಯಲ್ಲಿ. ಆದರೆ ಅದಕ್ಕೂ ಪೂರ್ವದಲ್ಲಿನ ಶಾಸನಗಳಲ್ಲಿ ಅದರ ಪ್ರಯೋಗಗಳಿದ್ದುವೆಂಬುದನ್ನು ಈ ಲೇಖನದಲ್ಲೇ ಉದಾಹರಿಸಿದ ಶಾಸನಗಳಿಂದ ತಿಳಿದುಬರುತ್ತದೆ. ಕಟವಪ್ರ, ಕಳ್ವಪ್ಪು ಸಮಕಾಲೀನ ಪ್ರಯೋಗಗಳು ಆಗಿವೆ. ಸಮಾನಾರ್ಥಕ ಶಬ್ದಗಳೂ ಆಗಿವೆ.

ಈಗ ಕಟವಪ್ರದಿಂದ ಕಳ್ವಪ್ಪು/ಕಳ್ಬಪ್ಪು ಬಂತೆ ಅಥವಾ ಕಟವಪ್ರ ಎಂಬುದೇ ಸಂಸ್ಕೃತೀಕರಣಗೊಂಡ ರೂಪವೆ ಎಂಬುದು ಪರಿಶೀಲನಾರ್ಹ. ನಾಗೇನೋ ಕಟವಪ್ರ

ಪ್ರದಿಂದ ತದ್ಭವವಾಗಿ ಕಬ್ಬಿಪ್ಪು ರೂಪಗೊಂಡಿರುವಂತೆ ತೋರುತ್ತದೆ. ಈ ಸಂಭಾವ್ಯತೆಯನ್ನು ಪುಷ್ಟೀಕರಿಸುವ ಅಂಶಗಳಿವೆ. ಮೇಲಿನ ನೋಟಕ್ಕೆ ಕಬ್ಬಿಪ್ಪು ಕನ್ನಡ ಶಬ್ದದಂತೆ ಕಂಡರೂ ಹೆಕ್ಕಿ ನೋಡಿದಾಗ ಅದು ಕನ್ನಡಶಬ್ದವಾಗಿರುವುದು ಸಾಧ್ಯವಿಲ್ಲವೆಂದು ಮನವರಿಕೆಯಾಗುತ್ತದೆ.

ಕಬ್ಬಿಪ್ಪು/ಕಬ್ಬಿಪ್ಪು ಒಂದು ಸಮಾಸ ಶಬ್ದ, ಕಟುವಪ್ರದಂತೆ: ಕಟ್ + ವಪ್ಪು/ಬಪ್ಪು ಈ ಸಮಾಸದ ಎರಡನೆಯ ಭಾಗವಾದ ವಪ್ಪು/ಬಪ್ಪು ಎಂಬುದು ಕನ್ನಡದಲ್ಲಿ ಬೆಟ್ಟ ಬೆಟ್ಟದ ಪಕ್ಕಪ್ರದೇಶ. ಸಾನು ಎಂಬರ್ಥದಲ್ಲಿ ಕನ್ನಡದಲ್ಲಿ ಇಲ್ಲ. ವಪ್ರ ಎಂಬ ಸಂಸ್ಕೃತ ಶಬ್ದ ವಪ್ಪು ಆಗುವುದು ಸಂಭಾವ್ಯ. ಎರಡು ಪ್ರಬಲ ಕಾರಣಗಳಿಂದ: 1. ವಿಜಾತೀಯ ಸಂಯುಕ್ತಾಕ್ಷರಗಳು. ಕನ್ನಡದಲ್ಲಿ ಸಜಾತೀಯ ಆಗುತ್ತವೆ. 2. ರೇಫ ಸಂಸ್ಕೃತದ ಶಬ್ದದಲ್ಲಿದ್ದರೂ ಕನ್ನಡಕ್ಕೆ. ತದ್ಭವವಾಗಿ. ಬಂದಾಗ ಒಮ್ಮೊಮ್ಮೆ ಲೋಪವಾಗುವುದುಂಟು. ಅಲ್ಲದೆ ವಪ್ಪು→ಬಪ್ಪು ಎಂದು ಧ್ವನಿ ವ್ಯತ್ಯಾಸ ಪಡೆಯುವುದು ಕನ್ನಡದಲ್ಲಿ (ವ→ಬ) ವಾಡಿಕೆಯಲ್ಲಿದೆ. ವಪ್ಪು ಬಪ್ಪು ಎಂಬ ಶಬ್ದಾಂತ್ಯದ/-ಉ/ಉಚ್ಚಾರ ಸೌಲಭ್ಯಕ್ಕಾಗಿ ಸೇರಿಕೊಂಡಿದೆ. ಕನ್ನಡೇತರ ದ್ರಾವಿಡ ಭಾಷೆಗಳಲ್ಲಿ ಇದಕ್ಕೆ ಜ್ಞಾತಿರೂಪಗಳಿಲ್ಲ.

ಈ ಕನ್ನಡ ಸಮಾಸ ಶಬ್ದದ ಮೊದಲನೆಯ ಭಾಗ ಕಟ್ ಎಂಬುದು ಚುಟಾಂತವಾಗಿದ್ದು ದೇಶ್ಯವೆಂದು ತೋರುವ ಭ್ರಾಂತಿಕಾರಕ ಅಂಶವಾಗಿದೆ. ಆ ಶಬ್ದಕ್ಕೆ ಹುಲ್ಲು ಎಂಬರ್ಥ ಕನ್ನಡದಲ್ಲಿಲ್ಲ: ಉಳಿದ ಜ್ಞಾತಿ ಭಾಷೆಗಳಲ್ಲೂ ಇಲ್ಲ. ಕಬ್ಬಿಂಗಳ್ (ಕಟ್ + ತಿಂಗಳ್) ಕಬ್ಬು (ಕಟ್ + -ಪು) ಮುಂತಾದ ಶಬ್ದಗಳಲ್ಲಿ ಆದಿಪದವಾಗಿ ಕಟ್ ದೊರೆಯುತ್ತದೆ. ಇದಕ್ಕೂ ಮೇಲಿನ ಕಬ್ಬಿಪ್ಪಿನ ಕಟ್‌ಗೂ ಏನೂ ಸಂಬಂಧವಿಲ್ಲ. ಇಲ್ಲಿನ ಕಟ್ ಎಂಬುದು ಕರ್ (=ಕಪ್ಪು) ಎಂಬುದರ ರೂಪಾಂತರ. ಅದು ಪಶ್ಚಗಾಮಿ ರಚನೆಯಿಂದಾಗಿ (back formation) ಕರ್→ಕಟ್ ಆಗಿದೆ. ಕಟ್—ಬದ್ಧ ಆಕೃತಿಮಾ, ಅದಕ್ಕೆ ಸ್ವತಂತ್ರ ಅಸ್ತಿತ್ವವಿಲ್ಲ ಕನ್ನಡದಲ್ಲಿ. ಸಂಸ್ಕೃತದ ಕಟುವಪ್ರದಲ್ಲಿ ಎರಡೂ ಮುಕ್ತ ಆಕೃತಿಮಾಗಳು. ಕನ್ನಡದಲ್ಲಿ ಎರಡೂ ಬದ್ಧ ಆಕೃತಿಮಾಗಳು. ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಹೋದ ಬದ್ಧ ಆಕೃತಿಮಾಗಳು ಮುಕ್ತ ಆಕೃತಿಮಾಗಳಾಗಿ ಚಲಾವಣೆ ಮಾನ್ಯತೆ ಪಡೆಯುವುದು ಅಪರೂಪ. ಆದ್ದರಿಂದ ಸದ್ಯಕ್ಕೆ ಇನ್ನೂ ಹೆಚ್ಚಿನ ಆಧಾರಗಳು ದೊರೆಯುವ ತನಕ. ಕಟುವಪ್ರವನ್ನೇ ಮೂಲ ಶಬ್ದವಾಗಿಟ್ಟುಕೊಂಡು ಕಬ್ಬಿಪ್ಪು ಎಂಬುದನ್ನು ತದ್ಭವವೆಂದು ಪರಿಗಣಿಸಬೇಕಾಗಿದೆ.

ಹಂಪ. ನಾಗರಾಜಯ್ಯ

ಸಂಪಾದಕೀಯ

ಅಖಿಲ ಕರ್ನಾಟಕ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳ ಪ್ರಥಮ ಸಮ್ಮೇಳನ

5–8–73ರಂದು ಬೆಂಗಳೂರು ವಿಶ್ವವಿದ್ಯಾಲಯವು ಪ್ರಥಮ ಬಾರಿಗೆ ಅಖಿಲ ಕರ್ನಾಟಕ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳ ಸಮ್ಮೇಳನವನ್ನು ಏರ್ಪಡಿಸಿತ್ತು. ವಿವಿಧ ಅಧ್ಯಯನಾಂಗಗಳನ್ನು ಪ್ರತಿನಿಧಿಸುವಂತೆ, ಮೈಸೂರು ಹಾಗೂ ಕರ್ನಾಟಕ ವಿಶ್ವವಿದ್ಯಾಲಯಗಳಿಂದ ಬಂದ ವಿದ್ಯಾರ್ಥಿ ಪ್ರತಿನಿಧಿಗಳೂ, ಬೆಂಗಳೂರಿನ ಎಲ್ಲಾ ಕಾಲೇಜಿನಿಂದ, ಕನ್ನಡ ಮಾಧ್ಯಮದ ಮತ್ತು ಕನ್ನಡ ಮಾಧ್ಯಮದಲ್ಲಿ ನಂಬಿಕೆಯುಳ್ಳ ಅಧಿಕ ಸಂಖ್ಯೆಯ ವಿದ್ಯಾರ್ಥಿಗಳೂ ಈ ಸಮ್ಮೇಳನದಲ್ಲಿ ಭಾಗವಹಿಸಿದರು.

ಈ ಸಮ್ಮೇಳನವನ್ನು. ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ದೇ. ಜವರೇಗೌಡರು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ನಾರಾಯಣ ಅವರು ವಹಿಸಿದ್ದರು. ಸುಪ್ರಸಿದ್ಧ ಸಾಹಿತಿ ಶ್ರೀ ವಿ. ಸೀತಾರಾಮಯ್ಯನವರು ವಿಶೇಷ ಅತಿಥಿಗಳಾಗಿದ್ದರು.

ಬೇಗಳೂರು ವಿಶ್ವವಿದ್ಯಾಲಯದ ಉಪಕುಲಪತಿ ಡಾ. ಎಚ್. ನರಸಿಂಹಯ್ಯನವರು ಸ್ವಾಗತ ಭಾಷಣ ಮಾಡಿ. ಈ ಸಮ್ಮೇಳನದ ಮಹತ್ವವನ್ನು ವಿವರಿಸಿದ್ದಲ್ಲದೆ. "ಕರ್ನಾಟಕದಲ್ಲಿ ಕನ್ನಡ ಶಿಕ್ಷಣಮಾಧ್ಯಮ ಆಗಬೇಕೆಂಬುದು ಇನ್ನೂ ಚರ್ಚೆ ಹಾಗೂ ಸಮ್ಮೇಳನದ ವಿಷಯವಾಗಿ ಉಳಿದಿರುವುದು ದುರ್ದೈವದ ಸಂಗತಿ"-ಎಂದರು. ಉದ್ಘಾಟನಾ ಭಾಷಣ ಮಾಡಿದ ಪ್ರೊ. ದೇ. ಜವರೇಗೌಡರು. ಈ ಸಮ್ಮೇಳನದ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿ ಕನ್ನಡ ಮಾಧ್ಯಮದ ಅವಶ್ಯಕತೆ. ಅದನ್ನು ರೂಪಿಸುವಲ್ಲಿ ನಾವು ಇನ್ನೂ ಎದುರಿಸಬೇಕಾಗಿರುವ ಅಡೆ-ತಡೆಗಳು ಇವೆಲ್ಲವನ್ನೂ ಪ್ರಸ್ತಾಪಿಸಿ "ಅಗತ್ಯ ಬಿದ್ದರೆ ಕನ್ನಡ ಮಾಧ್ಯಮಕ್ಕಾಗಿ ಚಳುವಳಿ ನಡೆಸಿದರೆ ಸಾರ್ಥಕವಾದೀತು" ಎಂದರು. ಮುಖ್ಯ ಅತಿಥಿಗಳಾದ ಶ್ರೀ ವಿ. ಸೀತಾರಾಮಯ್ಯನವರು. ಕನ್ನಡ ಮಾಧ್ಯಮದ ಅಗತ್ಯವನ್ನು ಪ್ರತಿಪಾದಿಸಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಜಿ. ನಾರಾಯಣ ಅವರು "ಕನ್ನಡ ಮಾಧ್ಯಮ ಯಶಸ್ವಿಯಾಗಬೇಕಾದರೆ. ನಮ್ಮ ಸರ್ಕಾರವು ಮೊದಲು ಕನ್ನಡವನ್ನು ರಾಜ್ಯಭಾಷೆಯನ್ನಾಗಿ ಮಾಡುವುದೊಂದೇ ದಾರಿ"–ಎಂದು ಘೋಷಿಸಿದರು. ರಾಷ್ಟ್ರೀಯ ವಿದ್ಯಾಲಯದ ಶಿಕ್ಷಕರ ಕಾಲೇಜಿನ ವಿದ್ಯಾರ್ಥಿ ಶ್ರೀ ಟಿ. ಮುನಿಯಪ್ಪ ಅವರು ವಂದನೆ ಸಲ್ಲಿಸಿದರು.

ಕನ್ನಡ ಮಾಧ್ಯಮದ ಸಮಸ್ಯೆಗಳನ್ನು ಕುರಿತು ವಿದ್ಯಾರ್ಥಿ ವಿಚಾರ ಗೋಷ್ಠಿ ಆಚಾರ್ಯ ಪಾಠಶಾಲೆ ಸಂಜೆ ಕಾಲೇಜಿನ ಶ್ರೀ ಹೊ. ಸ್ವಾ. ಸಂಜೀವಮೂರ್ತಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸರ್ಕಾರಿ ಕಲಾ ಕಾಲೇಜಿನ ಶ್ರೀ ಜಿ. ಆರ್. ಮಧ್ವರಾಜ್ ಅವರು ಕಾರ್ಯದರ್ಶಿಯಾಗಿ ಈ ಗೋಷ್ಠಿಯ ವ್ಯವಸ್ಥೆಯನ್ನು ನೋಡಿಕೊಂಡರು.

ನಾಲ್ಕು ಗಂಟೆಗಳ ಕಾಲ ನಡೆದ ಈ ವಿದ್ಯಾರ್ಥಿ ವಿಚಾರ ಗೋಷ್ಠಿ, ನಮ್ಮ ವಿದ್ಯಾರ್ಥಿಗಳು ಎಷ್ಟು ವ್ಯವಸ್ಥಿತವಾಗಿ, ಅನುದ್ವೇಗಕರವಾದ ರೀತಿಯಲ್ಲಿ, ವಿಚಾರ ಗೋಷ್ಠಿಯನ್ನು ತಾವೇ ನಡೆಸಬಲ್ಲರು ಎಂಬುದಕ್ಕೆ ಸಾಕ್ಷಿಯಾಗಿತ್ತು. ಈ ಗೋಷ್ಠಿಯಲ್ಲಿ ಚರ್ಚಿತವಾದ ವಿಷಯಗಳಿಂದ, ನಲವತ್ತು ನಿರ್ಣಯಗಳನ್ನು ವಿದ್ಯಾರ್ಥಿಗಳು ರೂಪಿಸಿದರು.

ಸಮಾರೋಪ ಭಾಷಣ ಮಾಡಿದ ಡಾ. ಮಾಸ್ತಿ ವೆಂಕಟೇಶ ಐಯ್ಯಂಗಾರ್ ಅವರು ಶಿಕ್ಷಣ ಮಾಧ್ಯಮದ ಭಾಷೆಯಾಗಲು ಕನ್ನಡಕ್ಕೆ ಇರುವ ಅರ್ಹತೆಯನ್ನು ಪ್ರಸ್ತಾಪಿಸಿ "ಇಂಗ್ಲಿಷ್ ಭಾಷೆ ನಮ್ಮ ಕೊರಳಿಗೆ ಬಿದ್ದಿರುವ ಉರುಳು" ಎಂದು ವರ್ಣಿಸಿದರು. ಅಧ್ಯಕ್ಷತೆ ವಹಿಸಿದ್ದ ಡಾ. ನರಸಿಂಹಯ್ಯನವರು ಈ ಸಮ್ಮೇಳನವನ್ನು ಯಶಸ್ವಿಯನ್ನಾಗಿ ಮಾಡಿದ್ದಕ್ಕೆ ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

ಸಮ್ಮೇಳನದಲ್ಲಿ ಅಂಗೀಕೃತವಾದ ನಿರ್ಣಯಗಳು ಹೀಗಿವೆ :

1. ಪಠ್ಯಪುಸ್ತಕ ನಿರ್ಮಾಣ ಕಾರ್ಯದಲ್ಲಿ ಒಂದು ಏಕರೂಪತೆಯೂ, ತ್ವರಿತಗತಿಯೂ ಇರುವ ಸಲುವಾಗಿ ಸರ್ಕಾರವೇ ಒಂದು ಪಠ್ಯಪುಸ್ತಕ ನಿರ್ಮಾಣ ಕೇಂದ್ರವನ್ನು ನಡೆಸಬೇಕು.

2. ವಿಶ್ವವಿದ್ಯಾಲಯಗಳು ಪ್ರಕಟಿಸುತ್ತಿರುವ ಪುಸ್ತಕಗಳು ವಿದ್ಯಾರ್ಥಿಗಳು ಕೊಳ್ಳುವ ಮಿತಿಗೆ ಎಟುಕುವಷ್ಟು ಸುಲಭ ಬೆಲೆಯಲ್ಲಿರಬೇಕು.

3. ವಿಶ್ವವಿದ್ಯಾಲಯಗಳ ಪದವಿ ಪ್ರದಾನ ಸಮಾರಂಭಗಳಲ್ಲಿ ನೀಡುವ ಅರ್ಹತಾ ಪತ್ರ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿರಬೇಕು. ಹಾಗೆಯೇ ಕನ್ನಡ ಮಾಧ್ಯಮದಲ್ಲಿ ತೇರ್ಗಡೆಯಾದವರ ಬಗ್ಗೆ ವಿಶೇಷ ಸೂಚನೆ ಇರಬೇಕು.

4. ವಿಶ್ವವಿದ್ಯಾಲಯಗಳ ಅಂಕಪಟ್ಟಿ, ದೇಣಿಪಟ್ಟಿ ಮತ್ತು ಪ್ರವೇಶಪತ್ರ ಮುಂತಾದುವುಗಳು ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿರಬೇಕು,

5. ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಮತ್ತು ಪಿ. ಎಚ್‌ಡಿ. ಸಂಶೋಧನ ಪ್ರಬಂಧಗಳನ್ನು ಎಲ್ಲಾ ವಿಷಯಗಳಲ್ಲೂ, ಕನ್ನಡದಲ್ಲಿ ಬರೆಯಲು ಅವಕಾಶವಿರಬೇಕು.

6. ಪದವಿ ಪೂರ್ವ ಪರೀಕ್ಷೆಗಳ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಕನ್ನಡ ಮಾಧ್ಯಮದಲ್ಲಿ ಪಾಠ ಹೇಳುವ ಅಧ್ಯಾಪಕರಿಂದಲೇ ಮೌಲ್ಯಮಾಪನ ಮಾಡಿಸಬೇಕು.

7. ಕನ್ನಡ ಮಾಧ್ಯಮದ ತೊಡಕುಗಳನ್ನು ಪರಿಶೀಲಿಸಲು ಅಧ್ಯಾಪಕರಿಗೆ ವಿಶ್ವ ವಿದ್ಯಾಲಯಗಳು ಬೇಸಿಗೆ ಶಿಬಿರಗಳನ್ನು ಏರ್ಪಡಿಸಬೇಕು ಹಾಗೂ ವಿಚಾರ ಸಂಕಿರಣಗಳನ್ನು ಏರ್ಪಡಿಸಬೇಕು,

8. ಈಗಾಗಲೇ ಇಂಗ್ಲಿಷ್ ಭಾಷೆಯಲ್ಲಿರುವಂತೆ ಬೇರೆ ಬೇರೆ ವಿಷಯಗಳನ್ನು ಕುರಿತು (ವಾಣಿಜ್ಯ, ತಾಂತ್ರಿಕ, ವೈದ್ಯಕೀಯ, ಸಮಾಜಶಾಸ್ತ್ರ. ಭೂಗರ್ಭಶಾಸ್ತ್ರ) ವಿವರವಾದ, ಸರಿಯಾದ ನಿಘಂಟುಗಳನ್ನು ಕೂಡಲೇ ಸಿದ್ಧ ಮಾಡಬೇಕು. ಸುಲಭ ಬೆಲೆಗೆ ದೊರಕುವಂತೆ ಇರಬೇಕು.

9. ಪ್ರತಿಯೊಂದು ವಿಶ್ವವಿದ್ಯಾಲಯವೂ ಕನ್ನಡ ಮಾಧ್ಯಮದ ಒಂದು ಕಾಲೇಜನ್ನು ಪ್ರಾರಂಭಿಸಬೇಕು, ನಡೆಸಬೇಕು.

10. ವಿಶ್ವವಿದ್ಯಾಲಯಗಳ ಆಡಳಿತ ಭಾಷೆ ಕನ್ನಡವಾಗಬೇಕು. ಇನ್ನುಮುಂದ ವಿಶ್ವವಿದ್ಯಾಲಯಗಳು ತಮ್ಮ ಆಡಳಿತದ ಪರಿಧಿಯಲ್ಲಿರುವ ಕಾಲೇಜುಗಳೊಂದಿಗೆ ಕನ್ನಡದಲ್ಲಿ ವ್ಯವಹಾರ ನಡೆಸಬೇಕು. ಸುತ್ತೋಲೆ. ಸೂಚನಾಪತ್ರ. ಮುಂತಾದವುಗಳು ಕನ್ನಡದಲ್ಲೇ ಇರಬೇಕು. ಇದಕ್ಕೆ ಬೇಕಾದ ಆಡಳಿತ ಭಾಷಾ ಶಬ್ದಕೋಶವನ್ನು ಕೂಡಲೇ ಮೂರು ವಿಶ್ವವಿದ್ಯಾಲಯಗಳು ಸೇರಿ ಸಿದ್ಧಮಾಡಬೇಕು.

11, ವರ್ಷ ವರ್ಷವೂ ಬೆಂಗಳೂರು ವಿಶ್ವವಿದ್ಯಾಲಯ ಕನ್ನಡ ಮಾಧ್ಯಮ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಚರ್ಚಿಸಲು ಕೇವಲ ಕನ್ನಡ ಮಾಧ್ಯಮ ವಿದ್ಯಾರ್ಥಿಗಳ ಸಮ್ಮೇಳನವನ್ನು ನಡೆಸಬೇಕು.

12. ಕನ್ನಡ ಮಾಧ್ಯಮದ ಪಠ್ಯಪುಸ್ತಕ ಪ್ರದರ್ಶನವನ್ನು ಆಗಿಂದಾಗ್ಗೆ ಏರ್ಪಡಿಸುತ್ತಿರಬೇಕು.

13, ನಮ್ಮ ರಾಜ್ಯದ ಮೂರು ವಿಶ್ವವಿದ್ಯಾಲಯಗಳು ಕನ್ನಡ ಮಾಧ್ಯಮದ ಮತ್ತು ಕನ್ನಡದ (ಇತರ) ಪುಸ್ತಕಗಳ ಮಾರಾಟವನ್ನು ಒಟ್ಟಾಗಿ ಮಾಡುವ ವ್ಯವಸ್ಥೆ ಮಾಡಬೇಕು. ಬೆಂಗಳೂರು. ಮೈಸೂರು. ಧಾರವಾಡ. ಮಂಗಳೂರು, ಶಿವಮೊಗ್ಗ. ಕಲ್ಬುರ್ಗಿ. ಮುಂತಾದ ಕಡೆ ಸಾರ್ವಜನಿಕರು ಕೊಳ್ಳುವಂತೆ ಆಕರ್ಷಕವಾಗಿ. ಜನನಿಬಿಡ ಸ್ಥಳಗಳಲ್ಲಿ ಮಾರಾಟ ವ್ಯವಸ್ಥೆಯನ್ನು ಮಾಡಬೇಕು.

14. ವಿಶ್ವವಿದ್ಯಾಲಯದ ಆಡಳಿತದೊಳಗಿರುವ ಪ್ರತಿಯೊಂದು ಕಾಲೇಜಿನಲ್ಲಿಯೂ ಕನಿಷ್ಠ ಪಕ್ಷ ಒಂದು ಕನ್ನಡ ಮಾಧ್ಯಮದ ತರಗತಿಯನ್ನು ನಡೆಸುವಂತೆ. ಸರ್ಕಾರ ಗೊತ್ತುಮಾಡಬೇಕು.

15. ಕನ್ನಡ ಮಾಧ್ಯಮವನ್ನು ತೆರೆದಿರುವ. ತೆರೆಯುವ ಕಾಲೇಜುಗಳಿಗೆ ಸರ್ಕಾರ 100% ಧನಸಹಾಯ ಮಾಡಬೇಕು.

16. ಬಿ. ಎಡ್. ತರಗತಿಗಳ ಶಿಕ್ಷಣವನ್ನು ಕನ್ನಡ ಮಾಧ್ಯಮದಲ್ಲೂ ನಡೆಸಬೇಕು.

17. ವಿವಿಧ ಹುದ್ದೆಗಳಿಗಾಗಿ ಸರ್ಕಾರ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಉತ್ತರ ಬರೆಯಲು ಅವಕಾಶವಿರಬೇಕು. ಕೇಂದ್ರ ಸರ್ಕಾರದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹಿಂದಿಗೆ ಇರುವ ಸ್ಥಾನ–ಮಾನಗಳು ಕನ್ನಡಕ್ಕೂ ಇರಲೇಬೇಕು.

18. ಕನ್ನಡ ಮಾಧ್ಯಮದಿಂದ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಸರ್ಕಾರ ಉದ್ಯೋಗಗಳಲ್ಲಿ ಆದ್ಯತೆ ಕೊಡಬೇಕು.

19. ಪ್ರೌಢಶಾಲೆಯವರೆಗೆ ಕನ್ನಡ ಮಾಧ್ಯಮ ತೆಗೆದುಕೊಳ್ಳಲು ಎಲ್ಲಾ ಶಾಲೆಗಳಲ್ಲೂ ಅವಕಾಶವಿರಬೇಕು. ಕೇಂದ್ರ ಸರ್ಕಾರದ ಸೆಂಟ್ರಲ್ ಸ್ಕೂಲುಗಳಲ್ಲೂ ಇಂಗ್ಲಿಷ್ ಮತ್ತು ಹಿಂದಿಯಂತೆ ಕನ್ನಡ ಮಾಧ್ಯಮವಿರಬೇಕು.

20. ಕನ್ನಡ ಮಾಧ್ಯಮ ಸರಿಯಾದ ರೀತಿಯಲ್ಲಿ ಪರಿಣಾಮಕಾರಿಯಾಗಬೇಕಾದರೆ. ಮೊದಲು ಸರ್ಕಾರ ಕನ್ನಡವನ್ನು ರಾಜ್ಯಭಾಷೆಯನ್ನಾಗಿ ಮಾಡಬೇಕು.

21. ಉತ್ತಮ ಮಾದರಿಯ ಕನ್ನಡ ಮಾಧ್ಯಮದ ನರ್ಸರಿ ತರಗತಿಗಳನ್ನು ನಡೆಸಲು ಕನ್ನಡ ಸಾಹಿತ್ಯ ಪರಿಷತ್ತು ಮುಂದೆ ಬರಬೇಕು ಮತ್ತು ಪ್ರೋತ್ಸಾಹ ನೀಡಬೇಕು.

22. ಕನ್ನಡ ಮಾಧ್ಯಮದ ಮೂಲಕ ಪಾಠ ಹೇಳಲು ಮುಂದೆಬರುವ ಅಧ್ಯಾಪಕರುಗಳಿಗೆ ಪ್ರೋತ್ಸಾಹಧನವನ್ನು ವೇತನದ ಜತೆಗೆ ಕೊಡುವ ಏರ್ಪಾಡು ಆಗಬೇಕು.

23. ಕೃಷಿ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷಿನ ಜತೆಗೆ. ಕನ್ನಡ ಭಾಷೆಯ ವ್ಯಾಸಂಗಕ್ಕೆ ಕೂಡಲೇ ಅವಕಾಶ ಕಲ್ಪಿಸಬೇಕು.

24. ಕೃಷಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಮಾಧ್ಯಮದಲ್ಲಿ ಬೋಧನೆಯ ವ್ಯವಸ್ಥೆಯಾಗಬೇಕು.

25. ವೈದ್ಯಕೀಯ ಶಿಕ್ಷಣ ಕನ್ನಡ ಮಾಧ್ಯಮದಲ್ಲಿ ನಡೆಯುವ ವ್ಯವಸ್ಥೆಯಾಗಬೇಕು.

26. ಕಾಲೇಜುಗಳಲ್ಲಿ ಭಾಷೆಗೆ ಸಂಬಂಧಪಟ್ಟ ತರಗತಿಗಳನ್ನು ನಡೆಸುವ ಬಗ್ಗೆ ಸಂಖ್ಯಾಮಿತಿ ನಿರ್ಬಂಧವನ್ನು ಕನ್ನಡ ಮಾಧ್ಯಮದ ಮಟ್ಟಿಗೆ ಸಡಿಲಗೊಳಿಸಬೇಕು.

27. ಮಿಷನರಿ ಕಾಲೇಜುಗಳಲ್ಲಿ ಮತ್ತು ಶಾಲೆಗಳಲ್ಲಿ ಕನ್ನಡ ವಾತಾವರಣವನ್ನು ಉಂಟುಮಾಡಲು ಕಡ್ಡಾಯವಾಗಿ ಕನ್ನಡ ಮಾಧ್ಯಮ ತರಗತಿಗಳನ್ನಾಗಲಿ ಅಥವಾ ಐಚ್ಛಿಕ ಕನ್ನಡ ತರಗತಿಗಳನ್ನಾಗಲಿ ಈ ಕೂಡಲೆ ತೆರೆಯುವಂತೆ ವಿಶ್ವ ವಿದ್ಯಾಲಯಗಳು ಮತ್ತು ಸರ್ಕಾರ ಒತ್ತಾಯ ಮಾಡಬೇಕು. ಐದು ಜನ ವಿದ್ಯಾರ್ಥಿಗಳಿದ್ದರೂ ತರಗತಿಗಳನ್ನು ತೆರೆಯುವಂತೆ ನಿಯಮಗಳನ್ನು ಸಡಿಲ ಗೊಳಿಸಬೇಕು.

28. ಕರ್ನಾಟಕದ ವಿಶ್ವವಿದ್ಯಾಲಯಗಳ ಆಡಳಿತ ವ್ಯಾಪ್ತಿಯಲ್ಲಿರುವ ಯಾವುದೇ ಕಾಲೇಜಿಗೆ, ಯಾವುದೇ ವಿಷಯದಲ್ಲಿ ಅಧ್ಯಾಪಕ ವೃತ್ತಿಯನ್ನು ಕೈಗೊಳ್ಳುವ ವರಿಗೆ ಕನ್ನಡ ಭಾಷೆಯ ತಿಳುವಳಿಕೆ ಅತ್ಯಗತ್ಯ ಎನ್ನುವುದನ್ನು ಸರ್ಕಾರ ಮತ್ತು ವಿಶ್ವವಿದ್ಯಾಲಯಗಳು ಕಡ್ಡಾಯ ಮಾಡಬೇಕು.

29. ವಿಶ್ವವಿದ್ಯಾಲಯಗಳು ಈಗಿರುವ ನಿಯತಕಾಲಿಕಗಳ ಜೊತೆಗೆ ಅನುವಾದ ನಿಯತಕಾಲಿಕಗಳನ್ನು ಹೊರಡಿಸಬೇಕು. ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆ ವಿಷಯಗಳ ಮೇಲೆ ಬಂದ ಉತ್ತಮ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಬೇಕು. ಎಲ್ಲಾ ವಿದ್ಯಾರ್ಥಿಗಳಿಗೆ. ಅಧ್ಯಾಪಕರಿಗೆ ಕಡಿಮೆ ಬೆಲೆಯಲ್ಲಿ ದೊರಕುವಂತಿರಬೇಕು, ಇದು ಕೇವಲ ಅನುವಾದಗಳಿಗೇ ಮೀಸಲಾಗಿರಬೇಕು.

30. ತಾಂತ್ರಿಕ ಮತ್ತು ಕಾನೂನು ಮುಂತಾದುವನ್ನು ಕ್ರಮೇಣ ಕನ್ನಡ ಮಾಧ್ಯಮಕ್ಕೆ ಅಳವಡಿಸಬೇಕು. ಜನಸಾಮಾನ್ಯರಿಗೆ ಈ ವಿಚಾರಗಳು ಸುಲಭವಾಗಿ ಅರ್ಥವಾಗುವಂತೆ ಪುಸ್ತಕಗಳ ನಿರ್ಮಾಣವಾಗಬೇಕು.

31. ಪ್ರತಿಯೊಂದು ಕಾಲೇಜಿನ ಗ್ರಂಥಾಲಯದಲ್ಲಿ ಕಡ್ಡಾಯವಾಗಿ ಕನಿಷ್ಠ 100ಕ್ಕೆ 50ರಷ್ಟು ಕನ್ನಡ ಪುಸ್ತಕಗಳಿರಬೇಕು.

32. ನಮ್ಮ ವಿಶ್ವವಿದ್ಯಾಲಯಗಳ ಪರಿಧಿಯಲ್ಲಿ ಬರುವ ಎಲ್ಲಾ ಕಾಲೇಜುಗಳಲ್ಲಿ ಕನಿಷ್ಠ ಒಂದು ಕನ್ನಡ ಬೆರಳಚ್ಚು ಯಂತ್ರ ಹಾಗೂ ಕನ್ನಡ ಶೀಘ್ರಲಿಪಿಕಾರ ಇರಲೇಬೇಕು. ಇದನ್ನು ಈ ಕೂಡಲೆ ಜಾರಿಗೆ ತರಬೇಕು.

33, ಸರ್ಕಾರ ಮತ್ತು ಸರ್ಕಾರದ ಧನ ಸಹಾಯವನ್ನು ಪಡೆಯುತ್ತಿರುವ ಖಾಸಗಿ ಸಂಸ್ಥೆ, ಶಾಲೆ. ಕಾಲೇಜುಗಳಲ್ಲಿ ಎಲ್ಲಾ ಉತ್ತಮ ಕನ್ನಡ ದಿನಪತ್ರಿಕೆಗಳನ್ನು ಮತ್ತು ನಿಯತಕಾಲಿಕೆಗಳನ್ನು ತರಿಸುವಂತೆ ಒತ್ತಾಯ ಮಾಡಬೇಕು.

34. ಕನ್ನಡ ಮಾಧ್ಯಮ ತೆಗೆದುಕೊಳ್ಳುವ ಎಲ್ಲ ವಿದ್ಯಾರ್ಥಿಗಳಿಗೂ ಸಾಕಷ್ಟು ಪ್ರೋತ್ಸಾಹ ನೀಡುವ ದೃಷ್ಟಿಯಿಂದ, ತಮಿಳು ನಾಡಿನ ಮಾದರಿಯಂತೆ ಉಚಿತ ಪಠ್ಯ ಪುಸ್ತಕಗಳನ್ನು, ವಿದ್ಯಾರ್ಥಿವೇತನಗಳು ಮತ್ತು ರಿಯಾಯಿತಿಗಳನ್ನು ಈ ಶೈಕ್ಷಣಿಕ ವರ್ಷದಿಂದಲೇ ಕೊಡಲು ಆರಂಭಮಾಡಬೇಕು.

35 ಹಿಂದಿ, ಸಂಸ್ಕೃತ, ಇಂಗ್ಲಿಷ್ ವಿಭಾಗಗಳು, ಸ್ನಾತಕೋತ್ತರ ಶಿಕ್ಷಣ ಕ್ರಮದಲ್ಲಿ ಕನ್ನಡ ಸಾಹಿತ್ಯವನ್ನು ಒಂದು ಐಚ್ಛಿಕ ವಿಷಯವನ್ನಾಗಿ ಅಧ್ಯಯನ ಮಾಡಲು ಅವಕಾಶ ಮಾಡಿಕೊಡಬೇಕು.

36. ಪದವಿ ತರಗತಿಗಳಲ್ಲಿ ಫ್ರೆಂಚ್, ಜರ್ಮನ್ ಇತ್ಯಾದಿ ವಿದೇಶಿ ಭಾಷೆಗಳನ್ನು ಕನ್ನಡಕ್ಕೆ ಸಂವಾದಿಯಾದ ಮಟ್ಟದಲ್ಲಿ ಕಲಿಸುವ ಕ್ರಮವನ್ನು ಕೂಡಲೆ ವಿಶ್ವ ವಿದ್ಯಾಲಯಗಳು ರದ್ದುಗೊಳಿಸಿ, ಅವುಗಳನ್ನು ಐಚ್ಛಿಕ ಅಥವಾ ಡಿಪ್ಲೊಮಾ ತರಗತಿಗಳ ಭಾಷೆಯನ್ನಾಗಿ ಕಲಿಸಲು ವ್ಯವಸ್ಥೆ ಮಾಡಬೇಕು.

37. ಸರ್ಕಾರದಲ್ಲಿ ಉದ್ಯೋಗಗಳನ್ನು ಕೊಡುವಾಗ ಅಭ್ಯರ್ಥಿಗೆ ಕನ್ನಡ ಭಾಷೆಯ, ತಿಳಿವಳಿಕೆ ಅತ್ಯಗತ್ಯವೆಂಬುದನ್ನು ಅರ್ಜಿಗಳಲ್ಲಿ ಕಾಣಿಸಬೇಕು.

38. ಸರ್ಕಾರದ ವಿವಿಧ ಹುದ್ದೆಗಳಲ್ಲಿರುವ ಕನ್ನಡ ಬಾರದ ಅಧಿಕಾರಿಗಳು ಕೂಡಲೆ ಕನ್ನಡವನ್ನು ಕಲಿಯುವಂತೆ ತಿಳಿಯಪಡಿಸಬೇಕು; ವಿಶ್ವವಿದ್ಯಾಲಯ ನಡೆಸು ತ್ತಿರುವ ಕನ್ನಡ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ತರಗತಿಗಳನ್ನು ಸೇರಿ ಕನ್ನಡ ಕಲಿಯುವಂತೆ ನಿರ್ದೇಶಿಸಬೇಕು.

39. ನಗರದ ಆಂಗ್ಲ ಮಾದರಿಯ ಸ್ಕೂಲುಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಒಂದು ಭಾಷೆಯನ್ನಾಗಿ ಕಲಿಸುವಂತೆ ಸರ್ಕಾರ ಆದೇಶ ನೀಡಬೇಕು.

40. ಪ್ರತಿ ವರ್ಷವೂ, ರಾಜ್ಯದ ವಿಶ್ವವಿದ್ಯಾಲಯಗಳು ಅನುಕ್ರಮವಾಗಿ ಅಖಿಲ ಕರ್ನಾಟಕ ಕನ್ನಡ ಮಾಧ್ಯಮದ ವಿದ್ಯಾರ್ಥಿ ಸಮ್ಮೇಳನಗಳನ್ನು ಏರ್ಪಡಿಸಿ ಇದರಲ್ಲಿ ಕೈಕೊಂಡ ನಿರ್ಣಯಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರು ವಂತೆ ಸರ್ಕಾರ ಹಾಗೂ ವಿಶ್ವವಿದ್ಯಾಲಯಗಳನ್ನು ಒತ್ತಾಯ ಮಾಡುವ ಕಾರ್ಯ ಮುಂದುವರಿಯಬೇಕು.

ಅಭಿನಂದನೆ

ರಾಜ್ಯಕ್ಕೆ ಕರ್ನಾಟಕವೆಂದು ಸಾರ್ಥಕವಾದ ಹೆಸರನ್ನು ಕೊಟ್ಟದ್ದಕ್ಕಾಗಿ 'ಸಾಧನೆ'ಯು ರಾಜ್ಯ ಸರ್ಕಾರವನ್ನು ಅಭಿನಂದಿಸುತ್ತದೆ.

ಈ ಸಂಚಿಕೆಯ ಲೇಖಕರು

ಜಿ. ಎಸ್. ಸಿದ್ದಲಿಂಗಯ್ಯ	ಪ್ರಿನ್ಸಿಪಾಲ್, ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ
ಡಾ॥ ಜಿ. ಎಸ್. ಶಿವರುದ್ರಪ್ಪ	ನಿರ್ದೇಶಕರು, ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು–560039
ಪಾ. ಸಂ. ವೆಂಕಟಸ್ವಾಮಿ ಶೆಟ್ಟಿ	ರೀಡರ್, ಭೌತಶಾಸ್ತ್ರ ವಿಭಾಗ, ಸೆಂಟ್ರಲ್ ಕಾಲೇಜು ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು–560001
ಎನ್. ಎಚ್. ನಾಗರಾಜ್	ಕನ್ನಡ ಅಧ್ಯಾಪಕರು ಕಲ್ಪತರು ಕಾಲೇಜು, ತಿಪಟೂರು
ಎಚ್. ವಿ. ವೀರಭದ್ರಯ್ಯ	ಕನ್ನಡ ಅಧ್ಯಾಪಕರು ಶ್ರೀ ಸಿದ್ಧಗಂಗಾ ಕಾಲೇಜು, ತುಮಕೂರು
ಡಾ॥ ಪಿ. ಗುರುರಾಜ ಭಟ್	ಪ್ರಿನ್ಸಿಪಾಲ್ ಮಿಲಾಗ್ರಿಸ್ ಕಾಲೇಜು ಕಲ್ಯಾಣಪುರ (ದ. ಕ.)
ದಾಮೋದರ ಕೃಷ್ಣ ಪೊದುವಾಳ	ಸ್ನಾತಕೋತ್ತರ ವಾಣಿಜ್ಯ ವಿಭಾಗ ಮಂಗಳ ಗಂಗೋತ್ರಿ, ಮಂಗಳೂರು
ಎನ್. ವಿ. ವಿಮಲ	ಸಂಶೋಧಕ ಸಹಾಯಕಿ ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ, ಬೆಂಗಳೂರು–560039
ಪಿ. ಗೋ. ರಮೇಶ್	72. ಅಂಬಿಕಾ. 6ನೇ ಕ್ರಾಸ್ ಮಲ್ಲೇಶ್ವರಂ, ಬೆಂಗಳೂರು–560003

ಅನಂತಪದ್ಮನಾಭ ರಾವ್	ಕನ್ನಡ ಅಧ್ಯಾಪಕರು ಬೆಂಗಳೂರು ಹೈಸ್ಕೂಲ್ ಜೂನಿಯರ್ ಕಾಲೇಜು, ಬಸವನಗುಡಿ ಬೆಂಗಳೂರು–560004
ಸದಾಶಿವಯ್ಯ	ಅರ್ಥಶಾಸ್ತ್ರ ಅಧ್ಯಾಪಕರು ಮಹಾರಾಜ ಕಾಲೇಜು, ಮೈಸೂರು
ಡಾ॥ ಸೂರ್ಯನಾಥ ಕಾಮತ್	ಇತಿಹಾಸ ಅಧ್ಯಾಪಕರು ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು–560009
ಡಾ॥ ಸೋಮಶೇಖರ್	ಹಿಂದೀ ವಿಭಾಗ ಕಿಟಲ್ ಕಾಲೇಜು, ಧಾರಾವಾಡ
ಎಸ್. ಉಮಾಪತಿ	ಕನ್ನಡ ಅಧ್ಯಾಪಕರು ಡಿ. ಆರ್. ಎಂ. ಕಾಲೇಜು ಧಾರವಾಡ
ಎಂ. ಆರ್. ಲಕ್ಷ್ಮೀದೇವಿ	ಕನ್ನಡ ಅಧ್ಯಾಪಕರು ಆಚಾರ್ಯ ಪಾಠಶಾಲಾ ಕಾಲೇಜು ಬೆಂಗಳೂರು-560019
ಜಯಸುದರ್ಶನ	769, 5ನೇ ಬ್ಲಾಕ್. ರಾಜಾಜಿನಗರ, ಬೆಂಗಳೂರು–560010
ಡಾ॥ ಡಿ. ಎಸ್. ಶಿವಪ್ಪ	ಔಷಧಶಾಸ್ತ್ರ ಪ್ರಾಧ್ಯಾಪಕರು, ಬೆಂಗಳೂರು ಮೆಡಿಕಲ್ ಕಾಲೇಜು ಬೆಂಗಳೂರು–560002
ಶ್ರೀನಾಥ್‌ರಾಯಸಮ್	ಕೇರಾಫ್ ಶ್ರೀ ಆರ್ ಶ್ರೀಧರ್‌ರಾವ್ 104, II ವಾರ್ಡ್, ಕಾಳಮ್ಮ ರಸ್ತೆ ಬಳ್ಳಾರಿ
ಟಿ. ಶ್ರೀವೆಂಕಟರಮಣ	ಅಧ್ಯಾಪಕರು ಸಂಖ್ಯಾಕಲನಶಾಸ್ತ್ರ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು–560009

ಮ. ಗಂ. ರೇಣುಕ ಪ್ರಸನ್ನ
ಕನ್ನಡ ವಿಭಾಗ
ಜೆ. ಎಸ್. ಎಸ್. ಕಾಲೇಜು, ಮೈಸೂರು

ಎಸ್. ವೆಂಕಟೇಶ ಮೂರ್ತಿ
75, 3ನೇ ರಸ್ತೆ, ಮಾಡಲ್ ಹೌಸ್ ಬ್ಲಾಕ್
ಬಸವನಗುಡಿ, ಬೆಂಗಳೂರು-560004

ಎಂ. ಎ. ಲಕ್ಷ್ಮೀತಾತಾಚಾರ್ಯ
ಸಂಸ್ಕೃತ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನ ಭಾರತಿ, ಬೆಂಗಳೂರು-560039

ಹಂಪ. ನಾಗರಾಜಯ್ಯ
ಅಧ್ಯಾಪಕರು
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ. ಬೆಂಗಳೂರು-560039

* * *

ಬೆಂಗಳೂರು
ವಿಶ್ವವಿದ್ಯಾಲಯದ ಪ್ರಕಟಣೆಗಳ ವಿವರಗಳಿಗೆ
ದಯವಿಟ್ಟು ವ್ಯವಹರಿಸಿ :

ಉಪ ನಿರ್ದೇಶಕ
ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು - 560039

ಈಸ್ಟರ್ನ್ ಪ್ರೆಸ್, ಬೆಂಗಳೂರು - 56